ವಾರ್ಷಿಕ ವರದಿ

ANNUAL REPORT

2018-19



ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರು

UNIVERSITY OF AGRICULTURAL SCIENCES

Lingasugur Road, Raichur-584 104, Karnataka, India.

www.uasraichur.edu.in

Eighth Convocation of the University



Dr. Narendra Singh Rathore, DDG, ICAR, New Delhi delivering convocation address



Students receiving Gold medals and Degree certificate



Board of Management and Academic Council Members

ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರು

ವಾರ್ಷಿಕ ವರದಿ 2018–19

ಸಂಪಾದಕೀಯ ಮಂಡಳಿ

ಅಧ್ಯಕ್ಷರು	:	ಡಾ. ಎಸ್. ಕೆ. ಮೇಟಿ ಶಿಕ್ಷಣ ನಿರ್ದೇಶಕರು, ಕೃವಿವಿ, ರಾಯಚೂರು
ಸದಸ್ಯರು	:	ಡಾ. ವಿಜಯ್‌ಕುಮಾರ್ ಪಲ್ಲೇದ ಸಹಾಯಕ ಪ್ರಾಧ್ಯಾಪಕರು, ಕೃಷಿ ತಾಂತ್ರಿಕ ಮಹಾವಿದ್ಯಾಲಯ, ರಾಯಚೂರು
		ಡಾ. ಬಸವರಾಜ್ ಹುಲುಗೂರ್ ಸಹಾಯಕ ಪ್ರಾಧ್ಯಾಪಕರು, ಪ್ರಕಟಣಾ ಕೇಂದ್ರ, ಕೃವಿವಿ, ರಾಯಚೂರು
		ಡಾ. ಮೌಲಾಸಾಬ್ ಸಹಾಯಕ ಪ್ರಾಧ್ಯಾಪಕರು, ವಿಸ್ತರಣಾ ನಿರ್ದೇಶನಾಲಯ ಕೃವಿವಿ, ರಾಯಚೂರು
		ಡಾ. ಆನಂದ ಎನ್. ಸಹಾಯಕ ಪ್ರಾಧ್ಯಾಪಕರು, ಸಂಶೋಧನಾ ನಿರ್ದೇಶನಾಲಯ ಕೃವಿವಿ, ರಾಯಚೂರು
		ಡಾ. ವಾಸುದೇವ ನಾಯಕ ಕೆ ಸಹಾಯಕ ಪ್ರಾಧ್ಯಾಪಕರು, ಪಿ.ಪಿ.ಎಂ.ಸಿ ಕೋಶ, ಕೃವಿವಿ, ರಾಯಚೂರು
ಸದಸ್ಯ ಕಾರ್ಯದರ್ಶಿ	:	ಡಾ. ಎನ್. ಶಿವಶಂಕರ್ ಮುಖ್ಯಸ್ಥರು, ಪಿ.ಪಿ.ಎಂ.ಸಿ ಕೋಶ, ಕೃವಿವಿ, ರಾಯಚೂರು
ಅಕ್ಷರ ಜೋಡಣೆ ಮತ್ತು ಗಣಕಯಂತ್ರ ನಿರ್ವಹಣೆ		ಮೊಹಮ್ಮದ್ ಅಲಿ ಸಹಾಯಕರು ಪಿ.ಪಿ.ಎಂ.ಸಿ ಕೋಶ, ಕೃವಿವಿ, ರಾಯಚೂರು

ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರು

ಮುನ್ನುಡಿ



ರಾಯಚೂರು ಕೃಷಿ ವಿಶ್ವವಿದ್ಯಾಲಯವನ್ನು ಸ್ಥಾಪಿಸುವ ಕುರಿತು ತಜ್ಞರನ್ನೊಳಗೊಂಡ ಸಮಿತಿಯು ಕೂಲಂಕುಷ ಅಧ್ಯಯನದ ನಂತರ 2008–09ರಲ್ಲಿ ಪ್ರತ್ಯೇಕ ವಿಶ್ವವಿದ್ಯಾಲಯ ಸ್ಥಾಪನೆಗೆ ಅನುಮೋದನೆ ನೀಡಿತು. ಹೀಗೆ ಹೊಸ ಕೃಷಿ ವಿಶ್ವವಿದ್ಯಾಲಯವನ್ನು "ಹಸಿರೇ ಉಸಿರು" ಎಂಬ ಘೋಷಣೆಯ ಮೂಲಕ ಸ್ಥಾಪಿಸುವ ಕನಸು 22–11–2008 ರಂದು ನನಸಾಯಿತು. ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾನಿಲಯದ ಹತ್ತನೇಯ ವಾರ್ಷಿಕ ವರದಿಯು ಏಪ್ರಿಲ್ 1, 2018 ರಿಂದ ಮಾರ್ಚ್ 31, 2019 ರವರೆಗಿನ ಸಾಮಾನ್ಯ ಆಡಳಿತ, ಬೋಧನೆ, ಸಂಶೋಧನೆ ಮತ್ತು ವಿಸ್ತರಣೆಯ ಚಟುವಟಿಕೆಗಳ ವಿವರಗಳನ್ನು ನೀಡುತ್ತದೆ. ಉತ್ತರ ಕರ್ನಾಟಕ ಭಾಗದ ರೈತ ಸಮುದಾಯದ ಒಳಿತಿಗಾಗಿ ವಿಶ್ವವಿದ್ಯಾಲಯವು ಕೃಷಿ ವಿಜ್ಞಾನ ಕ್ಷೇತ್ರಗಳ ಹೊಸ ಚಿಂತನೆಗಳನ್ನು ಸ್ವೀಕರಿಸಲು, ನವೀನ ತಂತ್ರಜ್ಞಾನಗಳ ಹಾಗು ಮಾನವ ಸಂಪನ್ಮೂಲದ ಅಭಿವೃದ್ಧಿಗೆ ಬದ್ಧವಾಗಿದೆ. ವಿಶ್ವವಿದ್ಯಾಲಯವು ಹಲವಾರು ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಸಂಸ್ಥೆಗಳೊಂದಿಗೆ ಬೋಧನೆ, ಸಂಶೋಧನೆ ಮತ್ತು ವಿಸ್ತರಣಾ ಚಟುವಟಿಕೆಗಳಿಗೆ ಸಹಭಾಗಿತ್ವವನ್ನು ಹೊಂದಿದೆ.

ವಿಶ್ವವಿದ್ಯಾಲಯವು ಕೃಷಿ ಮತ್ತು ಕೃಷಿ ಇಂಜನಿಯರಿಂಗ್‌ನಲ್ಲಿ ಸ್ನಾತಕ ಪದವಿಗಳನ್ನು ಹಾಗೂ 16 ವಿಷಯಗಳಲ್ಲಿ ಕೃಷಿ ಇಂಜನಿಯರಿಂಗ್ ಒಳಗೊಂಡಂತೆ ಸ್ನಾತಕೋತ್ತರ ಪದವಿಗಳನ್ನು ಮತ್ತು 15 ಡಾಕ್ಟೊರಲ್ ಪದವಿ ಕಾರ್ಯಕ್ರಮಗಳನ್ನು ತನ್ನ ಮುಖ್ಯ ಆವರಣದಲ್ಲಿ ನೀಡುತ್ತಿದೆ. ಜೊತೆಗೆ ಎರಡು ವರ್ಷಗಳ ಕೃಷಿಯಲ್ಲಿ ಡಿಪ್ಲೋಮಾವನ್ನು ರಾಯಚೂರು, ಹಗರಿ, ಬೀದರ್ ಮತ್ತು ಭೀಮರಾಯನಗುಡಿಯಲ್ಲಿ ನೀಡಲಾಗುತ್ತಿದೆ. ಕೃಷಿ ಪರಿಕರಗಳ ವಿತರಕರ ತರಬೇತಿ ಕಾರ್ಯಕ್ರಮ (ದೇಸೀ) ಒಟ್ಟು 11 ಕಾರ್ಯಕ್ರಮಗಳ 450 ಕೃಷಿ ಪರಿಕರಗಳ ವಿತರಕರಿಗೆ ಯಶಸ್ವಿಯಾಗಿ ತರಬೇತಿ ನೀಡಿದ್ದಲ್ಲದೇ, ಪ್ರಸಕ್ತ ಸಾಲಿನಲ್ಲಿ 7 ಕೃಷಿ ವಿಜ್ಞಾನ /ವಿಸ್ತರಣಾ ಕೇಂದ್ರಗಳ ಮುಖಾಂತರ ಒಟ್ಟು 270 ಕೃಷಿ ಪರಿಕರಗಳ ವಿತರಕರಿಗೆ ತರಬೇತಿಯನ್ನು ನೀಡಲಾಗುತ್ತಿದೆ. ವಿದ್ಯಾರ್ಥಿಗಳಿಗೆ ಶಿಕ್ಷಣ ಮುಂದುವರಿಸಲು ವಿದ್ಯಾರ್ಥಿವೇತನಗಳು ಮತ್ತು ಫೆಲೋಶಿಪಗಳನ್ನು ನೀಡಲಾಗುತ್ತಿದೆ. ವಿದ್ಯಾರ್ಥಿ ಚಟುವಟಿಕೆಗಳಿಗಾಗಿ ಹಲವಾರು ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆ ಹಾಗೂ ನವೀಕರಣಗೊಳಿಸಲಾಗುತ್ತಿದೆ.

ನಮ್ಮ ವಿದ್ಯಾರ್ಥಿಗಳು ಅಖಿಲ ಭಾರತ ಮಟ್ಟದಲ್ಲಿ ಶೈಕ್ಷಣಿಕ ಆಟೋಟಗಳಲ್ಲಿ, ಪಠ್ಯೇತರ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಅತ್ಯುತ್ತಮ ಸಾಧನೆ ಮಾಡಿದ್ದಾರೆಂದು ಹೇಳಲು ಹೆಮ್ಮೆಯೆನಿಸುತ್ತದೆ. ವಿಶ್ವವಿದ್ಯಾಲಯಕ್ಕೆ ಭಾರತೀಯ ಕೃಷಿ ಅನುಸಂಧಾನ ಪರಿಷತ್ – ಕಿರಿಯ ಸಂಶೋಧನಾ ಫಲೋಶಿಪ್ ಪರೀಕ್ಷೆಯಲ್ಲಿ ಹೆಚ್ಚಿನ ಸ್ಥಾನಗಳು ದೊರೆತಿವೆ. ಈ ಸಂದರ್ಭದಲ್ಲಿ ವಿಶ್ವವಿದ್ಯಾಲಯಕ್ಕೆ ಕೀರ್ತಿಯನ್ನು ತಂದುಕೊಟ್ಟ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳನ್ನು ಹಾಗೂ ವಿಶ್ವವಿದ್ಯಾಲಯದ ಅಭಿವೃದ್ಧಿಗೆ ಕೊಡುಗೆ ನೀಡಿದ ಎಲ್ಲರನ್ನು ನಾನು ಅಭಿನಂದಿಸುತ್ತೇನೆ. ಸಂಪರ್ಕಜಾಲ ಹಾಗೂ ವೈಫೈನಿಂದ ಇ–ಕಲಿಕೆ ಸೌಲಭ್ಯಗಳ ಮೂಲಕ ಗ್ರಂಥಾಲಯ ಸೌಲಭ್ಯಗಳನ್ನು ಸದೃಡಗೊಳಿಸಲಾಗಿದೆ.

ವಿಶ್ವವಿದ್ಯಾಲಯವು ರಾಜ್ಯದ ಹತ್ತು ಕೃಷಿ ಹವಾಮಾನ ವಲಯಗಳಲ್ಲಿ 13 ಸಂಶೋಧನಾ ಕೇಂದ್ರಗಳನ್ನು ಈಶಾನ್ಯ ವಲಯ ನಿರ್ದಿಷ್ಟ ಹಾಗು ಅವಶ್ಯಕತೆ ಆಧಾರಿತ ಸಂಶೋಧನೆಗಳನ್ನು ಕೈಗೊಳ್ಳಲು ಹೊಂದಿದೆ. 2018–19ರ ಸಾಲಿನಲ್ಲಿ 330 ಸಂಶೋಧನಾ ಪ್ರಾಯೋಜನೆಗಳು ಒಟ್ಟು ರೂ.104.82 ಲಕ್ಷಗಳ ವೆಚ್ಚದೊಂದಿಗೆ ಕಾರ್ಯಚರಣೆಯಲ್ಲಿದ್ದವು. ವಿಶ್ವವಿದ್ಯಾಲಯವು 122 ಹೊಸ ತಳಿಗಳ/ರಾಸಾಯನಿಕಗಳನ್ನು ಪರೀಕ್ಷಿಸಿ ರೂ. 168 ಲಕ್ಷಗಳ ಆದಾಯ ಗಳಿಸಿದೆ. ಪ್ರಸ್ತುತ ವರ್ಷದಲ್ಲಿ RBP10–226 ಭತ್ತ, ಸಜ್ಜೆ MBP–2 ಮತ್ತು ಹತ್ತಿಯಲ್ಲಿ BDGHH–697 ಗುರುತಿಸಿ ಅಳವಡಿಸಿಕೊಂಡು ಬಿಡುಗಡೆಗೊಳಿಸಿದೆ. ಜೊತೆಗೆ ಇತರೆ ಹಲವಾರು ತಂತ್ರಜ್ಞಾನಗಳೊಂದಿಗೆ ಬಿಡುಗಡೆ ಮಾಡಿ ಬೇಸಾಯಕ್ಕೆ ಶಿಫಾರಸ್ಸು ಮಾಡಲಾಗಿದೆ. ಇದರ ಜೊತೆಗೆ ವಿಶ್ವವಿದ್ಯಾಲಯವು ಕರ್ನಾಟಕ

ಸರ್ಕಾರದ ಮುಂಚೂಣಿ ಕಾರ್ಯಕ್ರಮವಾದ ಶೂನ್ಯ ಬಂಡವಾಳ ಕೃಷಿ ಮತ್ತು ಇತರೆ ಕೃಷಿ ಯೋಜನೆಗಳ ಅನುಷ್ಠಾನವನ್ನು ಸಹ ಮುಂದುವರಿಸಿದೆ.

ವಿಶ್ವವಿದ್ಯಾಲಯವು ಮೂಂಚೂಣೀ ಪ್ರಾತ್ಯಕ್ಷಿಕೆ, ಕ್ಷೇತ್ರ ಪರೀಕ್ಷೆ, ಚರ್ಚಾ ಸಭೆಗಳು, ರೈತರ ಕ್ಷೇತ್ರ ಪಾಠಶಾಲೆ, ಕ್ಷೇತ್ರೋತ್ಸವಗಳಂತಹ ಹಲವಾರು ವಿಸ್ತರಣಾ ಚಟುವಟಿಕೆಗಳನ್ನು ನಡೆಸುವುದರ ಜೊತೆಗೆ ಕೃಷಿ ಪರಿಕರಗಳನ್ನು ಮತ್ತು ಕೃಷಿ ಪ್ರಕಟಣೆಗಳನ್ನು ವಿತರಿಸಿ ರೈತ ಸಮುದಾಯದ ಅವಶ್ಯಕತೆಗಳನ್ನು ಪೂರೈಸುತ್ತಿದೆ. ವಿಶ್ವವಿದ್ಯಾಲಯವು ಅಭಿವೃದ್ಧಿ ಇಲಾಖೆಗಳ ವಿಸ್ತರಣಾ ಚಟುವಟಿಕೆಗಳನ್ನು ಅನುಷ್ಠಾನಗೊಳಿಸಲು ತನ್ನ ಮೂರು ಕೃಷಿ ವಿಜ್ಞಾನ ಕೇಂದ್ರಗಳು ಹಾಗೂ ಆರು ವಿಸ್ತರಣಾ ಶಿಕ್ಷಣ ಘಟಕಗಳ ಮೂಲಕ ಪೂರಕವಾಗಿ ಕಾರ್ಯನಿರ್ವಹಿಸುತ್ತಿದೆ. ವಿಶ್ವವಿದ್ಯಾಲಯದ 14 ಸಿಬ್ಬಂದಿ ವರ್ಗದವರು ಶಿಕ್ಷಣ, ಸಂಶೋಧನೆ ಮತ್ತು ವಿಸ್ತರಣಾ ಕ್ಷೇತ್ರದಲ್ಲಿ ಸಾಧನೆಗೈದು ವಿವಿಧ ವಿಭಾಗದಲ್ಲಿ ಪ್ರಶಸ್ತಿಗಳನ್ನು ಪಡೆದಿರುತ್ತಾರೆ ಎಂದು ಹೇಳಲು ಹೆಮ್ಮೆಯೆನಿಸುತ್ತದೆ.

ವಿಶ್ವವಿದ್ಯಾಲಯವು ಕರ್ನಾಟಕ ಸರ್ಕಾರದ, ಭಾರತೀಯ ಕೃಷಿ ಸಂಶೋಧನಾ ಮಂಡಳಿ ಮತ್ತು ಇತರ ಸಹಯೋಜಕರಿಗೆ ಅವರು ನೀಡುವ ಆರ್ಥಿಕ ಬೆಂಬಲಕ್ಕಾಗಿ ಕೃತಜ್ಞವಾಗಿದೆ. ವ್ಯವಸ್ಥಾಪನಾ ಮಂಡಳಿಯ ಸದಸ್ಯರು, ಶೈಕ್ಷಣಿಕ ಪರಿಷತ್, ಸಂಶೋಧನಾ ಪರಿಷತ್, ವಿಸ್ತರಣಾ ಶಿಕ್ಷಣ ಪರಿಷತ್, ಆರ್ಥಿಕ ಸಮಿತಿಗಳು ಮತ್ತು ಅಧ್ಯಯನ ಮಂಡಳಿಗಳಿಗೆ ಬೋಧನೆ, ಸಂಶೋಧನೆ ಮತ್ತು ವಿಸ್ತರಣಾ ಕಾರ್ಯಕ್ರಮಗಳಲ್ಲಿ ಅವರು ನೀಡಿರುವ ಮಾರ್ಗದರ್ಶನ ಮತ್ತು ಬೆಂಬಲವನ್ನು ಸಹ ಈ ಸಮಯದಲ್ಲಿ ಸ್ಮರಿಸಲಾಗುತ್ತಿದೆ. ರಾಜ್ಯದ ಹಾಗೂ ತನ್ಮೂಲಕ ದೇಶದ ರೈತ ಸಮುದಾಯಕ್ಕೆ ತನ್ನ ಧ್ಯೇಯೋದ್ದೇಶ ಮತ್ತು ಗುರಿಯನ್ನು ತಲುಪಿ ಸೇವೆ ಸಲ್ಲಿಸಲು ವಿಶ್ವವಿದ್ಯಾಲಯದ ಅಧಿಕಾರಿಗಳು, ಸಿಬ್ಬಂದಿ ವರ್ಗದವರು ಮತ್ತು ಕೃಷಿ ಕಾರ್ಮಿಕರು ಬೆನ್ನೆಲುಬಾಗಿದ್ದಾರೆ.

ಡಿಸೆಂಬರ್ 26, 2019
ರಾಯಚೂರು

(ಕೆ. ಎನ್. ಕಟ್ಟಿಮನಿ)
ಕುಲಪತಿಗಳು

ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರು

ಸಂಪಾದಕೀಯ



ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯವು ಸಂಸ್ಥಾಪನೆಯಾದಾಗಿನಿಂದ ದೇಶದ ಕೃಷಿ ಶಿಕ್ಷಣ ವಲಯದಲ್ಲಿ ಮುಂಚೂಣಿಯಲ್ಲಿದೆ ಹಾಗೂ ಮಾನವ ಸಂಪನ್ಮೂಲ ಅಭಿವೃದ್ಧಿಗೆ ಅತ್ಯಧಿಕ ಕೊಡುಗೆ ನೀಡುತ್ತಾ ಕಲ್ಯಾಣ–ಕರ್ನಾಟಕ ಭಾಗದ ರೈತ ಸಮುದಾಯದ ಸೇವೆಯಲ್ಲಿ ತೊಡಗಿಕೊಂಡಿದೆ. ಈ ಪ್ರಸಕ್ತ ವಾರ್ಷಿಕ ವರದಿ 2018–19ನೇ ಸಾಲಿನಲ್ಲಿ ನಮ್ಮ ವಿದ್ಯಾರ್ಥಿಗಳು ರಾಷ್ಟ್ರ ಮಟ್ಟದಲ್ಲಿ ಶೈಕ್ಷಣಿಕ, ಮತ್ತು ಕ್ರೀಡೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಅತ್ಯುತ್ತಮ ಸಾಧನೆಗಳು ಮತ್ತು ನಮ್ಮ ವಿಶ್ವವಿದ್ಯಾಲಯದ ಕ್ರಿಯಾಶೀಲಾ ಸಿಬ್ಬಂದಿಗಳಿಗೆ ಸಂಬಂಧಿಸಿದ ಬೋಧನೆ, ಸಂಶೋಧನೆ ಮತ್ತು ವಿಸ್ತರಣಾ ಚಟುವಟಿಕೆಗಳ ಮೇಲೆ ಬೆಳಕು ಚಲ್ಲುತ್ತದೆ. ಜೊತೆಗೆ ಎಲ್ಲಾ ಮಹಾವಿದ್ಯಾಲಯಗಳು, ಸಂಶೋಧನಾ ಕೇಂದ್ರಗಳು, ವಿಸ್ತರಣಾ ಘಟಕಗಳು ಹಾಗೂ ವಿಶ್ವವಿದ್ಯಾಲಯದ ಎಲ್ಲಾ ವಿಭಾಗಗಳು ಕೈಗೊಂಡ ಪ್ರಗತಿ ಕಾರ್ಯಕ್ರಮಗಳ ಬಗ್ಗೆ ವರದಿಯಲ್ಲಿ ಕ್ರೋಡೀಕರಿಸಲಾಗಿದೆ.

ಈ ವಾರ್ಷಿಕ ವರದಿಯನ್ನು ಹೊರತರಲು ನಮಗೆ ನಿಗದಿ ಪಡಿಸಿದ ಗುರಿಯನ್ನು ಸಾಧಿಸಲು ಬದ್ದತೆಯನ್ನು ತೋರಿಸಿರುವ ಗೌರವಾನ್ವಿತ ಕುಲಪತಿಗಳಾದ ಡಾ. ಕೆ.ಎನ್. ಕಟ್ಟಿಮನಿ ಇವರಿಗೆ ಮತ್ತು ಎಲ್ಲಾ ಶಿಕ್ಷಕ–ಶಿಕ್ಷಕೇತರ ಸಿಬ್ಬಂದಿಯನ್ನು ಈ ಮೂಲಕ ಅಭಿನಂದಿಸುತ್ತೇನೆ. ಆಡಳಿತ, ಆರ್ಥಿಕ ಹಾಗೂ ತಾಂತ್ರಿಕ ಬೆಂಬಲ ನೀಡಿದ ಕರ್ನಾಟಕ ಸರ್ಕಾರದ ಗೌರವಾನ್ವಿತ ರಾಜ್ಯಪಾಲರ ಕಛೇರಿ, ರಾಜ್ಯ ಸರ್ಕಾರ, ಕೃಷಿ ಅನುಸಂಧಾನ ಪರಿಷತ್ ಹಾಗೂ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆಗಳು ನೀಡಿದ ಮಾರ್ಗದರ್ಶನ ಮತ್ತು ನೆರವಿಗಾಗಿ ಹೃತ್ಪೂರ್ವಕ ಧನ್ಯವಾದಗಳು.

ವಿಶ್ವವಿದ್ಯಾಲಯದ ಅಧಿಕಾರಿಗಳಾದ ಕುಲಸಚಿವರು, ಸಂಶೋಧನಾ ನಿರ್ದೇಶಕರು, ವಿಸ್ತರಣಾ ನಿರ್ದೇಶಕರು, ಆಡಳಿತಾಧಿಕಾರಿಗಳು, ಆಸ್ತಿ ಅಧಿಕಾರಿಗಳು ಗ್ರಂಥಪಾಲಕರು ಮತ್ತು ಡೀನ್ (ಸ್ನಾತಕೋತ್ತರ), ಮಹಾವಿದ್ಯಾಲಯದ ಎಲ್ಲ ಡೀನ್‌ಗಳಿಗೆ ಅಭಿನಂದಿಸುತ್ತೇನೆ. ವಿಶ್ವವಿದ್ಯಾಲಯಕ್ಕೆ ಸಕಾಲಿಕವಾಗಿ ಸಲಹೆ ನೀಡಿ ಕ್ರಮ ಕೈಕೊಂಡ ವಿಶ್ವವಿದ್ಯಾಲಯದ ವ್ಯವಸ್ಥಾಪನಾ ಮಂಡಳಿಯ ಗೌರವಾನ್ವಿತ ಸದಸ್ಯರೆಲ್ಲರನ್ನು ಈ ಸಂದರ್ಭದಲ್ಲಿ ಸ್ಮರಿಸುತ್ತೇನೆ ಹಾಗೂ 2018–19ನೇ ಸಾಲಿನ ವಾರ್ಷಿಕ ವರದಿಯನ್ನು ಹೊರತರಲು ಶ್ರಮಿಸಿದ ಸಂಪಾದಕ ಮಂಡಳಿಯ ಎಲ್ಲಾ ಸದಸ್ಯರಿಗೆ ಅಭಿನಂದಿಸುತ್ತೇನೆ.

ಸ್ಥಳ : ಕೃವಿವಿ, ರಾಯಚೂರು
ದಿನಾಂಕ: 26–12–2019

(ಎಸ್. ಕೆ. ಮೇಟಿ)
ಶಿಕ್ಷಣ ನಿರ್ದೇಶಕರು
ಕೃವಿವಿ, ರಾಯಚೂರು

ಪರಿವಿಡಿ

ಕ್ರ.ಸಂ.	ಮುನ್ನುಡಿ		ಪುಟ ಸಂಖ್ಯೆ
	ಕಾರ್ಯಕಾರಿ ವರದಿ		
1	ವಿಶ್ವವಿದ್ಯಾಲಯದ ಆಡಳಿತ		
	1.1	ಕೃಷಿ ವಿಶ್ವವಿದ್ಯಾಲಯದ ಸ್ಥಾಪನೆ	1
	1.2	ಕಾರ್ಯವ್ಯಾಪ್ತಿ ಪ್ರದೇಶ	2
	1.3	ವಿಶ್ವವಿದ್ಯಾಲಯದ ಗುರಿ, ಧ್ಯೇಯೋದ್ದೇಶ ಮತ್ತು ಅಧ್ಯಾದೇಶ	2
	1.4	ವಿಶ್ವವಿದ್ಯಾಲಯದ ಪ್ರಾಧಿಕಾರ	3
	1.5	ವಿಶ್ವವಿದ್ಯಾಲಯದ ಆಡಳಿತ	17
	1.6	ವಿಶ್ವವಿದ್ಯಾಲಯಕ್ಕೆ ಭೇಟಿ ನೀಡಿದ ಪ್ರಮುಖ ಸಂದರ್ಶಕರು	17
	1.7	ಕುಲಪತಿಗಳ ಪ್ರಮುಖ ಚಟುವಟಿಕೆಗಳ ಸಂಕ್ಷಿಪ್ತ ವರದಿ	19
	1.8	ವಿಶ್ವವಿದ್ಯಾಲಯದ ಅಧಿಕಾರಿಗಳ ಸಭೆಗಳು	23
2	ಶಿಕ್ಷಣ		
	2.1	ಶೈಕ್ಷಣಿಕ ಕಾರ್ಯಕ್ರಮಗಳು	24
	2.2	ಆಡಳಿತ ನಿರ್ವಹಣಾ ವ್ಯವಸ್ಥೆ ಮತ್ತು ಕಾರ್ಯಗಳು	24
	2.3	ಕೈಗೊಂಡ ಕಾರ್ಯಕ್ರಮ ಮತ್ತು ಚಟುವಟಿಕೆಗಳು	25
	2.4	ಪ್ರಾಯೋಗಿಕ ತರಬೇತಿ	34
	2.5	ವಿಶ್ವವಿದ್ಯಾಲಯದ ಪರೀಕ್ಷಾ ಕೇಂದ್ರ	39
	2.6	ವಿಶ್ವವಿದ್ಯಾಲಯದ ಪ್ರಕಟಣಾ ಕೇಂದ್ರ	40
	2.7	ವಿದ್ಯಾರ್ಥಿಗಳಿಗೆ ಆರ್ಥಿಕ ಬೆಂಬಲ	45
	2.8	ವಿದ್ಯಾರ್ಥಿಗಳಿಗೆ ಕ್ರೀಡೆ, ಆಟೋಟ ಮತ್ತು ಪಠ್ಯೇತರ ಚಟುವಟಿಕೆಗಳ ಆಯೋಜನೆ	47
	2.9	ಉದ್ಯೋಗ ಕೋಶ	48
	2.10	ರಾಷ್ಟ್ರೀಯ ಸೇವಾ ಯೋಜನೆ	49
	2.11	ರಾಷ್ಟ್ರೀಯ ಕೆಡಿಟ್ ಕಾರ್ಪ್ಸ	49
	2.12	ರಾಷ್ಟ್ರೀಯ ಹಬ್ಬಗಳು	49
	2.13	ರಾಜ್ಯ ಮತ್ತು ರಾಷ್ಟ್ರೀಯ ದಿನಾಚರಣೆಗಳು / ಅಂತರರಾಷ್ಟ್ರೀಯ ಕಾರ್ಯಕ್ರಮಗಳ ಆಚರಣೆ	50
	2.14	ವೈದ್ಯಕೀಯ ಸೇವೆ ನೀಡುವಿಕೆ	51
	2.15	ಗ್ರಂಥಾಲಯ ಸಂಪನ್ಮೂಲಗಳು ಮತ್ತು ಮಾಹಿತಿ ವ್ಯವಸ್ಥೆ	51
	2.16	ಘಟಿಕೋತ್ಸವ	55
	2.17	ಸಂಸ್ಥಾಪನಾ ದಿನಾಚರಣೆ	57
3	ಕೃಷಿ ಸಂಶೋಧನೆ		
	3.1	ಕೃಷಿ ಸಂಶೋಧನಾ ಕೇಂದ್ರಗಳು ಮತ್ತು ಹವಾಮಾನ ವಲಯಗಳು	58
	3.2	ಕಾರ್ಯಾಚರಣೆಯಲ್ಲಿರುವ ಪ್ರಾಯೋಜನೆಗಳು	61
	3.3	ಪ್ರಮುಖ ಸಂಶೋಧನೆಗಳು	61
	3.4	ರಾಯಚೂರು ಕೃಷಿ ವಿಶ್ವವಿದ್ಯಾಲಯವು ಅಭಿವೃದ್ಧಿಪಡಿಸಿ ಬಿಡುಗಡೆ ಮಾಡಿದ ಹೊಸ ತಂತ್ರಜ್ಞಾನಗಳು ಮತ್ತು ಬಿಡುಗಡೆ ಮಾಡಿದ ಹೊಸ ತಳಿಗಳು	66
	3.5	ಪ್ರಗತಿಯಲ್ಲಿನ ಸಂಶೋಧನೆಗಳು	73
	3.6	ಮಂಜೂರಾದ ಹೊಸ ಸಂಶೋಧನಾ ಪ್ರಾಯೋಜನೆಗಳು	85
4	ಕೃಷಿ ವಿಸ್ತರಣಾ		
	4.1	ಉದ್ದೇಶಗಳು	93
	4.2	ಕಾರ್ಯಚಟುವಟಿಕೆಗಳು	93

	4.3	ವಿಸ್ತರಣಾ ನಿರ್ದೇಶನಾಲಯದ ಘಟಕ / ವಿಭಾಗಗಳು	93
5	**ಆರ್ಥಿಕ ಸಂಪನ್ಮೂಲ**		
	5.1	ಆರ್ಥಿಕ ಮೂಲಗಳು	101
	5.2	ಅನುದಾನಗಳ ಸ್ವೀಕೃತಿ	101
	5.3	2018–19ನೇ ಸಾಲಿನ ಖರ್ಚು	103
	5.4	ನಿವೃತ್ತಿ ಸೌಲಭ್ಯದ ಲೆಕ್ಕದ ವಿವರಗಳು	104
	5.5	ಸಾಲ ಮತ್ತು ಮುಂಗಡಗಳ ಲೆಕ್ಕ ವಿವರಗಳು	105
	5.6	ಶಾಸನಬದ್ದ ಲೆಕ್ಕ ಪರಿಶೋಧಕರಿಂದ ಖಾತೆಗಳ ಲೆಕ್ಕ ಪರಿಶೋಧನೆ	105
6	**ಮಾನವ ಸಂಪನ್ಮೂಲ ಮತ್ತು ಅಭಿವೃದ್ಧಿ**		
	6.1	ಶಿಕ್ಷಕ/ವಿಜ್ಞಾನಿಗಳಿಗೆ ದೊರೆತ ಪುರಸ್ಕಾರ/ಪ್ರಶಸ್ತಿ/ಮನ್ನಣೆಯ ವಿವರ	105
	6.2	ಅಂತರರಾಷ್ಟ್ರೀಯ ತರಬೇತಿ/ ಸಭೆ/ ಸಮ್ಮೇಳನ/ ಕಾರ್ಯಾಗಾರಕ್ಕೆ ಭಾಗವಹಿಸಿದವರ ವಿವರ	107
	6.3	ರಾಷ್ಟ್ರಮಟ್ಟದ ತರಬೇತಿ/ ವಿಚಾರಗೋಷ್ಠಿ/ ಸಮ್ಮೇಳನ/ ಚರ್ಚೆ/ ಕಾರ್ಯಾಗಾರ/ ತರಬೇತಿಗಳಲ್ಲಿ ಭಾಗವಹಿಸಿದವರ ವಿವರ.	107
	6.4	ನೇಮಕಾತಿಗಳು	112
	6.5	ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ವಿವರ	113
	6.6	ನಿವೃತ್ತಿ	114
7	**ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಮತ್ತು ನಿರ್ವಹಣೆ**		116
8	**ಯೋಜನೆಗಳ ಆಯೋಜನೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಘಟಕ (ಪಿ.ಪಿ.ಎಂ.ಸಿ.)**		118
	8.1	ರಾಷ್ಟ್ರೀಯ ಜ್ಞಾನ ಜಾಲ (National Knowledge Network)	119
	8.2	ರಾಷ್ಟ್ರೀಯ ಶೈಕ್ಷಣಿಕ ಠೇವಣಿ (National Academic Depository)	119
9	**ಶಾಸನಬದ್ಧ ಕೋಶಗಳು**		
	9.1	ಮಾಹಿತಿ ಹಕ್ಕು ಅಧಿನಿಯಮ – 2005ರ ಅನುಷ್ಠಾನ	119
	9.2	ರ್ಯಾಗಿಂಗ್ ನಿಗ್ರಹ ಕೋಶ	119
	9.3	ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ಕೋಶ	121
	9.4	ಮಹಿಳೆಯರ ಕುಂದುಕೊರತೆಗಳ ನಿರ್ವಹಣಾ ಕೋಶ	121
10	**ವಿಶ್ವವಿದ್ಯಾಲಯದ ಮುಖ್ಯ ಕೇಂದ್ರಗಳು**		
	10.1	ನ್ಯಾನೋ ತಂತ್ರಜ್ಞಾನ ಕೇಂದ್ರ	121
	10.2	ಪೀಡೆನಾಶಕಗಳ ಅವಶೇಷ ಮತ್ತು ಆಹಾರ ಗುಣ ವಿಶ್ಲೇಷಣೆ ಪ್ರಯೋಗಾಲಯ	122
	10.3	ಕೃಷಿ ಹವಾಮಾನ ಅಧ್ಯಯನ ಕೇಂದ್ರ	124
	10.4	ಸಾವಯವ ಕೃಷಿ ಸಂಶೋಧನಾ ಸಂಸ್ಥೆ	124
	10.5	ಇಂಟೆಲೆಕ್ಚುಯಲ್ ಪ್ರಾಪರ್ಟಿ ಸೆಲ್ ಮತ್ತು ಅಗ್ರಿ ಬ್ಯುಸಿನೆಸ್ ಇನ್ಕ್ಯುಬೇಷನ್ ಸೆಲ್	125
	10.6	ಸಮಗ್ರ ಪೀಡೆ ನಿರ್ವಹಣೆಯ ಮಾಹಿತಿ ತಂತ್ರಜ್ಞಾನ : ಇ–ಸ್ಯಾಪ್	125

ಕಾರ್ಯಕಾರಿ ವರದಿ

ಉಗಮ ಮತ್ತು ಬೆಳವಣಿಗೆ

ಕಳೆದ ದಶಕದಿಂದಲೂ ಕಲ್ಯಾಣ–ಕರ್ನಾಟಕ ಪ್ರಾಂತ್ಯದಲ್ಲಿ ಕೃಷಿ ವಿಶ್ವವಿದ್ಯಾಲಯವನ್ನು ರಚಿಸಬೇಕೆಂಬ ಕೂಗು ಇತ್ತು. ಕಾರಣ ಈ ಭಾಗವು ತನ್ನದೇ ಆದ ಕೃಷಿ ಮತ್ತು ಹವಾಮಾನ ವೈವಿಧ್ಯತೆಗಳನ್ನು ಹೊಂದಿದೆ. ಕಲ್ಯಾಣ–ಕರ್ನಾಟಕ ಪ್ರಾಂತ್ಯದ ಆರು ಜಿಲ್ಲೆಗಳಾದ ಬೀದರ, ಕಲಬುರಗಿ, ಯಾದಗಿರಿ, ರಾಯಚೂರು, ಕೊಪ್ಪಳ ಹಾಗೂ ಬಳ್ಳಾರಿ ಜಿಲ್ಲೆಗಳನ್ನೊಳಗೊಂಡ ಈ ಭೂಭಾಗವು 12 ಲಕ್ಷ ಹೆಕ್ಟೇರುಗಳಷ್ಟು ಪ್ರದೇಶಕ್ಕೆ ತುಂಗಭದ್ರ, ಕೃಷ್ಣ, ಕಾರಂಜ, ಮುಲ್ಲಮಾರಿ, ಹಿರೇಹಳ್ಳ, ಬೆಣ್ಣೆ ತೊರೆ ಮತ್ತಿತರ ನೀರಾವರಿ ಯೋಜನೆಗಳು ನೀರುಣಿಸುತ್ತಿವೆ.

ರಾಯಚೂರು ಕೃಷಿ ವಿಶ್ವವಿದ್ಯಾಲಯವನ್ನು ಸ್ಥಾಪಿಸುವ ಕುರಿತು ತಜ್ಞರನ್ನೊಳಗೊಂಡ ಸಮಿತಿಯು ಕೂಲಂಕುಷ ಅಧ್ಯಯನದ ನಂತರ 2008–09ರಲ್ಲಿ ಪ್ರತ್ಯೇಕ ವಿಶ್ವವಿದ್ಯಾಲಯ ಸ್ಥಾಪನೆಗೆ ಅನುಮೋದನೆ ನೀಡಿತು. ಹೀಗೆ ಹೊಸ ಕೃಷಿ ವಿಶ್ವವಿದ್ಯಾಲಯವನ್ನು "ಹಸಿರೇ ಉಸಿರು" ಎಂಬ ಘೋಷಣೆಯ ಮೂಲಕ ಸ್ಥಾಪಿಸುವ ಕನಸು 22–11–2008ರಂದು ನನಸಾಯಿತು. ಅಲ್ಲಿಯವರೆಗೂ ಈ ವಿಶ್ವವಿದ್ಯಾಲಯವು ಧಾರವಾಡ ಕೃಷಿ ವಿಶ್ವವಿದ್ಯಾಲಯದ ಆಡಳಿತ ವ್ಯಾಪ್ತಿಗೆ ಒಳಪಟ್ಟಿತ್ತು.

ಅಧಿಕಾರ ಮತ್ತು ಆಡಳಿತ

ವಿಶ್ವವಿದ್ಯಾಲಯದ ಶಾಸನಬದ್ಧ ಪ್ರಾಧಿಕಾರವೆಂದರೆ; ಶೈಕ್ಷಣಿಕ ಪರಿಷತ್, ಸಂಶೋಧನಾ ಪರಿಷತ್, ವಿಸ್ತರಣಾ ಶಿಕ್ಷಣ ಮಂಡಳಿ ಮತ್ತು ಅಧ್ಯಯನ ಮಂಡಳಿಯಾಗಿವೆ. ವ್ಯವಸ್ಥಾಪನಾ ಮಂಡಳಿಯು ಒಂದು ಕಾರ್ಯ ನೀತಿ ರಚನಾ ನಿಕಾಯವಾಗಿದ್ದು, ವಿಶ್ವವಿದ್ಯಾಲಯದ ಪರಿಣಾಮಕಾರಿ ಆಡಳಿತ ನಿರ್ವಹಣೆಗಾಗಿ ನೀಡಿರುವ ವಿಶ್ವವಿದ್ಯಾಲಯದ ಅಧಿನಿಯಮ ಮತ್ತು ಪರಿನಿಯಮಗಳನ್ವಯ ತನ್ನ ಅಧಿಕಾರ ಚಲಾಯಿಸುತ್ತದೆ. ಪ್ರಸ್ತುತ ವರದಿಯ ವರ್ಷದಲ್ಲಿ ವಿಶ್ವವಿದ್ಯಾಲಯವು ಆಧ್ಯಾದೇಶದನ್ವಯ ತನ್ನ ಕಾರ್ಯಗಳನ್ನು ತನ್ನ ಗುರಿಯನ್ನು ಸಾಧಿಸುವತ್ತ ಉತ್ತಮವಾಗಿ ನಿರ್ವಹಿಸಿದೆ. ವಿಶ್ವವಿದ್ಯಾಲಯವು ನಾಲ್ಕು ಮಹಾವಿದ್ಯಾಲಯಗಳು ಹೊಂದಿದ್ದು, ಸ್ನಾತಕ, ಸ್ನಾತಕೋತ್ತರ ಮತ್ತು ಎರಡು ವರ್ಷದ ಡಿಪ್ಲೋಮಾ ಶಿಕ್ಷಣ ನೀಡುತ್ತಿದೆ.

ಆಡಳಿತ ನಿರ್ವಹಣಾ ವ್ಯವಸ್ಥೆ ಮತ್ತು ಕಾರ್ಯಗಳು

ಶೈಕ್ಷಣಿಕ ಆಡಳಿತ ವ್ಯವಸ್ಥೆಯು ಸಮಗ್ರವಾಗಿ ಶಿಕ್ಷಣ ನಿರ್ದೇಶನಾಲಯವನ್ನು ಹೊಂದಿದ್ದು, ಅದರ ಬೆಂಬಲಕ್ಕೆ ಕುಲಸಚಿವರು, ಮಹಾವಿದ್ಯಾಲಯಗಳ ಡೀನ್‌ಗಳು, ಡೀನ್ (ಸ್ನಾತಕೋತ್ತರ), ಡೀನ್ (ವಿದ್ಯಾರ್ಥಿ ಕಲ್ಯಾಣ), ಪರೀಕ್ಷಾ ನಿಯಂತ್ರಕರು ಮತ್ತು ಸಂಪಾದಕರು, ಪ್ರಕಟಣಾ ಕೇಂದ್ರ ಹಾಗೂ ಗ್ರಂಥಪಾಲಕರು ಬೆಂಬಲ ನೀಡುತ್ತಾರೆ.

ಪ್ರವೇಶಾತಿ

- ಪ್ರಸ್ತುತ ಶೈಕ್ಷಣಿಕ ವರ್ಷದಲ್ಲಿ ಸ್ನಾತಕ ಪದವಿಗಳಿಗೆ ಪ್ರವೇಶಾತಿ ಸಂಖ್ಯೆಯು 1262 ಇದ್ದು, ಒಟ್ಟು 790 ಬಾಲಕರು ಮತ್ತು 472 ಬಾಲಕೀಯರು ಪ್ರವೇಶಾತಿ ಪಡೆದಿದ್ದಾರೆ. ಅದರಲ್ಲಿ 343 ವಿದ್ಯಾರ್ಥಿಗಳು 2018–19 ರಲ್ಲಿ ಪ್ರವೇಶಾತಿ ಪಡೆದಿದ್ದು, 209 ಬಾಲಕರು ಮತ್ತು 134 ಬಾಲಕೀಯರಾಗಿದ್ದಾರೆ.
- 2018–19 ಶೈಕ್ಷಣಿಕ ವರ್ಷದಲ್ಲಿ ಬಿ.ಎಸ್ಸಿ. ಕೃಷಿ ಪದವಿಗೆ 167 ಬಾಲಕರು ಮತ್ತು 117 ಬಾಲಕಿಯರು ಪ್ರವೇಶವನ್ನು ಪಡೆದಿರುತ್ತಾರೆ ಹಾಗೂ ಕೃಷಿ ತಾಂತ್ರಿಕ ಪದವಿಗೆ 42 ಬಾಲಕರು ಮತ್ತು 17 ಬಾಲಕಿಯರು ಪ್ರವೇಶವನ್ನು ಪಡೆದಿರುತ್ತಾರೆ.
- ಪ್ರಸ್ತುತ ವರ್ಷದಲ್ಲಿ 342 ವಿದ್ಯಾರ್ಥಿಗಳು ವಿವಿಧ ವಿಭಾಗಗಳಲ್ಲಿ ಪ್ರವೇಶ ಪಡೆದಿದ್ದಾರೆ. ಅದರಲ್ಲಿ 116 ಸ್ನಾತಕೋತ್ತರ ಮತ್ತು 38 ಡಾಕ್ಟೋರಲ್ ಪದವಿಗಳಿಗೆ ಪ್ರವೇಶ ಪಡೆದಿದ್ದಾರೆ. 130 ವಿದ್ಯಾರ್ಥಿಗಳು ಡಿಪ್ಲೋಮಾ ಕೋರ್ಸಿಗೆ ಪ್ರವೇಶ ಪಡೆದಿದ್ದಾರೆ.

- ಪ್ರಸ್ತುತ ವರ್ಷದಲ್ಲಿ 24 ಡಾಕ್ಟೋರಲ್ ಮತ್ತು 152 ಸ್ನಾತಕೋತ್ತರ ಪದವಿಗೆ ಸಂಬಂದಿಸಿದ ಸಂಶೋಧನೆಯ ಪ್ರಬಂಧವನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುತ್ತಾರೆ.
- ಒಟ್ಟು 256 ವಿದ್ಯಾರ್ಥಿಗಳು ಗ್ರಾಮೀಣ ಕೃಷಿ ಕಾರ್ಯಾನುಭವ ಕಾರ್ಯಕ್ರಮದ ಅಡಿಯಲ್ಲಿ ವಿಶ್ವವಿದ್ಯಾಲಯದ ವ್ಯಾಪ್ತಿಯ ವಿವಿಧ ಗ್ರಾಮೀಣ ಭಾಗದಲ್ಲಿ ಭಾಗವಹಿಸಿದ್ದಾರೆ. ಅಂತಿಮ ವರ್ಷದ ವಿದ್ಯಾರ್ಥಿಗಳು 18 ಕ್ರೆಡಿಟ್‌ಗಳವರೆಗೆ ತಮ್ಮ ಆಯ್ಕೆಯ ತಜ್ಞತೆಯ ವಿಷಯದಲ್ಲಿ ಆತ್ಮವಿಶ್ವಾಸ ಹಾಗೂ ಕೌಶಲ್ಯತೆಯನ್ನು ಗಳಿಸಲು ಪ್ರಾಯೋಗಿಕ ತರಬೇತಿ ಕೋರ್ಸ್ ಪೂರ್ಣಗೊಳಿಸಿಕೊಳ್ಳಬೇಕಾಗಿರುತ್ತದೆ.
- ರೈತರ ಉಪಯೋಗಕ್ಕಾಗಿ 52 ತಾಂತ್ರಿಕ ಕೈಪಿಡಿಗಳನ್ನು ಪ್ರಕಟಣಾ ಕೇಂದ್ರದಿಂದ ಪ್ರಕಟಿಸಲಾಗಿದೆ.
- 2018–19ನೇ ಸಾಲಿನಲ್ಲಿ 63 ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾಲಯದ ವಿದ್ಯಾರ್ಥಿವೇತನ, 43 ವಿದ್ಯಾರ್ಥಿಗಳಿಗೆ ಸಾಮಾನ್ಯ ವಿದ್ಯಾರ್ಥಿವೇತನ ಲಭಿಸಿರುತ್ತದೆ. 43 ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಕೃವಿವಿ., ರಾಯಚೂರು ಮೆರಿಟ್ ಶಿಷ್ಯ ವೇತನ, 158 ವಿದ್ಯಾರ್ಥಿ ಪ್ರೋತ್ಸಹ ವೇತನ ಮತ್ತು 17 ಡಾಕ್ಟೋರಲ್ ವಿದ್ಯಾರ್ಥಿಗಳಿಗೆ ಕೃವಿವಿ., ರಾಯಚೂರು ಮೆರಿಟ್ ಶಿಷ್ಯ ವೇತನ, 5 ಡಾಕ್ಟೋರಲ್ ವಿದ್ಯಾರ್ಥಿಗಳಿಗೆ ಪ್ರೋತ್ಸಹ ವಿದ್ಯಾರ್ಥಿ ವೇತನ ಲಭಿಸಿರುತ್ತದೆ.
- ದಿನಾಂಕ 23–24 ಜನವರಿ, 2019ರಂದು ಕೃಷಿ ಮಹಾವಿದ್ಯಾಲಯ, ಭೀಮರಾಯನಗುಡಿಯಲ್ಲಿ ನಡೆದ ಅಂತರ–ಮಹಾವಿದ್ಯಾಲಯಗಳ ಯುವಜನೋತ್ಸವ ಕಾರ್ಯಕ್ರಮದಲ್ಲಿ ಕೃಷಿ ಮಹಾವಿದ್ಯಾಲಯ ಭೀಮರಾಯನಗುಡಿ ತಂಡವು ಪ್ರಥಮ ಸ್ಥಾನದ ಪಾರಿತೋಷಕವನ್ನು ಪಡೆಯಿತು. ಸ್ನಾತಕೋತ್ತರ ಪದವಿ ರಾಯಚೂರನ ವಿದ್ಯಾರ್ಥಿಗಳ ತಂಡವು ದ್ವಿತೀಯ ಸ್ಥಾನ (ರನ್ನರ್ಸ್) ಪಡೆಯಿತು.
- ದಿನಾಂಕ 03 ರಿಂದ 07 ಫೆಬ್ರುವರಿ, 2019 ರಂದು ಸರ್‌ದಾರ್ ಕೃಷಿನಗರ ದಾಂತಿವಾಡ ಕೃಷಿ ವಿಶ್ವವಿದ್ಯಾಲಯ ಗುಜರಾತ್‌ನಲ್ಲಿ ನಡೆದ ರಾಷ್ಟ್ರಮಟ್ಟದ 19ನೇ ಅಂತರ ಕೃಷಿ ವಿಶ್ವವಿದ್ಯಾಲಯಗಳ ಯುವಜನೋತ್ಸವದಲ್ಲಿ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನ ತಂಡವು ಭಾಗವಹಿಸಿ, ಮೂಕಾಭಿನಯದಲ್ಲಿ ಚಿನ್ನದ ಪದಕ, ರಸಪ್ರಶ್ನೆ ಸ್ಪರ್ಧೆಯಲ್ಲಿ ಕಂಚಿನ ಪದಕ, ದೇಶಭಕ್ತಿ ಗೀತೆ ಸ್ಪರ್ಧೆಯಲ್ಲಿ ನಾಲ್ಕನೇ ಸ್ಥಾನ ಪಡೆದುಕೊಂಡಿದೆ.
- ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ಮಟ್ಟದಲ್ಲಿ ಉದ್ಯೋಗ ಕೋಶ ಡೀನ್, ವಿದ್ಯಾರ್ಥಿ ಕ್ಷೇಮಾಭಿವೃದ್ಧಿ, ನಿರ್ದೇಶನಾಲಯದ ಮುಖಾಂತರ ಡಿಪ್ಲೊಮಾ (ಕೃಷಿ), ಡಿಪ್ಲೊಮಾ (ಕೃ.ತಾಂ), ಬಿ.ಎಸ್ಸಿ(ಕೃಷಿ), ಬಿ.ಟೆಕ್ (ಕೃ.ತಾಂ) ಎಂ.ಎಸ್ಸಿ (ಕೃಷಿ), ಎಂ.ಟೆಕ್(ಕೃ.ತಾಂ) ಮತ್ತು ಪಿ.ಎಚ್.ಡಿ ಪದವಿದರರಿಗೆ ನಮ್ಮ ಅವರಣದಲ್ಲಿ ಉದ್ಯೋಗ ಸಂದರ್ಶನದ ಕಾರ್ಯಕ್ರಮವನ್ನು ಪ್ರತಿ ವರ್ಷ ಆಯೋಜಿಸಲಾಗುತ್ತಿದೆ. 2018–19ನೇ ಸಾಲಿನಲ್ಲಿ 10 ಸಂಸ್ಥೆಗಳು ಕೃಷಿ ವಿಶ್ವವಿದ್ಯಾಲಯಕ್ಕೆ ಭೇಟಿ ಮಾಡಿ 12 ಸ್ನಾತಕೋತ್ತರ ವಿದ್ಯಾರ್ಥಿಗಳನ್ನು ಮತ್ತು 33 ಸ್ನಾತಕ ವಿದ್ಯಾರ್ಥಿಗಳನ್ನು ವಿವಿಧ ಹುದ್ದೆಗಳಿಗೆ ಆಯ್ಕೆ ಮಾಡಲಾಗಿದೆ.
- ವಿಶ್ವವಿದ್ಯಾಲಯದ ಎಂಟನೇ ಘಟಿಕೋತ್ಸವ ಸಮಾರಂಭದಲ್ಲಿ 281 ಸ್ನಾತಕ, 118 ಸ್ನಾತಕೋತ್ತರ ಮತ್ತು 25 ಡಾಕ್ಟರೇಟ್ ಪದವಿ ವಿದ್ಯಾರ್ಥಿಗಳಿಗೆ ಪದವಿಗಳನ್ನು ನೀಡಲಾಯಿತು. ಇದರಲ್ಲಿ ಹೆಚ್ಚಿನ ಅಂಕ ಗಳಿಸಿದ 19 ವಿದ್ಯಾರ್ಥಿಗಳಿಗೆ ಚಿನ್ನದ ಪದಕ ನೀಡಿ ಗೌರವಿಸಲಾಯಿತು.
- ವಿಶ್ವವಿದ್ಯಾಲಯವು ರಾಷ್ಟ್ರೀಯ ಸೇವಾ ಯೋಜನೆಯನ್ನು ಬಿ.ಎಸ್ಸಿ. (ಕೃಷಿ) ಪ್ರಥಮ, ದ್ವಿತೀಯ ಹಾಗೂ ತೃತೀಯ ವರ್ಷದ ವಿದ್ಯಾರ್ಥಿಗಳಿಗೆ ಕಡ್ಡಾಯ ಕಾರ್ಯಕ್ರಮವಾಗಿ ಅಳವಡಿಸಿಕೊಂಡಿದೆ. ರಾಷ್ಟ್ರೀಯ ಸೇವಾ ಯೋಜನೆಯ ಸೇವಾ ಕಾರ್ಯಕರ್ತರು ದೈನಂದಿಕ ವಿಶೇಷ ಶಿಬಿರಗಳಲ್ಲಿ, ಸ್ವಚ್ಚತಾ ಕಾರ್ಯಕ್ರಮಗಳಲ್ಲಿ ಮತ್ತು ಇತರೆ ಕಾರ್ಯಚಟುವಟಿಕೆಗಳಲ್ಲಿ ಭಾಗವಹಿಸುತ್ತಾರೆ. ಆಯ್ದ ಕಾರ್ಯಕರ್ತರು ರಾಷ್ಟ್ರೀಯ ಸಮಗ್ರತಾ ಶಿಬಿರ, ರಾಜ್ಯ ಮಟ್ಟದ ರಾಷ್ಟ್ರೀಯ ಸೇವಾ ಯೋಜನೋತ್ಸವಗಳಲ್ಲಿ ಮತ್ತು ಗಣರಾಜ್ಯೋತ್ಸವ ಪಥಸಂಚಲನದಲ್ಲಿ ಭಾಗವಹಿಸಿರುತ್ತಾರೆ.
- ಮಂಗಳೂರಿನ ಆಳ್ವಾಸ್ ಇನ್‌ಸ್ಟಿಟ್ಯೂಟ್, ಮೂಡಬಿದಿರೆಯಲ್ಲಿ ನಡೆದ ರಾಜ್ಯ ಮಟ್ಟದ ಎನ್‌ಸಿಸಿ ನಾಯಕತ್ವ ಶಿಬಿರದಲ್ಲಿ ಕೃವಿವಿ, ರಾಯಚೂರು ಎನ್‌ಸಿಸಿ ಕೆಡೆಟ್‌ಗಳು ಪ್ರತಿನಿಧಿಸಿದ್ದಾರೆ ಮತ್ತು 18–01–2019 ರಂದು 35 ಕೆಎಆರ್ ಬಿಎನ್, ಅನ್‌ಸಿಸಿ ಬೆಟಾಲಿಯನ್ ಪೂರ್ವಭಾವಿ ತರಗತಿಯಲ್ಲಿ ಭಾಗವಹಿಸಿದ್ದಾರೆ. ಶ್ರೀ ಶುಭಮ್ ಧೋರಾ, ಎನ್‌ಸಿಸಿ 'ಸಿ' ಸರ್ಟಿಫಿಕೇಟ್ ಮತ್ತು ಉತ್ತಮ ಕೆಡೆಟ್ ಪದಕವನ್ನು ಪಡೆದಿರುತ್ತಾರೆ.

- ಪ್ರಸಕ್ತ ವರ್ಷದಲ್ಲಿ ವಿಶ್ವವಿದ್ಯಾಲಯವು ಐದು ವ್ಯವಸ್ಥಾಪನಾ ಮಂಡಳಿಯ ಸಭೆಗಳು, ಒಂದು ಪ್ರಾಜ್ಞಾ ಪರಿಷತ್, ಒಂದು ಸಂಶೋಧನಾ ಪರಿಷತ್, ಒಂದು ವಿಸ್ತರಣಾ ಪರಿಷತ್ ಮತ್ತು ಒಂದು ಕ್ರೀಡಾ ಪರಿಷತ್ ಸಭೆಗಳನ್ನು ಕೈಗೊಂಡಿದೆ.
- ಪ್ರಸ್ತುತ ವರ್ಷದಲ್ಲಿ 3011 ಪುಸ್ತಕಗಳು, 176 ಸಂಶೋಧನಾ ಪ್ರಬಂಧಗಳು ವಿಶ್ವವಿದ್ಯಾಲಯದ ಗ್ರಂಥಾಲಯಕ್ಕೆ ಸೇರಿಕೊಂಡಿವೆ.
- ವಿಶ್ವವಿದ್ಯಾಲಯದಿಂದ ಮಾನವ ಸಂಪನ್ಮೂಲ ಅಭಿವೃದ್ಧಿ ಅಡಿಯಲ್ಲಿನ ರಾಷ್ಟ್ರೀಯ ಶೈಕ್ಷಣಿಕ ಠೇವಣಿ (NAD) ಸಾಫ್ಟವೇರ್‌ನಲ್ಲಿ 800 ವಿದ್ಯಾರ್ಥಿಗಳ ಮಾಹಿತಿ ಅಂಕಪಟ್ಟಿಗಳ ವಿವರವನ್ನು ಸೇರಿಸಲಾಗಿದೆ.

ಸಂಶೋಧನೆ

- ವಿಶ್ವವಿದ್ಯಾಲಯ ಸಂಶೋಧನೆಯಲ್ಲಿ ಕಾರ್ಯಕ್ರಮಗಳ ಉದ್ದೇಶ ವಿವಿಧ ಬೆಳೆಗಳ ಮತ್ತು ಸಂಬಂಧಿಸಿದ ಪರಿಕರಗಳ ಸುಧಾರಿಸುವುದು ಮತ್ತು ಕೃಷಿ ತೋಟಗಾರಿಕೆ ಉತ್ಪಾದನೆಯನ್ನು ಹೆಚ್ಚಿಸಿ ಅದರ ಸಂಬಂಧಿತ ಸಮಸ್ಯೆಗಳನ್ನು ಪರಿಹರಿಸುವುದಾಗಿದೆ.
- ವಿಶ್ವವಿದ್ಯಾಲಯವು 122 ಹೊಸ ತಳಿಗಳು/ರಾಸಾಯನಿಕಗಳ/ಅಣುಗಳನ್ನು ಪರೀಕ್ಷಿಸಿ 168 ಲಕ್ಷಗಳನ್ನು ಆದಾಯ ಗಳಿಸಿದೆ.
- ವಿವಿಧ ಸಂಸ್ಥೆಗಳೊಂದಿಗೆ ಪರಸ್ಪರ ಆಸಕ್ತಿಯ ಸಹಯೋಜಿತ ಸಂಶೋಧನೆಯನ್ನು ಕೈಗೊಳ್ಳಲು ಒಟ್ಟು 8 ಒಪ್ಪಂದದ ದಸ್ತಾವೇಜುಗಳ ಎಂ.ಓ.ಯು.ಗಳಿಗೆ ಸಹಿ ಮಾಡಲಾಗಿದೆ.
- ವಿಶ್ವವಿದ್ಯಾಲಯವು 17 ಮಹತ್ತರ ಸಂಶೋಧನೆಗಳನ್ನು ಕೈಗೊಂಡಿದ್ದು ಅದರಲ್ಲಿ ಒಂದು ಬೆಳೆ ಉತ್ಪಾದನೆ, ಒಂದು ಬೆಳೆ ಸಂರಕ್ಷಣೆ, ಐದು ಕೃಷಿ ತಾಂತ್ರಿಕತೆ, ಸಂಸ್ಕರಣೆ ಮೌಲ್ಯವರ್ಧನೆಯಲ್ಲಿ ಸಾಧನೆಗೈದಿದೆ.
- ವಿಶ್ವವಿದ್ಯಾಲಯವು ಭತ್ತದಲ್ಲಿ ಆರ್.ಪಿ. ಬೈಯೋ–226, ಸಜ್ಜೆಯಲ್ಲಿ MBP-2 ಮತ್ತು ಹತ್ತಿಯಲ್ಲಿ BDGHH–697 ತಳಿಗಳನ್ನು ಗುರುತಿಸಿ ಅಳವಡಿಸಿಕೊಂಡು ಬಿಡುಗಡೆಗೊಳಿಸಿದೆ.
- ಸುಧಾರಿತ ಬೇಸಾಯ ಕ್ರಮದಲ್ಲಿ ಅಭಿವೃದ್ಧಿ ಪಡಿಸಿದ ಒಟ್ಟು 37 ತಂತ್ರಜ್ಞಾನಗಳ ಪೈಕಿ, 13 ಬೆಳೆ ಉತ್ಪಾದನೆ, 8 ಬೆಳೆ ಸಂರಕ್ಷಣೆ ಮತ್ತು 16 ಕೃಷಿ ತೋಟಗಾರಿಕೆ ತಾಂತ್ರಿಕತೆ ಮತ್ತು ಒಂದು RCRMH–2 ಮೆಕ್ಕೆಜೋಳ ಹೈಬ್ರಿಡ್ ತಳಿಯನ್ನು ಅಭಿವೃದ್ಧಿಪಡಿಸಿದೆ.
- ಒಟ್ಟು 189 ಹೊಸ ಕ್ಷೇತ್ರ ಪ್ರಯೋಗದಲ್ಲಿ 9 ಅನುವಂಶಿಕತೆ ಮತ್ತು ಸಸ್ಯತಳಿ ಸಂವರ್ಧನೆ 9 ಬೇಸಾಯಶಾಸ್ತ್ರ, 16 ಕೃಷಿ ಕೀಟಶಾಸ್ತ್ರ, 3 ಸಸ್ಯ ರೋಗಶಾಸ್ತ್ರ 3 ಬೀಜ ವಿಜ್ಞಾನ ಮತ್ತು ತಾಂತ್ರಿಕತೆ, 3 ಕೃಷಿ ಸೂಕ್ಷ್ಮಜೀವಶಾಸ್ತ್ರ, 1 ಬೆಳೆ ಶರೀರಶಾಸ್ತ್ರ ಮತ್ತು 1 ಮಣ್ಣು ಮತ್ತು ನೀರು ಸಂರಕ್ಷಣೆ ತಾಂತ್ರಿಕತೆಗಳನ್ನು ಅಳವಡಿಕೆಗೆ ಅಭಿವೃದ್ಧಿಪಡಿಸಿದೆ.
- ಕೃವಿವಿ, ರಾಯಚೂರು ಪ್ರಸ್ತುತ ವರ್ಷದಲ್ಲಿ ಒಟ್ಟು 11145 ಕ್ವಿಂಟಾಲ್ (1047.65 ಕ್ವಿ. ತೊಗರಿ, 216.71 ಕ್ವಿ. ಹೆಸರು, 5 ಕ್ವಿ. ಉದ್ದು, 3680 ಕ್ವಿ. ಭತ್ತ, 35 ಕ್ವಿ. ಮೆಕ್ಕೆಜೋಳ, 150.1 ಕ್ವಿ. ಸೋಯಾಅವರೆ, 73 ಕ್ವಿ. ಶೇಂಗಾ, 2 ಕ್ವಿ. ಸೂರ್ಯಕಾಂತಿ, 14 ಕ್ವಿ. ಬೇಳೆ ಕಾಳುಗಳು, 4934 ಕ್ವಿ. ಕಡಲೆ ಮತ್ತು 250 ಕ್ವಿ. ಜೋಳ) ಬೀಜ ಘಟಕದಿಂದ ಬೀಜೋತ್ಪಾದನೆ ಮಾಡಲಾಗಿದೆ.
- ಪ್ರಸ್ತುತ 27 ಬಾಹ್ಯ ಅನುದಾನಿತ ಯೋಜನೆ (RKVY/ICAR) ಗಳು, 15 ಸಂಶೋಧನಾ ಪ್ರಾಯೋಜನೆಗಳು ಮತ್ತು 4 ವಿಶ್ವವಿದ್ಯಾಲದ ಪ್ರಾಯೋಜಿತವಾಗಿದೆ.

ವಿಸ್ತರಣೆ

- ವಿಸ್ತರಣಾ ನಿರ್ದೇಶನಾಲಯವು ಕೃಷಿ ವಿಸ್ತರಣಾ ಸೇವೆಯನ್ನು ತರಬೇತಿ ಕಾರ್ಯಕ್ರಮಗಳು, ಪ್ರಾತ್ಯಕ್ಷಿಕೆಗಳು, ಕ್ಷೇತ್ರೋತ್ಸವಗಳು, ಕ್ಷೇತ್ರ ಪರೀಕ್ಷೆಗಳು, ಮುಂಚೂಣಿ ಪ್ರಾತ್ಯಕ್ಷಿಕೆಗಳು, ತಂತ್ರಜ್ಞಾನ ಮಾಸಾಚರಣೆ, ರೈತರ ಶೈಕ್ಷಣಿಕ ಪ್ರವಾಸಗಳು ಹಾಗೂ ಕೃಷಿಮೇಳಗಳ ಮುಖಾಂತರ ರೈತ ಸಮುದಾಯಕ್ಕೆ ಸೇವೆಯನ್ನು ಪೂರೈಸುತ್ತಿದೆ. ವಿಸ್ತರಣಾ ನಿರ್ದೇಶನಾಲಯವು ಈ ಮೇಲಿನ ವಿಸ್ತರಣಾ ಕಾರ್ಯಚಟುವಟಿಕೆಗಳನ್ನು ತನ್ನ ಅಂಗ ಸಂಸ್ಥೆಗಳಾದ 7 ಕೃಷಿ ವಿಜ್ಞಾನ ಕೇಂದ್ರಗಳು ಹಾಗೂ 4 ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರಗಳ ಮುಖಾಂತರ ಕಾರ್ಯನಿರ್ವಹಿಸುತ್ತಿದೆ. ಕೃಷಿಯಲ್ಲಿ ರೈತರು ಎದುರಿಸುತ್ತಿರುವ ಕ್ಷೇತ್ರ ಮಟ್ಟದ

ಸಮಸ್ಯೆಗಳು, ತಂತ್ರಜ್ಞಾನಗಳ ಬೇಡಿಕೆ ಇತರೆ ಅವಶ್ಯಕತೆಗಳನ್ನು ಸಂಗ್ರಹಿಸಿ ವಿಶ್ವವಿದ್ಯಾಲಯದ ಸಂಶೋದನಾ ವಿಭಾಗಕ್ಕೆ ಹಸ್ತಾಂತರಿಸಿ, ರೈತರ ಬೇಡಿಕೆಗಳಿಗೆ ಅನುಗುಣವಾದ ತಂತ್ರಜ್ಞಾನಗಳನ್ನು ಪುನಃ ರೈತ ಸಮುದಾಯಕ್ಕೆ ನೀಡುತ್ತಿದೆ.

- ಬರಗಾಲದಿಂದ ತತ್ತರಿಸಿದ ಸಮಯದಲ್ಲಿ ಕೃಷಿ ಮೇಳಕ್ಕೆ ಪರ್ಯಾಯವಾಗಿ ರೈತರ ಸಮ್ಮೇಳನವನ್ನು, "ಬದಲಾಗುತ್ತಿರುವ ಹವಾಮಾನದಲ್ಲಿ ಸುಭದ್ರ ಕೃಷಿ" ಎಂಬ ಧ್ಯೇಯದೊಂದಿಗೆ ದಿನಾಂಕ: 27–28 ಜನವರಿ, 2019, ಪ್ರೇಕ್ಷಾಗೃಹ ಕೃವಿವಿ, ರಾಯಚೂರಿನಲ್ಲಿ ಆಯೋಜಿಸಲಾಯಿತು. ಈ ಎರಡು ದಿನಗಳ ಕಾರ್ಯಕ್ರಮದ ಅಡಿಯಲ್ಲಿ ಪ್ರಾತ್ಯಕ್ಷಿಕೆಗಳು, ಚರ್ಚಾ ಕೂಟಗಳು, ವಿಜ್ಞಾನಿಗಳ ಜೊತೆ ವಿಚಾರ ವಿನಿಮಯ ಚರ್ಚೆ, ರೈತರಿಂದ ರೈತರಿಗೆ ತರಬೇತಿ ಕಾರ್ಯಕ್ರಮಗಳು ಅಚ್ಚುಕಟ್ಟಾಗಿ ಏರ್ಪಡಿಸಲಾಗಿತ್ತು. ಸದರಿ ಸಮ್ಮೇಳನದಲ್ಲಿ ಸುಮಾರು 5 ಸಾವಿರ ರೈತ ಬಾಂಧವರು, ರೈತ ಮಹಿಳೆಯರು, ಸ್ವಸಹಾಯ ಗುಂಪುಗಳು ಸರ್ಕಾರದ ವಿವಿಧ ಇಲಾಖೆಯ ಅಧಿಕಾರಗಳು ಹಾಗೂ ವಿಜ್ಞಾನಿಗಳು, ಸರಕಾರೇತರ ಸಂಸ್ಥೆಗಳು, ಸಹಕಾರ ಸಂಘ ಸಂಸ್ಥೆಗಳು, ಶಾಲಾ ವಿದ್ಯಾರ್ಥಿಗಳು ಭಾಗವಹಿಸಿ ರೈತ ಸಮ್ಮೇಳನದ ಲಾಭ ಪಡೆದುಕೊಂಡರು.
- ಭಾರತೀಯ ಕೃಷಿ ಅನುಸಂಧಾನ ಸಂಸ್ಥೆ, ನವದೆಹಲಿ ಹಾಗೂ ಭಾರತ ಸರ್ಕಾರದ ಸಹಭಾಗಿತ್ವದಲ್ಲಿ ಮತ್ತು ಭಾರತೀಯ ಕೃಷಿ ನೈಪುಣ್ಯತೆ ಅನುಸಂಧಾನ ಸಂಸ್ಥೆಯ (ASCI) ಸಹಯೋಗದೊಂದಿಗೆ ಕೃಷಿ ನೈಪುಣ್ಯತೆ ಅಭಿವೃದ್ಧಿ ತರಬೇತಿ ಕಾರ್ಯಕ್ರಮವನ್ನು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರು 2018–19 ನೇ ಸಾಲಿನಲ್ಲಿ ಕೃಷಿ ವಿಜ್ಞಾನ ಕೇಂದ್ರ ರಾಯಚೂರು, ಕೃಷಿ ವಿಜ್ಞಾನ ಕೇಂದ್ರ ಗಂಗಾವತಿ, ಕೃಷಿ ವಿಜ್ಞಾನ ಕೇಂದ್ರ, ಕವಡಿಮಟ್ಟಿ ಹಾಗೂ ಬೀಜ ವಿಜ್ಞಾನ ಹಾಗೂ ತಂತ್ರಜ್ಞಾನ ವಿಭಾಗದ ವತಿಯಿಂದ ಸುಮಾರು 25 ದಿನಗಳ 6 ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಈ 6 ಕೃಷಿ ನೈಪುಣ್ಯತೆ ಅಭಿವೃದ್ಧಿ ತರಬೇತಿ ಕಾರ್ಯಕ್ರಮದಲ್ಲಿ ಹೈನುಗಾರಿಕೆ, ಅಣಬೆ ಬೇಸಾಯ, ಗುಣಮಟ್ಟದ ಬೀಜೋತ್ಪಾದನೆ ಹಾಗೂ ಎರೆಹುಳು ಗೊಬ್ಬರ ತಯಾರಿಕೆ ವಿಷಯಗಳ ಕುರಿತಾದ ತರಬೇತಿಯಲ್ಲಿ ಪ್ರತಿ ತರಬೇತಿಗೆ 20 ರೈತರಂತೆ ಸುಮಾರು 120 ಯುವ ರೈತರಿಗೆ ತರಬೇತಿ ನೀಡಲಾಗಿದೆ.
- ಕೃಷಿ ಪರಿಕರಗಳ ವಿತರಕರ ತರಬೇತಿ ಕಾರ್ಯಕ್ರಮ (ದೇಸೀ) ಒಟ್ಟು 11 ಕಾರ್ಯಕ್ರಮಗಳ 450 ಕೃಷಿ ಪರಿಕರಗಳ ವಿತರಕರಿಗೆ ಯಶಸ್ವಿಯಾಗಿ ತರಬೇತಿ ನೀಡಿದ್ದಲ್ಲದೇ ಪ್ರಸಕ್ತ ಸಾಲಿನಲ್ಲಿ 7 ಕೃಷಿ ವಿಜ್ಞಾನ /ವಿಸ್ತರಣಾ ಕೇಂದ್ರಗಳ ಮುಖಾಂತರ ಒಟ್ಟು 270 ಕೃಷಿ ಪರಿಕರಗಳ ವಿತರಕರಿಗೆ ತರಬೇತಿಯನ್ನು ನೀಡಲಾಗುತ್ತಿದೆ.
- ಕೃಷಿ ವಿಶ್ವವಿದ್ಯಾಲಯವು "ಕೂರಿಗೆ ಭತ್ತದ" ಬೇಸಾಯವನ್ನು ಕಳೆದ ನಾಲ್ಕು ವರ್ಷಗಳಿಂದ ಪರಿಚಯಿಸಿದರಿಂದ 79500 ಹೇ. ಪ್ರದೇಶವನ್ನು ಆವರಿಸಿದೆ ಮತ್ತು 38000 ಹೆಕ್ಟೇರ್ ಪ್ರದೇಶದಲ್ಲಿ ತೊಗರಿ ಬೆಳೆಯಲ್ಲಿ ನಾಟಿ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಲಾಗಿದೆ.
- ವಿಶ್ವವಿದ್ಯಾಲಯವು ಆವಿಷ್ಕರಿಸಿದ ತೊಗರಿ ನಾಟಿ, ಕುಡಿ ಚಿವಟುವ ಪದ್ಧತಿ ಮತ್ತು ಪಲ್ಸ್ ಮ್ಯಾಜಿಕ್ ತಂತ್ರಜ್ಞಾನಗಳನ್ನು 65000 ಹೇ. ಪ್ರದೇಶಗಳಲ್ಲಿ ರೈತರು ಅಳವಡಿಸಿದ ಪರಿಣಾಮ ರೈತರಿಗೆ ಲಾಭ ಮಾಡಿಕೊಟ್ಟಿದೆ ಹಾಗೂ ಹೆಸರಿನ ತಳಿ ಬಿ.ಜಿ.ಎಸ್–9 ಸುಮಾರು 2500 ಹೆ. ಪ್ರದೇಶದಲ್ಲಿ ಹರಡಿದೆ.
- ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರ ಹಾಗೂ ಕೃಷಿ ವಿಜ್ಞಾನ ಕೇಂದ್ರಗಳ ಮುಖಾಂತರ ನೂತನ ತಾಂತ್ರಿಕತೆಗಳನ್ನು 935 ಹೇಕ್ಟೇರ್ ಪ್ರದೇಶದಲ್ಲಿ ಮಂಚೂಣಿ ಪ್ರಾತ್ಯಕ್ಷಿಕೆಗಳನ್ನು ಕೈಗೊಂಡು 2341 ರೈತರನ್ನು ಉತ್ತೇಜಿಸಲಾಗಿದೆ.
- ಕೃಷಿ ವಿಜ್ಞಾನ ಕೇಂದ್ರಗಳ ಮಣ್ಣು ಪರೀಕ್ಷೆ ಕೇಂದ್ರಗಳಲ್ಲಿ 7000 ಮಣ್ಣು ಹಾಗೂ 3000 ನೀರಿನ ಮಾದರಿಗಳನ್ನು ವೈಜ್ಞಾನಿಕ ರೀತಿಯಲ್ಲಿ ವಿಶ್ಲೇಷಿಸಿ ರೈತರಿಗೆ ಮಾಹಿತಿ ನೀಡಲಾಗಿದೆ.
- ವಿಶ್ವವಿದ್ಯಾಲಯ ಅಭಿವೃದ್ಧಿ ಪಡಿಸಿದ ತಂತ್ರಜ್ಞಾನಗಳು/ತಳಿಗಳು ರೈತರು ಅಳವಡಿಕೆ ಮಾಡಿಕೊಳ್ಳಲು 935 ಮುಂಚೂಣಿ ಪ್ರಾತ್ಯಕ್ಷಿಕೆಗಳು, 900 ತರಬೇತಿಗಳು, 90 ರೇಡಿಯೋ ಕಾರ್ಯಕ್ರಮಗಳು, 70 ದೂರದರ್ಶನ ಕಾರ್ಯಕ್ರಮಗಳು, 36748 ಮೊಬೈಲ್ ಸಂದೇಶಗಳು, 1,35,000 ವಾಟ್ಸಪ್ ಸಂದೇಶಗಳು, 125 ಕ್ಷೇತ್ರೋತ್ಸವಗಳು,78 ಗುಂಪು ಚರ್ಚೆಗಳು ಇತ್ಯಾದಿಗಳ ಮುಖಾಂತರ ಕೃಷಿ ಹಾಗೂ ಕೃಷಿಗೆ ಸಂಬಂಧಿತ ತಂತ್ರಜ್ಞಾನಗಳ ಮಾಹಿತಿಯನ್ನು ರೈತರಿಗೆ ನೀಡಲಾಗಿದೆ.

- ಕೃಷಿ ವಿಶ್ವವಿದ್ಯಾಲಯವು ಹೈದರಾಬಾದ್–ಕರ್ನಾಟಕ ಪ್ರದೇಶದ ಪ್ರತಿ ರೈತ ಸಂಪರ್ಕ ಕೇಂದ್ರಗಳಿಗೆ ಒಬ್ಬ ವಿಜ್ಞಾನಿಯಂತೆ ಸುಮಾರು 162 ರೈತ ಸಂಪರ್ಕ ಕೇಂದ್ರಗಳಿಗೆ ನಿಯೋಜನೆಗೊಳಿಸಿ ಗ್ರಾಮ ಮಟ್ಟದಲ್ಲಿ ಕೃಷಿ ಸಂಬಂಧಿತ ಸಲಹೆ / ಮಾಹಿತಿಯನ್ನು ನೀಡಲಾಗುತ್ತಿದೆ.

ಆರ್ಥಿಕ ಸಂಪನ್ಮೂಲ, ಹಂಚಿಕೆ, ಲೆಕ್ಕ ಪತ್ರ ಮತ್ತು ನಿರ್ವಹಣೆ

ಕರ್ನಾಟಕ ಸರ್ಕಾರವು ಯೋಜನೇತರ ಅನುದಾನದಡಿ ಪ್ರಗತಿಯಲ್ಲಿರುವ ಬದ್ಧತೆಗಳ ಮುಂದುವರಿಕೆಗೆ ನಿರ್ವಹಣಾ ಅನುದಾನ ನೀಡಿದೆ. ಚಾಲನೆಯಲ್ಲಿರುವ ಯೋಜನೆಗಳ ಮುಂದುವರಿಕೆಗೆ ಹಾಗೂ ಹೊಸ ಬೋದನೆ, ಸಂಶೋಧನೆ ಮತ್ತು ವಿಸ್ತರಣಾ ಶಿಕ್ಷಣ ಕಾರ್ಯಕ್ರಮಗಳಿಗಾಗಿ ನವದೆಹಲಿಯಲ್ಲಿರುವ ಭಾರತೀಯ ಕೃಷಿ ಸಂಶೋಧನ ಮಂಡಳಿಯು ಅನುದಾನವನ್ನು ನೀಡಿದೆ. ಅಖಿಲ ಭಾರತ ಸಹಯೋಜಿತ ಸಂಶೋಧನಾ ಯೋಜನೆಗಳಿಗೆ ಮತ್ತು ತಾತ್ಪೂರ್ತಿಕ ಸಂಶೋಧನಾ ಕಾರ್ಯಕ್ರಮಗಳಿಗೆ ಸಹ ಅನುದಾನವನ್ನು ಒದಗಿಸಲಾಗಿದೆ. ಕೃಷಿಯಲ್ಲಿ ನಿರ್ದಿಷ್ಟ ಸಂಶೋಧನೆಗಳನ್ನು ಕೈಗೊಳ್ಳಲು ಭಾರತ ಸರ್ಕಾರದ ಹಲವಾರು ಇಲಾಖೆಗಳು ಸಹ ಹಣಕಾಸು ಸೌಲಭ್ಯ ಒದಗಿಸಿವೆ. ವಿಶ್ವವಿದ್ಯಾಲಯದಲ್ಲಿ ಸಂಶೋಧನಾ ಮತ್ತು ವಿಸ್ತರಣಾ ಕಾರ್ಯಕ್ರಮಗಳನ್ನು ಕೈಗೊಳ್ಳಲು ಹಲವಾರು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸಂಸ್ಥೆ/ಏಜೆನ್ಸಿಗಳು ಅನುದಾನ ಒದಗಿಸುತ್ತವೆ. ಬೆಳೆ ಬೇಸಾಯ, ಬೀಜೋತ್ಪಾದನೆ ಮತ್ತು ಸಸಿಮಡಿ ಚಟುವಟಿಕೆಗಳು, ವಿದ್ಯಾರ್ಥಿ ಶುಲ್ಕ ಸಂಗ್ರಹಣೆ ಮುಂತಾದವುಗಳ ಮೂಲಕ ಆಂತರಿಕ ಆದಾಯವನ್ನು ಸಹ ಗಳಿಸಲಾಗುತ್ತಿದೆ.

2018–19ರ ಸಾಲಿನಲ್ಲಿ ವಿಶ್ವವಿದ್ಯಾಲಯದ ಒಟ್ಟು ಸ್ವೀಕೃತಿಯು ರೂ. 15942.19 ಲಕ್ಷಗಳಾಗಿದ್ದು ಅದರಲ್ಲಿ ಒಟ್ಟು ಖರ್ಚು ರೂ. 12595.18 ಲಕ್ಷಗಳಷ್ಟಿದೆ.

ಮಾನವ ಸಂಪನ್ಮೂಲ ಮತ್ತು ಅಭಿವೃದ್ಧಿ

1. ಪ್ರಸಕ್ತ ವರ್ಷದಲ್ಲಿ ವಿಶ್ವವಿದ್ಯಾಲಯದ 34 ಸಿಬ್ಬಂದಿ ವರ್ಗದವರು ರಾಷ್ಟ್ರೀಯ, ಅಂತರರಾಷ್ಟ್ರೀಯ ಸಮ್ಮೇಳನದ ಕಾರ್ಯಗಾರ ಪ್ರಯುಕ್ತ ಬ್ಯಾಂಕಾಕ್, ಯುನೈಟೆಡ್ ಕಿಂಗ್‌ಡಮ್ ಮತ್ತು ನೆದರ್‌ಲ್ಯಾಂಡ್ ಮತ್ತು ಇತರ ವಿದೇಶಗಳಿಗೆ ಭೇಟಿ ನೀಡಿರುತ್ತಾರೆ.
2. ವಿಶ್ವವಿದ್ಯಾಲಯವು ಮಂಜೂರಾದ 49 ಪ್ರಾಧ್ಯಾಪಕರ, 78 ಸಹ ಪ್ರಾಧ್ಯಾಪಕರ ಮತ್ತು 389 ಸಹಾಯಕ ಪ್ರಾಧ್ಯಾಪಕರ ಹುದ್ದೆಗಳನ್ನು ಹೊಂದಿದೆ. ಒಟ್ಟು 516 ಮಂಜೂರಾದ ಹುದ್ದೆಗಳಲ್ಲಿ 266 ಭರ್ತಿಯಾಗಿದ್ದು, 280 (ಶೇ.48) ಖಾಲಿ ಇವೆ. ಅವಶ್ಯಕತೆಯ ಆಧಾರದ ಮೇಲೆ ಬೋಧಕ ಸಿಬ್ಬಂದಿಗೆ ಗುತ್ತಿಗೆ ಆಧಾರದ ಮೇಲೆ ಕೆಲಸ ವಹಿಸಿಕೊಡಲಾಗುತ್ತಿದೆ. ವಿಶ್ವವಿದ್ಯಾಲಯವು ಮಂಜೂರಾದ 1015 ಬೋಧಕೇತರ ಸಿಬ್ಬಂದಿಯ ಹುದ್ದೆಗಳನ್ನು ಹೊಂದಿದ್ದು, ಅವುಗಳಲ್ಲಿ 461 ಭರ್ತಿಯಾಗಿವೆ ಮತ್ತು 533 ಖಾಲಿ ಇವೆ. ವರದಿಯ ಅವಧಿಯಲ್ಲಿ 3 ಬೋಧಕ ಮತ್ತು 26 ಬೋಧಕೇತರ ಮತ್ತು 4 ಸಿಬ್ಬಂದಿ ಅನಾರೋಗ್ಯ ಆಧಾರದ ಮೇಲೆ ನಿವೃತ್ತಿ ಹೊಂದಿದ್ದಾರೆ.

ಪ್ರಶಸ್ತಿಗಳು ಮತ್ತು ಗೌರವಗಳು

ವಿಶ್ವವಿದ್ಯಾಲಯದ 14 ಸಿಬ್ಬಂದಿ ವರ್ಗದವರು ಶಿಕ್ಷಣ, ಸಂಶೋಧನೆ ಮತ್ತು ವಿಸ್ತರಣಾ ಕ್ಷೇತ್ರದಲ್ಲಿ ಸಾಧನೆಗೈದು, ಪ್ರಸಕ್ತ ವರ್ಷದಲ್ಲಿ ಪ್ರಶಸ್ತಿಗಳನ್ನು ಪಡೆದಿರುತ್ತಾರೆ.

ಮೂಲಭೂತ ಸೌಕರ್ಯ ಮತ್ತು ನಿರ್ವಹಣೆ

ಎಲ್ಲಾ ಆವರಣಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸಲು ಮತ್ತು ನಿರ್ವಹಿಸಲು ಕೇಂದ್ರ ಕಛೇರಿಯಲ್ಲಿ ವಿಶ್ವವಿದ್ಯಾಲಯವು ಆಸ್ತಿ ಕಛೇರಿಯನ್ನು ಹೊಂದಿದ್ದು, ಆಸ್ತಿ ಅಧಿಕಾರಿಗಳು ಅದರ ಮುಖ್ಯಸ್ಥರಾಗಿರುತ್ತಾರೆ ಹಾಗೂ ಅವರ ಸಹಾಯಕ್ಕೆ ಕಾರ್ಯಕಾರಿ ಮತ್ತು ಸಹಾಯಕ ಕಾರ್ಯಕಾರಿ ಅಭಿಯಂತರರು ಎಲ್ಲಾ ಆವರಣಗಳಲ್ಲಿದ್ದಾರೆ. RIDF, GoI & UASR ಧನಸಹಾಯ ಅಡಿಯಲ್ಲಿ 7 ಮೂಲಭೂತ ಸೌಕರ್ಯ ಅಭಿವೃದ್ಧಿ ಯೋಜನೆಗಳು (1669.53 ಲಕ್ಷಗಳು) ಮುಕ್ತಾಯವಾಗಿದ್ದು ಮತ್ತು ಉಳಿದ 16 ಯೋಜನೆಗಳು (ರೂ. 104.82 ಲಕ್ಷಗಳು) ಪ್ರಗತಿಯಲ್ಲಿವೆ.

1. ವಿಶ್ವವಿದ್ಯಾಲಯದ ಆಡಳಿತ

1.1 ಕೃಷಿ ವಿಶ್ವವಿದ್ಯಾಲಯದ ಸ್ಥಾಪನೆ

ಕಳೆದ ದಶಕದಿಂದಲೂ ಕಲ್ಯಾಣ–ಕರ್ನಾಟಕ ಪ್ರಾಂತ್ಯದಲ್ಲಿ ಕೃಷಿ ವಿಶ್ವವಿದ್ಯಾಲಯವನ್ನು ರಚಿಸಬೇಕೆಂಬ ಕೂಗು ಇತ್ತು. ಕಾರಣ ಈ ಭಾಗವು ತನ್ನದೇ ಆದ ಕೃಷಿ ಮತ್ತು ಹವಾಮಾನ ವೈವಿಧ್ಯತೆಗಳನ್ನು ಹೊಂದಿದೆ. ಕಲ್ಯಾಣ–ಕರ್ನಾಟಕ ಪ್ರಾಂತ್ಯದ ಆರು ಜಿಲ್ಲೆಗಳಾದ ಬೀದರ, ಕಲಬುರಗಿ, ಯಾದಗಿರಿ, ರಾಯಚೂರು, ಕೊಪ್ಪಳ ಹಾಗೂ ಬಳ್ಳಾರಿ ಜಿಲ್ಲೆಗಳನ್ನೊಳಗೊಂಡ ಈ ಭೂಭಾಗವು 12 ಲಕ್ಷ ಹೆಕ್ಟೇರುಗಳಷ್ಟು ಪ್ರದೇಶಕ್ಕೆ ತುಂಗಭದ್ರ, ಕೃಷ್ಣ, ಕಾರಂಜ, ಮುಲ್ಲಮಾರಿ, ಹಿರೇಹಳ್ಳ, ಬೆಣ್ಣೆ ತೊರೆ ಮತ್ತಿತರ ನೀರಾವರಿ ಯೋಜನೆಗಳು ನೀರುಣಿಸುತ್ತಿವೆ.

ರಾಯಚೂರು ಕೃಷಿ ವಿಶ್ವವಿದ್ಯಾಲಯವನ್ನು ಸ್ಥಾಪಿಸುವ ಕುರಿತು ತಜ್ಞರನ್ನೊಳಗೊಂಡ ಸಮಿತಿಯು ಕೂಲಂಕುಷ ಅಧ್ಯಯನದ ನಂತರ 2008–09ರಲ್ಲಿ ಪ್ರತ್ಯೇಕ ವಿಶ್ವವಿದ್ಯಾಲಯ ಸ್ಥಾಪನೆಗೆ ಅನುಮೋದನೆ ನೀಡಿತು. ಹೀಗೆ ಹೊಸ ಕೃಷಿ ವಿಶ್ವವಿದ್ಯಾಲಯವನ್ನು "ಹಸಿರೇ ಉಸಿರು" ಎಂಬ ಘೋಷಣೆಯ ಮೂಲಕ ಸ್ಥಾಪಿಸುವ ಕನಸು 22 ನವೆಂಬರ್, 2008ರಂದು ನನಸಾಯಿತು. ಅಲ್ಲಿಯವರೆಗೂ ಈ ವಿಶ್ವವಿದ್ಯಾಲಯವು ಧಾರವಾಡ ಕೃಷಿ ವಿಶ್ವವಿದ್ಯಾಲಯದ ಆಡಳಿತ ವ್ಯಾಪ್ತಿಗೆ ಒಳಪಟ್ಟಿತ್ತು.

"ಬಿಸಿಲೂರು" ಎಂದು ಹೆಸರಾಗಿರುವ ರಾಯಚೂರು ಜಿಲ್ಲೆ ಇಂದು ಕರ್ನಾಟಕ ರಾಜ್ಯದ ಪ್ರಮುಖ ಜಿಲ್ಲೆಗಳಲ್ಲೊಂದು, ಹಿಂದೆ ಮೌರ್ಯರು, ಕಾಕತೀಯರು, ವಿಜಯನಗರದ ಅರಸರು, ಬಹಮನಿ ಸುಲ್ತಾನರು ಮತ್ತು ಹೈದರಾಬಾದ್ ನಿಜಾಮರು ಆಳಿದ ನಾಡು, ಅಂದು ಕಲ್ಯಾಣ ಕರ್ನಾಟಕದ ಪ್ರಮುಖ ಜಿಲ್ಲೆಯಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ ಮೆರೆದಿದ್ದ ನಾಡು, ಇಂದು ಕಲ್ಯಾಣ–ಕರ್ನಾಟಕ ಪ್ರದೇಶದ ಹಿಂದುಳಿದ ಜಿಲ್ಲೆಯೆಂದು ಹಣೆಪಟ್ಟಿಯಿಂದ 371(ಜೆ) ಯನ್ನು ಕೇಂದ್ರ ಸರ್ಕಾರ ಅನುಷ್ಠಾನಗೊಳಿಸಿದೆ. ಇದರ ಒಟ್ಟು ವಿಸ್ತೀರ್ಣ 44,138 ಚದರ ಕಿಲೋಮೀಟರಗಳು. ಜಿಲ್ಲೆಯಲ್ಲಿ ಕೃಷ್ಣ, ತುಂಗಭದ್ರೆಯರ ಕೃಪೆಯಿಂದ ಭತ್ತದ ಪೈರು ಭೂ–ರಮೆಗೆ ಹಸಿರು ಹೊದಿಸಿದಂತೆ ಸದಾ ಕಂಗೊಳಿಸುತ್ತಿರುತ್ತಾಳೆ. ರಾಯಚೂರು ಅರೇ ಉಷ್ಣವಲಯದ ಪ್ರದೇಶದಲ್ಲಿ ಬರುತ್ತಿದ್ದು, ಭೌಗೋಳಿಕವಾಗಿ ಸಮುದ್ರ ಮಟ್ಟದಿಂದ 389.5 ಮೀಟರ್ ಎತ್ತರದಲ್ಲಿದ್ದು, $16–12^0$ ಉತ್ತರ ಅಕ್ಷಾಂಶ ಹಾಗೂ 76.24^0 ರೇಖಾಂಶಗಳನ್ನು ಹೊಂದಿದ್ದು, ಕರ್ನಾಟಕ ರಾಜ್ಯದ ಉತ್ತರ ಪೂರ್ವ ಒಣಪ್ರದೇಶ ಕೃಷಿ ವಲಯದಲ್ಲಿದೆ. ಜಿಲ್ಲೆಯ ಸರಾಸರಿ ಮಳೆಯ ಪ್ರಮಾಣ 620 ಮಿ.ಮಿ. ಜಿಲ್ಲೆಯ ಭೂಗರ್ಭವು ಗ್ರಾನೈಟಿಕ್ ಮುತ್ತು ಗ್ನೈಸಿನ್‌ಗಳಿಂದ ಕೂಡಿದ್ದು, ಬಹಳಷ್ಟು ವ್ಯಾಪ್ತಿಯ ಆಳವಾದ ಕಪ್ಪು ಭೂಮಿಯಿಂದ, ಉಳಿದ ಭಾಗ ಕೆಂಪು ಭೂಮಿಯಿಂದ ಕೂಡಿರುತ್ತದೆ.

ಕೊಠಾರಿ ಕಮಿಶನ್ ಶಿಫಾರಸ್ಸಿನಂತೆ, ಕರ್ನಾಟಕ ಸರ್ಕಾರವು ಕೃಷಿ ಇಂಜನಿಯರಿಂಗ್ ಡಿಪ್ಲೋಮಾ ಕೋರ್ಸನ್ನು ಸನ್ 1969ರಲ್ಲಿ ರಾಯಚೂರಿನಲ್ಲಿ ಸ್ಥಾಪಿಸಲು ಅನುಮತಿ ನೀಡಿತು. ಅಂದಿನ ಕೃಷಿ ವಿಶ್ವವಿದ್ಯಾಲಯ ಬೆಂಗಳೂರಿನ ಆಡಳಿತಾತ್ಮಕ ಅಧೀನದಲ್ಲಿದ್ದ ಈ ಕೋರ್ಸ ದೇಶದಲ್ಲಿಯೇ ಪ್ರಥಮ ಪ್ರಯೋಗವಾಗಿತ್ತು. ಪ್ರೌಢಶಾಲೆಯ ವಿದ್ಯಾರ್ಥಿಗಳನ್ನು ಕೌಶಲ್ಯಯುತ ತಂತ್ರಜ್ಞರನ್ನಾಗಿ ಮಾಡಿ ಜೀವನೋಪಾಯಕ್ಕಾಗಿ ದಾರಿ ಮಾಡಿಕೊಡುವುದೇ ಇದರ ಉದ್ದೇಶವಾಗಿತ್ತು. ನಂತರ 1986ರಲ್ಲಿ ಕೃಷಿ ವಿಶ್ವವಿದ್ಯಾಲಯದ ಧಾರವಾಡದ ಅಧೀನದಲ್ಲಿ ಬಂದ ಈ ಸಂಸ್ಥೆ, ಔದ್ಯೋಗಿಕ ರಂಗದಲ್ಲಿ ಉಂಟಾಗುವ ಬದಲಾವಣೆಗಳಿಗೆ ತಕ್ಕಂತೆ ಕೌಶಲ್ಯಯುತ ಪದವೀಧರರನ್ನು ತಯಾರು ಮಾಡುವ ಉದ್ದೇಶದಿಂದ 1987ರಲ್ಲಿ (ಕೃಷಿ ಇಂಜಿನಿಯರಿಂಗ್ ಡಿಪ್ಲೋಮಾ ಕೋರ್ಸನ್ನು ನಾಲ್ಕು ವರ್ಷದ ಬಿ.ಟೆಕ್ (ಕೃಷಿ ಇಂಜಿನಿಯರಿಂಗ್) ಪದವಿಗೆ ಮೇಲ್ದರ್ಜೆಗೇರಿಸಿ ಅನುಕ್ರಮವಾಗಿ ಎಲ್ಲ ಸೌಲಭ್ಯಗಳನ್ನು ಒಂದೊಂದಾಗಿ ರಚಿಸಲಾಯಿತು. ಸದ್ಯ ಇದು ದೇಶದಲ್ಲಿಯೇ ಒಂದು ಉತ್ತಮ ದರ್ಜೆಯ ಕೃಷಿ ತಾಂತ್ರಿಕ ಮಹಾವಿದ್ಯಾಲಯವೆಂದು ಹೆಗ್ಗಳಿಗೆ ಗಳಿಸಿಕೊಂಡಿದೆ. ಕೃಷಿ ಯಂತ್ರೋಪಕರಣ ಮತ್ತು ಶಕ್ತಿ ತಾಂತ್ರಿಕತೆ, ಮಣ್ಣು ಮತ್ತು ನೀರು ಸಂರಕ್ಷಣೆ ತಾಂತ್ರಿಕತೆ, ಸಂಸ್ಕರಣೆ ಮತ್ತು ಆಹಾರ ತಂತ್ರಜ್ಞಾನಗಳನ್ನೊಳಗೊಂಡ ಮೂರು ವಿಭಾಗಗಳಲ್ಲಿ ಸ್ನಾತಕೋತ್ತರ ಹಾಗೂ ಪಿ.ಹೆಚ್.ಡಿ ಪದವಿಯನ್ನು ಪ್ರಾರಂಭಿಸಲಾಗಿದ್ದು, ಅನೇಕ ರೈತೋಪಯೋಗಿ ತಂತ್ರಜ್ಞಾನಗಳು ವಿವಿಧ ವಿಭಾಗಗಳಿಂದ ಅನಾವರಣಗೊಂಡವು.

1984ರಲ್ಲಿ ಪ್ರಾರಂಭವಾದ ಕೃಷಿ ಮಹಾವಿದ್ಯಾಲಯ, ರಾಯಚೂರು, ISO9001:2008 ಪ್ರಮಾಣ ಪತ್ರದೊಂದಿಗೆ ಗುರುತಿಸಿದ್ದು, ಈ ಮಹಾವಿದ್ಯಾಲಯದಿಂದ ಅನೇಕ ವಿದ್ಯಾರ್ಥಿಗಳು ಭಾರತೀಯ ಆಡಳಿತ ಸೇವೆಯಲ್ಲಿ ಸೇವೆ ಸಲ್ಲಿಸುತ್ತಿರುವುದು ಇದರ ಗುಣಮಟ್ಟಕ್ಕೆ ಸಾಕ್ಷಿ. ಈ ವಿಶ್ವವಿದ್ಯಾಲಯವು ಪ್ರಸ್ತುತ ನಾಲ್ಕು ಮಹಾವಿದ್ಯಾಲಯಗಳನ್ನು ಒಳಗೊಂಡಿದ್ದು, ಭೀಮರಾಯನಗುಡಿ ಮತ್ತು ಕಲಬುರಗಿಯಲ್ಲಿಯೂ ಸಹ ಕೃಷಿ ಮಹಾವಿದ್ಯಾಲಯಗಳು ಪ್ರಾರಂಭಗೊಂಡು ಸರ್ವತೋಮುಖ ಅಭಿವೃದ್ಧಿಗೆ ಕಾರಣೀಭೂತವಾಗಿವೆ. ರಾಯಚೂರು ಮುಖ್ಯ ಆವರಣದಲ್ಲಿ ವಿವಿಧ ವಿಭಾಗಗಳಲ್ಲಿ 16 ಸ್ನಾತಕೋತ್ತರ ಪದವಿ ಮತ್ತು 15 ಪಿ.ಎಚ್.ಡಿ ಪದವಿ

ಕಾರ್ಯಕ್ರಮಗಳು ನಡೆಯುತ್ತಿವೆ. ಕೃಷಿ ಮತ್ತು ಕೃಷಿ ಇಂಜಿನಿಯರಿಂಗ್‌ನಲ್ಲಿ ಅನೇಕ ವಿದ್ಯಾರ್ಥಿಗಳು ಭಾರತೀಯ ಕೃಷಿ ಅನುಸಂಧಾನ ಪರಷತ್ ಶಿಷ್ಯವೇತನ ಪಡೆದಿರುತ್ತಾರೆ. ವಿವಿಧ ವಿಭಾಗಗಳಿಗೆ ವಿದ್ಯಾರ್ಥಿ ಮತ್ತು ಶಿಕ್ಷಕರ ಸಂಶೋಧನೆಗೆ ಉಪಯೋಗವಾಗುವ ಹೈ–ಟೆಕ್ ಉಪಕರಣಗಳನ್ನು ಖರೀದಿಸಲಾಗಿದೆ. ವಿದ್ಯಾರ್ಥಿಗಳಿಗೆ ಕಲಿಕೆಯ ಜೊತೆ ಕೌಶಲ್ಯಭಿವೃದ್ಧಿ ಕಾರ್ಯಕ್ರಮಗಳು ಅವರಲ್ಲಿ ಆತ್ಮವಿಶ್ವಾಸ ಮೂಡಿಸಿದೆ.

1.2 ಕಾರ್ಯವ್ಯಾಪ್ತಿ ಪ್ರದೇಶ



1.3 ವಿಶ್ವವಿದ್ಯಾಲಯದ ಗುರಿ, ಧ್ಯೇಯೋದ್ದೇಶ ಮತ್ತು ಅಧ್ಯಾದೇಶ

ಗುರಿ:

ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯವನ್ನು ವಿಶ್ವದರ್ಜೆಯ ಕೃಷಿ ವಿಶ್ವವಿದ್ಯಾಲಯವನ್ನಾಗಿ ರೂಪಾಂತರಗೊಳಿಸುವುದು.

ಧ್ಯೇಯೋದ್ದೇಶ:

ಕೃಷಿ ಮತ್ತು ಕೃಷಿಗೆ ಸಂಬಂಧಿತ ವಿಜ್ಞಾನಗಳಲ್ಲಿ ಬೋಧನೆ, ಸಂಶೋಧನೆ ಮತ್ತು ವಿಸ್ತರಣೆ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿದೆ. ವಿಜ್ಞಾನದ ಹೊಸ ಗಡಿರೇಖೆಗಳು ಮತ್ತು ಸಮಕಾಲೀನ ಸವಾಲುಗಳನ್ನು ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ತಾಂತ್ರಿಕವಾಗಿ ಪ್ರಸ್ತುತಪಡಿಸಲು ವಿಶ್ವವಿದ್ಯಾಲಯವು ಶ್ರಮಿಸುತ್ತಿದೆ. ವಿಶ್ವವಿದ್ಯಾಲಯವು ಅತ್ಯುತ್ತಮ ಮಾನವಶಕ್ತಿ ಮತ್ತು ಉಪಯುಕ್ತ ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸಲು ಬದ್ಧವಾಗಿದೆ ಮತ್ತು ಅವುಗಳನ್ನು ರಾಜ್ಯದ ಸಾಮಾನ್ಯ ಕೃಷಿ ಸಮುದಾಯಕ್ಕೆ ಪ್ರಸಾರ ಮಾಡುತ್ತದೆ. ಕೃಷಿ ಮತ್ತು ಸಂಬಂಧಿತ ಕ್ಷೇತ್ರಗಳಲ್ಲಿ ಉತ್ತಮ ಗುಣಮಟ್ಟದ ಮಾನವ ಸಂಪನ್ಮೂಲ ಅಭಿವೃದ್ಧಿ, ಅತ್ಯಾಧುನಿಕ ಸ್ಪರ್ಧಾತ್ಮಕ ತಂತ್ರಜ್ಞಾನಗಳ ಅಭಿವೃದ್ಧಿ ಹಾಗೂ ರಾಜ್ಯ ಮತ್ತು ದೇಶದ ರೈತ ಸಮುದಾಯದ ಸೇವೆಗಾಗಿ ಸಮರ್ಥ ಪ್ರಸಾರ ತಾಂತ್ರಿಕತೆಯನ್ನು ವಿಕಸಿತಗೊಳಿಸುವುದು.

ಅಧ್ಯಾದೇಶಗಳು:

ವಿಶ್ವವಿದ್ಯಾಲಯದ ಅಧಿನಿಯಮದಲ್ಲಿ ಸೂಚಿತಗೊಂಡಿರುವಂತೆ ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಅಧ್ಯಾದೇಶಗಳು ಈ ಮುಂದಿನಂತಿವೆ.

1. ಕೃಷಿ ಮತ್ತು ಸಂಬಂಧಿತ ವಿಜ್ಞಾನಗಳ ವಿವಿಧ ವಿಭಾಗಗಳಲ್ಲಿ ಮಾನವ ಸಂಪನ್ಮೂಲ ಗುಣಮಟ್ಟ ಮತ್ತು ಸರ್ವತೋಮುಖ ಅಭಿವೃದ್ಧಿಗಾಗಿ ಶಿಕ್ಷಣ ಒದಗಿಸುವ ವ್ಯವಸ್ಥೆ ಮಾಡುವುದು.
2. ಕಲಿಕೆ ಮತ್ತು ಸಂಶೋಧನೆಗೆ ವಿಶೇಷವಾಗಿ ಕೃಷಿ ಮತ್ತು ಸಂಬಂಧಿತ ವಿಜ್ಞಾನಗಳ ಸುಧಾರಣೆಗೆ ಒತ್ತು ನೀಡುವುದು.
3. ವಿಶೇಷವಾಗಿ ರಾಜ್ಯ ಗ್ರಾಮೀಣ ಜನತೆಗೆ ವಿಜ್ಞಾನ ಮತ್ತು ತಂತ್ರಜ್ಞಾನಗಳಂತಹ ವಿಷಯಗಳಲ್ಲಿ ವಿಸ್ತರಣಾ ಶಿಕ್ಷಣ ಒದಗಿಸುವುದು.
4. ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಶಿಕ್ಷಣ, ಕೈಗಾರಿಕೆಗಳ, ಸಂಶೋಧನೆ ಮತ್ತು ಸಂಸ್ಥೆಗಳಲ್ಲಿ ಪಾಲುಗಾರಿಕೆ ಮತ್ತು ಸಂಬಂಧಗಳನ್ನು ಪ್ರೋತ್ಸಾಹಿಸುವುದು.
5. ಕಾಲಕಾಲಕ್ಕೆ ರಾಜ್ಯ ಸರ್ಕಾರವು ಅಧಿಕೃತ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಿದ ಇತರ ಕಾರ್ಯಗಳನ್ನು ಕೈಗೊಳ್ಳುವುದು.

1.4 ವಿಶ್ವವಿದ್ಯಾಲಯದ ಪ್ರಾಧಿಕಾರ

(1) ವ್ಯವಸ್ಥಾಪನಾ ಮಂಡಳಿ
(2) ಶೈಕ್ಷಣಿಕ ಪರಿಷತ್
(3) ಸಂಶೋಧನಾ ಪರಿಷತ್
(4) ವಿಸ್ತರಣಾ ಪರಿಷತ್
(5) ಸ್ನಾತಕ ಅಧ್ಯಯನ ವಿದ್ಯಾವಿಷಯಕ ಮಂಡಳಿ ಸದಸ್ಯರು
(6) ಸ್ನಾತಕೋತ್ತರ ಅಧ್ಯಯನ ವಿದ್ಯಾವಿಷಯಕ ಮಂಡಳಿ ಸದಸ್ಯರು
(7) ಶಾಸನಗಳಿಂದ ಘೋಷಿಸಲ್ಪಟ್ಟ ಇತರ ಸಂಸ್ಥೆಯ ಅಧಿಕಾರಿಗಳು.

1.4.1 ವ್ಯವಸ್ಥಾಪನಾ ಮಂಡಳಿ

ಅಧ್ಯಕ್ಷರು		1. **ಶ್ರೀ ಗುತ್ತಿ ಜಂಬುನಾಥ್** (1–4–2018 ರಿಂದ 31–8–2018) **ಕುಲಪತಿಗಳು (ಪ್ರಭಾರಿ)** 2. **ಡಾ. ಎಸ್.ಕೆ. ಮೇಟಿ** (1–9–2018 ರಿಂದ 14–10–2018) **ಕುಲಪತಿಗಳು (ಪ್ರಭಾರಿ)** 3. **ಡಾ. ಕೆ.ಎನ್. ಕಟ್ಟಿಮನಿ** (15–10–2018 ರಿಂದ ಇಂದಿನವರೆಗೆ) **ಕುಲಪತಿಗಳು**
ಪದನಿಮಿತ್ತ ಅಧಿಕಾರಿ ಸದಸ್ಯರು	1.	**ಶ್ರೀ. ಎಮ್. ಮಹೇಶ್ವರ ರಾವ್, ಭಾ.ಆ.ಸೇ.** ಸರ್ಕಾರದ ಕಾರ್ಯದರ್ಶಿ ಕೃಷಿ ಇಲಾಖೆ, ಕರ್ನಾಟಕ ಸರ್ಕಾರ, ಬಹುಮಹಡಿಗಳ ಕಟ್ಟಡ ಬೆಂಗಳೂರು.
	2.	**ಶ್ರೀಮತಿ ಪದ್ಮಾವತಿ** ಸರ್ಕಾರದ ಉಪ ಅಪರ ಕಾರ್ಯದರ್ಶಿ ಹಣಕಾಸು ಇಲಾಖೆ ಕರ್ನಾಟಕ ಸರ್ಕಾರ, ವಿಧಾನ ಸೌಧ, ಬೆಂಗಳೂರು.

	3.	**ಶ್ರೀ. ಎಮ್. ಮಹೇಶ್ವರ ರಾವ್, ಭಾ.ಆ.ಸೇ.** ಮಾನ್ಯ ಸರ್ಕಾರದ ಕಾರ್ಯದರ್ಶಿ, ತೋಟಗಾರಿಕೆ ಇಲಾಖೆ, ಕರ್ನಾಟಕ ಸರ್ಕಾರ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
	4.	**ಡಾ. ಎಂ.ಬಿ. ಚೆಟ್ಟಿ** ಸಹಾಯಕ ಮಹಾಪ್ರಬಂಧಕರು (ಹೆಚ್.ಆರ್.ಡಿ.) ಭಾರತೀಯ ಕೃಷಿ ಅನುಸಂಧಾನ ಪರಿಷತ್, ನವದೆಹಲಿ. (1–4–2018 ರಿಂದ 27–9–2018) **ಡಾ. ಎಂ.ಆರ್. ದಿನೇಶ್** ನಿರ್ದೇಶಕರು, ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆ ಬೆಂಗಳೂರು (28–9–2019 ರಿಂದ 31–3–2019)
ಪದನಿಮಿತ್ತ ಸದಸ್ಯ **ಕಾರ್ಯದರ್ಶಿಗಳು**	5	**ಶ್ರೀ ಗುತ್ತಿ ಜಂಬುನಾಥ್** ಕುಲಸಚಿವರು, ಕೃವಿವಿ., ರಾಯಚೂರು (1–4–2018 ರಿಂದ 30–11–2018) **ಡಾ. ಎಂ. ಜಿ. ಪಾಟೀಲ್** ಕುಲಸಚಿವರು, ಕೃವಿವಿ., ರಾಯಚೂರು (1–12–2018 ರಿಂದ 31–3–2019)
ಅಧಿಕಾರೇತರ ಸದಸ್ಯರು	6	**ಶ್ರೀ ರಾಜಶೇಖರ ಬಸವರಾಜ ಪಾಟೀಲ** ಮಾನ್ಯ ವಿಧಾನಸಭಾ ಸದಸ್ಯರು, ಹುಮನಾಬಾದ್ ಕ್ಷೇತ್ರ (1–4–2018 ರಿಂದ 7–2–2019) **ಶ್ರೀ ಶಿವರಾಜ್ ಪಾಟೀಲ್** ಮಾನ್ಯ ವಿಧಾನಸಭಾ ಸದಸ್ಯರು, ರಾಯಚೂರು ನಗರ (8–2–2019 ರಿಂದ 31–3–2019)
	7	**ಡಾ. ಎಮ್. ಶೇಖರಗೌಡ** ಪೋಸ್ಟ. ಹೆರೂರ್– 583 227 ತಾಲೂಕ ಗಂಗಾವತಿ, ಜಿಲ್ಲೆ ಕೊಪ್ಪಳ.
	8	**ಶ್ರೀಮತಿ. ಹೇಮಾವತಿ ಲಂಕೇಶ್** ಸಾಕೀನ್: ಗುಡದಾಲ ಪೋಸ್ಟ್ : ಹನವಾಳ ತಾಲೂಕ ಗಂಗಾವತಿ, ಜಿಲ್ಲೆ ಕೊಪ್ಪಳ.
	9	**ಶ್ರೀ. ಅಮರೇಶ ಬಲ್ಲಿದವ,** ಬಾಪೂಜಿ ಓಣಿ, ದೇವದುರ್ಗ – 584 111 ರಾಯಚೂರು.
	10	**ಶ್ರೀ. ಸಿದ್ದಪ್ಪ ಭಂಡಾರಿ** ಪೋಸ್ಟ್ : ಕಲ್ಮಲಾ, ರಾಯಚೂರು.
	11	**ಶ್ರೀ. ವೀರನಗೌಡ ಪರಸರೆಡ್ಡಿ** ಪೋಸ್ಟ್: ನಲವಾರ ಚಿತ್ತಾಪುರ್ ತಾಲೂಕ್, ಕಲಬುರಗಿ.

1.4.2 ವಿಶ್ವವಿದ್ಯಾಲಯದ ಅಧಿಕಾರಿಗಳು

ಕ್ರ.ಸಂ.	ಹುದ್ದೆ	ಅಧಿಕಾರಿಗಳ ಹೆಸರು	ಕಾರ್ಯಾವಧಿ	
			ರಿಂದ	ವರೆಗೆ
1	ಶಿಕ್ಷಣ ನಿರ್ದೇಶಕರು	ಶ್ರೀ. ಗುತ್ತಿ ಜಂಬುನಾಥ	1–4–2018	31–5–2018
		ಡಾ. ಚಿತ್ತಾಪೂರ ಬಿ.ಎಂ.	1–6–2018	4–7–2018
		ಡಾ. ಎಸ್.ಕೆ. ಮೇಟಿ.	4–7–2018	31–3–2019
2	ಕುಲಸಚಿವರು	ಶ್ರೀ. ಗುತ್ತಿ ಜಂಬುನಾಥ	1–4–2018	30–11–2018
		ಡಾ. ಎಂ.ಜಿ. ಪಾಟೀಲ್	1–12–2018	31–3–2019
3	ಸಂಶೋಧನಾ ನಿರ್ದೇಶಕರು	ಡಾ. ಐ. ಶಂಕರಗೌಡ	1–4–2018	5–7–2018
		ಡಾ. ಬಿ.ಕೆ. ದೇಸಾಯಿ	5–7–2018	31–3–2019
4	ವಿಸ್ತರಣಾ ನಿರ್ದೇಶಕರು	ಡಾ. ಎಸ್.ಕೆ. ಮೇಟಿ.	1–4–2018	4–7–2018
		ಡಾ. ಚಿತ್ತಾಪೂರ ಬಿ.ಎಂ.	4–7–2018	31–3–2019
5	ಡೀನ್ (ಸ್ನಾತಕೋತ್ತರ)	ಡಾ. ಎಂ.ಜಿ. ಪಾಟೀಲ್	1–4–2018	5–7–2018
		ಡಾ. ಐ. ಶಂಕರಗೌಡ	5–7–2018	31–3–2019
6	ಡೀನ್ (ವಿದ್ಯಾರ್ಥಿಕ್ಷೇಮಾಭಿವೃದ್ಧಿ)	ಡಾ. ಡಿ.ಎಂ. ಚಂದರಗಿ	1–4–2018	11–7–2018
		ಡಾ. ಭೀಮಣ್ಣ ಎಂ.	11–7–2018	31–3–2019
7	ಗ್ರಂಥಪಾಲಕರು	ಡಾ. ಮಚೇಂದ್ರನಾಥ	1–4–2018	11–7–2018
		ಡಾ. ಡಿ.ಎಂ. ಚಂದರಗಿ	11–7–2018	31–3–2019
8	ಹಣಕಾಸು ನಿಯಂತ್ರಣಾಧಿಕಾರಿಗಳು	ಶ್ರೀ. ಎಂ.ಎನ್. ಬಿರಾದಾರ	1–4–2018	31–3–2019
9	ಡೀನ್ (ಕೃಷಿ) ಕೃ.ಮ.ವಿ., ರಾಯಚೂರು	ಡಾ. ಎ.ಎಸ್. ಹಳೆಪ್ಯಾಟಿ	1–4–2018	5–7–2018
		ಡಾ. ಎಂ.ಜಿ. ಪಾಟೀಲ್	5–7–2018	4–1–2019
		ಡಾ. ಡಿ.ಎಂ. ಚಂದರಗಿ	4–1–2019	31–3–2019
10	ಡೀನ್ (ಕೃಷಿ) ಕೃ.ಮ.ವಿ., ಭೀ'ಗುಡಿ	ಡಾ. ಸುರೇಶ ಎಸ್. ಪಾಟೀಲ್	1–4–2018	9–7–2018
		ಡಾ. ಲೋಕೇಶ ಆರ್.	9–7–2018	31–3–2019
11	ಡೀನ್ (ಕೃಷಿ) ಕೃ.ಮ.ವಿ., ಕಲಬುರಗಿ	ಡಾ. ಜೆ.ಆರ್. ಪಾಟೀಲ್	1–4–2018	9–7–2018
		ಡಾ. ಸುರೇಶ ಎಸ್. ಪಾಟೀಲ್	9–7–2018	31–3–2019
12	ಡೀನ್ (ಕೃ.ತಾಂ.) ಕೃ.ತಾಂ.ಮ.ವಿ., ರಾಯಚೂರು	ಡಾ. ಯು. ಸತೀಶಕುಮಾರ	1–4–2018	2–7–2018
		ಡಾ. ವೀರನಗೌಡ ಎಂ.	2–7–2018	31–3–2019
13	ಕಾರ್ಯನಿರ್ವಾಹಕ ಅಭಿಯಂತರರು	ಶ್ರೀ. ರವಿ. ಆರ್. ಮೆಸ್ತಾ	1–4–2018	31–3–2019

1.4.3 ಶೈಕ್ಷಣಿಕ ಪರಿಷತ್

ಸೆಕ್ಷನ್	ವರ್ಗ	ಕ್ರ.ಸಂ.	ನಾಮನಿರ್ದೇಶನ
14(1) (i)	ಕುಲಪತಿಗಳು – ಅಧ್ಯಕ್ಷರು	1.	**ಡಾ. ಕೆ.ಎನ್. ಕಟ್ಟಿಮನಿ** ಕುಲಪತಿಗಳು ಕೃವಿವಿ, ರಾಯಚೂರು
14(1) (ii)	ಸಂಶೋಧನಾ ನಿರ್ದೇಶಕರು ಮತ್ತು ವಿಸ್ತರಣಾ ನಿರ್ದೇಶಕರು	2.	**ಡಾ. ಬಿ.ಕೆ. ದೇಸಾಯಿ** ಸಂಶೋಧನಾ ನಿರ್ದೇಶಕರು ಕೃವಿವಿ, ರಾಯಚೂರು
		3.	**ಡಾ. ಬಿ.ಎಮ್. ಚಿತ್ತಾಪುರ** ವಿಸ್ತರಣಾ ನಿರ್ದೇಶಕರು ಕೃವಿವಿ, ರಾಯಚೂರು
14(1) (iii)	ಮಹಾವಿದ್ಯಾಲಯಗಳ ಡೀನ್‌ರವರು	4.	**ಡಾ. ಐ. ಶಂಕರಗೌಡ** ಡೀನ್ (ಸ್ನಾತಕೋತ್ತರ) ಕೃವಿವಿ, ರಾಯಚೂರು
		5.	**ಡಾ. ಸುರೇಶ್ ಎಸ್. ಪಾಟೀಲ್** ಡೀನ್ (ಕೃಷಿ) ಕೃಷಿ ಮಹಾವಿದ್ಯಾಲಯ, ಕಲಬುರಗಿ
		6.	**ಡಾ. ಆರ್. ಲೋಕೇಶ್** ಡೀನ್ (ಕೃಷಿ) ಕೃಷಿ ಮಹಾವಿದ್ಯಾಲಯ, ಭೀಮರಾಯನಗುಡಿ
		7.	**ಡಾ. ಡಿ.ಎಮ್. ಚಂದರಗಿ** ಡೀನ್ (ಕೃಷಿ) ಕೃಷಿ ಮಹಾವಿದ್ಯಾಲಯ, ರಾಯಚೂರು
		8.	**ಡಾ. ಎಮ್. ವೀರನಗೌಡ** ಡೀನ್ (ಕೃಷಿ ತಾಂತ್ರಿಕ) ಕೃಷಿ ತಾಂತ್ರಿಕ ಮಹಾವಿದ್ಯಾಲಯ, ರಾಯಚೂರು
14(1) (iv)	ಕುಲಪತಿಗಳಿಂದ ನಾಮನಿರ್ದೇಶಿಸಲ್ಪಟ್ಟ ಎರಡು ವಿಶ್ವವಿದ್ಯಾಲಯದ ಮುಖ್ಯಸ್ಥರು (ರೊಟೇಶನ್ ಆಧಾರದ ಮೇಲೆ)	9.	**ಡಾ. ಎಮ್. ಭೀಮಣ್ಣ** ವಿಶ್ವವಿದ್ಯಾಲಯದ ಮುಖ್ಯಸ್ಥರು ಕೀಟಶಾಸ್ತ್ರ ವಿಭಾಗ ಕೃಷಿ ಮಹಾವಿದ್ಯಾಲಯ, ರಾಯಚೂರು
		10.	**ಡಾ. ಎಮ್.ಎಸ್. ಅಯ್ಯನಗೌಡರ್** ವಿಶ್ವವಿದ್ಯಾಲಯದ ಮುಖ್ಯಸ್ಥರು ನೀರಾವರಿ ಮತ್ತು ಒಳಚರಂಡಿ ಇಂಜಿನಿರಿಂಗ್ ವಿಭಾಗ, ಕೃಷಿ ತಾಂತ್ರಿಕ ಮಹಾವಿದ್ಯಾಲಯ, ರಾಯಚೂರು
14(1) (v)	ಕುಲಪತಿಗಳಿಂದ ನಾಮನಿರ್ದೇಶಿಸಲ್ಪಟ್ಟ ಶಿಕ್ಷಕರು (ಪ್ರಾಧ್ಯಾಪಕರ ಹುದ್ದೆ)	11	**ಡಾ. ಡಿ.ಎಮ್. ಚಂದರಗಿ** ಪ್ರಾಧ್ಯಾಪಕರು ಕೃಷಿ ವಿಸ್ತರಣಾ ಶಿಕ್ಷಣ ಮತ್ತು ವಿಶ್ವವಿದ್ಯಾಲಯದ ಗ್ರಂಥಪಾಲಕರು, ಕೃವಿವಿ, ರಾಯಚೂರು

14(1) (vi)	ಕುಲಪತಿಗಳಿಂದ ನಾಮನಿರ್ದೇಶಿಸಲ್ಪಟ್ಟ ಬಾಹ್ಯ ವಿಶ್ವವಿದ್ಯಾಲಯದ ಶ್ರೇಷ್ಠ ಕೃಷಿ ಶಿಕ್ಷಣ ತಜ್ಞರು	12.	**ಡಾ. ಬಿ. ರಾಜು** ವಿಶ್ರಾಂತ ಕುಲಪತಿಗಳು ತೋ.ವಿ.ವಿ, ಬಾಗಲಕೋಟ ಮನೆ ನಂ. 345, ಹೆಚ್.ಬಿ.ಸಿ.ಎಸ್. ಚಾಲುಕ್ಯ ಶಾಲೆ ಎದುರು, ದಾತಗಲ್ಲಿ ಮೈಸೂರು – 570022
14(1) (vii)	ಕುಲಸಚಿವರು	13	**ಡಾ. ಎಮ್.ಜಿ. ಪಾಟೀಲ** ಕುಲಸಚಿವರು ಕೃವಿವಿ, ರಾಯಚೂರು
14(1) (viii)	ಕೃಷಿ ನಿರ್ದೇಶಕರು, ಕರ್ನಾಟಕ ಸರ್ಕಾರ	14.	**ಶ್ರೀ ಬಿ.ವಾಯ್. ಶ್ರೀನಿವಾಸ** ಕೃಷಿ ನಿರ್ದೇಶಕರು, ಕರ್ನಾಟಕ ಸರ್ಕಾರ
14(1) (ix)	ಮಾನ್ಯ ಕುಲಪತಿಗಳಿಂದ ನಾಮನಿರ್ದೇಶಿಸಲ್ಪಟ್ಟ ಅನುಮೋದಿತ ಮಹಾವಿದ್ಯಾಲಯದ ಪ್ರತಿನಿಧಿ (ಪ್ರಾಧ್ಯಾಪಕ ಹುದ್ದೆ)	15.	ಅನ್ವಹಿಸುವುದಿಲ್ಲ
14(1) (x)	ಶಿಕ್ಷಣ ನಿರ್ದೇಶಕರು–ಸದಸ್ಯ ಕಾರ್ಯದರ್ಶಿ	16.	**ಡಾ. ಎಸ್.ಕೆ. ಮೇಟಿ** ಶಿಕ್ಷಣ ನಿರ್ದೇಶಕರು ಕೃವಿವಿ, ರಾಯಚೂರು
31 (9) (c)	ಹಣಕಾಸು ನಿಯಂತ್ರಣಾಧಿಕಾರಿಗಳು – ಮಾಜಿ–ಅಧಿಕೃತ ಸದಸ್ಯ	17.	**ಶ್ರೀ ಮಲ್ಲಿಕಾರ್ಜುನ ಎನ್. ಬಿರಾದರ** ಹಣಕಾಸು ನಿಯಂತ್ರಣಾಧಿಕಾರಿಗಳು ಕೃವಿವಿ, ರಾಯಚೂರು

1.4.4 ಸಂಶೋಧನಾ ಪರಿಷತ್

ಸೆಕ್ಷನ್	ವರ್ಗ	ಕ್ರ.ಸಂ.	ನಾಮನಿರ್ದೇಶನ
16(i)	ಕುಲಪತಿಗಳು – ಅಧ್ಯಕ್ಷರು	1	**ಡಾ. ಕೆ.ಎನ್. ಕಟ್ಟಿಮನಿ** ಕುಲಪತಿಗಳು ಕೃವಿವಿ, ರಾಯಚೂರು
16(ii)	ಕೃಷಿ ನಿರ್ದೇಶಕರು, ಕರ್ನಾಟಕ ಸರ್ಕಾರ	2	**ನಿರ್ದೇಶಕರು** ಕೃಷಿ ಇಲಾಖೆ, ಕರ್ನಾಟಕ ಸರ್ಕಾರ ಶೇಷಾದ್ರಿ ರಸ್ತೆ, ಬೆಂಗಳೂರು–560001
16(iii)	ಕೃಷಿ ಮಾರುಕಟ್ಟೆ ನಿರ್ದೇಶಕರು, ಕರ್ನಾಟಕ ಸರ್ಕಾರ	3	**ನಿರ್ದೇಶಕರು** ಕೃಷಿ ಮಾರುಕಟ್ಟೆ ಮಂಡಳಿ, ನಂ. 16, 11ನೇ ಕ್ರಾಸ್, ರಾಜಭವನ ರಸ್ತೆ, ಬೆಂಗಳೂರು–560001
16(iv)	ತೋಟಗಾರಿಕೆ ನಿರ್ದೇಶಕರು, ಕರ್ನಾಟಕ ಸರ್ಕಾರ	4	**ನಿರ್ದೇಶಕರು** ತೋಟಗಾರಿಕೆ ಇಲಾಖೆ, ಲಾಲ್‌ಬಾಗ್, ಬೆಂಗಳೂರು–560001
16(v)	ಮಹಿಳಾ ಮತ್ತು ಮಕ್ಕಳ ಕಲ್ಯಾಣ ನಿರ್ದೇಶಕರು, ಕರ್ನಾಟಕ ಸರ್ಕಾರ	5	**ನಿರ್ದೇಶಕರು** ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಡಾ. ಅಂಬೇಡ್ಕರ್ ವೀಧಿ, ಬಹುಮಹಡಿಗಳ ಕಟ್ಟಡ ಬೆಂಗಳೂರು–560001

16(vi)	ರೇಷ್ಮೆ ಕೃಷಿ ನಿರ್ದೇಶಕರು, ಕರ್ನಾಟಕ ಸರ್ಕಾರ	6	**ನಿರ್ದೇಶಕರು** ರೇಷ್ಮೆ ಇಲಾಖೆ, ಡಾ. ಅಂಬೇಡ್ಕರ್ ವೀಧಿ ಬೆಂಗಳೂರು–560001
16(vii)	ಜಲಾನಯನ ನಿರ್ವಹಣೆಯ ನಿರ್ದೇಶಕರು, ಕರ್ನಾಟಕ ಸರ್ಕಾರ	7	**ನಿರ್ದೇಶಕರು** ಜಲಾನಯನ ಅಭಿವೃದ್ಧಿ ಇಲಾಖೆ, 7ನೇ ಅಂತಸ್ತು, ಕೆ.ಹೆಚ್.ಬಿ. ಕಾಂಪ್ಲೆಕ್ಸ್, ಕಾವೇರಿ ಭವನ ಬೆಂಗಳೂರು–560001
16(viii)	ಅರಣ್ಯ, ಸಂಶೋದನೆ ಮತ್ತು ತರಬೇತಿಗಳ ಮುಖ್ಯ ಸಂರಕ್ಷಣಾಧಿಕಾರಿ, ಕರ್ನಾಟಕ ಸರ್ಕಾರ	8	**ಹೆಚ್ಚುವರಿ ಪ್ರಧಾನ ಅರಣ್ಯ ಸಂರಕ್ಷಣಾಧಿಕಾರಿಗಳು** (ಸಂಶೋಧನೆ ಮತ್ತು ಬಳಕೆ) ದೊರೆಸಾನಿ ಪಾಳ್ಯ, ಅರಣ್ಯ ಆವರಣ ಜೆ.ಪಿ. ನಗರ, 5ನೇ ಹಂತ ಬೆಂಗಳೂರು–560078
16 (ix)	ವಿಶ್ವವಿದ್ಯಾಲಯದ ಎಲ್ಲಾ ನಿರ್ದೇಶಕರು	9	**ಡಾ. ಎಸ್.ಕೆ. ಮೇಟಿ** ಶಿಕ್ಷಣ ನಿರ್ದೇಶಕರು ಕೃವಿವಿ, ರಾಯಚೂರು
		10	**ಡಾ. ಬಿ.ಎಮ್. ಚಿತ್ತಾಪುರ** ವಿಸ್ತರಣಾ ನಿರ್ದೇಶಕರು ಕೃವಿವಿ, ರಾಯಚೂರು
16(x)	ಎಲ್ಲಾ ಮಹಾವಿದ್ಯಾಲಯಗಳ ಡೀನ್‌ಗಳು	11	**ಡಾ. ಐ. ಶಂಕರಗೌಡ** ಡೀನ್ (ಸ್ನಾತಕೋತ್ತರ) ಕೃವಿವಿ, ರಾಯಚೂರು
		12	**ಡಾ. ಆರ್. ಲೋಕೇಶ್** ಡೀನ್ (ಕೃಷಿ) ಕೃಷಿ ಮಹಾವಿದ್ಯಾಲಯ, ಭೀಮರಾಯನಗುಡಿ
		13	**ಡಾ. ಎಮ್.ಜಿ. ಪಾಟೀಲ** ಡೀನ್ (ಕೃಷಿ) ಕೃಷಿ ಮಹಾವಿದ್ಯಾಲಯ, ರಾಯಚೂರು
		14	**ಡಾ. ಎಮ್. ವೀರನಗೌಡ** ಡೀನ್ (ಕೃಷಿ ತಾಂತ್ರಿಕ) ಕೃಷಿ ತಾಂತ್ರಿಕ ಮಹಾವಿದ್ಯಾಲಯ, ರಾಯಚೂರು
		15	**ಡಾ. ಸುರೇಶ್ ಎಸ್. ಪಾಟೀಲ್** ಡೀನ್ (ಕೃಷಿ) ಕೃಷಿ ಮಹಾವಿದ್ಯಾಲಯ, ಕಲಬುರಗಿ
		16	**ಡಾ. ಎಮ್. ಭೀಮಣ್ಣ** ಡೀನ್ (ವಿದ್ಯಾರ್ಥಿ ಕಲ್ಯಾಣ) ಕೃವಿವಿ, ರಾಯಚೂರು
16(xi)	ಎಲ್ಲಾ ಸಹ ಸಂಶೋಧನಾ ನಿರ್ದೇಶಕರು	17	**ಡಾ. ಸತ್ಯನಾರಾಯಣ ರಾವ್** ಸಹ ಸಂಶೋಧನಾ ನಿರ್ದೇಶಕರು ಮುಖ್ಯ ಕೃಷಿ ಸಂಶೋಧನಾ ಕೇಂದ್ರ ರಾಯಚೂರು–584102

		18	**ಡಾ. ಜೆ.ಆರ್. ಪಾಟೀಲ್** ಸಹ ಸಂಶೋಧನಾ ನಿರ್ದೇಶಕರು ವಲಯ ಕೃಷಿ ಸಂಶೋಧನಾ ಕೇಂದ್ರ ಕಲಬುರಗಿ
16(xii)	ವಿಶ್ವವಿದ್ಯಾಲಯದ ಎಲ್ಲಾ ವಿಭಾಗ ಮುಖ್ಯಸ್ಥರು	19	**ಡಾ. ಮಹೇಶ್ವರಬಾಬು** ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು ಮಣ್ಣು ಮತ್ತು ನೀರು ಇಂಜಿನೀಯರಿಂಗ್ ಕೃಷಿ ತಾಂತ್ರಿಕ ಮಹಾವಿದ್ಯಾಲಯ, ರಾಯಚೂರು
		20	**ಡಾ. ಆರ್. ಲೋಕೇಶ್** ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು ತಳಿಶಾಸ್ತ್ರ ಮತ್ತು ಸಸ್ಯ ಸಂತಾನೋತ್ಪತ್ತಿ ಕೃವಿವಿ, ರಾಯಚೂರು
		21	**ಡಾ. ಅಮೃತಾ ಟಿ. ಜೋಶಿ** ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು ಕೃಷಿ ಅರ್ಥಶಾಸ್ತ್ರ ವಿಭಾಗ ಕೃವಿವಿ, ರಾಯಚೂರು
		22	**ಡಾ. ಬಿ.ಕೆ. ದೇಸಾಯಿ** ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು ಬೆಸಾಯಶಾಸ್ತ್ರ ವಿಭಾಗ ಕೃವಿವಿ, ರಾಯಚೂರು
		23	**ಡಾ. ಎಮ್. ಭೀಮಣ್ಣ** ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು ಕೀಟಶಾಸ್ತ್ರ ವಿಭಾಗ ಕೃವಿವಿ, ರಾಯಚೂರು
		24	**ಡಾ. ಎಮ್.ಬಿ. ಪಾಟೀಲ್** ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು ಸಸ್ಯರೋಗಶಾಸ್ತ್ರ ವಿಭಾಗ ಕೃವಿವಿ, ರಾಯಚೂರು
		25	**ಡಾ. ಎ.ಆರ್. ಕುರುಬರ** ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು ತೋಟಗಾರಿಕೆ ವಿಭಾಗ, ಕೃವಿವಿ, ರಾಯಚೂರು
		26	**ಡಾ. ಎಮ್. ವೀರನಗೌಡ** ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು ಕೃಷಿ ಉಪಕರಣಗಳು ಮತ್ತು ಶಕ್ತಿ ತಂತ್ರಜ್ಞಾನ ವಿಭಾಗ ಕೃಷಿ ತಾಂತ್ರಿಕ ಮಹಾವಿದ್ಯಾಲಯ, ರಾಯಚೂರು
		27	**ಡಾ. ಎನ್.ಎಮ್. ಶಕುಂತಲಾ** ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು ಬೀಜ ವಿಜ್ಞಾನ ಮತ್ತು ತಂತ್ರಜ್ಞಾನ ಶಾಸ್ತ್ರ ವಿಭಾಗ ಕೃವಿವಿ, ರಾಯಚೂರು
		28	**ಡಾ. ನಾರಾಯಣರಾವ್** ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು ಮಣ್ಣು ವಿಜ್ಞಾನ ಮತ್ತು ಕೃಷಿ ರಸಾಯನ ಶಾಸ್ತ್ರ ವಿಭಾಗ, ಕೃವಿವಿ, ರಾಯಚೂರು

		29	**ಡಾ. ಮಹಾದೇವಸ್ವಾಮಿ** ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು ಕೃಷಿ ಸೂಕ್ಷ್ಮಜೀವಶಾಸ್ತ್ರ ವಿಭಾಗ ಕೃವಿವಿ, ರಾಯಚೂರು
		30	**ಡಾ. ಎಮ್.ಎಮ್. ದಾನೋಜಿ** ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು ಬೆಳೆ ಶರೀರ ಕ್ರಿಯಾಶಾಸ್ತ್ರ ವಿಭಾಗ ಕೃಷಿ ಮಹಾವಿದ್ಯಾಲಯ, ಭೀಮರಾಯನಗುಡಿ
		31	**ಡಾ. ಎನ್. ಶಿವಶಂಕರ್** ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು ಪಶು ಹಾಗೂ ಪಶುವೈದ್ಯಕೀಯ ಮತ್ತು ಮೀನುಗಾರಿಕೆ ವಿಜ್ಞಾನಗಳ ವಿಭಾಗ, ಕೃವಿವಿ, ರಾಯಚೂರು
		32	**ಡಾ. ಎಸ್.ಬಿ. ಗೌಡಪ್ಪ** ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು ಕೃಷಿ ವಿಸ್ತರಣಾ ಶಾಸ್ತ್ರ ವಿಭಾಗ, ಕೃವಿವಿ, ರಾಯಚೂರು
		33	**ಡಾ. ಎಮ್.ಎಸ್. ಅಯ್ಯನಗೌಡರ್** ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು ನೀರಾವರಿ ಒಳಚರಂಡಿ ಎಂಜಿನೀಯರಿಂಗ್ ವಿಭಾಗ ಕೃಷಿ ತಾಂತ್ರಿಕ ಮಹಾವಿದ್ಯಾಲಯ, ರಾಯಚೂರು
		34	**ಡಾ. ಉದಯಕುಮಾರ್ ನಿಡೋಣಿ** ಮುಖ್ಯಸ್ಥರು ಕೃಷಿ ಸಂಸ್ಕರಣೆ ಮತ್ತು ಆಹಾರ ತಾಂತ್ರಿಕತೆ ವಿಭಾಗ ಕೃಷಿ ತಾಂತ್ರಿಕ ಮಹಾವಿದ್ಯಾಲಯ, ರಾಯಚೂರು
		35	**ಡಾ. ವಿಜಯಕುಮಾರ ಪಲ್ಲೇದ** ಮುಖ್ಯಸ್ಥರು ನವೀಕರಣ ಶಕ್ತಿ ಎಂಜಿನೀಯರಿಂಗ್ ವಿಭಾಗ ಕೃಷಿ ತಾಂತ್ರಿಕ ಮಹಾವಿದ್ಯಾಲಯ, ರಾಯಚೂರು
		36	**ಡಾ. ಅನುಪಮ ಸಿ.** ವಿಜ್ಞಾನಿ (ಗೃಹವಿಜ್ಞಾನ) ಕೆ.ವಿ.ಕೆ. ರಾಯಚೂರು
		37	**ಶ್ರೀ ದೊಡ್ಡಬಸವ ಕೆ. ಪಾಟೀಲ್** ಸಹಾಯಕ ಪ್ರಾಧ್ಯಾಪಕರು ಪರಿಸರ ವಿಜ್ಞಾನ ಮತ್ತು ಕೃಷಿ ಅರಣ್ಯ ವಿಭಾಗ ಕೃವಿವಿ, ರಾಯಚೂರು
16(xiii)	ಕೃಷಿ ಮತ್ತು ಕೃಷಿ ವಲಯದಲ್ಲಿ ಅನುಭವ ಮತ್ತು ಕೃಷಿ ಜ್ಞಾನದ ಆಧಾರದ ಮೇಲೆ ಕುಲಪತಿಗಳಿಂದ ನಾಮಿನಿರ್ದೇಶಿಸಲ್ಪಟ್ಟ ಇಬ್ಬರು ಪ್ರಗತಿಪರ ಕೃಷಿಕರು	38	**ಶ್ರೀ ಸೋಮನಾಥ ರೆಡ್ಡಿ ಪೂರ್ಮ** ಕೋಡ್ಲಾ ಗ್ರಾಮ – 585222 ತಾ:ಸೇಡಮ್ ಜಿಲ್ಲಾ: ಕಲಬುರಗಿ ಮೊಬೈಲ್ ನಂ: 8971639850
		39	**ಶ್ರೀ ಹೆಚ್. ಲಕ್ಷ್ಮೀಕಾಂತ ರೆಡ್ಡಿ** ಬೈಲೂರು ಗ್ರಾಮ ತಾ:ಜಿ: ಬಳ್ಳಾರಿ ಮೊಬೈಲ್ ನಂ. 9448808864

16(xiv)	ವಿಶೇಷ ಸಭೆಯ ಕಾರ್ಯಸೂಚಿಯ ಬಗ್ಗೆ ಮಾಹಿತಿ ಪಡೆಯಲು ಕುಲಪತಿಳಿಂದ ನಾಮ ನಿರ್ದೇಶಿಸಲ್ಪಟ್ಟ ಬಾಹ್ಯ ಶ್ರೇಷ್ಠ ವಿಜ್ಞಾನಿ.	40	**ಡಾ. ಎಮ್.ಎ. ಶಂಕರ್** ಮಾಜಿ ಸಂಶೋಧನಾ ನಿರ್ದೇಶಕರು ನಂ. 14, ಮೊದಲನೆ ಮುಖ್ಯ ರಸ್ತೆ, ಗಂಗಾನಗರ, ಬೆಂಗಳೂರು – 562232 ಮೊಬೈಲ್ ನಂ. 8197992346
16(xv)	ವಿಶೇಷ ಸಭೆಯ ಕಾರ್ಯಸೂಚಿಯ ಬಗ್ಗೆ ಮಾಹಿತಿ ಪಡೆಯಲು ಕುಲಪತಿಳಿಂದ ನಾಮ ನಿರ್ದೇಶಿಸಲ್ಪಟ್ಟ ಕೃಷಿ ಕೈಗಾರಿಕೋದ್ಯಮಿ	41	**ಶ್ರೀ ಪ್ರೀತೇಶ್** ಯಶ್ ಪ್ರೋಟೀನ್ ದಾಲ್ ಇಂಡಸ್ಟ್ರಿ ಬೇಲೂರ ಇಂಡಸ್ಟ್ರಿಯಲ್ ಏರಿಯಾ ಕಲಬುರಗಿ ಮೊಬೈಲ್ ನಂ. 9449828689
16(xvi)	ಮುಖ್ಯ ಅಭಿಯಂತರು – ಜಲ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆ	42	**ಚೀಫ್ ಇಂಜಿನೀಯರ್** ಜಲ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆ, ಆನಂದರಾವ್ ಸರ್ಕಲ್, ಬೆಂಗಳೂರು. ದೂರವಾಣಿ ಸಂ: 080–22871174
16(xvii)	ಕುಲಸಚಿವರು	43	**ಶ್ರೀ ಗುತ್ತಿ ಜಂಬುನಾಥ** ಕುಲಸಚಿವರು ಕೃವಿವಿ, ರಾಯಚೂರು
16(xviii)	ಸಂಶೋಧನಾ ನಿರ್ದೇಶಕರು – ಸದಸ್ಯ ಕಾರ್ಯದರ್ಶಿ	44	**ಡಾ. ಬಿ.ಕೆ. ದೇಸಾಯಿ** ಸಂಶೋಧನಾ ನಿರ್ದೇಶಕರು ಕೃವಿವಿ, ರಾಯಚೂರು

1.4.5 ವಿಸ್ತರಣಾ ಪರಿಷತ್

ಸೆಕ್ಷನ್	ವರ್ಗ	ಕ್ರ.ಸಂ.	ನಾಮನಿರ್ದೇಶನ
18(1) (i)	ಕುಲಪತಿಗಳು – ಅಧ್ಯಕ್ಷರು	1	**ಡಾ. ಕೆ.ಎನ್. ಕಟ್ಟಿಮನಿ** ಕುಲಪತಿಗಳು ಕೃವಿವಿ, ರಾಯಚೂರು
18(1) (ii)	ಕೃಷಿ ನಿರ್ದೇಶಕರು, ಕರ್ನಾಟಕ ಸರ್ಕಾರ	2	**ನಿರ್ದೇಶಕರು** ಕೃಷಿ ಇಲಾಖೆ, ಕರ್ನಾಟಕ ಸರ್ಕಾರ ಶೇಷಾದ್ರಿ ರಸ್ತೆ, ಬೆಂಗಳೂರು–560001
18(1)(iii)	ಕೃಷಿ ಮಾರುಕಟ್ಟೆ ನಿರ್ದೇಶಕರು, ಕರ್ನಾಟಕ ಸರ್ಕಾರ	3	**ನಿರ್ದೇಶಕರು** ಕೃಷಿ ಮಾರುಕಟ್ಟೆ ಮಂಡಳಿ, ನಂ. 16, 11ನೇ ಕ್ರಾಸ್, ರಾಜಭವನ ರಸ್ತೆ, ಬೆಂಗಳೂರು–560001
18(1)(iv)	ತೋಟಗಾರಿಕೆ ನಿರ್ದೇಶಕರು, ಕರ್ನಾಟಕ ಸರ್ಕಾರ	4	**ನಿರ್ದೇಶಕರು** ತೋಟಗಾರಿಕೆ ಇಲಾಖೆ, ಲಾಲಬಾಗ್ ಬೆಂಗಳೂರು–560001
18(1) (v)	ಮಹಿಳಾ ಮತ್ತು ಮಕ್ಕಳ ಕಲ್ಯಾಣ ನಿರ್ದೇಶಕರು, ಕರ್ನಾಟಕ ಸರ್ಕಾರ	5	**ನಿರ್ದೇಶಕರು** ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಡಾ. ಅಂಬೇಡ್ಕರ್ ವೀಧಿ, ಬಹುಮಹಡಿಗಳ ಕಟ್ಟಡ ಬೆಂಗಳೂರು–560001
18(1)(vi)	ರೇಷ್ಮೆ ಕೃಷಿ ನಿರ್ದೇಶಕರು, ಕರ್ನಾಟಕ ಸರ್ಕಾರ	6	**ನಿರ್ದೇಶಕರು** ರೇಷ್ಮೆ ಇಲಾಖೆ, ಡಾ. ಅಂಬೇಡ್ಕರ್ ವೀಧಿ

			ಬೆಂಗಳೂರು–560001
18(1) (vii)	ಅರಣ್ಯ, ಸಂಶೋಧನೆ ಮತ್ತು ತರಬೇತಿಗಳ ಮುಖ್ಯ ಸಂರಕ್ಷಣಾಧಿಕಾರಿ, ಕರ್ನಾಟಕ ಸರ್ಕಾರ	7	**ಹೆಚ್ಚುವರಿ ಪ್ರಧಾನ ಅರಣ್ಯ ಸಂರಕ್ಷಣಾಧಿಕಾರಿಗಳು** (ಸಂಶೋಧನೆ ಮತ್ತು ಬಳಕೆ) ದೊರೆಸಾನಿ ಪಾಳ್ಯ, ಅರಣ್ಯ ಆವರಣ ಜೆ.ಪಿ. ನಗರ, ಬೆಂಗಳೂರು–560078
18(1)(viii)	ಜಲಾನಯನ ನಿರ್ವಹಣೆಯ ನಿರ್ದೇಶಕರು, ಕರ್ನಾಟಕ ಸರ್ಕಾರ	8	**ನಿರ್ದೇಶಕರು** ಜಲಾನಯನ ಅಭಿವೃದ್ಧಿ ಇಲಾಖೆ, 7ನೇ ಅಂತಸ್ತು, ಕೆ.ಹೆಚ್.ಬಿ. ಕಾಂಪ್ಲೆಕ್ಸ್, ಕಾವೇರಿ ಭವನ ಬೆಂಗಳೂರು–560001
18(1)(ix)	ವಿಶ್ವವಿದ್ಯಾಲಯದ ಎಲ್ಲಾ ನಿರ್ದೇಶಕರು	9	**ಡಾ. ಎಸ್.ಕೆ. ಮೇಟಿ** ಶಿಕ್ಷಣ ನಿರ್ದೇಶಕರು ಕೃವಿವಿ, ರಾಯಚೂರು
		10	**ಡಾ. ಬಿ.ಕೆ. ದೇಸಾಯಿ** ಸಂಶೋಧನಾ ನಿರ್ದೇಶಕರು ಕೃವಿವಿ, ರಾಯಚೂರು
		11	**ಡಾ. ಐ. ಶಂಕರಗೌಡ** ಡೀನ್ (ಸ್ನಾತಕೋತ್ತರ) ಕೃವಿವಿ, ರಾಯಚೂರು
	ಮಹಾವಿದ್ಯಾಲಯಗಳ ಡೀನ್‌ಗಳು	12	**ಡಾ. ಸುರೇಶ್ ಎಸ್. ಪಾಟೀಲ್** ಡೀನ್ (ಕೃಷಿ) ಕೃಷಿ ಮಹಾವಿದ್ಯಾಲಯ, ಕಲಬುರಗಿ
		13	**ಡಾ. ಎಮ್.ಜಿ. ಪಾಟೀಲ** ಡೀನ್ (ಕೃಷಿ) ಕೃಷಿ ಮಹಾವಿದ್ಯಾಲಯ, ರಾಯಚೂರು
		14	**ಡಾ. ಆರ್. ಲೋಕೇಶ್** ಡೀನ್ (ಕೃಷಿ) ಕೃಷಿ ಮಹಾವಿದ್ಯಾಲಯ, ಭೀಮರಾಯನಗುಡಿ
		15	**ಡಾ. ಎಮ್. ಭೀಮಣ್ಣ** ಡೀನ್ (ವಿದ್ಯಾರ್ಥಿ ಕಲ್ಯಾಣ) ಕೃವಿವಿ, ರಾಯಚೂರು
		16	**ಡಾ. ಎಮ್. ವೀರನಗೌಡ** ಡೀನ್ (ಕೃಷಿ ತಾಂತ್ರಿಕ) ಕೃಷಿ ತಾಂತ್ರಿಕ ಮಹಾವಿದ್ಯಾಲಯ, ರಾಯಚೂರು
18(1) (x)	ಕುಲಸಚಿವರು	17	**ಶ್ರೀ ಗುತ್ತಿ ಜಂಬುನಾಥ** ಕುಲಸಚಿವರು ಕೃವಿವಿ, ರಾಯಚೂರು
18(1) (xi)	ವಿಶ್ವವಿದ್ಯಾಲಯದ ಎಲ್ಲಾ ಸಹ ಸಂಶೋಧನಾ ನಿರ್ದೇಶಕರು	18	**ಡಾ. ಸತ್ಯನಾರಾಯಣರಾವ** ಸಹ ಸಂಶೋಧನಾ ನಿರ್ದೇಶಕರು ಮುಖ್ಯ ಕೃಷಿ ಸಂಶೋಧನಾ ಕೇಂದ್ರ ರಾಯಚೂರು–584102
		19	**ಡಾ. ಜೆ.ಆರ್. ಪಾಟೀಲ್** ಸಹ ಸಂಶೋಧನಾ ನಿರ್ದೇಶಕರು ವಲಯ ಕೃಷಿ ಸಂಶೋಧನಾ ಕೇಂದ್ರ, ಕಲಬುರಗಿ

18(1)(xii)	ವಿಶ್ವವಿದ್ಯಾಲಯದ ಎಲ್ಲಾ ವಿಭಾಗದ ಮುಖ್ಯಸ್ಥರು	20	**ಡಾ. ಬಿ.ಕೆ. ದೇಸಾಯಿ** ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು ಬೆಸಾಯಶಾಸ್ತ್ರ ವಿಭಾಗ ಕೃವಿವಿ, ರಾಯಚೂರು
		21	**ಡಾ. ಐ. ಶಂಕರಗೌಡ** ಪ್ರಾಧ್ಯಾಪಕರು ಅಣು ಜೀವಶಾಸ್ತ್ರ ಮತ್ತು ಕೃಷಿ ಜೈವಿಕ ತಂತ್ರಜ್ಞಾನ ಕೃವಿವಿ, ರಾಯಚೂರು
		22	**ಡಾ. ಎಮ್. ಭೀಮಣ್ಣ** ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು ಕೀಟಶಾಸ್ತ್ರ ವಿಭಾಗ ಕೃವಿವಿ, ರಾಯಚೂರು
		23	**ಡಾ. ಎಮ್. ವೀರನಗೌಡ** ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು ಕೃಷಿ ಉಪಕರಣಗಳು ಮತ್ತು ಶಕ್ತಿ ತಂತ್ರಜ್ಞಾನ ವಿಭಾಗ ಕೃಷಿ ತಾಂತ್ರಿಕ ಮಹಾವಿದ್ಯಾಲಯ, ರಾಯಚೂರು
		24	**ಡಾ. ಎಮ್.ಎಮ್. ದಾನೋಜಿ** ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು ಬೆಳೆ ಶರೀರ ಕ್ರಿಯಾಶಾಸ್ತ್ರ ವಿಭಾಗ ಕೃಷಿ ಮಹಾವಿದ್ಯಾಲಯ, ಭೀಮರಾಯನಗುಡಿ
		25	**ಡಾ. ಎಮ್.ಬಿ. ಪಾಟೀಲ್** ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು ಸಸ್ಯರೋಗಶಾಸ್ತ್ರ ವಿಭಾಗ, ಕೃವಿವಿ, ರಾಯಚೂರು
		26	**ಡಾ. ಎ.ಆರ್. ಕುರುಬರ** ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು ತೋಟಗಾರಿಕೆ ವಿಭಾಗ ಕೃವಿವಿ, ರಾಯಚೂರು
		27	**ಡಾ. ಎಸ್.ಬಿ. ಗೌಡಪ್ಪ** ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು ಕೃಷಿ ವಿಸ್ತರಣಾ ಶಾಸ್ತ್ರ ವಿಭಾಗ, ಕೃವಿವಿ, ರಾಯಚೂರು
		28	**ಡಾ. ಅಮೃತಾ ಜೋಶಿ** ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು ಕೃಷಿ ಅರ್ಥಶಾಸ್ತ್ರ ವಿಭಾಗ, ಕೃವಿವಿ, ರಾಯಚೂರು
		29	**ಡಾ. ಮಹಾದೇವಸ್ವಾಮಿ** ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು ಕೃಷಿ ಸೂಕ್ಷ್ಮಜೀವಶಾಸ್ತ್ರ ವಿಭಾಗ ಕೃವಿವಿ, ರಾಯಚೂರು
		30	**ಡಾ. ಮಹೇಶ್ವರಬಾಬು** ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು ಮಣ್ಣು ಮತ್ತು ನೀರು ಇಂಜಿನೀಯರಿಂಗ್ ಕೃಷಿ ತಾಂತ್ರಿಕ ಮಹಾವಿದ್ಯಾಲಯ, ರಾಯಚೂರು

		31	**ಡಾ. ಎನ್.ಎಮ್. ಶಕುಂತಲಾ** ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು ಬೀಜ ವಿಜ್ಞಾನ ಮತ್ತು ತಂತ್ರಜ್ಞಾನ ಶಾಸ್ತ್ರ ವಿಭಾಗ ಕೃವಿವಿ, ರಾಯಚೂರು
		32	**ಡಾ. ನಾರಾಯಣರಾವ್** ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು ಮಣ್ಣು ವಿಜ್ಞಾನ ಮತ್ತು ಕೃಷಿ ರಸಾಯನ ಶಾಸ್ತ್ರ ವಿಭಾಗ ಕೃವಿವಿ, ರಾಯಚೂರು
		33	**ಡಾ. ಎನ್. ಶಿವಶಂಕರ್** ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು ಪಶು ಹಾಗೂ ಪಶುವೈದ್ಯಕೀಯ ಮತ್ತು ಮೀನುಗಾರಿಕೆ ವಿಜ್ಞಾನಗಳ ವಿಭಾಗ, ಕೃವಿವಿ, ರಾಯಚೂರು
		34	**ಡಾ. ಎಮ್.ಎಸ್. ಅಯ್ಯನಗೌಡರ್** ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು ನೀರಾವರಿ ಒಳಚರಂಡಿ ಎಂಜಿನೀಯರಿಂಗ್ ವಿಭಾಗ ಕೃಷಿ ತಾಂತ್ರಿಕ ಮಹಾವಿದ್ಯಾಲಯ, ರಾಯಚೂರು
		35	**ಡಾ. ಉದಯಕುಮಾರ್ ನಿಡೋಣಿ** ಮುಖ್ಯಸ್ಥರು ಕೃಷಿ ಸಂಸ್ಕರಣೆ ಮತ್ತು ಆಹಾರ ತಾಂತ್ರಿಕತೆ ವಿಭಾಗ ಕೃಷಿ ತಾಂತ್ರಿಕ ಮಹಾವಿದ್ಯಾಲಯ, ರಾಯಚೂರು
		36	**ಡಾ. ವಿಜಯಕುಮಾರ ಪಲ್ಲೇದ** ಮುಖ್ಯಸ್ಥರು ನವೀಕರಣ ಶಕ್ತಿ ಎಂಜಿನೀಯರಿಂಗ್ ವಿಭಾಗ ಕೃಷಿ ತಾಂತ್ರಿಕ ಮಹಾವಿದ್ಯಾಲಯ, ರಾಯಚೂರು
		37	**ಡಾ. ಅನುಪಮ ಸಿ.** ವಿಜ್ಞಾನಿ (ಗೃಹವಿಜ್ಞಾನ), ಕೆ.ವಿ.ಕೆ. ರಾಯಚೂರು
		38	**ಶ್ರೀ ದೊಡ್ಡಬಸವ ಕೆ. ಪಾಟೀಲ್** ಸಹಾಯಕ ಪ್ರಾಧ್ಯಾಪಕರು ಪರಿಸರ ವಿಜ್ಞಾನ ಮತ್ತು ಕೃಷಿ ಅರಣ್ಯ ವಿಭಾಗ ಕೃವಿವಿ, ರಾಯಚೂರು
18(1) (xiii)	ಕೃಷಿ ಮತ್ತು ಕೃಷಿ ವಲಯದಲ್ಲಿ ಅನುಭವ ಮತ್ತು ಕೃಷಿ ಜ್ಞಾನದ ಆಧಾರದ ಮೇಲೆ ಕುಲಪತಿಗಳಿಂದ ನಾಮಿನಿರ್ದೇಶಿಸಲ್ಪಟ್ಟ ಇಬ್ಬರು ಪ್ರಗತಿಪರ ಕೃಷಿಕರು	39	**ಶ್ರೀ ಹನುಮನಗೌಡ** ಬೆಳಗುರ್ಕಿ, ಸಿಂಧನೂರು ಮೊಬೈಲ್ ನಂ. 9448120308
		40	**ಶ್ರೀ ಗುರುಲಿಂಗಪ್ಪ ಮೇಲದೊಡ್ಡಿ** ಪೋಸ್ಟ್: ಹುಡಗಿ, ತಾ: ಹುಮ್ನಾಬಾದ ಜಿಲ್ಲಾ: ಬೀದರ್, ಮೊಬೈಲ್ ನಂ. 9741333907

18(1) (xiv)	ವಿಶೇಷ ಸಭೆಯ ಕಾರ್ಯಸೂಚಿಯ ಬಗ್ಗೆ ಮಾಹಿತಿ ಪಡೆಯಲು ಕುಲಪತಿಳಿಂದ ನಾಮ ನಿರ್ದೇಶಿಸಲ್ಪಟ್ಟ ಬಾಹ್ಯ ಶ್ರೇಷ್ಠ ವಿಸ್ತರಣಾ ವಿಜ್ಞಾನಿ.	41	**ಡಾ. ಎನ್. ನಾಗರಾಜ** ಮಾಜಿ ವಿಸ್ತರಣಾ ನಿರ್ದೇಶಕರು ಕೃವಿವಿ, ಬೆಂಗಳೂರು, ಕಸ್ತೂರಭಾ ನಿಲಯ, ಶಿವಶಂಕರ್ ನಗರ, ಹೆಬ್ಬಾಳ್ ಬೆಂಗಳೂರು – 24 ಮೊಬೈಲ್ ನಂ. 9448477733
18(1) (xv)	ವಿಶೇಷ ಸಭೆಯ ಕಾರ್ಯಸೂಚಿಯ ಬಗ್ಗೆ ಮಾಹಿತಿ ಪಡೆಯಲು ಕುಲಪತಿಳಿಂದ ನಾಮ ನಿರ್ದೇಶಿಸಲ್ಪಟ್ಟ ಕೃಷಿ ಕೈಗಾರಿಕೋದ್ಯಮಿ	42	**ಶ್ರೀ ಸುಧಾಕರ** ಸುಧಾ ಅಗ್ರೋ ಇಂಡಸ್ಟ್ರೀ ಮಾನವಿ, ರಾಯಚೂರು ಮೊಬೈಲ್ ನಂ. 9448190348
18(1)(xvi)	ಕುಲಪತಿಗಳ ಕೋರಿಕೆ ಮೇರೆಗೆ ಐದು ಸಂಸ್ಥೆಗಳಿಗೆ ಸೀಮಿತವಾದ ಪ್ರತಿನಿಧಿಗಳು	43	**ಪ್ರತಿನಿಧಿಗಳು**
18(1) (xvi)(e)	ಫರ್ಟಿಲೈಜರ್ ಕಾರ್ಪೋರೇಶನ್ ಆಫ್ ಇಂಡಿಯಾ	44	**ಫರ್ಟಿಲೈಜರ್ ಕಾರ್ಪೋರೇಶನ್ ಆಫ್ ಇಂಡಿಯಾ** ಸೆಂಟ್ರಲ್ ಆಫೀಸ್, ಎ–14, 5ನೇ ಅಂತಸ್ತು ಪಿಡಿಐಎಲ್ ಭವನ, ಸೆಕ್ಟರ್–1, ನೋಯಿಡಾ–201 301, ಉತ್ತರ ಪ್ರದೇಶ
18(1) (xvi) (f)	ರಾಷ್ಟ್ರೀಯ ಬೀಜ ನಿಗಮ	45	**ನ್ಯಾಶನಲ್ ಸೀಡ್ಸ್ ಕಾರ್ಪೋರೇಶನ್** ಯುಎಎಸ್ ಕ್ಯಾಂಪಸ್, ಹೆಬ್ಬಾಳ್ ರೇಲ್ವೇ ಸ್ಟೇಶನ್ ಹತ್ತಿರ, ಹೆಬ್ಬಾಳ್, ಬೆಂಗಳೂರು – 560 024
18(1) (xvi) (g)	ಇತರ ಕೃಷಿ ಕೈಗಾರಿಕೋದ್ಯಮ/ಕೃಷಿ ಸೇವಾ ಸಂಸ್ಥೆ/ಬೀಜ ಕಂಪನಿ	46	**ಕೃಷಿ ಸೀಡ್ಸ್** ಜೆ.ಹೆಚ್. ಪಟೇಲ್ ನಗರ, ಕಿನ್ನಾಳ ರಸ್ತೆ ಕೊಪ್ಪಳ – 583 231 ಮೊಬೈಲ್ ನಂ. 9448678890
18(1) (xvi) (h)	ಕರ್ನಾಟಕ ರಾಜ್ಯ ಬೀಜ ನಿಗಮ	47	**ಕರ್ನಾಟ್ ಸ್ಟೇಟ್ ಸೀಡ್ಸ್ ಕಾರ್ಪೋರೇಶನ್** (KSSC) ಬೀಜ ಭವನ, ಬಳ್ಳಾರಿ ರಸ್ತೆ, ಹೆಬ್ಬಾಳ್ ಬೆಂಗಳೂರು – 560 024
18(1) (xvi) (j)	ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಗೆ ಸಂಬಂಧಿಸಿದ ಸರ್ಕಾರೇತರ ಸಂಸ್ಥೆ	48	**ನಿರ್ದೇಶಕರು** ಭಾರತೀಯ ಆಗ್ರೋ ಇಂಡಸ್ಟ್ರೀಸ್ ಫೌಂಡೇಶನ್ (BAIF) ಶಾರದನಗರ, ತಿಪಟೂರು – 572202 ಜಿಲ್ಲಾ: ತುಮಕೂರು
18(1) (xvii)	ಕೃಷಿ ವಿಸ್ತರಣಾ ನಿರ್ದೇಶಕರು – ಸದಸ್ಯ ಕಾರ್ಯದರ್ಶಿ	49	**ಡಾ. ಬಿ.ಎಮ್. ಚಿತ್ತಾಪುರ** ವಿಸ್ತರಣಾ ನಿರ್ದೇಶಕರು ಕೃವಿವಿ, ರಾಯಚೂರು


1.4.6 ಕ್ರೀಡಾ ಪರಿಷತ್

ಕ್ರ.ಸಂ.	ವರ್ಗ		ನಾಮನಿರ್ದೇಶನ
1	ಅಧ್ಯಕ್ಷರು	:	ಡಾ. ಎಸ್.ಕೆ ಮೇಟಿ ಕುಲಪತಿಗಳು ಕೃವಿವಿ, ರಾಯಚೂರು
2	ಸದಸ್ಯರು	1	ಶ್ರೀ. ಗುತ್ತಿ ಜಂಬುನಾಥ ಕಲಸಚಿವರು, ಕೃವಿವಿ, ರಾಯಚೂರು
		2	ಡಾ. ಎಂ. ಭೀಮಣ್ಣ ಡೀನ್, (ವಿ.ಕ್ಷೇ), ಕೃವಿವಿ, ರಾಯಚೂರು
		3	ಡಾ. ಐ. ಶಂಕರ್ ಗೌಡ ಡೀನ್, (ಸ್ನಾತಕೋತ್ತರ), ಕೃವಿವಿ, ರಾಯಚೂರು
		4	ಡಾ. ಎಂ.ಜಿ. ಪಾಟೀಲ್ ಡೀನ್ (ಕೃಷಿ) ಕೃ.ಮ.ವಿ. ರಾಯಚೂರು.
		5	ಡಾ. ಎಂ. ವೀರನಗೌಡ ಡೀನ್ (ಕೃಷಿ ತಾಂತ್ರಿಕ) ಕೃ.ತಾ.ಮ.ವಿ. ರಾಯಚೂರು.
		6	ಡಾ. ಆರ್. ಲೋಕೇಶ್ ಡೀನ್ (ಕೃಷಿ) ಕೃ.ಮ.ವಿ., ಭೀಮರಾಯನಗುಡಿ.
		7	ಡಾ. ಸುರೇಶ್ ಎಸ್. ಪಾಟೀಲ್ ಡೀನ್ (ಕೃಷಿ) ಕೃ.ಮ.ವಿ. ಕಲಬುರಗಿ.
		8	ಶ್ರೀ. ಮಲ್ಲಿಕಾರ್ಜುನ ಬಿರಾದಾರ್, ಹಣಕಾಸು ನಿಯಂತ್ರಣಾಧಿಕಾರಿಗಳು, ಕೃ.ವಿ.ವಿ. ರಾಯಚೂರು.
		9	ಶ್ರೀ. ರವಿ ಮೇಸ್ತ, ಕಾರ್ಯ ನಿರ್ವಾಹಕ ಅಭಿಯಂತರರು, ಆಸ್ತಿ ವಿಭಾಗ, ಕೃ.ವಿ.ವಿ. ರಾಯಚೂರು.
		10	ಡಾ. ರಾಜಣ್ಣ ಪ್ರಾದ್ಯಾಪಕರು ಮತ್ತು ಉಪ–ನಿರ್ದೇಶಕರು (ವಿ.ಕ್ಷೇ.) ಕೃ.ವಿ.ವಿ. ರಾಯಚೂರು
		11	ಶ್ರೀ. ರಾಥೋಡ್ ಸಿ.ಎಲ್. ಸಹಾಯಕ ಪ್ರಾಧ್ಯಾಪಕರು (ದೈ.ಶಿ.) ಕೃ.ಮ.ವಿ. ಭೀಮರಾಯನಗುಡಿ.
		12	ಡಾ. ರಾಜಕುಮಾರ್ ಜಿ. ಕರ್ವೆ, ಮುಖ್ಯಸ್ಥರು ಹಾಗೂ ಸಹಾಯಕ ಪ್ರಾಧ್ಯಾಪಕರು (ದೈ.ಶಿ.) ಕೃ.ಮ.ವಿ. ಕಲಬುರಗಿ.
		13	ಡಾ. ಪ್ರಸನ್ನಕುಮಾರ್ ಎಸ್. ಸಹಾಯಕ ಪ್ರಾಧ್ಯಾಪಕರು (ದೈ.ಶಿ.) ಕೃ.ತಾ.ಮ.ವಿ. ರಾಯಚೂರು.

1.5 ವಿಶ್ವವಿದ್ಯಾಲಯದ ಆಡಳಿತ

ಈ ಮೇಲಿನ ಗುರಿ, ದ್ಯೇಯೋದ್ದೇಶ ಮತ್ತು ಆಧ್ಯಾದೇಶಗಳನ್ನು ಸಾಧಿಸಲು ವಿಶ್ವವಿದ್ಯಾಲಯವು ಆಡಳಿತ ನಿರ್ವಹಣೆಗಾಗಿ ಅನುಸರಿಸಬೇಕಾದ ಆಡಳಿತ ನಿರ್ವಹಣಾ ರಚನೆ ಈ ಕೆಳಗಿನಂತಿವೆ.

ರಾಯಚೂರು ಕೃಷಿ ವಿಶ್ವವಿದ್ಯಾಲಯದ ಆಡಳಿತ ನಿರ್ವಹಣಾ ರಚನೆ



1.6 2018–19ನೇ ಅವಧಿಯಲ್ಲಿ ವಿಶ್ವವಿದ್ಯಾಲಯಕ್ಕೆ ಭೇಟಿ ನೀಡಿದ ಪ್ರಮುಖ ಸಂದರ್ಶಕರು

ಕೃಷಿ ವಿಶ್ವವಿದ್ಯಾಲಯಕ್ಕೆ ಭೇಟಿ ನೀಡಿದ ಗಣ್ಯರ ವಿವರ

ಕ್ರ.ಸಂ	ಹೆಸರು ಮತ್ತು ಹುದ್ದೆ	ದಿನಾಂಕ	ಉದ್ದೇಶ
1	ಶ್ರೀ ಶಶಿಕುಮಾರ್ ಐಪಿಎಸ್, ಪೋಲೀಸ್ ಸುಪರಿಂಟೆಂಡೆಂಟ್ ಕಲಬುರಗಿ	20 ನವೆಂಬರ್, 2018	ಕೃಷಿ ಮಹಾವಿದ್ಯಾಲಯ, ಕಲಬುರಗಿಯಲ್ಲಿ "ಸಾಮಾಜಿಕ ಸಂವೇದನೆ" ಇದರ ಕುರಿತು ವಿದ್ಯಾರ್ಥಿಗಳಿಗೆ ಉಪನ್ಯಾಸ ನೀಡಿದರು
2	ಡಾ. ಕೆ. ರಾಮಸ್ವಾಮಿ ವಿಶ್ರಾಂತ ಕುಲಪತಿಗಳು, ತಮಿಳುನಾಡು ಕೃಷಿ ವಿಶ್ವವಿದ್ಯಾಲಯ, ಕೊಯಮತ್ತೂರು, ತಮಿಳುನಾಡು	22 ನವೆಂಬರ್, 2018	ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮದಲ್ಲಿ ವಿಶೇಷ ಅತಿಥಿಯಾಗಿ ಭಾಗಿಯಾಗಿದ್ದರು.
3	ಡಾ. ನಿರ್ಭಯಾನಂದಜೀ ಶ್ರೀ ರಾಮಕೃಷ್ಣ ವಿವೇಕಾನಂದ ಆಶ್ರಮ, ಗದಗ–ಬಿಜಾಪುರ	22 ನವೆಂಬರ್, 2018	ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮದಲ್ಲಿ ವಿಶೇಷ ಅತಿಥಿಯಾಗಿ ಭಾಗಿಯಾಗಿದ್ದರು.
4	ಶ್ರೀ ಎಸ್. ಆರ್. ಮಾಣಿಕ್ಯ ಹಿರಿಯ ಶ್ರೇಣಿಯ ನ್ಯಾಯಾಧೀಶರು ಮತ್ತು ಸದಸ್ಯ ಕಾರ್ಯದರ್ಶಿ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ಕಲಬುರಗಿ	23 ನವೆಂಬರ್, 2018	ಕೃಷಿ ಮಹಾವಿದ್ಯಾಲಯ, ಕಲಬುರಗಿಯಲ್ಲಿ ಸಂವಿಧಾನ ದಿನಾಚರಣೆ ಅಂಗವಾಗಿ ಭಾಗವಹಿಸಿದರು.
5	ಶ್ರೀ ಕೂರ್ಮಾರಾವ್, ಜಿಲ್ಲಾಧಿಕಾರಿಗಳು, ಯಾದಗಿರಿ,	24 ನವೆಂಬರ್, 2018	ಕೃಷಿ ಮಹಾವಿದ್ಯಾಲಯ, ಭೀಗುಡಿಯಲ್ಲಿ ಜರುಗಿದ "ವಿದ್ಯಾರ್ಥಿಗಳ ಮತ್ತು ಕನ್ನಡ ಸಂಘ 2018–19"ನೇ ಸಾಲಿನ ಉದ್ಘಾಟನಾ ಸಮಾರಂಭದ ಅಂಗವಾಗಿ

			ಭಾಗವಹಿಸಿದರು.
6	ಡಾ. ಮಮತ ಪಾಟೀಲ್ ಏಡ್ಸ್ ಜಾಗೃತಿ ಕಾರ್ಯಕ್ರಮ ಸಂಯೋಜಕರು ಜಿಲ್ಲಾ ಆಸ್ಪತ್ರೆ, ಕಲಬುರಗಿ	1 ಡಿಸೆಂಬರ್, 2018	ಎನ್ಎಸ್ಎಸ್ ಕಾರ್ಯಕರ್ತರಿಗೆ ಏಡ್ಸ್ ಜಾಗೃತಿ ಕಾರ್ಯಕ್ರಮವನ್ನು ಏರ್ಪಡಿಸಿ ಉಪನ್ಯಾಸ ನೀಡಿದರು.
7	ಡಾ. ಎಸ್. ಕಾಮರಾಜ್ ವಿಶ್ರಾಂತ ಕುಲಸಚಿವರು ಜೈವಿಕ ಇಂಧನ ವಿಭಾಗ ತಮಿಳು ನಾಡು ಕೃಷಿ ವಿಶ್ವವಿದ್ಯಾಲಯ, ಕೋಯಂಬತ್ತೂರ್	10–12 ಡಿಸೆಂಬರ್, 2018	ಕೃಷಿ ತಾಂತ್ರಿಕ ಮಹಾವಿದ್ಯಾಲಯ, ರಾಯಚೂರಿನಲ್ಲಿ ಜರುಗಿದ 22ನೇ ಐಸಿಎಎರ್–ಎಐಸಿಆರ್ಪಿ ಚರ್ಚಾಘೋಷ್ಠಿಯಲ್ಲಿ ವಿಶೇಷ ಉಪನ್ಯಾಸಕರಾಗಿ ಭಾಗವಹಿಸಿದರು
8	ಡಾ. ಕಂಚನಕುಮಾರ್ ಸಿಂಗ್ ಎಡಿಜಿ (ಇಂಜಿನೀರಿಂಗ್), ಹೊಸದೆಹಲಿ	12 ಡಿಸೆಂಬರ್, 2018	ಕೃಷಿ ತಾಂತ್ರಿಕ ಮಹಾವಿದ್ಯಾಲಯ, ರಾಯಚೂರಿನಲ್ಲಿ ಜರುಗಿದ 22ನೇ ಐಸಿಎಎರ್–ಎಐಸಿಆರ್ಪಿ ಚರ್ಚಾಘೋಷ್ಠಿಯ ಸಮರೋಪ ಸಮಾರಂಭದಲ್ಲಿ ಅಧ್ಯಕ್ಷರಾಗಿ ಭಾಗವಹಿಸಿದರು
9	ಶ್ರೀ ರಾಮ ಸಿಂಘ್ಲ್ ಪಿ.ಇ. ಸಿವಿಲ್ ಇಂಜಿನೀಯರ್, ನ್ಯೂಯಾರ್ಕ್, ಯುಎಸ್ಎ.	22 ಡಿಸೆಂಬರ್, 2018	ಕೃಷಿ ಮಹಾವಿದ್ಯಾಲಯ, ಕಲಬುರಗಿಯಲ್ಲಿ “7 ಬಿಲಿಯನ್ ಆಕ್ಟ್ ಆಫ್ ಗುಡ್‌ನೆಸ್” ಇದರ ಕುರಿತು ಉಪನ್ಯಾಸ ನೀಡಿದರು.
10	ಶ್ರೀ ಎನ್.ಹೆಚ್. ಶಿವಶಂಕರ್‌ರೆಡ್ಡಿ ಕೃಷಿ ಸಚಿವರು, ಕರ್ನಾಟಕ	1 ಫೆಬ್ರುವರಿ, 2019	ಕೃಷಿ ವಿಶ್ವವಿದ್ಯಾಲಯದ ಬೆಳವಣಿಗೆಯ ಬಗ್ಗೆ ಪರಿಶೀಲನೆ.
11	ಡಾ. ಎನ್.ಎಸ್. ರಾಥೋರೆ ಉಪಮಹಾನಿರ್ದೆಶಕರು (ಶಿಕ್ಷಣ), ICAR ನವದೆಹಲಿ	27 ಫೆಬ್ರುವರಿ, 2019	8ನೇ ಘಟಿಕೋತ್ಸವದ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.
12	ಪ್ರೊ. ಶಿವಗಂಗ ರುಮ್ಮಾ, ಮಾಜಿ ಕುಲಸಚಿವರು ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ, ಕಲಬುರಗಿ	9 ಮಾರ್ಚ್, 2019	ಕೃಷಿ ಮಹಾವಿದ್ಯಾಲಯ, ಕಲಬುರಗಿಯಲ್ಲಿ ಏರ್ಪಡಿಸಿದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದರು.

1.7 ಕುಲಪತಿಗಳ ಪ್ರಮುಖ ಚಟುವಟಿಕೆಗಳ ಸಂಕ್ಷಿಪ್ತ ವರದಿ

ಏಪ್ರಿಲ್ 1, 2018 ರಿಂದ ಮಾರ್ಚ್ 31, 2019 ರವರೆಗೆ ಮಾನ್ಯ ಕುಲಪತಿಗಳು ಕೃವಿವಿ., ರಾಯಚೂರು ನಿರ್ವಹಿಸಿದ ಪ್ರಮುಖ ಕಾರ್ಯಗಳು

ದಿನಾಂಕ	ಚಟುವಟಿಕೆಗಳ ವಿವರಗಳು
03–04–2018	• ರದ್ದೆವಾಡಗಿ ಮತ್ತು ಕಲಬುರಗಿಯ ಕೃಷಿ ವಿಜ್ಞಾನ ಕೇಂದ್ರಗಳ ಚಟುವಟಿಕೆಗಳನ್ನು ಪರಿಶೀಲಿಸಿದರು. • ಕಲಬುರಗಿಯ ಉಚ್ಚ ನ್ಯಾಯಲಯದ ವಕೀಲರನ್ನು ಭೇಟಿಯಾಗಿ, ಬಾಕಿಯಿರುವ ರಿಟ್ ಪೆಟಿಶನ್‌ಗಳನುಸಾರ ಕ್ರಮವಹಿಸಲು ತಿಳಿಸಲಾಯಿತು.
05–04–2018	ನವದೆಹಲಿಯ ಐಸಿಎಆರ್ ಸಹಯೋಗದೊಂದಿಗೆ ಜಿ.ಹೆಚ್. ರೈಸನ್ ವಿಶ್ವವಿದ್ಯಾಲಯದಲ್ಲಿ ಆಯೋಜಿಸಿದ್ದ ರಾಷ್ಟ್ರೀಯ ಕೃಷಿ ಸಮಾವೇಷದಲ್ಲಿ ಭಾಗವಹಿಸಲಾಯಿತು.
09–04–2018	• ನವದೆಹಲಿಯ ರಾಷ್ಟ್ರೀಯ ಗ್ರಾಹಕ ವ್ಯಾಜ್ಯಗಳ ಪರಿಹಾರ ವೇದಿಕೆಯ ಅಧ್ಯಕ್ಷರನ್ನು ಭೇಟಿಯಾಗಿ ಪಿಟಿಷನ್ ಸಂಖೆ 3205/2017 ಅನ್ನು ತ್ವರಿತವಾಗಿ ವಿಲೆವಾರಿ ಮಾಡಲು ಕೋರಲಾಯಿತು. • ಯುಜಿಸಿ ಅಧಿಕಾರಿಗಳನ್ನು ಬೇಟಿಯಾಗಿ ಯುಜಿಸಿ ಕಾಯಿದೆಯ ಕಲಂ 12(ಬಿ) ಪ್ರಕಾರ ಹಣಕಾಸಿನ ನೆರವು ಕೋರಿ ಪ್ರಸ್ತಾವನೆ ಸಲ್ಲಿಸಿದರು. • ಐ.ಸಿ.ಎ.ಆರ್ ನವದೆಹಲಿಯ ಮಹಾನಿರ್ದೇಶಕರು, ಉಪನಿರ್ದೇಶಕರು (ಶಿಕ್ಷಣ), ಉಪನಿರ್ದೇಶಕರು (ಬೆಳೆ ವಿಜ್ಞಾನ) ರವರನ್ನು ಭೇಟಿಯಾಗಿ ನೆಟ್/ಎ.ಎಸ್.ಆರ್.ಬಿ. ಪರೀಕ್ಷಾ ಕೇಂದ್ರವನ್ನು ರಾಯಚೂರು ಕೃವಿವಿಗೆ ಪಡೆಯುವ ಪ್ರಸ್ತಾವನೆಯನ್ನು ಸಲ್ಲಿಸಲಾಯಿತು.
13–04–2018	ಕೊಪ್ಪಳ ಮತ್ತು ಗಂಗಾವತಿಯ ವಿಸ್ತರಣಾ ಕೇಂದ್ರಗಳಿಗೆ ಭೇಟಿ ನೀಡಿ, ಕೃಷಿ ಪರಿಕರಗಳ ಮಾರಾಟಗಾರರಿಗೆ ನೀಡಲಾಗುವ ಡಿಪ್ಲೋಮಾ ಕೃಷಿ ವಿಸ್ತರಣಾ ತರಬೇತಿ(DAESI) ಕಾರ್ಯಕ್ರಮಗಳನ್ನು ಉದ್ಘಾಟಿಸಿದರು.
17–04–2018	ಕೊಯಮತ್ತೂರಿನಲ್ಲಿರುವ ಐಸಿಎಆರ್–ಕಬ್ಬಿನ ತಳಿ ಅಭಿವೃದ್ದಿ ಸಂಸ್ಥೆಯಲ್ಲಿ ಆಯೋಜಿಸಿದ್ದ ಐಸಿಎಆರ್–ಪ್ರಾದೇಶಿಕ ಸಮಿತಿಯ ಸಭೆಯಲ್ಲಿ ಭಾಗವಹಿಸಿದ್ದರು.
19–04–2018	VTU ಬೆಳಗಾವಿಯ ಗೌರವಾನ್ವಿತ ಕುಲಪತಿಗಳು ಮತ್ತು ಕುಲಸಚಿವರು ಇವರನ್ನು ಭೇಟಿಯಾಗಿ, ಕೌಶಲ್ಯ ಅಭಿವೃದ್ದಿ ಮತ್ತು ಆನ್‌ಲೈನ್ ಪರೀಕ್ಷೆಗಳ ಪ್ರಕ್ರಿಯೆಯಲ್ಲಿ VTUನ ಸಹಯೋಗದೊಂದಿಗೆ ಪರಿಣಿತಿಯನ್ನು ಹಂಚಿಕೊಳ್ಳುವ ನಿಟ್ಟಿನಲ್ಲಿ ಸಹಕರಿಸುವ ಬಗ್ಗೆ ಚರ್ಚಿಸಿದರು.
22–04–2018	• ಇ–ಪ್ರೊಕ್ಯೂರ್ಮೆಂಟ್ ಸೆಲ್ ಗೆ ಭೇಟಿ ನೀಡಿ ಡಿಜಿಟಲ್ ಸಹಿಯನ್ನು ನೀಡಲಾಯಿತು. • ವಿಕಾಸ ಸೌಧ, ಬೆಂಗಳೂರಿನಲ್ಲಿ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ದಿ ಆಯುಕ್ತರವರ ಅಧ್ಯಕ್ಷತೆಯಲ್ಲಿ ನಡೆದ ಸಮಗ್ರ ಕೃಷಿ ಅಭಿಯಾನ ಕುರಿತ ಸಭೆಯಲ್ಲಿ ಭಾಗವಹಿಸಿದ್ದರು.
02–05–2018	ಡಾ. ವೈ.ಎಸ್. ಪಾರ್ಮರ್ ತೋಟಗಾರಿಕೆ ಮತ್ತು ಅರಣ್ಯ ವಿಶ್ವವಿದ್ಯಾಲಯ, ನೌನಿ, ಸೋಲನ್‌ನಲ್ಲಿ ಏರ್ಪಡಿಸಿದ್ದ ಕೃಷಿ ವಿಶ್ವವಿದ್ಯಾಲಯ ಕುಲಪತಿಗಳವರ 9ನೇ ಬುದ್ದಿಮಾತು ಅಧಿವೇಶನದಲ್ಲಿ ಭಾಗವಹಿಸಿದ್ದರು.
13–05–2018	ಜಿಕೆವಿಕೆ ಬೆಂಗಳೂರಿನಲ್ಲಿ ಪಿಜಿ–ಸಿಇಟಿ 2018 ನಡೆಸುವ ಸಲುವಾಗಿ ಸಭೆಯಲ್ಲಿ ಭಗವಹಿಸಿದ್ದರು
04–06–2018	• ನ್ಯಾಷನಲ್ ಅಕಾಡೆಮಿ ಆಫ್ ಅಗ್ರಿಕಲ್ಚರಲ್ ಸೈನ್ಸಸ್, ನವದೆಹಲಿಯ ಸಂಸ್ಥಾಪನಾ ದಿನಾಚರಣೆಯಲ್ಲಿ ಭಾಗವಹಿಸಿದ್ದರು. • ನ್ಯಾಷನಲ್ ಅಕಾಡೆಮಿ ಆಫ್ ಅಗ್ರಿಕಲ್ಚರಲ್ ಸೈನ್ಸಸ್‌ನ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಭಾಗವಹಿಸಿದ್ದರು. • ಯುಜಿಸಿ ಕಾಯಿದೆ 12(ಬಿ) ಅಡಿಯಲ್ಲಿ ನೆರವು ಕೋರಲು ಸಂಬಂಧಪಟ್ಟ ಅಧಿಕಾರಿಗಳನ್ನು ಭೇಟಿ ಮಾಡಿದರು

ದಿನಾಂಕ	ಚಟುವಟಿಕೆಗಳ ವಿವರಗಳು
	• ಅಗ್ರಿ ಇನ್ನೋವೇಟ್ ಇಂಡಿಯಾ ಲಿಮಿಟೆಡ್‌ನ ಸಂವೇದನಾ ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು.
11–06–2018	ವಿಧಾನಸೌಧ, ಬೆಂಗಳೂರಿನಲ್ಲಿ ಮಾನ್ಯ ಕೃಷಿ ಸಚಿವರು ಕರೆದಿದ್ದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಭಾಗವಹಿಸಿದ್ದರು.
21 ರಿಂದ 28, ಜನವರಿ 2019 ರವರೆಗೆ ಮಂಗಳೂರಿನ ಆಳ್ವಾಸ್ ಇನ್ಸ್ಟಿಟ್ಯೂಟ್, ಮೂಡಬಿದಿರೆಯಲ್ಲಿ ನಡೆದ ರಾಜ್ಯ ಮಟ್ಟದ ಎನ್ಸಿಸಿ ನಾಯಕತ್ವ ಶಿಬಿರದಲ್ಲಿ ಕೃವಿವಿ, ರಾಯಚೂರು ಎನ್ಸಿಸಿ ಕೆಡೆಟ್ಗಳು ಪ್ರತಿನಿಧಿಸಿದ್ದಾರೆ ಮತ್ತು 18 ಜನವರಿ, 2019ರಂದು 35 ಕೆಎಆರ್ ಬಿಎನ್, ಎನ್ಸಿಸಿ ಬೆಟಾಲಿಯನ್ ಪೂರ್ವಭಾವಿ ತರಗತಿಯಲ್ಲಿ ಭಾಗವಹಿಸಿದ್ದಾರೆ. ಶ್ರೀ ಶುಭಮ್ ಧೋರಾ, ಎನ್ಸಿಸಿ 'ಸಿ' ಸರ್ಟಿಫಿಕೇಟ್ ಮತ್ತು 'ಉತ್ತಮ ಕೆಡೆಟ್' ಪದಕವನ್ನು ಪಡೆದಿರುತ್ತಾರೆ.

2.12 ರಾಷ್ಟ್ರೀಯ ಹಬ್ಬಗಳು

- ಕೃಷಿ ವಿಶ್ವವಿದ್ಯಾಲಯ ರಾಯಚೂರು ಆವರಣದಲ್ಲಿ 72ನೇ ಸ್ವಾತಂತ್ರ್ಯ ದಿನಾಚರಣೆಯನ್ನು ದಿನಾಂಕ 15ನೇ ಆಗಸ್ಟ್, 2018 ರಂದು ಮಾನ್ಯ ಗೌರವಾನ್ವಿತ ಕುಲಪತಿಗಳಾದ ಶ್ರೀ ಗುತ್ತಿ ಜಂಬುನಾಥ ರವರು ಧ್ವಜಾರೋಹಣ ಮಾಡಿದರು. ಈ ಕಾರ್ಯಕ್ರಮದಲ್ಲಿ ಕೃ.ವಿ.ವಿ.,ರಾಯಚೂರಿನ ಎಲ್ಲಾ ಶಿಕ್ಷಕ/ಶಿಕ್ಷಕೇತರ ಸಿಬ್ಬಂದಿ ವರ್ಗದವರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.
- ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನಲ್ಲಿ ದಿನಾಂಕ 2ನೇ ಅಕ್ಟೋಬರ್, 2018 ರಂದು ಮಹಾತ್ಮ ಗಾಂಧೀಜಿ ಮತ್ತು ಲಾಲ್ಬಹುದ್ದೂರ್ ಶಾಸ್ತ್ರೀಜಿ ಇವರ ಜಯಂತಿಗಳನ್ನು ಆಚರಿಸಲಾಯಿತು. ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಗೌರವಾನ್ವಿತ ಕುಲಪತಿಗಳಾದ ಡಾ. ಎಸ್.ಕೆ. ಮೇಟಿರವರು ಮತ್ತು ಇತರೆ ಅಧಿಕಾರಿಗಳು ಗಾಂಧೀಜಿ ಮತ್ತು

ಲಾಲ್‌ಬಹದ್ದೂರ್ ಶಾಸ್ತ್ರೀಜಿಯವರುಗಳ ಭಾವ ಚಿತ್ರಕ್ಕೆ ಪೂಜೆ ಸಲ್ಲಿಸಿ ಮಾಲಾರ್ಪಣೆ ಮಾಡಿದರು. ಈ ಕಾರ್ಯಕ್ರಮದಲ್ಲಿ ಕೃ.ವಿ.ವಿ.,ರಾಯಚೂರಿನ ಎಲ್ಲಾ ಶಿಕ್ಷಕ/ಶಿಕ್ಷಕೇತರ ಸಿಬ್ಬಂದಿ ವರ್ಗದವರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

- 26ನೇ ಜನವರಿ, 2019 ರಂದು 70 ನೇ ಗಣರಾಜೋತ್ಸವನ್ನು ಕೃ.ವಿ.ವಿ. ರಾಯಚೂರು ಕ್ರೀಡಾಂಗಣದಲ್ಲಿ ಮಾನ್ಯ ಗೌರವಾನ್ವಿತ ಕುಲಪತಿಗಳಾದ ಡಾ. ಕೆ.ಎನ್ ಕಟ್ಟಿಮನಿರವರು ಧ್ವಜಾರೋಹಣ ಮಾಡಿದರು. ಈ ಕಾರ್ಯಕ್ರಮದಲ್ಲಿ ಕೃ.ವಿ.ವಿ. ರಾಯಚೂರಿನ ಎಲ್ಲಾ ಅಧಿಕಾರಿಗಳು ಶಿಕ್ಷಕ ಮತ್ತು ಶಿಕ್ಷಕೇತರ, ಸಿಬ್ಬಂದಿ ವರ್ಗದವರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

2.13 ರಾಜ್ಯ ಮತ್ತು ರಾಷ್ಟ್ರೀಯ ದಿನಾಚರಣೆಗಳು / ಅಂತರರಾಷ್ಟ್ರೀಯ ಕಾರ್ಯಕ್ರಮಗಳ ಆಚರಣೆ

- ದಿನಾಂಕ 14ನೇ ಎಪ್ರಿಲ್, 2018 ಕೃಷಿ ವಿಶ್ವವಿದ್ಯಾಲಯ ರಾಯಚೂರುನಲ್ಲಿ ಮಹಾನ್ ಮಾನವತಾವಾದಿ, ಸಂವಿಧಾನ ಶಿಲ್ಪಿ ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್‌ರವರ 127ನೇ ಜನ್ಮ ದಿನಾಚರಣೆಯನ್ನು ವಿಜೃಂಭಣೆಯಿಂದ ಆಚರಿಸಲಾಯಿತು ಈ ಕಾರ್ಯಕ್ರಮಕ್ಕೆ ಮುಖ್ಯ ಅಥಿತಿಗಳಾಗಿ ಶ್ರೀ ಹನಸೋಗೆ ಸೋಮಶೇಖರ್‌ರವರ, ಆಗಮಿಸಿದ್ದರು, ಮತ್ತು ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ. ಗುತ್ತಿ ಜಂಬುನಾಥ್, ಮಾನ್ಯ ಕುಲಪತಿಗಳು ಕೃ.ವಿ.ವಿ. ರಾಯಚೂರು, ಇವರು ವಹಿಸಿದ್ದರು.
- ದಿನಾಂಕ 18ನೇ ಎಪ್ರಿಲ್, 2018 ರಂದು ಶ್ರೀ ಜಗಜ್ಯೋತಿ ಬಸವಣ್ಣವರ 885ನೇ ಜಯಂತೋತ್ಸವವನ್ನು ಆಚರಿಸಲಾಯಿತು. ಈ ಕಾರ್ಯಕ್ರಮಕ್ಕೆ ಮುಖ್ಯ ಅಥಿತಿಯಾಗಿ ಶ್ರೀಮತಿ. ಶರಣಿ ರುದ್ರಮ್ಮ ಅಸನಾಳ, ರಾಜ್ಯಶಾಸ್ತ್ರ ಉಪನ್ಯಾಸಕರು ಗಂಗಾವತಿ ಇವರು ಆಗಮಿಸಿದ್ದರು. ಇವರು ಶ್ರೀ ಜಗಜ್ಯೋತಿ ಬಸವಣ್ಣನವರ ತತ್ವಗಳ ಬಗ್ಗೆ ಸವಿಸ್ತಾರವಾಗಿ ಮಾತನಾಡಿದರು. ಹಾಗೂ ವಚನ ಗಾಯನ ಕುಮಾರಿ ಐಶ್ವರ್ಯರಾಣಿ ಬೂದಿಹಾಳ, ಗಂಗಾವತಿ ವಚನ ಗಾಯನ ಕಾರ್ಯಕ್ರಮ ನಡೆಸಿಕೊಟ್ಟರು. ಕಾರ್ಯಕ್ರಮದಲ್ಲಿ ಕೃಷಿ ವಿಶ್ವವಿದ್ಯಾಲಯ ರಾಯಚೂರು, ಮಾನ್ಯ ಕುಲಪತಿಗಳಾದ ಶ್ರೀ ಗುತ್ತಿ ಜಂಬುನಾಥ್, ಇತರೆ ಕೃ.ವಿ.ವಿ. ರಾಯಚೂರಿನ ಅಧಿಕಾರಿಗಳು ಭಾಗವಹಿಸಿದ್ದರು.
- ದಿನಾಂಕ 3ನೇ ಜೂನ್, 2018 ರಂದು ಕೃ.ವಿ.ವಿ., ರಾಯಚೂರಿನಲ್ಲಿ ವಿಶ್ವ ಸೈಕಲ್ ದಿನಾಚರಣೆಯನ್ನು ಆಚರಿಸಲಾಯಿತು. ಮಾನ್ಯ ಕುಲಪತಿಗಳಾದ ಶ್ರೀ. ಗುತ್ತಿ ಜಂಬುನಾಥ್ ಇವರು ಸೈಕಲ್ ತುಳಿಯುವ ಮುಖಾಂತರ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಈ ದಿನಾಚರಣೆಯ ಅಂಗವಾಗಿ ಕೃಷಿ ಆವರಣ ರಾಯಚೂರಿನ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಹಾಗೂ ಸಿಬ್ಬಂದಿ ವರ್ಗದವರಿಗೆ ಸೈಕಲ್ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ಈ ಸೈಕಲ್ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಮಾನ್ಯ ಕುಲಪತಿಗಳಾದ ಶ್ರೀ. ಗುತ್ತಿ ಜಂಬುನಾಥ್‌ನವರು ನಗದು ಬಹಮಾನ ವಿತರಣೆ ಮಾಡಿದರು.
- ದಿನಾಂಕ 21ನೇ ಜೂನ್, 2018 ರಂದು ಕೃಷಿ ವಿಶ್ವವಿದ್ಯಾಲಯ ಆವರಣ ರಾಯಚೂರಿನಲ್ಲಿ ಪತಂಜಲಿ ಯೋಗ ಸಮಿತಿ ರಾಯಚೂರು ಇವರ ಸಂಯುಕ್ತಾಶ್ರಯದಲ್ಲಿ 4ನೇ ಅಂತರಾಷ್ಟ್ರೀಯ ಯೋಗ ದಿನಾಚರಣೆಯನ್ನು "ಯೋಗಿಕ್ ಚಪ್ಪಾಳೆ" ತಟ್ಟುವ ಮೂಲಕ ಉದ್ಘಾಟಿಸಲಾಯಿತು. ಯೋಗ ಗುರುಗಳಾದ ಶ್ರೀ ವಿಠೋಬರಾವ್ ಮಾತನಾಡಿ ಯೋಗದ ಮಹತ್ವದ ಬಗ್ಗೆ ವಿವರಿಸಿದರು.
- ಕೃಷಿ ಆವರಣ ರಾಯಚೂರಿನಲ್ಲಿ ದಿನಾಂಕ 17ನೇ ಸೆಪ್ಟೆಂಬರ್, 2018 ರಂದು ಹೈದ್ರಾಬಾದ್ ಕರ್ನಾಟಕ ವಿಮೋಚನಾ ದಿನಾಚರಣೆಯನ್ನು ವಿಜೃಂಭಣೆಯಿಂದ ಆಚರಿಸಲಾಯಿತು. ಈ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ಖ್ಯಾತ ಸಾಹಿತಿಗಳು, ಡಾ. ಜಯಲಕ್ಷ್ಮೀ ಮಂಗಳಮೂರ್ತಿ, ರಾಯಚೂರು ಇವರು ಭಾಗವಹಿಸಿದ್ದರು, ಮಾನ್ಯ ಗೌರವಾನ್ವಿತ ಕುಲಪತಿಗಳಾದ ಡಾ. ಎಸ್.ಕೆ ಮೇಟಿರವರು ತಮ್ಮ ಭಾಷಣದಲ್ಲಿ ಕೃಷಿ ವಿಶ್ವವಿದ್ಯಾಲಯದ ರಾಯಚೂರಿನ ರೈತರ, ಮತ್ತು ವಿದ್ಯಾರ್ಥಿಗಳ ಸಾಧನೆಗಳನ್ನು ವಿವರಿಸಿದರು.
- ದಿನಾಂಕ 24ನೇ ಅಕ್ಟೋಬರ್, 2018 ರಂದು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನಲ್ಲಿ ಶ್ರೀ. ಮಹರ್ಷಿ ವಾಲ್ಮೀಕಿ ಜಯಂತಿಯನ್ನು ಆಚರಿಸಲಾಯಿತು. ಕುಲಪತಿಗಳು ಡಾ. ಕೆ.ಎನ್ ಕಟ್ಟಿಮನಿ, ಕೃ.ವಿ.ವಿ. ರಾಯಚೂರಿನ ಅಧಿಕಾರಿಗಳು ಶ್ರೀ. ಮಹರ್ಷಿ ವಾಲ್ಮೀಕಿರವರ ಭಾವ ಚಿತ್ರಕ್ಕೆ ಪೂಜೆ ನೆರವೇರಿಸುವುದರೊಂದಿಗೆ ಜಯಂತಿಯನ್ನು ಆಚರಿಸಲಾಯಿತು. ಈ

ಕಾರ್ಯಕ್ರಮದಲ್ಲಿ ಶ್ರೀ ಭೀಮರಾಯ ಹದಿನಾಳ್‌ರವರು ಉಪನ್ಯಾಸಕರಾಗಿ ಭಾಗವಹಿಸಿದರು. ಈ ಸಮಾರಂಭದಲ್ಲಿ ಶಿಕ್ಷಕರು, ಶಿಕ್ಷಕೇತರ ಸಿಬ್ಬಂದಿ, ಕಾರ್ಮಿಕ ಬಂಧುಗಳು ಉಪಸ್ಥಿತರಿದ್ದರು.

- ದಿನಾಂಕ 1ನೇ ನವೆಂಬರ್, 2018 ರಂದು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನಲ್ಲಿ ಕನ್ನಡ ರಾಜ್ಯೋತ್ಸವವನ್ನು ಮಾನ್ಯ ಗೌರವಾನ್ವಿತ ಕುಲಪತಿಗಳಾದ ಡಾ. ಕೆ.ಎನ್ ಕಟ್ಟಿಮನಿ, ರವರು ಕನ್ನಡ ಮಾತೆ ಭುವನೇಶ್ವರಿ ಭಾವ ಚಿತ್ರಕ್ಕೆ ಪೂಜೆ ಸಲ್ಲಿಸುವುದರ ಮೂಲಕ ಆಚರಿಸಲಾಯಿತು. ಎಲ್ಲರಿಗೂ ಕನ್ನಡ ರಾಜ್ಯೋತ್ಸವದ ಶುಭಾಶಯಗಳನ್ನು ಕೋರಿದರು. ಈ ಸಮಾರಂಭದಲ್ಲಿ ವ್ಯವಸ್ಥಾಪನಾ ಮಂಡಳಿಯ ಸದಸ್ಯರು, ಅಧಿಕಾರಿ ವರ್ಗದವರು ಮತ್ತು ವಿದ್ಯಾರ್ಥಿಗಳು, ಶಿಕ್ಷಕ/ಶಿಕ್ಷಕೇತರ ಸಿಬ್ಬಂದಿ, ಕಾರ್ಮಿಕ ಬಂಧುಗಳು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.
- ದಿನಾಂಕ 14ನೇ ಡಿಸೆಂಬರ್, 2018 ರಂದು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನಲ್ಲಿ ಕನಕದಾಸ ಜಯಂತಿಯನ್ನು ಆಚರಿಸಲಾಯಿತು. ಗೌರವಾನ್ವಿತ ಕುಲಪತಿಗಳಾದ ಡಾ. ಕೆ.ಎನ್ ಕಟ್ಟಿಮನಿರವರು. ಕೃ.ವಿ.ವಿ. ರಾಯಚೂರಿನ ಆಡಳಿತಾ ಮಂಡಳಿ ಸದಸ್ಯರು, ಅಧಿಕಾರಿ ವರ್ಗದವರು ಮತ್ತು ಶಿಕ್ಷಕ/ಶಿಕ್ಷಕೇತರ ಸಿಬ್ಬಂದಿ ವರ್ಗದವರು ಮತ್ತು ವಿದ್ಯಾರ್ಥಿಗಳು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.
- ದಿನಾಂಕ 15ನೇ ಫೆಬ್ರುವರಿ, 2019 ರಂದು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರುನಲ್ಲಿ ಸಂತ ಶ್ರೀ ಸೇವಾಲಾಲ 280ನೇ ಜಯಂತಿಯನ್ನು ಆಚರಿಸಲಾಯಿತು. ಈ ಕಾರ್ಯಕ್ರಮಕ್ಕೆ ಉಪನ್ಯಾಸಕರಾಗಿ ಡಾ. ಮಹೇಶ್ ಕುಮಾರ್ ರಾಥೋಡ್‌ರವರು, ಪ್ರಾಂಶುಪಾಲರು ಪರ್ಯಾಯ ಸಮಾಜ ಕಾರ್ಯ ಮಹಾವಿದ್ಯಾಲಯ, ಕಲಬುರಗಿ ಇವರು ಆಗಮಿಸಿದ್ದರು, ಗೌರವಾನ್ವಿತ ಕುಲಪತಿಗಳಾದ ಡಾ. ಕೆ.ಎನ್.ಕಟ್ಟಿಮನಿರವರು ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದರು. ಕೃ.ವಿ.ವಿ. ರಾಯಚೂರಿನ ಆಡಳಿತಾ ಮಂಡಳಿ ಸದಸ್ಯರು, ಅಧಿಕಾರಿಗಳು, ಶಿಕ್ಷಕ/ಶಿಕ್ಷಕೇತರ ನೌಕರರು, ಕೃಷಿ ಕಾರ್ಮಿಕರು ಹಾಗೂ ವಿದ್ಯಾರ್ಥಿಗಳು ಪಾಲ್ಗೊಂಡಿದರು.

2.14 ವೈದ್ಯಕೀಯ ಸೇವೆ ನೀಡುವಿಕೆ

ವಿಶ್ವವಿದ್ಯಾಲಯವು ಎಲ್ಲಾ ವಿದ್ಯಾರ್ಥಿಗಳಿಗೆ ಮತ್ತು ಸಿಬ್ಬಂದಿಗೆ ತನ್ನ ಎಲ್ಲಾ ಮಹಾವಿದ್ಯಾಲಯಗಳ ಆವರಣಗಳಲ್ಲಿ ವೈದ್ಯಕೀಯ ಸೇವೆಯನ್ನು ಒದಗಿಸುತ್ತದೆ. ಕೃಷಿ ವಿಶ್ವವಿದ್ಯಾಲಯ ಔಷಧಾಲಯವು ವಿಶ್ವವಿದ್ಯಾಲಯದ ಎಲ್ಲಾ ಅಧಿಕೃತ ವಿದ್ಯಾರ್ಥಿಗಳಿಗೆ ಮತ್ತು ಸಿಬ್ಬಂದಿಗೆ ಹೊರರೋಗಿಗಳಂತೆ ವೈದ್ಯಕೀಯ ಸಲಹಾ ಸೇವೆ ಮತ್ತು ಔಷಧಿ ಸಲಹೆಯನ್ನು ನೀಡುತ್ತದೆ ಹಾಗೂ ಕೃಷಿ ವಿಶ್ವವಿದ್ಯಾಲಯದ ಇತರ ಮಹಾವಿದ್ಯಾಲಯದಲ್ಲಿ ಕೂಡ ವೈದ್ಯಕೀಯ ಸೇವೆಗಳನ್ನೂ ಒದಗಿಸಲಾಗಿದೆ.

2.15 ಗ್ರಂಥಾಲಯ ಸಂಪನ್ಮೂಲ ಮತ್ತು ಮಾಹಿತಿ ವ್ಯವಸ್ಥೆ

ವಿಶ್ವವಿದ್ಯಾಲಯದ ಗ್ರಂಥಾಲಯವು 2009–10 ರಲ್ಲಿ ಸ್ಥಾಪಿಸಲಾಗಿದೆ. ಗ್ರಂಥಾಲಯವು ಪುಸ್ತಕಗಳ, ಪತ್ರಿಕೆಗಳ, ಮಹಾಪ್ರಬಂಧಗಳ, ವರದಿಗಳ ಮತ್ತು ಪರಾಮರ್ಶಕ ಸಂಪನ್ಮೂಲಗಳ ಡಾಟಾಬೇಸ್ ಸಿದ್ದಪಡಿಸಿದ್ದು, ಅವುಗಳೆಲ್ಲವು ಗ್ರಂಥಾಲಯದಲ್ಲಿ ಲಭ್ಯವಿದೆ. ಬಳಕೆದಾರರು ಅಂತರ್ಜಾಲದ ಮೂಲಕ ಓ.ಪಿ.ಎ.ಸಿ.ಗೆ ಪ್ರವೇಶ ಪಡೆಯಬಹುದು. ವಿಶ್ವವಿದ್ಯಾಲಯ ಗ್ರಂಥಾಲಯವು ಹಲವಾರು ಆನ್‌ಲೈನ್ ಪತ್ರಿಕೆಗಳು, ಆಫ್‌ಲೈನ್ ಡೇಟಾಬೇಸ್‌ಗಳು, ಇ–ಪುಸ್ತಕಗಳು ಮತ್ತು ಇ–ಪತ್ರಿಕೆಗಳಿಗೆ ಚಂದಾದಾರರಾಗಿದೆ. ಇದರ ಜೊತೆಗೆ ಎನ್.ಎ.ಐ.ಪಿ. ಕಾರ್ಯಕ್ರಮದಡಿಯಲ್ಲಿ ಭಾರತೀಯ ಕೃಷಿ ಅನುಸಂಧಾನ ಪರಿಷತ್, ಕೃಷಿ ಮತ್ತು ಸಂಬಂದಿತ ವಿಷಯಗಳ ಸುಮಾರು ಪೂರ್ಣ ಪಠ್ಯ ಪತ್ರಿಕೆಗಳ ಲಭ್ಯತೆಯನ್ನು ಒದಗಿಸುತ್ತದೆ. ವಿಶ್ವವಿದ್ಯಾಲಯವು ತನ್ನ ವೆಬ್‌ತಾಣವಾದ www.uasraichur.edu.in ಮೂಲಕ ಹಲವರನ್ನು ತಲುಪುತ್ತಿದೆ.

2.15.1 ಕೃಷಿ ವಿಶ್ವ ವಿದ್ಯಾಲಯದ ಗ್ರಂಥಾಲಯದಲ್ಲಿ 2018–19ರ ಸಾಲಿನಲ್ಲಿ ಹೊಸದಾಗಿ ಸೇರ್ಪಡೆಗೊಂಡ ಪುಸ್ತಕಗಳು ಮತ್ತು ನಿಯತಕಾಲಿಕಗಳು ಈ ಕೆಳಗಿನಂತಿವೆ.

ಕೋಷ್ಟಕ 22: ವಿಶ್ವವಿದ್ಯಾಲಯದ ಗ್ರಂಥಾಲಯದಕ್ಕೆ 2018–19ರ ಸಾಲಿನಲ್ಲಿ ಹೊಸದಾಗಿ ಸೇರ್ಪಡೆಗೊಂಡ ಪುಸ್ತಕಗಳು

ಕ್ರ. ಸಂ.	ವಿವರಗಳು	ಕೃವಿವಿ ಗ್ರಂಥಾಲಯ ರಾಯಚೂರು	ಕೃಷಿ ಮಹಾವಿದ್ಯಾಲಯ ಭೀಮರಾಯನಗುಡಿ	ಕೃಷಿ ಮಹಾವಿದ್ಯಾಲಯ ಕಲಬುರಗಿ	ಒಟ್ಟು
1	ಖರೀದಿಸಿದ ಪುಸ್ತಕಗಳು	243	196	1160	1599
2	ಕೊಡುಗೆ ಪುಸ್ತಕಗಳು	80	02	-	82
3	ಕರಪತ್ರಗಳು	105	-	-	105
4	ಪ್ರಬಂಧಗಳು / ಮಹಾ ಪ್ರಬಂಧಗಳು	193	-	-	193
5	ವರದಿಗಳು	410	-	-	410
6	ನಿಯತಕಾಲಿಕ ಸಂಪುಟಗಳು	373	45	56	429
7	ಇ–ಪುಸ್ತಕಗಳು / ಸಿಡಿಗಳು	193	-	-	193
	ಒಟ್ಟು	**1597**	**243**	**1216**	**3011**

2.15.2 ವಿಶ್ವವಿದ್ಯಾಲಯದ ಗ್ರಂಥಾಲಯದಲ್ಲಿದ್ದ ಪುಸ್ತಕಗಳು ಮತ್ತು ಇತರೆ ನಿಯತಕಾಲಿಕೆಗಳ ವಿವರಗಳು ಈ ಕೆಳಗಿನಂತಿವೆ.

ಕೋಷ್ಟಕ 23: 31ನೇ ಮಾರ್ಚ್, 2019ರಂದು ವಿಶ್ವವಿದ್ಯಾಲಯದ ಗ್ರಂಥಾಲಯದಲ್ಲಿದ್ದ ಪುಸ್ತಕಗಳು ಮತ್ತು ಇತರೆ ನಿಯತಕಾಲಿಕೆಗಳ ವಿವರಗಳು

ಕ್ರ. ಸಂ.	ವಿವರಗಳು	ಕೃವಿವಿ ಗ್ರಂಥಾಲಯ ರಾಯಚೂರು	ಕೃಷಿ ಮಹಾವಿದ್ಯಾಲಯ ಭೀಮರಾಯನಗುಡಿ ಗ್ರಂಥಾಲಯ	ಕೃಷಿ ಮಹಾವಿದ್ಯಾಲಯ ಕಲಬುರಗಿ, ಗ್ರಂಥಾಲಯ	ಒಟ್ಟು
1	ಪುಸ್ತಕಗಳು (ಹಿಂದಿನ ಸಂಚಿಕೆಗಳು ಸೇರಿ)	56977	14770	10017	67190
2	ಉಡುಗೊರೆ ಪುಸ್ತಕಗಳು	4831	229	-	4831
3	ಕರಪತ್ರಗಳು	1200	-	-	1200
4	ಪ್ರಬಂಧಗಳು / ಮಹಾ ಪ್ರಬಂಧಗಳು	2402	-	-	2402
5	ವರದಿಗಳು	1500	49	-	1500
6	ನಕ್ಷೆಗಳು	5	-	03	8
7	ಇ–ಪುಸ್ತಕಗಳು	96	-	-	96
8	ಇ–ಪತ್ರಿಕೆಗಳು	10	-	56 (CeRA)	66
9	ಸಿಡಿ ರೋಮ್ / ಡಿವಿಡಿಗಳು / ಸಿಡಿಗಳು	2402	20	-	2422
	ಒಟ್ಟು	**69423**	**15068**	**10076**	**79715**

2.15.3 ಗ್ರಂಥಾಲಯದಲ್ಲಿನ ಇತರೆ ನಿಯತಕಾಲಿಕೆಗಳ ವಿವರಗಳು ಈ ಕೆಳಗಿನಂತಿವೆ.

ಕೋಷ್ಟಕ 24: ಗ್ರಂಥಾಲಯದಲ್ಲಿನ ಬೇರೆ ನಿಯತಕಾಲಿಕೆಗಳ ವಿವರ

ಕ್ರ. ಸಂ.	ವಿವರಗಳು	ಕೃವಿವಿ ಗ್ರಂಥಾಲಯ ರಾಯಚೂರು	ಕೃಷಿ ಮಹಾವಿದ್ಯಾಲಯ ಭೀಮರಾಯನಗುಡಿ ಗ್ರಂಥಾಲಯ	ಕೃಷಿ ಮಹಾವಿದ್ಯಾಲಯ ಕಲಬುರಗಿ, ಗ್ರಂಥಾಲಯ	ಒಟ್ಟು
1	ವಿದೇಶಿ ಪತ್ರಿಕೆಗಳು ಚಂದಾದಾರಾಗಿ	30	05	01	36
2	ಭಾರತೀಯ ಪತ್ರಿಕೆಗಳು – ಚಂದಾದಾರಾಗಿ	99	32	55	186
3	ಮುದ್ರಣ ಮತ್ತು ಆನ್‌ಲೈನ್ ಪತ್ರಿಕೆಗಳು	129	–	56	185
4	ಇ–ಪತ್ರಿಕೆಗಳು	-	-	(Subscribed CeRA)	-
	ಒಟ್ಟು	**258**	**37**	**112**	**407**

2.15.4 ಕೃಷಿ ವಿಶ್ವವಿದ್ಯಾಲಯದ ಗ್ರಂಥಾಲಯದಲ್ಲಿ ಲಭ್ಯವಿರುವ ಇ–ಸಂಪನ್ಮೂಲಗಳ ವಿವರಗಳು ಈ ಕೆಳಗಿನಂತಿವೆ.

ಕೋಷ್ಟಕ 25: ಗ್ರಂಥಾಲಯದಲ್ಲಿ ದೊರೆಯುವ ಇ–ಸಂಪನ್ಮೂಲಗಳ ವಿವರ

ಕ್ರ. ಸಂ.	ವಿವರಗಳು	ಕೃವಿವಿ ಗ್ರಂಥಾಲಯ ರಾಯಚೂರು	ಕೃಷಿ ಮಹಾವಿದ್ಯಾಲಯ ಭೀಮರಾಯನಗುಡಿ ಗ್ರಂಥಾಲಯ	ಕೃಷಿ ಮಹಾವಿದ್ಯಾಲಯ ಕಲಬುರಗಿ, ಗ್ರಂಥಾಲಯ	ಒಟ್ಟು
1	Indiastat.com ಇಂಡಿಯಾಸ್ಟಾಟ್.ಕಾಮ್	1	-	1	2
2	ಸಿ.ಆರ.ಸಿ.ನೆಟ್ ಇ–ಪುಸ್ತಕಗಳು	60	-	-	60
3	ಇ–ಪುಸ್ತಕಗಳು (ಎಲ್ಸಿವಯರ್)	36	-	-	36
4	ಡೈರೆಕ್ಟರಿ ಆಫ್ ಓಪನ್ ಆಕ್ಸಸ್ ಪತ್ರಿಕೆಗಳು (ಡಿ.ಓ.ಜೆ)	1	-	1	2
5	ಆಫ್‌ಲೈನ್ ಡಾಟಾ ಬೇಸ್‌ಗಳು (ಸಿ.ಡಿ. ರಾಮ್‌ಗಳು / ಡಿ.ವಿ.ಡಿ)	2402	-	-	2402
6	ಬ್ರಿಟಾನಿಕಾ ಎನ್‌ಸೈಕ್ಲೋಪೀಡಿಯಾ	-	31	-	31
7	ಆನ್‌ಲೈನ್ ಇಂಡಿಯನ್ ಸ್ಟಾಂಡರ್ಡ್ಸ್ (FAD Complete package)	1	-	-	1
	ಒಟ್ಟು	**2501**	**31**	**2**	**2534**

2.15.5 ಪ್ರಸರಣೆ

ಕೋಷ್ಟಕ 26: 2018–19ರ ಸಾಲಿನಲ್ಲಿ ಸದಸ್ಯತ್ವ ಪಡೆದವರ ವಿವರ (ವಿದ್ಯಾರ್ಥಿಗಳು ಮತ್ತು ಸಿಬ್ಬಂದಿ)

ಕ್ರ. ಸಂ.	ವಿವರಗಳು	ಕೃವಿವಿ ಗ್ರಂಥಾಲಯ ರಾಯಚೂರು	ಕೃಷಿ ಮಹಾವಿದ್ಯಾಲಯ ಭೀಮರಾಯನಗುಡಿ ಗ್ರಂಥಾಲಯ	ಕೃಷಿ ಮಹಾವಿದ್ಯಾಲಯ ಕಲಬುರಗಿ, ಗ್ರಂಥಾಲಯ	ಒಟ್ಟು
1	ಬಿ.ಎಸ್ಸಿ. (ಆನರ್ಸ್) ಕೃಷಿ	107	102	260	469
2	ಬಿ.ಟೆಕ್. (ಕೃಷಿ ಇಂಜಿನಿಯರಿಂಗ್)	59	–	–	59
3	ಎಮ್.ಎಸ್ಸಿ. (ಕೃಷಿ) ಎಮ್.ಟೆಕ್(ಕೃ.ತಾಂ)	104 12	– –	– –	104 12
4	ಪಿ.ಹೆಚ್.ಡಿ.	38	–	–	38
5	ಕೃಷಿಯಲ್ಲಿ ಡಿಪ್ಲೋಮಾ	33	31	–	64
6	ಸಿಬ್ಬಂದಿ (ಬೋಧಕರು ಮತ್ತು ಬೋಧಕೇತರು)	109	42	56	207
	ಒಟ್ಟು	**462**	**175**	**316**	**953**

2.15.6 ದಾಖಲಾತಿ ಮತ್ತು ರಪ್ರೋಗ್ರಾಫಿಕ್ ಸೇವೆಗಳು

ಕೋಷ್ಟಕ 27: ಗ್ರಂಥಾಲಯದ ಬಳಕೆ (2018–19)

ಕ್ರ. ಸಂ.	ವಿವರಗಳು	ಕೃವಿವಿ ಗ್ರಂಥಾಲಯ ರಾಯಚೂರು	ಕೃಷಿ ಮಹಾವಿದ್ಯಾಲಯ ಭೀಮರಾಯನಗುಡಿ ಗ್ರಂಥಾಲಯ	ಕೃಷಿ ಮಹಾವಿದ್ಯಾಲಯ ಕಲಬುರಗಿ, ಗ್ರಂಥಾಲಯ	ಒಟ್ಟು
1	ಪುಸ್ತಕಗಳ ಸಮಾಲೋಚನೆ	239400	25000	19782	268787
2	ಪುಸ್ತಕಗಳ ವಿತರಣೆ	51300	9605	10048	70953
3	ಮಾಡಿದ ಸಂಗ್ರಹ (ರೂ.ಗಳಲ್ಲಿ) ಅ) ಬಾಕಿ ಶುಲ್ಕ ಆ) ಕಳೆದುಹಾಕಿದ ಪುಸ್ತಕಗಳ ಬೆಲೆ ವಸೂಲಿ ಇ) ಹೊರಗಿನವರಿಂದ ಸಮಾಲೋಚನೆ ಶುಲ್ಕ ಈ) ಗುರುತಿನ ಕಾರ್ಡ್‌ಗಳು	 67790 - - 57400	 8112 - - -	 2828 - - 7200	 78730 - - 64600
	ಒಟ್ಟು	**415890**	**42717**	**39858**	**483070**

2.15.7 ಪಠ್ಯಪುಸ್ತಕ ಬ್ಯಾಂಕ್

ಕೋಷ್ಟಕ 28: ಪ.ಜಾ/ಪ.ಪಂ. ನಿಧಿಯಡಿಯಲ್ಲಿ ಪುಸ್ತಕಗಳ ಬ್ಯಾಂಕ್ (2018–19)

ಕ್ರ. ಸಂ.	ವಿವರಗಳು	ಕೃವಿವಿ ಗ್ರಂಥಾಲಯ ರಾಯಚೂರು	ಕೃಷಿ ಮಹಾವಿದ್ಯಾಲಯ ಭೀಮರಾಯನಗುಡಿ ಗ್ರಂಥಾಲಯ	ಕೃಷಿ ಮಹಾವಿದ್ಯಾಲಯ ಕಲಬುರಗಿ, ಗ್ರಂಥಾಲಯ	ಒಟ್ಟು
01	ಒಟ್ಟು ಸಂಗ್ರಹ	2432	1423	130	3985
02	ಒಟ್ಟು ಸದಸ್ಯತ್ವ	56	61	38	107

03	ಪುಸ್ತಕಗಳ ವಿತರಣೆ	350	125	15	470

2.15.8 ದಾಖಲಾತಿ ಮತ್ತು ರಿಪ್ರೋಗ್ರಾಫಿಕ್ ಸೇವೆಗಳು

ಕೋಷ್ಟಕ 29: ಕಂಪ್ಯೂಟರ್ / ರಿಪ್ರೋಗ್ರಾಫಿಕ್ ಸೇವೆಗಳು ಮತ್ತು ಪಡೆದವರ ಸಂಖ್ಯೆ

ಕ್ರ. ಸಂ.	ವಿವರಗಳು	ಕೃವಿವಿ ಗ್ರಂಥಾಲಯ ರಾಯಚೂರು	ಕೃಷಿ ಮಹಾವಿದ್ಯಾಲಯ ಭೀಮರಾಯನಗುಡಿ ಗ್ರಂಥಾಲಯ	ಕೃಷಿ ಮಹಾವಿದ್ಯಾಲಯ ಕಲಬುರಗಿ, ಗ್ರಂಥಾಲಯ	ಒಟ್ಟು
1	ಸಿಡಿ–ರಾಮ್ ಡೇಟಾಬೇಸ್‌ಗಳ ಬಳಕೆದಾರರು	200	–	–	200
2	ಡಾಟಾಬೇಸ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಲಾದ ಉಲ್ಲೇಖಗಳು	250	–	–	250
3	**ಸೆರಾ:** ಎ. ಸ್ವೀರಿಸಲಾದ ವಿನಂತಿಗಳು ಬಿ. ಕಳಿಸಲಾದ ವಿನಂತಿಗಳು	 52 –	 –	 05	 57
4	ರಿಪ್ರೋಗ್ರಾಫಿಕ್ ಸೇವೆಗಳು	14284	20	100	14404

ಕೋಷ್ಟಕ 30: ರಾಯಚೂರು ಕೃಷಿ ವಿಶ್ವವಿದ್ಯಾಲಯ ಮತ್ತು ಇತರೆ ಮಹಾವಿದ್ಯಾಲಯದ ಗ್ರಂಥಾಲಯಗಳ ಒಟ್ಟು ಸಂಪನ್ಮೂಲಗಳು 2018–19

ಕ್ರ. ಸಂ.	ವಿವರಗಳು	ಕೃವಿವಿ ಗ್ರಂಥಾಲಯ ರಾಯಚೂರು	ಕೃಷಿ ಮಹಾವಿದ್ಯಾಲಯ ಭೀಮರಾಯನಗುಡಿ ಗ್ರಂಥಾಲಯ	ಕೃಷಿ ಮಹಾವಿದ್ಯಾಲಯ ಕಲಬುರಗಿ, ಗ್ರಂಥಾಲಯ	ಒಟ್ಟು
01	ಒಟ್ಟು ಸಂಗ್ರಹ	74484	16491	10273	101248
02	ಒಟ್ಟು ಸದಸ್ಯತ್ವ	460	447	316	1223

2.16 ಘಟಿಕೋತ್ಸವ

ವಿಶ್ವವಿದ್ಯಾಲಯದ ಎಂಟನೇ ಘಟಿಕೋತ್ಸವ ಸಮಾರಂಭವು ಫೆಬ್ರುವರಿ 27, 2019 ರಂದು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರು ಆವರಣದಲ್ಲಿ ಜರುಗಿತು. ಶ್ರೀ ಶಿವಶಂಕರ ರೆಡ್ಡಿ, ಸಹ ಕುಲಾಧಿಪತಿಗಳು ಮತ್ತು ಕೃಷಿ ಸಚಿವರು, ಕರ್ನಾಟಕ ಸರ್ಕಾರ, ಇವರು ಘಟಿಕೋತ್ಸವದ ಮುಖ್ಯ ಅತಿಥಿಗಳಾಗಿದ್ದರು. ಡಾ. ನರೇಂದ್ರ ಸಿಂಗ್ ರಾಥೋರ್, ಉಪ ಮಹಾನಿರ್ದೇಶಕರು (ಶಿಕ್ಷಣ), ಭಾರತೀಯ ಕೃಷಿ ಅನುಸಂಧಾನ ಪರಿಷತ್, ನವದೆಹಲಿ, ಇವರು ಘಟಿಕೋತ್ಸವದ ಭಾಷಣವನ್ನು ನೀಡಿದರು. ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದ ಮುಖ್ಯ ಅಥಿತಿಗಳು ತಮ್ಮ ಭಾಷಣದಲ್ಲಿ ಕೃಷಿ ಕ್ಷೇತ್ರದಲ್ಲಿ ಸಕರಾತ್ಮಕ ಬದಲಾವಣೆ ತರುವಲ್ಲಿ ವಿಶೇಷವಾಗಿ ಉತ್ಪಾದನೆ ಮತ್ತು ಅದರ ಗುಣಮಟ್ಟವನ್ನು ಹೆಚ್ಚಿಸುವತ್ತ ಗಮನಹರಿಸಬೇಕೆಂದು ಸಲಹೆ ನೀಡಿದರು. ಮಾನವ ಇತಹಾಸದಲ್ಲಿ ಕೃಷಿ ಮತ್ತು ಆಹಾರ ಸುರಕ್ಷತೆ ಯಾವಾಗಲೂ ಪ್ರಮುಖ ಪಾತ್ರವಹಿಸುತ್ತದೆ ಎಂದು ಅವರು ಹೇಳಿದರು. ಹೆಚ್ಚುತ್ತಿರುವ ಜನಸಂಖ್ಯೆಯ ಬೇಡಿಕೆಯನ್ನು ಪೂರೈಸಲು ಕೃಷಿ ಉತ್ಪಾದನೆಗಳು ಆಹಾರ ಉತ್ಪಾದನೆಯನ್ನು ಹೆಚ್ಚಿಸಲು ಕೆಲಸ ಮಾಡುತ್ತಿವೆ. ಇಡೀ ದೇಶದ ಸರಕುಗಳ ಉತ್ಪಾದನೆಯಲ್ಲಿ ಶೇ. 14ರಷ್ಟು ಕೃಷಿ ಕ್ಷೇತ್ರವು ಕೊಡುಗೆ ನೀಡುತ್ತಿದೆ. ಕೃಷಿಯಲ್ಲಿ ಗುಣಮಟ್ಟದ ಸಂಶೋಧನೆಗಳು ಮುಂದುವರಿಯಬೇಕು ಮತ್ತು ಕೃಷಿ ಕ್ಷೇತ್ರದ ಸವಾಲುಗಳಿಗೆ ಪರಿಹಾರ ಕಂಡುಕೊಳ್ಳಲು ಉನ್ನತ ಶಿಕ್ಷಣ ಕೇಂದ್ರಗಳನ್ನು ಸ್ಥಾಪಿಸುವುದು ಉತ್ತಮ ಕ್ರಮ ಎಂದು ಅವರು ಒತ್ತಿ ಹೇಳಿದರು. ಈ ವಿಶ್ವವಿದ್ಯಾಲಯದ ಏಳಿಗೆಯ ಬಗ್ಗೆ ಹೊಗಳಿದರು ಮತ್ತು ವಿಶ್ವವಿದ್ಯಾಲಯದಿಂದ ಹೊರಹೋಗುವ ಎಲ್ಲಾ ವಿದ್ಯಾರ್ಥಿಗಳಿಗೆ ಅಭಿನಂದನೆ ಸಲ್ಲಿಸಿದರು. ಡಾ. ಕೆ.ಎನ್. ಕಟ್ಟಿಮನಿ, ಕುಲಪತಿಗಳು, ಕೃಷಿ ವಿಶ್ವವಿದ್ಯಾಲಯ, ರಾಯಚೂರು ಇವರು ವಿಶ್ವವಿದ್ಯಾಲಯದ ಸಾಧನೆಗಳನ್ನು ವಿವರಿಸಿದರು. ಈ ಪ್ರದೇಶದ ರೈತರ

ಕಲ್ಯಾಣವನ್ನು ಪರಿಗಣಿಸಿ ವಿಶ್ವವಿದ್ಯಾಲಯದ ಕಾರ್ಯಕ್ರಮಗಳನ್ನು ಯೋಜಿಸಲಾಗುವುದು ಎಂದರು. ವಿಶ್ವವಿದ್ಯಾಲಯವನ್ನು ರೈತರ ವಿಶ್ವವಿದ್ಯಾಲಯವಾಗಿ ಅಭಿವೃದ್ಧಿಪಡಿಸುವ ಪ್ರಯತ್ನಗಳು ನಡೆಯುತ್ತಿವೆ. ನೀರಿನ ನಿರ್ವಹಣೆ, ಸುಸ್ಥಿರ ಜಲಾನಯನ ಅಭಿವೃದ್ಧಿ, ಸಣ್ಣ ಮತ್ತು ಮಧ್ಯಮ ಪ್ರಮಾಣದ ರೈತರಿಗೆ ಅನುಕೂಲವಾಗುವಂತೆ ಕೃಷಿ ಯಂತ್ರಗಳ ಅಭಿವೃದ್ಧಿ, ಆಹಾರ ಸುರಕ್ಷತೆ, ಕೀಟನಾಶಕ ಮುಕ್ತ ಆಹಾರ ಧಾನ್ಯಗಳು ಮತ್ತು ಕೃಷಿಯಲ್ಲಿ ನ್ಯಾನೋ ತಂತ್ರಜ್ಞಾನದ ಸಂಶೋಧನೆಗಳನ್ನು ವಿಶ್ವವಿದ್ಯಾಲಯವು "ಸೆಂಟರ್ ಆಫ್ ಎಕ್ಸಲೆನ್ಸ್" ಅನ್ನು ಪ್ರಾರಂಭಿಸಲು ಯೋಜಿಸಲಾಗಿದೆ, ಇದರಲ್ಲಿ ಆಹಾರ ಸಂಸ್ಕರಣೆ, ಮೌಲ್ಯವರ್ಧನೆ, ಕೃಷಿ–ಮಾರುಕಟ್ಟೆ ಮತ್ತು ನಿರ್ವಹಣೆ, ಹವಾಮಾನ ಬದಲಾವಣೆ ಇತ್ಯಾದಿಗಳ ದೃಷ್ಟಿಕೋನಗಳನ್ನು ಅಧ್ಯಯನ ಮಾಡಲಾಗುವುದು ಮತ್ತು ಈ ನಿಟ್ಟಿನಲ್ಲಿ ಈಗಾಗಲೇ ಇದರ ಪ್ರಸ್ತಾವನೆಯನ್ನು ಐಸಿಎಆರ್, ನವದೆಹಲಿ ಇವರಿಗೆ ಸಲ್ಲಿಸಲಾಗಿದೆ ಎಂದು ತಿಳಿಸಿದರು. ಘಟಿಕೋತ್ಸವ ಸಮಾರಂಭದಲ್ಲಿ 281 ಸ್ನಾತಕ, 118 ಸ್ನಾತಕೋತ್ತರ ಮತ್ತು 25 ಡಾಕ್ಟರೇಟ್ ಪದವಿ ವಿದ್ಯಾರ್ಥಿಗಳಿಗೆ ಪದವಿಗಳನ್ನು ನೀಡಲಾಯಿತು. ಇದರಲ್ಲಿ ಹೆಚ್ಚಿನ ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಚಿನ್ನದ ಪದಕ ನೀಡಿ ಗೌರವಿಸಲಾಯಿತು. ಈ ಸಮಾರಂಭದಲ್ಲಿ ವಿಶ್ವವಿದ್ಯಾಲಯದ ಆಡಳಿತ ಮಂಡಳಿಯ ಸದಸ್ಯರು, ಅಧಿಕಾರಿಗಳು, ಸಿಬ್ಬಂದಿ ವರ್ಗದವರು ಪದವಿ ಪಡೆದ ವಿದ್ಯಾರ್ಥಿಗಳ ಪಾಲಕರು ಭಾಗವಹಿಸಿದರು.

2.16.1 ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರಿನ 8ನೇ ಘಟಿಕೋತ್ಸವದಲ್ಲಿ ಚಿನ್ನದ ಪದಕ/ನಗದು ಬಹುಮಾನಗಳನ್ನು ಪಡೆದ ಅಭ್ಯರ್ಥಿಗಳ ಪಟ್ಟಿ

ಕೋಷ್ಟಕ 31: 8ನೇ ಘಟಿಕೋತ್ಸವದಲ್ಲಿ ಚಿನ್ನದ ಪದಕ/ನಗದು ಬಹುಮಾನಗಳನ್ನು ಪಡೆದುಕೊಂಡ ಅಭ್ಯರ್ಥಿಗಳ ಪಟ್ಟಿ

ಕ್ರ.ಸಂ	ಹೆಸರು	ವಿಷಯ	ಚಿನ್ನದ ಪದಕ
		ಪಂಡಿತ ಪದವಿ	
1	ಡಾ. ಗುಣಬಾಗ್ಯ	ಕೃಷಿ ಅರ್ಥಶಾಸ್ತ್ರ	ಕೃ.ವಿ.ವಿ. ಚಿನ್ನದಪದಕ
2	ಡಾ. ಜ್ಯೋತಿ	ಕೃಷಿ ಕೀಟಶಾಸ್ತ್ರ	ಕೃ.ವಿ.ವಿ. ಚಿನ್ನದಪದಕ
3	ಡಾ. ಯಶೋಧ	ಅನುವಂಶಿಕತಳಿ ಮತ್ತು ಸಸ್ಯಾಭಿವೃದ್ಧಿ ಶಾಸ್ತ್ರ	ಕೃ.ವಿ.ವಿ. ಚಿನ್ನದಪದಕ
4	ಡಾ. ರಾಘವೇಂದ್ರ	ಮಣ್ಣು ವಿಜ್ಞಾನ ಮತ್ತು ಕೃಷಿ ರಸಾಯನಶಾಸ್ತ್ರ	ಕೃ.ವಿ.ವಿ. ಚಿನ್ನದಪದಕ
5	ಡಾ. ನಾಗೇಶಕುಮಾರ ಟಿ	ಕೃಷಿ ಯಂತ್ರೋಪಕರಣಗಳು ಮತ್ತು ಶಕ್ತಿ ತಂತ್ರಜ್ಞಾನ	1.ಕೃ.ವಿ.ವಿ. ಚಿನ್ನದ ಪದಕ 2.ಕರ್ನಾಟಕ ರಾಜ್ಯ ಹೈಟೆಕ್ ಕೃಷಿ ಉಪಕರಣ ತಯಾರಕರು, ವಿತರಕರು ಮತ್ತು ವಿತರಕರ ಸಂಘ (ರಿ) ಚಿತ್ರದುರ್ಗ.
6	ಡಾ. ಶೃತಿ ವಿ.ಹೆಚ್.	ಆಹಾರ ಸಂಸ್ಕರಣೆ ಮತ್ತು ತಂತ್ರಜ್ಞಾನ	ಕೃ.ವಿ.ವಿ. ಚಿನ್ನದಪದಕ
		ಸ್ನಾತಕೋತ್ತರ ಪದವಿ	
1	ನಾಗಲಿಂಗ ಬಿ	ಕೃಷಿ ಅರ್ಥಶಾಸ್ತ್ರ	ಕೃ.ವಿ.ವಿ. ಚಿನ್ನದಪದಕ
2	ಅರುಣಕುಮಾರ ಸಿ.ಜಿ.	ಕೃಷಿ ಕೀಟಶಾಸ್ತ್ರ	ಕೃ.ವಿ.ವಿ. ಚಿನ್ನದಪದಕ
3	ಸ್ನೇಹ ಬಜಂತ್ರಿ ಆರ್.	ಕೃಷಿ ವಿಸ್ತರಣೆ ಶಿಕ್ಷಣ ಶಾಸ್ತ್ರ	ಕೃ.ವಿ.ವಿ. ಚಿನ್ನದಪದಕ
4	ಮನೋಜ ಕೆ.ಎನ್.	ಬೇಸಾಯಶಾಸ್ತ್ರ	ಕೃ.ವಿ.ವಿ. ಚಿನ್ನದಪದಕ
5	ನಾಗವೇಣಿ ಕೆ.	ಅನುವಂಶಿಕತಳಿ ಮತ್ತು ಸಸ್ಯಾಭಿವೃದ್ಧಿ ಶಾಸ್ತ್ರ	ಕೃ.ವಿ.ವಿ. ಚಿನ್ನದಪದಕ
6	ಮುನಿರಾಜು ಕೆ.ಎಮ್.	ಸಸ್ಯರೋಗ ಶಾಸ್ತ್ರ	ಕೃ.ವಿ.ವಿ. ಚಿನ್ನದಪದಕ
7	ಇನಾಯತ್ ಹೆಚ್.ಆರ್.	ಬೀಜ ವಿಜ್ಞಾನ ಮತ್ತು ತಂತ್ರಜ್ಞಾನ	ಕೃ.ವಿ.ವಿ. ಚಿನ್ನದಪದಕ
8	ಅಮೃತ ಕೆ.ಕೆ.	ಮಣ್ಣು ವಿಜ್ಞಾನ ಮತ್ತು ರಸಾಯನ ಶಾಸ್ತ್ರ	ಕೃ.ವಿ.ವಿ. ಚಿನ್ನದಪದಕ
9	ಲತಾ ಹೆಚ್. ಎಸ್.	ಕೃಷಿ ಯಂತ್ರೋಪಕರಣಗಳು ಮತ್ತು ಶಕ್ತಿ ತಂತ್ರಜ್ಞಾನ	ಕೃ.ವಿ.ವಿ. ಚಿನ್ನದಪದಕ
10	ಸಗಿಲಿ ಜಾನ್ಸಿ ಲಕ್ಷ್ಮಿ	ಆಹಾರ ಸಂಸ್ಕರಣೆ ಮತ್ತು ತಂತ್ರಜ್ಞಾನ	ಕೃ.ವಿ.ವಿ. ಚಿನ್ನದಪದಕ
		ಸ್ನಾತಕ ಪದವಿ	
1	ಮಂಜುಶ್ರೀ ಎಸ್.	1. ಕೃ.ವಿ.ವಿ. ಚಿನ್ನದಪದಕ 2. ಡಾ. ಎ.ಎಸ್. ಹಾದಿಮನಿ ಚಿನ್ನದ ಪದಕ 3. ಶ್ರೀ. ವೀರನಗೌಡ ಪಾಟೀಲ್ ಹೀರೆಯೆರದಿಹಾಳ ಸ್ಮಾರಕ ಚಿನ್ನದಪದಕ	

		4. ಡಾ. ವಿ.ಬಿ. ನಾಡಗೌಡ ಚಿನ್ನದ ಪದಕ
2	ಹೆಚ್. ಬಸವರಾಜೇಶ್ವರಿ	ದಿ. ಡಾ. ಎಲ್.ಬಿ. ಹೂಗಾರ ಡೀನ್ (ಕೃಷಿ) ಕೃಷಿ ಮಹಾವಿದ್ಯಾಲಯ, ರಾಯಚೂರು ಸ್ಮಾರಕ ಚಿನ್ನದ ಪದಕ
3	ಅಕ್ಷಯಕುಮಾರ ಎಮ್.	1. ಕೃ.ವಿ.ವಿ. ಚಿನ್ನದಪದಕ 2. ದಿ. ಶ್ರೀ ಬಸವರಾಜ ಹಂಪಯ್ಯ ಸಜ್ಜನಶೆಟ್ಟಿ ಚಿನ್ನದ ಪದಕ 3. ಶ್ರೀ. ಅಮೃತ ರಾವ್ ಮುಲಗೆ ಚಿನ್ನದ ಪದಕ
4	ಎಸ್. ಮಲ್ಲಿಕಾರ್ಜುನ	ಚಿನ್ನದ ಪದಕ
5	ಶೌರತುನ್ನಿಸಬ್ ಬೇಗಂ	1. ಕೃ.ವಿ.ವಿ. ಚಿನ್ನದಪದಕ 2. ಫಾರುಖ್ ಅನ್ವರ್ ಕಂ., ರಾಯಚೂರು ಚಿನ್ನದಪದಕ 3. ಡಾ. ಎಸ್.ಎ. ಪಾಟೀಲ್ ಮಾಜಿ ಕುಲಪತಿಗಳು, ಕೃ.ವಿ.ವಿ. ದಾರವಾಡ ಚಿನ್ನದ ಪದಕ 4. ದಿ. ಶ್ರೀ. ಟಿ.ಜಿ. ಯವಗಲ್ ಸ್ಮಾರಕ ಚಿನ್ನದ ಪದಕ 5. ಶ್ರೀ. ವೀರಭದ್ರಪ್ಪ ಚನ್ನಪ್ಪ ಮಟಲ್‌ದಿನ್ನಿ ಚಿನ್ನದ ಪದಕ
		ನಗದು ಬಹುಮಾನ / ಪ್ರಶಸ್ತಿ
		1. ಗಂಗಾಬಾಯಿ ಆರ್. ಪಾಟೀಲ್ ನಗದು ಬಹುಮಾನ
		2. ಶ್ರೀ. ಎಸ್. ಈಶ್ವರಪ್ಪ, ರಾಯಚೂರು ನಗದು ಪ್ರಶಸ್ತಿ
6	ಅಂಬರೇಶ ಸಂಗಪ್ಪ ಅಕಳಕುಂಪಿ	1. ಶ್ರೀ. ಬಸನಗೌಡ ಮಾಲಿಪಾಟೀಲ್ ಮರಕಲ್, ಶಹಪೂರ ಚಿನ್ನದ ಪದಕ 2. ಶ್ರೀ. ಸೂಗಪ್ಪ ವರದ್, ನಿವೃತ್ತ ಉಪನ್ಯಾಸಕರು, ಶಹಪೂರ
7	ರಾಘವೇಂದ್ರ ಎನ್.	1. ಮಾತೋಶ್ರೀ ಮರಗಬಾಯಿ ಬಾಬುಲಾಲ್ ಜೈನ್, ಶಹಪೂರ ಚಿನ್ನದ ಪದಕ
8	ಈರೇಶ	ಮಾತೋಶ್ರಿ ಮಲ್ಲಮ್ಮ ಶಂಕರಪ್ಪ ಬೈರೆಡ್ಡಿ, ಗೋಗಿ, ಶಹಪೂರ ಚಿನ್ನದ ಪದಕ

2.17 ಸಂಸ್ಥಾಪನಾ ದಿನಾಚರಣೆ

ರಾಯಚೂರು ಕೃಷಿ ವಿಶ್ವವಿದ್ಯಾಲಯದ 10ನೇ ಸಂಸ್ಥಾಪನಾ ದಿನಾಚರಣೆಯನ್ನು ಕೃಷಿ ವಿಶ್ವವಿದ್ಯಾಲಯ, ರಾಯಚೂರು ಪ್ರೇಕ್ಷಾಗೃಹದಲ್ಲಿ 22ನೇ ನವೆಂಬರ್, 2018 ರಂದು ಆಚರಿಸಲಾಯಿತು. ಪರಮಪೂಜ್ಯ ಸ್ವಾಮಿ ನಿರ್ಭಯಾನಂದಾಜಿ ಅಧ್ಯಕ್ಷರು, ಶ್ರೀ ರಾಮಕೃಷ್ಣ ವಿವೇಕಾನಂದ ಆಶ್ರಮ, ಗದಗ ಮತ್ತು ವಿಜಯಪುರ, ಇವರು ಕಾರ್ಯಕ್ರಮವನ್ನು ಉದ್ಘಾಟಿಸಿದರು. ಈ ಕಾರ್ಯಕ್ರಮಕ್ಕೆ ಡಾ. ಕೆ. ರಾಮಸ್ವಾಮಿ, ನಿವೃತ್ತ ಕುಲಪತಿಗಳು, ತಮಿಳುನಾಡು ಕೃಷಿ ವಿಶ್ವವಿದ್ಯಾಲಯ, ಕೋಯಂಬತ್ತೂರು, ಇವರು ಮುಖ್ಯ ಅತಿಥಿಗಳಾಗಿ ಉಪನ್ಯಾಸ ನೀಡಿದರು. ಡಾ. ಕೆ.ಎನ್. ಕಟ್ಟಿಮನಿ, ಕುಲಪತಿಗಳು, ಕೃವಿವಿ, ರಾಯಚೂರು, ಇವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದರು. ಈ ಕಾರ್ಯಕ್ರಮದಲ್ಲಿ ಗೌರಾವಾನ್ವಿತ ಆಡಳಿತ ಮಂಡಳಿಯ ಸದಸ್ಯರಾದ ಡಾ. ಎಮ್. ಶೇಖರ ಗೌಡ, ಶ್ರೀಮತಿ ಹೇಮಾವತಿ ಲಂಕೇಶ್, ಶ್ರೀ ಅಮರೇಶ ಬಲ್ಲಿದವ, ಶ್ರೀ ಸಿದ್ದಪ್ಪ ಭಂಡಾರಿ ಮತ್ತು ವೀರನಗೌಡ ಪರಸರೆಡ್ಡಿ ಹಾಗೂ ವಿಶ್ವವಿದ್ಯಾಲಯದ ಅಧಿಕಾರಿಗಳು, ಶಿಕ್ಷಕರು, ಸಿಬ್ಬಂದಿ ವರ್ಗದವರು ಮತ್ತು ವಿದ್ಯಾರ್ಥಿಗಳು ಭಾಗವಹಿಸಿದ್ದರು.

3. ಕೃಷಿ ಸಂಶೋಧನೆ

3.1 ಕೃಷಿ ಸಂಶೋಧನಾ ಕೇಂದ್ರಗಳು ಮತ್ತು ಹವಾಮಾನ ವಲಯಗಳು

ವಲಯ–1: ಈಶಾನ್ಯ ಅರೆಮಲೆನಾಡು

1. ಕೃಷಿ ಸಂಶೋಧನಾ ಕೇಂದ್ರ, ಬೀದರ್ (ಹಳ್ಳದಕೆರೆ ಮತ್ತು ಜಾನವಾಡ)

ವಲಯ–2: ಈಶಾನ್ಯ ಒಣ ಪ್ರದೇಶ

1. ವಲಯ ಕೃಷಿ ಸಂಶೋಧನಾ ಕೇಂದ್ರ, ಕಲಬುರಗಿ
2. ಕೃಷಿ ಸಂಶೋಧನಾ ಕೇಂದ್ರ, ಭೀಮರಾಯನಗುಡಿ
3. ಕೃಷಿ ಸಂಶೋಧನಾ ಕೇಂದ್ರ, ಕವಡಿಮಟ್ಟಿ
4. ಕೃಷಿ ಸಂಶೋಧನಾ ಕೇಂದ್ರ, ಮಾಳನೂರು
5. ಕೃಷಿ ಸಂಶೋಧನಾ ಕೇಂದ್ರ, ರದ್ದೇವಾಡಗಿ
6. ಕೃಷಿ ಸಂಶೋಧನಾ ಕೇಂದ್ರ, ಚಿತ್ತಾಪೂರ
7. ಮುಖ್ಯ ಕೃಷಿ ಸಂಶೋಧನಾ ಕೇಂದ್ರ, ರಾಯಚೂರು
8. ಕೃಷಿ ಸಂಶೋಧನಾ ಕೇಂದ್ರ, ಧಡೇಸೂಗೂರು

ವಲಯ–3: ಉತ್ತರ ಒಣ ಪ್ರದೇಶ


1. ಕೃಷಿ ಸಂಶೋಧನಾ ಕೇಂದ್ರ, ಗಂಗಾವತಿ
2. ಕೃಷಿ ಸಂಶೋಧನಾ ಕೇಂದ್ರ, ಗುಳದಳ್ಳಿ
3. ಕೃಷಿ ಸಂಶೋಧನಾ ಕೇಂದ್ರ, ಸಿರುಗುಪ್ಪ
4. ಕೃಷಿ ಸಂಶೋಧನಾ ಕೇಂದ್ರ, ಹಗರಿ

2018 ರ ಋತುಮಾನದ ವರದಿ ವಲಯ 1, 2 ಮತ್ತು 3 ರ ಮಳೆ ಮಾಹಿತಿ

ವಲಯ–1

ವಲಯ–1 ಈಶಾನ್ಯ ಅರೆ ಮಲೆನಾಡು ಪ್ರದೇಶವಾಗಿದ್ದು, ಎಲ್ಲಾ ಕೃಷಿ ವಲಯಗಳಿಗಿಂತ ಅತಿ ಚಿಕ್ಕದಾಗಿದೆ. ಈ ವಲಯಕ್ಕೆ ಬೀದರ್ ಜಿಲ್ಲೆಯ ಎಲ್ಲಾ 5 ತಾಲ್ಲೂಕುಗಳು ಮತ್ತು ಕಲಬುರಗಿ ಜಿಲ್ಲೆಯ ಆಳಂದ ಮತ್ತು ಚಿಂಚೋಳಿ ತಾಲ್ಲೂಕುಗಳು ಸೇರಿರುತ್ತವೆ. ಈ ವಲಯದ ಸರಾಸರಿ ವಾರ್ಷಿಕ ಮಳೆಯು 844.6 ಮೀ.ಮೀ. ಇದ್ದು, ಜೂನ್‌ನಿಂದ ಅಕ್ಟೋಬರ್ ತಿಂಗಳಿನವರಗೆ ಮಳೆಯು ಸಾಮಾನ್ಯ ಹಂಚಿಕೆ ಇದ್ದು ಆಗಸ್ಟ್ ತಿಂಗಳಿನಲ್ಲಿ ಹೆಚ್ಚಾಗಿರುತ್ತದೆ. ಆದುದರಿಂದ, ವರ್ಷದಲ್ಲಿ ಎರಡು ಬೆಳೆಗಳನ್ನು (ಮುಂಗಾರು ಮತ್ತು ಹಿಂಗಾರು) ಬೆಳೆಯಲು ಅನುಕೂಲಕರವಾಗಿದೆ. ವಿವಿಧ ಆಳದ ಜಂಬಿಟ್ಟಿಗೆ ಮತ್ತು ಮಣ್ಣುಗಳು ಈ ವಲಯದ ಪ್ರಮುಖ ಮಣ್ಣಿನ ವಿಧಗಳಾಗಿವೆ. ಈ ವಲಯದಲ್ಲಿ ಪ್ರಮುಖ ಮುಂಗಾರು ಬೆಳೆಗಳಾದ ಹೆಸರು, ಉದ್ದು, ತೊಗರಿ, ಎಳ್ಳು, ಕಬ್ಬು ಮತ್ತು ಸೋಯಾಅವರೆ, ಬೆಳೆಯುತ್ತಿದ್ದು, ಹಿಂಗಾರು ಬೆಳೆಗಳಾದ ಕಡಲೆ, ಹಿಂಗಾರಿ ಜೋಳ, ಗೋಧಿ ಮತ್ತು ಕುಸುಬೆ ಪ್ರಮುಖ ಬೆಳೆಗಳಾಗಿವೆ.

ಕಳೆದ 2018–19ನೇ ಸಾಲಿನಲ್ಲಿ ಈ ವಲಯದಲ್ಲಿ ಒಟ್ಟು ಮಳೆ 509.2 ಮೀ.ಮೀ. ಆಗಿರುತ್ತದೆ. ಜುಲೈ, ಆಗಸ್ಟ್, ಸೆಪ್ಟೆಂಬರ್, ಅಕ್ಟೋಬರ್ ಮತ್ತು ನವೆಂಬರ್ ತಿಂಗಳುಗಳಲ್ಲಿ ತೇವಾಂಶದ ಕೊರತೆಯಿಂದಾಗಿ ಮುಂಗಾರು ಮತ್ತು ಹಿಂಗಾರು ಬೆಳೆಗಳಲ್ಲಿ ಇಳುವರಿ ಕುಂಠಿತಗೊಂಡಿತು. ಹೆಸರು, ಉದ್ದು, ಸೋಯಾ ಅವರೇ ಬೆಳೆಯು ಮಾಗುವ ಹಂತದಲ್ಲಿದ್ದಾಗ ಮಳೆ ಅಭಾವದಿಂದಾಗಿ ಮಣ್ಣಿನಲ್ಲಿ ತೇವಾಂಶ ಕೊರತೆಯಿಂದಾಗಿ ಇಳುವರಿ ಕುಂಠಿತಗೊಂಡಿರುತ್ತದೆ. ತದನಂತರ ಅಕ್ಟೋಬರ್ ತಿಂಗಳಲ್ಲಿ ಮಳೆಯ ಕೊರತೆಯಿಂದಾಗಿ ಕಡಲೆ, ಗೋಧಿಯಲ್ಲಿ ತೇವಾಂಶ ಕೊರತೆಯಿಂದಾಗಿ ಇಳುವರಿ ಕುಸಿದಿದೆ. ಕೀಡೆಗಳಾದ ಕಂಬಳಿ ಹುಳು, ಕಾಂಡದ ನೊಣ, ಕಾಯಿಕೊರಕ, ಥ್ರಿಪ್ಸ್ ನುಶಿ, ಹೆಸರು, ಸೋಯಾಅವರೆ ಮತ್ತು ಉದ್ದಿನಲ್ಲಿ ಹೆಚ್ಚಾಗಿದ್ದು, ಇಳುವರಿ ಮಟ್ಟ ಕುಸಿದಿದೆ. ಕಡಲೆ ಬೆಳೆಯಲ್ಲಿ ಕಾಯಿಕೊರೆಯುವ ಹುಳು ತೀವ್ರವಾಗಿ ಹಾನಿಯುಂಟು ಮಾಡಿದೆ.




ಮಳೆಯ ಪ್ರಮಾಣ–2018

ವಲಯ–2

ವಲಯ–2 ಈಶಾನ್ಯ ಒಣ ಪ್ರದೇಶವಾಗಿದ್ದು ಕಲಬುರಗಿ ಜಿಲ್ಲೆಯ ಅಫ್ಜಲ್‌ಪುರ, ಸೇಡಂ, ಜೇವರ್ಗಿ, ಚಿತ್ತಾಪುರ ಮತ್ತು ಕಲಬುರಗಿ ತಾಲ್ಲೂಕುಗಳನ್ನು, ಯಾದಗಿರ್ ಜಿಲ್ಲೆಯ ಸುರುಪುರ, ಶಹಾಪುರ ಮತ್ತು ಯಾದಗಿರಿ ತಾಲ್ಲೂಕುಗಳನ್ನು ಮತ್ತು ರಾಯಚೂರು ಜಿಲ್ಲೆಯ ದೇವದುರ್ಗ, ಮಾನ್ವಿ ಮತ್ತು ರಾಯಚೂರು ತಾಲ್ಲೂಕುಗಳನ್ನೊಳಗೊಂಡಿದೆ. ಈ ವಲಯದ ಸರಾಸರಿ ವಾರ್ಷಿಕ ಮಳೆಯು 769.7 ಮೀ.ಮೀ. ಆಗಿರುತ್ತದೆ. ಈ ವಲಯದಲ್ಲಿ ಮುಖ್ಯವಾಗಿ ಮುಂಗಾರು ಬೇಸಾಯ ಪ್ರದೇಶವೆಂದು ವಿಂಗಡಿಸಲಾಗಿದ್ದರೂ ಕೂಡ ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳುಗಳಲ್ಲಿ ಬೀಳುವ ದೊಡ್ಡ ಮಳೆಗಳಿಂದಾಗಿ ಈ ಪ್ರದೇಶವನ್ನು ಹೆಚ್ಚಾಗಿ ಹಿಂಗಾರು ಕೃಷಿ ಬೆಳೆಗಳನ್ನು ಬೆಳೆಯುವ ಪ್ರದೇಶವೆಂದು ವರ್ಗೀಕರಿಸಲಾಗಿದೆ. ಈ ವಲಯದಲ್ಲಿ ಪ್ರಮುಖವಾಗಿ ಮಧ್ಯಮದಿಂದ ಆಳದವರೆಗಿನ ಕಪ್ಪು ಭೂಮಿಯು ಹೆಚ್ಚಿನ ಪ್ರದೇಶಗಳಲ್ಲಿ ಹರಡಿದ್ದು, ಯಾದಗಿರಿ, ಶಹಾಪುರ, ಸುರುಪುರ, ದೇವದುರ್ಗ, ಮಾನ್ವಿ ಮತ್ತು ರಾಯಚೂರು ಭಾಗದಲ್ಲಿ ಮಾತ್ರ ಹಗುರವಾದ ಕೆಂಪು ಮಣ್ಣು ಕಂಡು ಬರುತ್ತದೆ. ಈ ವಲಯದಲ್ಲಿ ಪ್ರಮುಖ ಬೆಳೆಗಳಾದ ತೊಗರಿ, ಹತ್ತಿ, ಭತ್ತ, ಎಳ್ಳು, ಸೂರ್ಯಕಾಂತಿ, ಸಜ್ಜೆ, ಹೆಸರು, ಉದ್ದು, ಮುಂಗಾರಿ ಜೋಳ ಬೆಳೆಯುತ್ತಿದ್ದು, ಹಿಂಗಾರಿ ಹಂಗಾಮಿನಲ್ಲಿ ಕಡಲೆ ಹಿಂಗಾರಿ ಜೋಳ ಮತ್ತು ಕುಸುಬೆ ಮುಖ್ಯವಾಗಿದೆ.


ಕಳೆದ 2018–19ನೇ ವರ್ಷದಲ್ಲಿ ಈ ವಲಯದಲ್ಲಿ ಒಟ್ಟು ಮಳೆ 401.3 ಮೀ.ಮೀ. ಆಗಿರುತ್ತದೆ. ಜುಲೈ, ಆಗಸ್ಟ್, ಸೆಪ್ಟೆಂಬರ್, ಅಕ್ಟೋಬರ್ ಮತ್ತು ನವೆಂಬರ್ ತಿಂಗಳುಗಳಲ್ಲಿ ತೇವಾಂಶದ ಕೊರತೆಯಿಂದಾಗಿ ಮುಂಗಾರು ಮತ್ತು ಹಿಂಗಾರು ಬೆಳೆಗಳಲ್ಲಿ ಇಳುವರಿ ಕುಂಠಿತಗೊಂಡಿತು. ಹೆಸರು ಮತ್ತು ತೊಗರಿ ಬೆಳೆಯು ಮಾಗುವ ಹಂತದಲ್ಲಿದ್ದಾಗ ಮಳೆ ಅಭಾವದಿಂದಾಗಿ ಮಣ್ಣಿನಲ್ಲಿ ತೇವಾಂಶ ಕೊರತೆಯಿಂದಾಗಿ ಇಳುವರಿ ಕುಂಠಿತಗೊಂಡಿರುತ್ತದೆ. ಹಿಂಗಾರಿನಲ್ಲಿ ಕಡಲೆ, ಸೂರ್ಯಕಾಂತಿ ಮತ್ತು ಜೋಳ ಬೆಳೆಯು ಮಳೆ ಅಭಾವದಿಂದ ಇಳುವರಿ ಕುಂಠಿತಗೊಂಡಿರುತ್ತದೆ. ಹೆಸರಿನಲ್ಲಿ ಹೆಲಿಯೋತಿಸ್ ಮತ್ತು ತೊಗರಿಯಲ್ಲಿ ಕಾಯಿನೊಣ, ಭತ್ತದಲ್ಲಿ ಕಾಂಡಕೊರೆಯುವ ಹುಳು ಮತ್ತು ಹತ್ತಿಯಲ್ಲಿ ಗುಲಾಬಿ ಕಾಯಿ ಕೊರಕದ ಹಾವಳಿ ಹೆಚ್ಚಾಗಿ ಕಂಡುಬಂದಿತ್ತು. ಜೋಳ ಮತ್ತು ಮೆಕ್ಕೆ ಜೋಳದಲ್ಲಿ ಪಾಲ್ ಸೈನಿಕ ಹುಳುವಿನ ಹಾವಳಿ ಹೆಚ್ಚಾಗಿತ್ತು.



ವಲಯ–3

ವಲಯ–3 ಉತ್ತರ ಒಣ ಪ್ರದೇಶದ ಕೃಷಿ ವಲಯವಾಗಿದ್ದು ಅತಿ ದೊಡ್ಡ ವಲಯವಾಗಿದೆ. ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರು ವ್ಯಾಪ್ತಿಯಲ್ಲಿ ಬರುವ ರಾಯಚೂರು ಜಿಲ್ಲೆಯ ಲಿಂಗಸುಗೂರು ಮತ್ತು ಸಿಂಧನೂರು ತಾಲ್ಲೂಕುಗಳು, ಬಳ್ಳಾರಿ ಜಿಲ್ಲೆಯ ಎಲ್ಲಾ 7 ತಾಲ್ಲೂಕುಗಳು ಮತ್ತು ಕೊಪ್ಪಳ ಜಿಲ್ಲೆಯ ಎಲ್ಲಾ 4 ತಾಲ್ಲೂಕುಗಳಗೊಂಡಿದೆ. ಈ ವಲಯ ಸರಾಸರಿ ವಾರ್ಷಿಕ ಮಳೆಯು 612.3 ಮೀ.ಮೀ. ಆಗಿರುತ್ತದೆ. ಮಳೆಯ ವಿಂಗಡಣೆಯಲ್ಲಿ ಎರಡು ಶೃಂಗಗಳಿದ್ದು, ಸೆಪ್ಟೆಂಬರ್ ತಿಂಗಳಲ್ಲಿ ಹೆಚ್ಚು ಮಳೆಯಾಗುವುದರಿಂದ ಈ ಭಾಗವನ್ನು ಪ್ರಮುಖ ಹಿಂಗಾರಿ ಬೆಳೆ ಪ್ರದೇಶವೆಂದು ಗುರ್ತಿಸಲಾಗಿದೆ. ಈ ವಲಯದಲ್ಲಿ ಪ್ರಮುಖ ಬೆಳೆಗಳಾದ ಭತ್ತ, ಹತ್ತಿ, ಮೆಕ್ಕೆ ಜೋಳ, ಸಜ್ಜೆ, ನವಣೆ, ಮೆಣಸಿನಕಾಯಿ, ತೊಗರಿ ಮತ್ತು ಅಲಸಂಧಿ ಮುಂಗಾರಿನಲ್ಲಿ ಬೆಳೆಯುತ್ತಿದ್ದು, ಹಿಂಗಾರಿನಲ್ಲಿ ಜೋಳ ಮತ್ತು ಕಡಲೆ ಪ್ರಮುಖ ಹಿಂಗಾರಿ ಬೆಳೆಗಳಾಗಿವೆ.

ಕಳೆದ 2018–19ನೇ ವರ್ಷದಲ್ಲಿ ಈ ವಲಯದಲ್ಲಿ ಒಟ್ಟು ಮಳೆ 409.5 ಮೀ.ಮೀ. ಆಗಿದ್ದು, ವಲಯ ಸರಾಸರಿ ಮಳೆಗಿಂತ ಶೇ. –32.8 ರಷ್ಟು ಕಡಿಮೆಯಾಗಿರುತ್ತದೆ. ಜುಲೈ ತಿಂಗಳಿನಲ್ಲಿ ಮಳೆಯ ಅಭಾವದಿಂದ ಮುಂಗಾರು ಬೆಳೆಗಳಲ್ಲಿ ಇಳುವರಿ ಮಟ್ಟ ಗಣನೀಯವಾಗಿ ಕುಸಿದಿರುತ್ತದೆ. ಅಕ್ಟೋಬರ್ ಮತ್ತು ನವೆಂಬರ್ ತಿಂಗಳಿನಲ್ಲಿ ಸಹ ಮಳೆಯ ಕೊರತೆಯಿಂದ ಹಿಂಗಾರಿ ಬೆಳೆಗಳ ಇಳುವರಿ ಕುಂಠಿತಗೊಂಡಿರುತ್ತದೆ. ಕಡಿಮೆ ಮಳೆಯಿಂದಾಗಿ ತುಂಗಭದ್ರಾ ಜಲಾಶಯದಲ್ಲಿ ಹೆಚ್ಚಿನ ನೀರು ತುಂಬದೇ ಇರುವ ಕಾರಣ ಬೇಸಿಗೆ ಭತ್ತ ಬೆಳೆಯಲಾಗಲಿಲ್ಲ. ಭತ್ತದಲ್ಲಿ ಕಾಂಡ ಕೊರೆಯುವ ಹುಳುವಿನ ಭಾಧೆ, ಹತ್ತಿಯಲ್ಲಿ ಗುಲಾಬಿ ಕಾಯಿಕೊರಕದ ಹಾವಳಿ, ಜೋಳ, ಮುಸುಕಿನ ಜೋಳ ಮತ್ತು ಸಜ್ಜೆಯಲ್ಲಿ ಸೈನಿಕ ಹುಳುವಿನ ಭಾದೆ ಮತ್ತು ತೊಗರಿಯಲ್ಲಿ ಕಾಯಿ ಕೊರೆಯುವ ಹುಳುವಿನ ಭಾದೆ ಹೆಚ್ಚಾಗಿ ಕಂಡುಬರುತ್ತದೆ.



3.2 ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯವು ಪ್ರಸ್ತುತ ವರ್ಷದಲ್ಲಿ ಕಾರ್ಯಾಚರಣೆಯಲ್ಲಿರುವ ಪ್ರಾಯೋಜನೆಗಳು

ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯವು ಪ್ರಸ್ತುತ ವರ್ಷದಲ್ಲಿ ಕೀಟಗಳು / ರೋಗಗಳು / ಕಳೆಗಳು ನಿರ್ವಹಣೆಗಾಗಿ / ಮಣ್ಣಿನ ವಿಶ್ಲೇಷಣೆ ಮತ್ತು ಕೃಷಿ ಉಪಕರಣಗಳ ಪರೀಕ್ಷೆಗಾಗಿ ಹೊಸ ಪ್ರಭೇದಗಳು / ಬಿಟಿ ಹೈಬ್ರಿಡ್‌ಗಳು / ಸಾಮಾನ್ಯ ಮಿಶ್ರತಳಿಗಳು / ಜೈವಿಕ ಅಣುಗಳು / ಹೊಸ ರಸಾಯನಿಕ ಪರೀಕ್ಷಾಗಾಗಿ 122 ಪ್ರಯೋಗಗಳನ್ನು ಕೈಗೊಂಡಿದ್ದು ಮತ್ತು ಅದರ ಆದಾಯದ ಮೊತ್ತ ರೂ. 168 ಲಕ್ಷಗಳಾಗಿರುತ್ತದೆ.

3.3 ಪ್ರಮುಖ ಸಂಶೋಧನೆಗಳು

3.3.1 ಮಹತ್ತರ ಸಂಶೋಧನೆಗಳು

ಬೆಳೆ ಸುಧಾರಣೆ:

ಭತ್ತದ ತಳಿ: ಐಇಟಿ–19251

ಈ ತಳಿಯು 115–120 ದಿನಗಳಲ್ಲಿ ಮಾಗುತ್ತದೆ, ಮುಂಗಾರು ಮತ್ತು ಹಿಂಗಾರು ಹಂಗಾಮಿಗೆ ಹೊಂದಿಕೊಂಡು ಸರಾಸರಿ ಪ್ರತಿ ಹೆಕ್ಟೇರಿಗೆ 6 ಟನ್ ಇಳುವರಿ ಕೊಡುವ ಸಾಮರ್ಥ್ಯ ಹೊಂದಿದೆ. ಎಲೆ ಕವಚ ಕೊಳೆ ರೋಗ ಮತ್ತು ಕಂದು ಚುಕ್ಕೆ ರೋಗಕ್ಕೆ ನಿರೋಧಕ ಶಕ್ತಿ ಹಾಗೂ ಕಾಡಿಗೆ ಮತ್ತು ಬೆಂಕಿ ರೋಗಗಳನ್ನು ತಡೆದುಕೊಳ್ಳುವ ಸಾಮರ್ಥ್ಯ ಹೊಂದಿದೆ. ಈ ತಳಿಯ ಇಡ್ಲಿ ಮತ್ತು ದೋಸೆ ತಯಾರಿಕೆಗೆ ಸೂಕ್ತ ಎಂದು ಸಂಶೋಧನೆಯಿಂದ ಕಂಡುಬಂದಿದೆ. ಅದರಂತೆ ಮಂಡಕ್ಕಿ, ಅವಲಕ್ಕಿ ತಯಾರಿಸಲು ಸೂಕ್ತವಾಗಿದೆ. ಈ ತಳಿಯಿಂದ ಶೇ. 64% ರಷ್ಟು ಭತ್ತ ಮತ್ತು ಶೇ. 70% ರಷ್ಟು ಸಂಸ್ಕರಣ ಭತ್ತ (ಅಕ್ಕಿ) ದೊರೆಯುತ್ತದೆ. ಈ ತಳಿಯು 24–26 ಕ್ವಿಂಟಾಲ್ ನೀಡುವುದು.

ಭತ್ತದ ತಳಿ: ಜಿಎನ್‌ವಿ–05–01 (ಗಂಗಾವತಿ ಸೋನ)

ಈ ತಳಿಯ ಇಳುವರಿ ಸಾಮರ್ಥ್ಯವು 6.8 ಟನ್/ಹೆ ಇದು 130–135 ದಿನಗಳಲ್ಲಿ ಕಟಾವಿಗೆ ಬರುತ್ತದೆ. ಸವಳು ಭೂಮಿಗೆ ಸೂಕ್ತವಾಗಿದ್ದು ವರ್ಷದ ಮೂರು ಹಂಗಾಮುಗಳಲ್ಲಿಯೂ ಬೆಳೆಯುವುದಕ್ಕೆ ಸೂಕ್ತವಾಗಿದೆ. ಎಲೆ ದುಂಡಣು ರೋಗ, ಬಿಳಿ ತುದಿ ರೋಗ, ಎಲೆ ಅವಚದ ಮಚ್ಚೆ ರೋಗ, ಕಾಡಿಗೆ ರೋಗ, ಊದುಬತ್ತಿ ರೋಗಗಳಿಗೆ ನಿರೋಧಕ ಶಕ್ತಿ ಇದೆ.

ಭತ್ತದ ತಳಿ: ಜಿಎನ್‌ವಿ–10–89

ಈ ಭತ್ತದ ತಳಿಯನ್ನು, ಜಿ.ಜಿ.ವಿ–05–01 ಮತ್ತು ಎನ್.ಇ.ಎಸ್–07–03 ಎಂಬ ತಳಿಗಳನ್ನು ಕ್ರಾಸ್ ಮಾಡಿ ಅಭಿವೃದ್ಧಿ ಪಡಿಸಲಾಗಿದೆ. ಇದು ಮಧ್ಯಮ ಗಾತ್ರದ ಅಕ್ಕಿ ತಳಿಯಾಗಿದು ಬಿ.ಪಿ.ಟಿ–5204 ತಳಿಗಿಂತ 25–30 ದಿನ ಬೇಗನೆ ಕಟಾವಿಗೆ ಬರುತ್ತದೆ ಮತ್ತು ಬಿಪಿಟಿ–5204 ಗಿಂತ ಶೇ. 16% ರಷ್ಟು ಹೆಚ್ಚಿನ ಇಳುವರಿ ಕೊಡುತ್ತದೆ. ಈ ತಳಿಯು ಬೆಂಕಿ ರೋಗಕ್ಕೆ ತಡೆದುಕೊಳ್ಳುವ

ಶಕ್ತಿಯನ್ನು ಹೊಂದಿದೆ. ಮುಂಗಾರು ಹಂಗಾಮಿಗೆ ವಲಯ 2 ಮತ್ತು 3ಕ್ಕೆ ಶಿಫಾರಸ್ಸು ಮಾಡಲಾಗಿದೆ. ಈ ತಳಿಯ ಇಳುವರಿ ಪ್ರತಿ ಎಕರೆಗೆ 28–30 ಕ್ವಿಂಟಾಲ್ ನೀಡುವುದು.

ಭತ್ತ: ಆರ್.ಪಿ. ಬಯೋ–226

ಈ ಭತ್ತದ ತಳಿಯು ಬ್ಯಾಕ್ಟೀರಿಯಾ ಅಂಗಮಾರಿ ರೋಗಕ್ಕೆ ನಿರೋಧಕ ಶಕ್ತಿಯನ್ನು ಹೊಂದಿದ್ದು, ಈ ತಳಿಯು 140 ರಿಂದ 145 ದಿನಗಳಲ್ಲಿ ಕಟಾವಿಗೆ ಬರುತ್ತದೆ ಮತ್ತು ಕಾಳಿನ ಗುಣಮಟ್ಟ ಮತ್ತು ಅಡಿಗೆ ಗುಣಮಟ್ಟ ಬಿಪಿಟಿ–5204 ನಂತೆಯೇ ಇರುತ್ತದೆ. ವಲಯ–2 ರಲ್ಲಿ ಈ ತಳಿಯು ಬಿಪಿಟಿ–5204 ಗಿಂತ ಶೇ.6.7 ರಷ್ಟು ಮತ್ತು ವಲಯ–3 ರಲ್ಲಿ ಶೇ.6.5 ರಷ್ಟು ಹೆಚ್ಚಿನ ಇಳುವರಿ ಕೊಡುತ್ತದೆ. ಈ ತಳಿಯ ಇಳುವರಿ ಸಾಮರ್ಥ್ಯ ಪ್ರತಿ ಎಕರೆಗೆ 25 ರಿಂದ 30 ಕ್ವಿಂಟಾಲ್ ಇರುವುದು.

ಮೆಕ್ಕೆಜೋಳ: ಆರ್.ಸಿ.ಆರ್.ಎಮ್.ಹೆಚ್–2

ಈ ಸಂಕರಣ ತಳಿಯು ಶಾಖದ ಒತ್ತಡವನ್ನು ಚೇತರಿಸಿಕೊಳ್ಳುವ ಶಕ್ತಿಯನ್ನು ಹೊಂದಿದೆ. ಈ ಸಂಕರಣ ತಳಿಯು ಎಲ್ಲಾ ರೋಗಗಳಿಗೆ ನಿರೋಧಕ ಶಕ್ತಿಯನ್ನು ಹೊಂದಿದೆ. ಇದ್ದಿಲು ಕೊಳೆ ರೋಗ ಮತ್ತು ಸಾಮಾನ್ಯ ತುಕ್ಕು ರೋಗಕ್ಕೆ ಮಧ್ಯಮ ನಿರೋಧಕ ಶಕ್ತಿ ಹೊಂದಿದೆ. ಸಾಧಾರಣ ಸ್ಥಿತಿಯಲ್ಲಿ ಈ ಸಂಕರಣ ತಳಿಯು ಹೆಚ್ಚಿನ ಇಳುವರಿಯನ್ನು ಕೊಡುತ್ತದೆ. ಈ ಸಂಕರಣ ತಳಿಯು ಕಟಾವಿನ ಸಮಯದಲ್ಲಿ ಹಚ್ಚ ಹಸಿರಾಗಿಯೇ ಉಳಿದಿರುತ್ತದೆ.

ಹೆಸರು: ಬಿಜಿಎಸ್–9

ಈ ತಳಿಯು ಬೂದಿ ರೋಗಕ್ಕೆ ಮಧ್ಯಮ ನಿರೋಧಕತೆ ಹೊಂದಿದೆ, ಬೀಜಗಳು ದಪ್ಪವಾಗಿದ್ದು ಹಸಿರು ಬಣ್ಣವನ್ನು ಹೊಂದಿರುವುದಲ್ಲದೆ ಅಡುಗೆಗೆ ಸೂಕ್ತವಾಗಿದೆ. ಈ ತಳಿಯು 75 ದಿನಗಳಲ್ಲಿ ಕಟಾವಿಗೆ ಬರುತ್ತದೆ. ಈ ತಳಿಯನ್ನು 1 ಮತ್ತು 2ನೇ ಕೃಷಿ ವಲಯಗಳಿಗೆ ಶಿಫಾರಸ್ಸು ಮಾಡಲಾಗಿದೆ. ಇಳುವರಿ: ಎಕರೆಗೆ 15–17 ಕ್ವಿ. ಇಳುವರಿ ನೀಡುತ್ತದೆ.

ತೊಗರಿ: ಟಿಎಸ್–3ಆರ್ (ಮಾರುತಿ–2)

ಈ ತಳಿಯು ಅಸ್ತಿತ್ವದಲ್ಲಿರುವ ಪ್ರಭೇದಗಳಿಗಿಂತ ಶೇ. 17–30 ಹೆಚ್ಚಿನ ಇಳುವರಿ ನೀಡುವ ಸಾಮರ್ಥ್ಯವನ್ನು ಪಡೆದುಕೊಂಡಿದೆ. ಹೆಕ್ಟೇರಿಗೆ 14–18 ಕ್ವಿ/ಇಳುವರಿ ಸಂಭಾವ್ಯತೆಯ ಇಳುವರಿ ನೀಡುತ್ತದೆ. ಇದು ಕೆಂಪು ಮತ್ತು ಮಧ್ಯಮದಿಂದ ಆಳವಾದ ಕಪ್ಪು ಮಣ್ಣು ಮತ್ತು ತಡವಾಗಿ ಬಿತ್ತಿದ ಸ್ಥಿತಿಗೆ ಸೂಕ್ತವಾಗಿದೆ. ಇದು 4 ಲಕ್ಷಕ್ಕೂ ಹೆಚ್ಚು ಎಕರೆಗಳಿಗೆ ಕ್ಷೇತ್ರವ್ಯಾಪ್ತಿಯಾಗಿದೆ. ಈ ತಳಿಯು ಸೊರಗು ರೋಗಕ್ಕೆ ನಿರೋಧಕತೆ ಹೊಂದಿದ್ದು, 150–160 ದಿನಗಳಲ್ಲಿ ಕಟಾವಿಗೆ ಬರುತ್ತದೆ.

ತೊಗರಿಯ ತಳಿ: ಜಿಆರ್‌ಜಿ–811

ಈ ತಳಿಯು ಮಧ್ಯಮಾವಧಿ ತಳಿಯಾಗಿದ್ದು 165 ದಿನಗಳಲ್ಲಿ ಮಾಗುತ್ತದೆ. ಈ ತಳಿಯು ಟಿಎಸ್–3ಆರ್‌ಗಿಂತಲೂ 10 ದಿನ ಮೊದಲೇ ಕಟಾವಿಗೆ ಬರುತ್ತದೆ. ಇದು ಹೆಕ್ಟೇರಿಗೆ 15 ಕ್ವಿಂಟಾಲ್ ಇಳುವರಿ ಸಾಮರ್ಥ್ಯವನ್ನು ಹೊಂದಿದೆ. ಈ ತಳಿಯು ಸೊರಗು ರೋಗ ನಿರೋಧಕ ಶಕ್ತಿ ಹೊಂದಿದ್ದು ಮತ್ತು ಗೊಡ್ಡು ರೋಗವನ್ನು ತಡೆದುಕೊಳ್ಳವ ಶಕ್ತಿ ಹೊಂದಿದೆ.

ಕಡಲೆ: ಜಿಬಿಎಂ–2

ಕೊಳೆ ರೋಗ ಮತ್ತು ಬೇರು ರೋಗಗಳಿಗೆ ನಿರೋಧಕತೆಯಿದ್ದು, ಗಿಡಗಳು ಎತ್ತರವಾಗಿದ್ದು (>50 ಸೆಂ.ಮೀ.) ಮತ್ತು ಕಾಯಿಗಳು ಬಿಡುವ 1/2 ರಷ್ಟು ಎತ್ತರದಲ್ಲಿರುವುದರಿಂದ ಯಾಂತ್ರೀಕರಣಕ್ಕೆ ಸೂಕ್ತವಾಗಿದೆ. ಇದು 100 ರಿಂದ 110 ದಿನಗಳಲ್ಲಿ ಮಾಗುವುದರ ಜೊತೆಗೆ ಯಾಂತ್ರಿಕ ಕಟಾವಿಗೆ ಸೂಕ್ತವಾಗಿದೆ. ಇದು ಹೆಕ್ಟೇರಿಗೆ 20 ಕ್ವಿಂಟಲ್ ಇಳುವರಿ ನೀಡುವ ಸಾಮರ್ಥ್ಯ ಹೊಂದಿದೆ. ಇದು ಜೆಜಿ–11 ತಳಿಗಿಂತ ಶೇ. 15.9% ಹೆಚ್ಚು ಧಾನ್ಯದ ಇಳುವರಿ ನೀಡುತ್ತದೆ.

ಸೂರ್ಯಕಾಂತಿ ಹೈಬ್ರಿಡ್: ಆರ್‌ಎಸ್‌ಎಫ್‌ಎಚ್–1887

ಈ ಸಂಕರಣ ತಳಿಯು ನಂಜಾಣು ರೋಗ, ಎಲೆ ಮುದುಡುವ ರೋಗ ಹಾಗೂ ಎಲೆ ಚುಕ್ಕೆ ರೋಗಗಳನ್ನು ತಡೆದುಕೊಳ್ಳುವ ಶಕ್ತಿಯನ್ನು ಹೊಂದಿದೆ. ಮುಖ್ಯವಾಗಿ ಸಂಪೂರ್ಣವಾಗಿ ಬೀಜ ಕಟ್ಟುವುದರಿಂದ ಕಾಳುಗಳು ಹೆಚ್ಚಿನ ತೂಕ ಹೊಂದಿರುತ್ತವೆ. ಈ

ತಳಿಯು ಪ್ರತಿ ಹೆಕ್ಟೇರಿಗೆ 21 ಕ್ವಿಂಟಾಲ್ ಇಳುವರಿ ಕೊಡುವ ಸಾಮರ್ಥ್ಯ ಹೊಂದಿದ್ದು ಅಧಿಕ ಎಣ್ಣೆ ಶೇ. 38.2% ಅಂಶ ಹೊಂದಿದೆ. ಇದು 100 ದಿನಕ್ಕೆ ಕಟಾವಿಗೆ ಬರುತ್ತದೆ. ಕಾಳುಗಳ ಸುಧಾರಣೆ ಸಾಮರ್ಥ್ಯವನ್ನು ಶೇ. 10.28% ಮಿತಿಗೆ ಹೆಚ್ಚಿಸಲಾಗಿದೆ. ಈ ತಳಿಯನ್ನು ವಲಯ 1 ಮತ್ತು 2ಕ್ಕೆ ಶಿಫಾರಸ್ಸು ಮಾಡಲಾಗಿದೆ.

ಶೇಂಗಾ ತಳಿ : ಕದಿರಿ–9

ಆಂಧ್ರ ಪ್ರದೇಶದ, ಕೃಷಿ ಸಂಶೋಧಾ ಕೇಂದ್ರ, ಕದರಿಯಿಂದ ಅಭಿವೃದ್ಧಿ ಪಡಿಸಿರುವ ಶೇಂಗಾ ತಳಿಯಾದ **"ಕದರಿ–9"** ಕರ್ನಾಟಕದ ವಲಯ 2 ಮತ್ತು 3 ಪ್ರದೇಶಗಳಿಗೆ ಅಳವಡಿಸಿಕೊಳ್ಳಲಾಗಿದೆ. ಈ ತಳಿಯು ಪ್ರತಿ ಹೆಕ್ಟೇರಿಗೆ 18 ಕ್ವಿಂಟಾಲ್ ಇಳುವರಿ ಕೊಡುವ ಸಾಮರ್ಥ್ಯ ಹೊಂದಿದೆ. ಇದು ಅಧಿಕ ಎಣ್ಣೆ ಅಂಶ (47–48%) ಮತ್ತು ಅಧಿಕ ಬೀಜದ ಉತ್ಪಾದನೆ ಹೊಂದಿದ್ದು ಮುಂಗಾರು ಮತ್ತು ಹಿಂಗಾರಿ/ಬೇಸಿಗೆ ಹಂಗಾಮಿಗೆ ಸೂಕ್ತವಾಗಿದೆ ಎಂದು ಸಂಶೋಧನೆಯಿಂದ ಕಂಡು ಬಂದಿದೆ. ಈ ತಳಿಯು ನೀರಿನ ಕೊರತೆಯನ್ನು ತಡೆದುಕೊಳ್ಳುವ ಶಕ್ತಿಯನ್ನು ಹೊಂದಿದೆ ಹಾಗೂ ತುಕ್ಕು ರೋಗ, ಕುಡಿ ಸಾಯುವ ನಂಜಾಣು ರೋಗ, ಥ್ರಿಪ್ಸ್ ನುಸಿ ಮತ್ತು ಸುರುಳಿ ಪೂಚಿ ಬಾಧೆಯನ್ನು ತಡೆದುಕೊಳ್ಳುವ ಸಾಮರ್ಥ್ಯ ಹೊಂದಿದೆ.

ಹತ್ತಿ ತಳಿ: ಎಸ್‌ಸಿಎಸ್–793

ಇದೊಂದು ಹಿರ್ಸುಟಮ್ ಜಾತಿಯ ತಳಿಯಾಗಿದ್ದು, ಈ ತಳಿಯು ಸಹನಾ ತಳಿಗಿಂತ ಶೇ 22.6 ಮತ್ತು ಸುರಭಿ ತಳಿಗಿಂತ ಶೇ. 24.1 ರಷ್ಟು ಅಧಿಕ ಹತ್ತಿ ಇಳುವರಿಯನ್ನು ಕೊಡುವ ಸಾಮರ್ಥ್ಯ ಹೊಂದಿದೆ. ಈ ತಳಿಯು ರಸ ಹೀರುವ ಮತ್ತು ಕಾಯಿ ಕೊರೆಯುವ ಹುಳುವಿಗೆ ನಿರೋಧಕ ಶಕ್ತಿಯನ್ನು ಹೊಂದಿದೆ. ಹತ್ತಿ ಎಳೆಯ ಗುಣಧರ್ಮಗಳು ಸುರಭಿ ತಳಿಗೆ ಸರಿಸಮಾನವಾಗಿರುವುದು ಎಂದು ಸಂಶೋಧನೆ ಮೂಲಕ ಕಂಡು ಬಂದಿದೆ.

ಮೆಣಸಿನಕಾಯಿ ಹೈಬ್ರಿಡ್: ಜೆಸಿಹೆಚ್–42

ಇದು ಒಂದು ಸಂಕರಣ ತಳಿಯಾಗಿದ್ದು, ಜೆಎಸ್‌ಎ–1 ಮತ್ತು ಬಿವಿಸಿ–42 ಎಂಬ ತಳಿಗಳಿಂದ ಅಭಿವೃದ್ಧಿ ಪಡಿಸಲಾಗಿದೆ. ಈ ತಳಿಯನ್ನು ಹಸಿರು ಮೆಣಸಿನಕಾಯಿಯಾಗಿಯೂ ಮತ್ತು ಕೆಂಪು ಕಾರದಪುಡಿ ಮೆಣಸಿನಕಾಯಿಯಾಗಿಯೂ ಉಪಯೋಗಿಸಬಹುದು. ಈ ಸಂಕರಣ ತಳಿಯನ್ನು ಹೆಚ್ಚು ಕಾಯಿಗಳು ಹೊಂದಿದ್ದು, ಹೆಚ್ಚಿನ ಬಾರಿ ಕೋಯ್ಲು ಮಾಡಬಹುದು. ಈ ಸಂಕರಣ ತಳಿಯು ಸ್ಥಳೀಯ ಸಿತಾರ ತಳಿಗಿಂದ ಶೇ. 33 ರಷ್ಟು ಹೆಚ್ಚಿನ ಇಳುವರಿ ಕೊಡುತ್ತದೆ. ಈ ಸಂಕರಣ ತಳಿಯು 150–200 ಕ್ವಿಂಟಾಲ್ ಪ್ರತಿ ಹೆಕ್ಟೇರಿಗೆ ಹಸಿ ಮೆಣಸಿನಕಾಯಿ ಇಳುವರಿ ಮತ್ತು 50–65 ಕ್ವಿಂಟಾಲ್ ಪ್ರತಿ ಹೆಕ್ಟೇರಿಗೆ ಒಣ ಮೆಣಸಿನಕಾಯಿ ಇಳುವರಿ ನೀಡುತ್ತದೆ.

ಬೆಳೆ ಉತ್ಪಾದನೆ

ಅಚ್ಚುಕಟ್ಟು ಪ್ರದೇಶದಲ್ಲಿ ಕೂರಿಗೆ ಭತ್ತದ ಬೇಸಾಯ

ಕೂರಿಗೆ ಭತ್ತದ ಬೇಸಾಯದಿಂದ ಶೇ. 17–35 ರಷ್ಟು ನೀರಿನ ಉಳಿತಾಯ ಮಾಡಬಹುದು. ಸೂಕ್ತ ಸಮಯದಲ್ಲಿ ಬಿತ್ತನೆಯನ್ನು ಮಾಡಬಹುದು. ಬಿತ್ತನೆಯಿಂದ ಮುಖ್ಯ ಭೂಮಿ ತಯಾರಿಸುವ ಮತ್ತು ಸಸಿಮಡಿ ತಯಾರಿಸಿ ಅದನ್ನು ಸಂರಕ್ಷಿಸುವ ಖರ್ಚುನ್ನು ಉಳಿಸಬಹುದು. ಬಿತ್ತನೆಗೆ ಎಕರೆಗೆ 8–12 ಕಿ.ಗ್ರಾಂ ಬೀಜ ಸಾಕಾಗುವುದು. ಎಕರೆಗೆ 8–10 ಲೀ. ಇಂಧನ ಉಳಿತಾಯ ಹಾಗೂ ವಾಯುಮಾಲಿನ್ಯ ಕಡಿಮೆಯಾಗುವುದು. ಶೇ.25 ರಿಂದ 30 ರಷ್ಟು ರಸಗೊಬ್ಬರ ಕಡಿಮೆ ಬಳಕೆ. ಕಡಿಮೆ ಖರ್ಚು ಮತ್ತು ಹೆಚ್ಚು ನಿವ್ವಳ ಆದಾಯ ಪಡೆಯಬಹುದು. (ರೂ. 6000–8000/ ಹೆ.) ಜೊತೆಗೆ ನೀರಿನ ಸದ್ಬಳಕೆ, ಹೆಚ್ಚಿನ ಪ್ರದೇಶಕ್ಕೆ ನೀರಾವರಿ ಮತ್ತು ಉತ್ಪಾದಕತೆ ಹಾಗೂ ಅತೀ ನೀರಿನ ಬಳಕೆಯಿಂದಾಗುವ ದುಷ್ಪರಿಣಾಮಗಳನ್ನು ತಡೆಯಬಹುದು.

ತೊಗರಿಯಲ್ಲಿ ನಾಟಿ ಪದ್ಧತಿ

ಸುಮಾರು 20 ಗ್ರಾಂ ಸುಣ್ಣದ ಕ್ಲೋರೈಡನ್ನು ಪ್ರತಿ ಲೀಟರ್ ನೀರಿನಲ್ಲಿ ಬೆರೆಸಿ ತಯಾರಿಸಿದ ದ್ರಾವಣದಲ್ಲಿ ಒಂದು ಕಿ.ಗ್ರಾಂ ಬಿತ್ತುವ ಬೀಜವನ್ನು ಹಾಕಿ ಒಂದು ಗಂಟೆ ನೆನೆಯಲು ಬಿಡಬೇಕು ನಂತರ ಬೀಜವನ್ನು 7 ತಾಸು ನೆರಳಿನಲ್ಲಿ ಒಣಗಿಸಬೇಕು ನಂತರ ರೈಜೋಬಿಯಂ ಹಾಗೂ ರಂಜಕ ಕರಗಿಸುವ ಅಣುಜೀವಿ ಗೊಬ್ಬರ ಎಕರೆಗೆ 200 ಗ್ರಾಂ ನಂತೆ ಹಾಗೂ ಟ್ರೈಕೋಡರ್ಮಾ ಶಿಲೀಂಧ್ರನಾಶಕ 4 ಗ್ರಾಂ ಪ್ರತಿ ಕಿ.ಗ್ರಾಂ ಬೀಜಕ್ಕೆ ಬೀಜೋಪಚಾರ ಮಾಡಬೇಕು. ಸಸಿ ತಯಾರಿಸಲು ಸುಮಾರು 6" ಅಂಗುಲ ಉದ್ದ

ಹಾಗೂ 4" ಅಥವಾ 8" ಅಂಗುಲ ಉದ್ದ ಹಾಗೂ 5" ಅಂಗುಲ ಅಗಲವಿರುವ 150–200 ದಪ್ಪವಿರುವ ಪಾಲಿಥೀನ್ ಚೀಲಗಳನ್ನು ಉಪಯೋಗಿಸುವುದು ಯೋಗ್ಯ, ಪಾಲಿಥೀನ್ ಚೀಲದಲ್ಲಿ ಸಮ ಪ್ರಮಾಣದಲ್ಲಿ ಸಾವಯವ ಗೊಬ್ಬರ, ಮಣ್ಣು ಮತ್ತು ಮರಳನ್ನು ಮಿಶ್ರಣಮಾಡಿ ತುಂಬಬೇಕು. ಪಾಲೀಥಿನ್ ಚೀಲದಲ್ಲಿ ಸರಿಯಾಗಿ ಹೆಚ್ಚಿನ ನೀರು ಬಸಿದು ಹೋಗಲು ಕೆಳಭಾಗದಲ್ಲಿ ಮತ್ತು ಸುತ್ತಲು 3–4 ರಂಧ್ರಗಳನ್ನು ತೆಗೆಯಬೇಕು. ನಂತರ ಮೇ 15 ಕ್ಕೆ 1 ಸೆಂ. ಮೀ. ಆಳದಲ್ಲಿ ಪ್ರತಿ ಚೀಲಕ್ಕೆ ಎರಡು ಬೀಜಗಳನ್ನು ಹಾಕಿ ಚೀಲಗಳನ್ನು ನೆರಳಿರುವ ಹಾಗೂ ಸರಿಯಾಗಿ ಸೂರ್ಯನ ಬೆಳಕು ಬರುವ ಜಾಗದಲ್ಲಿ ಇಟ್ಟು ನಿಯಮಿತವಾಗಿ ಜಾರಿಯ ಮುಖಾಂತರ ತಪ್ಪದೇ ನೀರು ಹಾಕಬೇಕು. ಸುಮಾರು 30 ರಿಂದ 35 ದಿವಸದ ತೊಗರಿ ಸಸಿಗಳು ನಾಟಿಗೆ ಯೋಗ್ಯವಾಗಿರುತ್ತವೆ. ಸಸಿಗಳನ್ನು ನಾಟಿ ಪೂರ್ವದಲ್ಲಿ ಕಠಿಣತೆಗೆ ಒಳಪಡಿಸುವುದು ಅವಶ್ಯಕ.

ಬಿ.ಟಿ. ಹತ್ತಿಯಲ್ಲಿ ಎಲೆ ಕೆಂಪಾಗುವಿಕೆಯ ನಿರ್ವಹಣೆ

ಬಿಟಿ ಹತ್ತಿಯಲ್ಲಿ ವಿಶೇಷವಾಗಿ ಎಲೆ ಕೆಂಪಾಗುವಿಕೆ ಪ್ರಮಾಣ ಅಧಿಕವಾಗಿರುವುದರಿಂದ, ಶೇ 25 ರಷ್ಟು ಹೆಚ್ಚಿನ ಶಿಫಾರಿತ ರಾಸಾಯನಿಕ ಗೊಬ್ಬರದೊಂದಿಗೆ, ಬಿತ್ತನೆ ಸಮಯದಲ್ಲಿ ಪ್ರತಿ ಹೆಕ್ಟೇರಿಗೆ 25 ಕಿ. ಗ್ರಾಂ. ಮೆಗ್ನೀಶಿಯಂ ಸಲ್ಫೇಟ್‌ನ್ನು ಹಾಕಿ. ನಂತರ ಹೂವಾಡುವ, ಕಾಯೀಕಟ್ಟುವ ಮತ್ತು ಕಾಯಿ ಬಲಿಯುವ ಹಂತಗಳಲ್ಲಿ ಶೇ.1.0 ರ ಮೆಗ್ನೀಶಿಯಂ ಸಲ್ಫೇಟ್‌ನ ಜೊತೆಯಲ್ಲಿ ಶೇ.1.0ರ 19:19:19 ಸಾರಜನಕ, ರಂಜಕ ಮತ್ತು ಪೊಟ್ಯಾಷ್ ದ್ರಾವಣವನ್ನು ಸಿಂಪರಣೆ ಮಾಡುವುದರಿಂದ ಎಲೆ ಕೆಂಪಾಗುವಿಕೆಯನ್ನು ಸಮರ್ಪಕವಾಗಿ ಹತೋಟಿ ಮಾಡಬಹುದಾಗಿದೆ.

ಮಳೆಯಾಶ್ರಿತ ಪ್ರದೇಶದಲ್ಲಿ ಸಮಗ್ರ ಕೃಷಿ ಪದ್ಧತಿ

ಸಣ್ಣ ಹಿಡುವರಿದಾರರಿಗೆ ಒಂದು ಹೆಕ್ಟೇರ್ ಮಳೆಯಾಶ್ರಿತ ಪ್ರದೇಶದಲ್ಲಿ ಈ ಕೆಳಗಿನ ಸಮಗ್ರ ಕೃಷಿ ಪದ್ಧತಿಯನ್ನು ಅಳವಡಿಸುವುದರಿಂದ ಹೆಚ್ಚಿನ ನಿವ್ವಳ ಆದಾಯ ಪಡೆಯಬಹ್ಮದು.

1. ಬೆಳೆ ಪದ್ಧತಿ : ತೊಗರಿ + ಸಜ್ಜೆ (1:2); ತೊಗರಿ + ನವಣೆ/ಹೆಸರು (1:2), 40% – 60% : ಹೆಸರು – ಜೋಳ/ ಸೂರ್ಯಕಾಂತಿ ಚೌಳಿ – ಜೋಳ, ಚೌಳಿ – ಕುಸುಬೆ 2. ತರಕಾರಿ ಬೆಳೆಗಳು : ರಾಜಗೀರ, ಪುಂಡಿ, ಪಾಲಕ್, ಮೆಣಸಿನಕಾಯಿ, ಈರುಳ್ಳಿ 15% (5 ಮೀ. X 5 ಮೀ. ತಾಕುಗಳಲ್ಲಿ) 3. ಆಡು ಸಾಕಾಣಿಕೆ : 5 ಹೆಣ್ಣು ಆಡುಗಳು + 1 ಗಂಡು ಆಡು 4. ನೈಸರ್ಗಿಕ ಆಕಳು ಕೃಷಿ : ಖಿಲಾರಿ ಆಕಳು –1 5. ಅಜೊಲ್ಲಾ 6. ರಸಮೇವು ಘಟಕ (Silo – Pits) 8. ಬದುಗಳ ಮೇಲೆ : ನುಗ್ಗೆ, ಕರಿಬೇವು.

ನೀರಾವರಿಗೆ ಸೂಕ್ತವಾದ ಸಮಗ್ರ ಕೃಷಿ ಪದ್ಧತಿ

1. ಬೆಳೆ ಪದ್ಧತಿ : ಅ) ಬಿಟಿ ಹತ್ತಿ 40% – 60% ಆ) ಮೆಕ್ಕೆಜೋಳ–ಕಡಲೆ
2. ತರಕಾರಿ ಬೆಳೆಗಳು–ರಾಜಗೀರ, ಪುಂಡಿ, ಪಾಲಕ್, ಟೊಮಾಟೊ, ಮೆಣಸಿನಕಾಯಿ, ಅವರೆ (Dolichos) 15 % ಹೂವಿನ ಬೆಳೆಗಳು (20%) : ಚಂಡು ಹೂ / ಮಲ್ಲಿಗೆ
3. ಆಡು ಸಾಕಾಣಿಕೆ : 5 ಹೆಣ್ಣು ಆಡು+ 1 ಗಂಡು ಆಡು
4. ಹೈನುಗಾರಿಕೆ : 2 ಮಿಶ್ರತಳಿ ಆಕಳು
5. ಕೋಳಿ ಸಾಕಾಣಿಕೆ : 50
6. ಪೌಷ್ಟಿಕ ಕೈತೋಟ : ಬಾಳೆ/ ಚೊಗಚೆ / ಅವರೆ / ನುಗ್ಗೆ (ಹೊಂಡದ ಬದುಗಳ ಮೇಲೆ)
7. ಎರೆಹುಳು ಕೃಷಿ : ಅಜೊಲ್ಲಾ, ಜೀವಸಾರ ಘಟಕ (Biodigester tank)

ತೊಗರಿಯಲ್ಲಿ ಪಲ್ಸ್ ಮ್ಯಾಜಿಕ್ ಬಳಕೆ

ಪಲ್ಸ್ ಮ್ಯಾಜಿಕ್ @ 10 ಗ್ರಾಂ ಪ್ರತಿ ಲೀಟರ್ ನೀರಿಗೆ ಬೆರಸಿ ತೊಗರಿಯಲ್ಲಿ, 50% ಹೂಬಿಡುವ ಸಮಯದಲ್ಲಿ ಮತ್ತು ಮೊದಲಯನೆಯ ಸಿಂಪರಣೆಯ 15 ದಿನಗಳ ನಂತರ ಸಿಂಪರಣೆ ಮಾಡುವುದರಿಂದ ಶೇ. 17–20 ರಷ್ಟು ಇಳುವರಿಯನ್ನು ಹೆಚ್ಚಿಸಬಹುದಾಗಿದೆ.

1. ಬೆಳೆ ಸಂರಕ್ಷಣೆ

ಬೆಳೆ ಸಂರಕ್ಷಣೆಯ ಆಧುನಿಕ ತಂತ್ರಜ್ಞಾನ ಇ–ಸ್ಯಾಪ್" (electronic Solution against agricultural pests)

ಇ–ಸ್ಯಾಪ್ ತಂತ್ರಜ್ಞಾನವು ರೈತರ ಬೆಳೆಗಳಿಗೆ ಬರುವ ಪೀಡೆ/ಪೋಷಕಾಂಶಗಳ ಕೊರತೆ ಸಕಾಲದಲ್ಲಿ ಸಂರಕ್ಷಣೆ ಒದಗಿಸುವ ಒಂದು ನವೀನ ರೀತಿಯ ಆವಿಷ್ಕಾರ. ಇದರಲ್ಲಿ ರೈತರ ಹೊಲದ ಸಂಪೂರ್ಣ ಮಾಹಿತಿಯನ್ನು ತಂತ್ರಜ್ಞಾನದ ಮೂಲಕ ರವಾನಿಸುವ, ಕೂಡಿಡುವ ಹಾಗೂ ಕೃಷಿ ಅಧಿಕಾರಿಗಳಿಗೆ ಒದಗಿಸುವ ವ್ಯವಸ್ಥೆಯನ್ನು ಕಲ್ಪಸಲಾಗಿದೆ. ಈ ಸಂಪರ್ಕ ಸಾಧನದ ಮೂಲಕ ವಿಶ್ವವಿದ್ಯಾಲಯದ ಯಾವುದೇ ತಂತ್ರಜ್ಞಾನವನ್ನು ಚಿತ್ರ ಹಾಗೂ ಕಿರುಚಿತ್ರಗಳ ಮೂಲಕ ರೈತರಿಗೆ ಮನದಟ್ಟು ಮಾಡಬಹುದಲ್ಲದೆ, ಇವುಗಳ ಅಳವಡಿಕೆಗಳ ಸಮೀಕ್ಷೆಯನ್ನೂ ಮಾಡಬಹುದು.

ಕೃಷಿ ಯಂತ್ರೋಪಕರಣಗಳ ತಂತ್ರಜ್ಞಾನಗಳು:

ಸೌರ ಶಕ್ತಿಯ ಟನಲ್ ಮಾದರಿಯ ಒಣಗಿಸುವ ಘಟಕ (ಸಾಮರ್ಥ್ಯ 1ಟನ್ ಮತ್ತು 2ಟನ್)

ಸೌರ ಶಕ್ತಿಯಿಂದ ಟನಲ್‌ನಲ್ಲಿ ಆಹಾರ ಪದಾರ್ಥಗಳು ಮತ್ತು ಔಷಧಿ ಮತ್ತು ಸುಗಂಧಿತ ಸಸ್ಯಗಳನ್ನು ಕಡಿಮೆ ಸಮಯದಲ್ಲಿ ಒಣಗಿಸುವುದು. ಇದರ ಕಾರ್ಯ ದಕ್ಷತೆ ಶೇ. 95–97% ಸಾಮರ್ಥ್ಯವನ್ನು ಹೊಂದಿದೆ.

ಸೌರಶಕ್ತಿ ಚಾಲಿತ ನ್ಯಾಪ್‌ಸಾಕ್ ಸಿಂಪರಣಾ ಯಂತ್ರ

ಈ ಸೌರಶಕ್ತಿ ಚಾಲಿತ ನ್ಯಾಪ್‌ಸಾಕ್ ಸಿಂಪರಣಾ ಯಂತ್ರಕ್ಕೆ ಯಾವುದೇ ಇಂಧನದ ಅವಶ್ಯಕತೆ ಇರುವುದಿಲ್ಲ. ಇದರ ಅಗಲ 0.62 ಮೀ. ಯಂತ್ರದ ಸರಾಸರ ಉತ್ಪಾದನೆ 12.8 ವೋಲ್ಟ್, ಗಂಟೆಗೆ 90 ಲೀ. ಶಕ್ತಿಯನ್ನು ಬಿಡುಗಡೆ ಮಾಡುತ್ತದೆ. ಇದರ ದಕ್ಷತೆ ಪ್ರತಿ ಘಂಟೆಗೆ 0.15 ಹೆಕ್ಟೇರ್ ಆಗಿದ್ದು, ಸಾಮಾನ್ಯವಾಗಿ ರೈತರು ಉಪಯೋಗಿಸುವ ನ್ಯಾಪ್‌ಸಾಕ್ ಸಿಂಪರಣಾ ಯಂತ್ರಕ್ಕೆ ಹೋಲಿಸಿದಾಗ ಪ್ರತಿಶತ 20 ರಷ್ಟು ಸಿಂಪರಣಾ ವೆಚ್ಚವನ್ನು ಉಳಿತಾಯ ಮಾಡಬಹುದಲ್ಲದೇ ಆಳುಗಳ ದಣಿವನ್ನು ಕಡಿಮೆ ಮಾಡುತ್ತದೆ. ಇದರ ಬೆಲೆ ರೂ. 6,000/– ಗಳಾಗಿರುತ್ತವೆ.

ಲೇಸರ್ ಲೆವಲ್ಲಿಂಗ್ ತಂತ್ರಜ್ಞಾನದಿಂದ ಭತ್ತದಲ್ಲಿ ನೀರಿನ ಉತ್ಪಾದಕತೆಯನ್ನು ಹೆಚ್ಚಿಸುವ ವಿಧಾನ (ಕೆಸರು ಮಡಿ ತಯಾರು ಮಾಡುವ ಮುನ್ನ)

ಕೆಸರು ಮಡಿ ತಯಾರುಮಾಡುವ ಮುನ್ನ ಭೂಮಿ ಸಮತಟ್ಟು ಮಾಡಲು ಸಾಂಪ್ರದಾಯಕ ಪದ್ಧತಿಯ ಬದಲಾಗಿ ಲೇಸರ್ ಮಾರ್ಗದರ್ಶಿತ್ವದ"ಲೆವಲ್ಲಿಂಗ್ ಉಪಕರಣ ಉಪಯೋಗಿಸುವುದರಿಂದ ಶೇ. 11 ರಷ್ಟು ನೀರನ್ನು ಉಳಿತಾಯ ಮಾಡಬಹುದು. ಇದರ ಪ್ರತಿದಿನದ ವೆಚ್ಚ ರೂ. 800/– (ಯಂತ್ರಕ್ಕೆ ಮಾತ್ರ) ಮತ್ತು ಒಂದು ಎಕರೆಗೆ ರೂ. 1,000/– ಇರುತ್ತದೆ.

ಲೇಸರ್ ಲೆವಲ್ಲಿಂಗ್ ತಂತ್ರಜ್ಞಾನದಿಂದ ಭತ್ತದಲ್ಲಿ ನೀರಿನ ಉತ್ಪಾದಕತೆಯನ್ನು ಹೆಚ್ಚಿಸುವ ವಿಧಾನ

ಕೂರಿಗೆ ಭತ್ತದ ಬೇಸಾಯದಲ್ಲಿ, ಭೂಮಿ ಸಮತಟ್ಟು ಮಾಡುವ ಸಂದರ್ಭದಲ್ಲಿ, ಸಾಂಪ್ರದಾಯಕವಾಗಿ ಟ್ರ್ಯಾಕ್ಟರ್ ಚಾಲಿತ ಬಕೆಟ್ ಕುಂಟೆ ಬಳಕೆಯ ಬದಲಾಗಿ "ಲೇಸರ್ ಮಾರ್ಗದರ್ಶಿತ್ವದ ಲೆವಲ್ಲಿಂಗ್ ಉಪಕರಣ ಉಪಯೋಗಿಸುವುದರಿಂದ ಶೇ. 6 ರಷ್ಟು ನೀರನ್ನು ಉಳಿತಾಯ ಮಾಡಬಹುದು.

ಟ್ರ್ಯಾಕ್ಟರ್ ಚಾಲಿತ ಚಕ್ರಾಧಾರಿತ ಹುಲ್ಲು ಕೇಂದ್ರಿಕರಿಸುವ ಯಂತ್ರ

ಚಕ್ರಾಧಾರಿತ ಹಲ್ಲು ಬಾಚಿ (Wheel Rake) ಒಂದು ಯಾಂತ್ರಿಕ ಸಾಧನವಾಗಿದ್ದು. ಅದನ್ನು ಟ್ರ್ಯಾಕ್ಟರ್‌ನ ಸಹಾಯದಿಂದ ಚಲಿಸಲ್ಪಡುತ್ತದೆ. ಇದರ ಕ್ಷೇತ್ರ ಸಾಮರ್ಥ್ಯವು ಸುಮಾರು 1.29 ಹೆಕ್ಟೆರ್ ಪ್ರತಿ ಗಂಟೆಗೆ ಆಗಿದೆ. ಮೊದಲು ಈ ಯಂತ್ರವನ್ನು ಉಪಯೋಗಿಸಿ ನಂತರ ಪೆಂಡಿಕಾರಕ (Baler) ಯಂತ್ರವನ್ನು ಉಪಯೋಗಿಸುವದರಿಂದ ಹುಲ್ಲಿನ ಪೆಂಡಿಗಳ ಉತ್ಪಾದನೆ, ಸುಮಾರು ಎರಡುವರೆ ಪಟ್ಟರಷ್ಟು ಹೆಚ್ಚಿಗೆ ಪಡೆಯಬಹುದಾಗಿದೆ.

ಕೃಷಿಯಲ್ಲಿ ರಸಾಯನಿಕ ಸಿಂಪರಣೆಗಾಗಿ ಡ್ರೋನ್ ಬಳಕೆ:

ಡ್ರೋನ್ ಚಾಲಿತ ಸಿಂಪರಣಾ ಯಂತ್ರವು 20 ಲೀಟರ್ ಸಿಂಪರಣಾ ದ್ರಾವಣ ಸಾಮರ್ಥ್ಯ ಹೊಂದಿದ್ದು, ಭತ್ತ, ಶೇಂಗಾ ಹಾಗೂ ಇನ್ನಿತರ ಬೆಳೆಗಳಿಗೆ ಸಿಂಪರಣೆ ಮಾಡಬಹುದು. ಈ ಯಂತ್ರವು ಪ್ರತಿ ಗಂಟೆಗೆ ಸುಮಾರು 2.0 ರಿಂದ 2.50 ಹೆಕ್ಟೇರ್ ಪ್ರದೇಶದಲ್ಲಿ ಸಿಂಪಡಿಸುವ ಸಾಮರ್ಥ್ಯವನ್ನು ಹೊಂದಿರುತ್ತದೆ. ಈ ಸಿಂಪರಣಾ ಯಂತ್ರವನ್ನು ಉಪಯೋಗಿಸಲು ಸರ್ಕಾರದ ನಿಯಮಾವಳಿಗಳನ್ನು ಪಾಲಿಸಬೇಕಾಗುತ್ತದೆ.

3.4. ರಾಯಚೂರು ಕೃಷಿ ವಿಶ್ವವಿದ್ಯಾಲಯವು ಅಭಿವೃದ್ಧಿಪಡಿಸಿ ಬಿಡುಗಡೆ ಮಾಡಿದ ಹೊಸ ತಂತ್ರಜ್ಞಾನಗಳು ಮತ್ತು ಬಿಡುಗಡೆ ಮಾಡಿದ ಹೊಸ ತಳಿಗಳು

3.4.1 ಅಭಿವೃದ್ಧಿಪಡಿಸಿ ಬಿಡುಗಡೆ ಮಾಡಿದ ಹೊಸ ತಂತ್ರಜ್ಞಾನಗಳು ಮತ್ತು ಬಿಡುಗಡೆ ಮಾಡಿದ ಹೊಸ ತಳಿಗಳು

1) ಭತ್ತ: ಆರ್‌ಪಿಬಯೋ–226

ಈ ಭತ್ತದ ತಳಿಯು ಬ್ಯಾಕ್ಟೀರಿಯಾ ಅಂಗಮಾರಿ ರೋಗಕ್ಕೆ ನಿರೋಧಕ ಶಕ್ತಿಯನ್ನು ಹೊಂದಿದ್ದು, ಈ ತಳಿಯು 140 ರಿಂದ 145 ದಿನಗಳಲ್ಲಿ ಕಟಾವಿಗೆ ಬರುತ್ತದೆ ಮತ್ತು ಕಾಳಿನ ಗುಣಮಟ್ಟ ಮತ್ತು ಅಡಿಗೆ ಗುಣಮಟ್ಟ ಬಿಪಿಟಿ–5204 ನಂತೆಯೇ ಇರುತ್ತದೆ. ಈ ತಳಿಯು ಶೇ.6.7 ರಷ್ಟು ಹೆಚ್ಚಿನ ಇಳುವರಿ ಕೊಡುತ್ತದೆ (ವಲಯ–2 ರಲ್ಲಿ) ಮತ್ತು ಶೇ. 6.5 % ಹೆಚ್ಚಿನ ಇಳುವರಿ ವಲಯ–3 ರಲ್ಲಿ ಬಿಪಿಟಿ–5204 ಗಿಂತ ಹೆಚ್ಚು ಇರುತ್ತದೆ. ಈ ತಳಿಯನ್ನು 2 & 3 ವಲಯಗಳಿಗೆ ಶಿಫಾರಸ್ಸು ಮಾಡಲಾಗಿದೆ. ಈ ತಳಿಯ ಇಳುವರಿ ಸಾಮರ್ಥ್ಯ ಪ್ರತಿ ಎಕರೆಗೆ 25 ರಿಂದ 30 ಕ್ವಿಂಟಾಲ್.

2) ಸಜ್ಜೆ: ಎಮ್‌ಬಿಪಿ–2

ಈ ಸಜ್ಜೆಯ ತಳಿಯನ್ನು ಐ.ಪಿ–21207 ಯಿಂದ ಅಭಿವೃದ್ಧಿ ಪಡಿಸಲಾಗಿದೆ. ಈ ತಳಿಯು ಹೆಚ್ಚಿನ ಕಾಳಿನ ಇಳುವರಿ ಮತ್ತು ಮೇವಿನ ಇಳುವರಿ ಕೊಡುತ್ತದೆ. ಇದರ ತೆನೆಯು ಉದ್ದವಾಗಿದ್ದು, ಹಳದಿ ಬಣ್ಣದ ಕಾಳುಗಳನ್ನು ಹೊಂದಿರುತ್ತದೆ ಮತ್ತು ರೊಟ್ಟಿ ಮಾಡಲು ಹೆಚ್ಚಿನ ಗುಣಮಟ್ಟದ್ದಾಗಿದೆ. ಈ ತಳಿಯನ್ನು 2 & 3 ವಲಯಗಳಿಗೆ ಶಿಫಾರಸ್ಸು ಮಾಡಲಾಗಿದೆ. ಪ್ರತಿ ಎಕರೆಗೆ ಈ ತಳಿಯ ಇಳುವರಿ ಸಾಮರ್ಥ್ಯ 5 ರಿಂದ 6 ಕ್ವಿಂಟಾಲ್.

3) ಹತ್ತಿ: ಬಿಡಿಜಿಹೆಚ್‌ಹೆಚ್–697

ಇದೊಂದು ನೂತನ ಹಿರ್ಸುಟಮ್ ಜಾತಿಯ ಸಂಕರಣ ತಳಿಯಾಗಿದ್ದು ಎಸ್‌ಸಿಎಸ್‌ಪಿಲ್–01 ಮತ್ತು ಎಸ್‌ಸಿಎಸ್‌ಪಿಲ್–07 ತಳಿಗಳಿಂದ ಅಭಿವೃದ್ಧಿ ಪಡಿಸಲಾಗಿದೆ. ಈ ಸಂಕರಣ ತಳಿಯು ಬಹು ಸ್ಥಳೀಯ ತಾಕುಗಳಲ್ಲಿ ಶೇ.8.62 ರಷ್ಟು ಮತ್ತು ಕ್ಷೇತ್ರ ತಾಕುಗಳಲ್ಲಿ ಶೇ.11.47 ರಷ್ಟು ಹೆಚ್ಚಿನ ಇಳುವರಿ ನೀಡಿರುತ್ತದೆ. ಈ ಸುಧಾರಿತ ಸಂಕರಣ ತಳಿಯು ಪ್ರತಿ ಕಾಯಿಯ ಅರಳೆ ತೂಕ 5 ರಿಂದ 5.1 ಗ್ರಾಂ ಅರಳೆ ಮತ್ತು ಬೀಜದ ಅನುಪಾತ ಶೇ.34.5 ರಿಂದ 36.0 ರಷ್ಟು ಇರುತ್ತದೆ. ಈ ತಳಿಯ ಅರಳೆ ಸಾಮರ್ಥ್ಯ 22 ರಿಂದ 23 ಗ್ರಾಂ/ಟೆಕ್ಸ್ ನಷ್ಟು ಇರುತ್ತದೆ. ಈ ತಳಿಯು ಹಸಿರು ಜಿಗಿ ಹುಳುವಿನ ಬಾಧೆಗೆ ನಿರೋಧಕತೆ ಹೊಂದಿರುತ್ತದೆ. ಈ ತಳಿಯನ್ನು 2 & 3 ವಲಯಗಳಿಗೆ ಶಿಫಾರಸ್ಸು ಮಾಡಲಾಗಿದೆ. ಈ ತಳಿಯ ಇಳುವರಿ ಸಾಮರ್ಥ್ಯ ಪ್ರತಿ ಎಕರೆಗೆ 8 ರಿಂದ 10 ಕ್ವಿಂಟಾಲ್.

3.4.2 ಬೇಸಾಯ ಶಾಸ್ತ್ರ ವಿಭಾಗದಲ್ಲಿ ಅಭಿವೃದ್ಧಿಪಡಿಸಿದ ಹೊಸ ತಂತ್ರಜ್ಞಾನಗಳು

ಬೆಳೆ ಉತ್ಪಾದನೆ

ಬೇಸಾಯಶಾಸ್ತ್ರ

1. **ನಾಟಿ ಭತ್ತದಲ್ಲಿ ತೇವಗೊಳಿಸುವಿಕೆ ಮತ್ತು ಒಣಗಿಸುವ ಪರ್ಯಾಯ ನೀರು ನಿರ್ವಹಣೆ ಪದ್ಧತಿ:** ಈ ತಂತ್ರಜ್ಞಾನಕ್ಕೆ ಸೂಕ್ತವಾದ 30 ಸೆಂ.ಮೀ ಉದ್ದ ಮತ್ತು 20 ಸೆಂ.ಮೀ ವ್ಯಾಸದ ಪಿ.ವಿ.ಸಿ. ಪೈಪನ್ನು ತೆಗೆದುಕೊಂಡು ಕೆಳಗಿನ 15 ಸೆಂ.ಮೀ ಭಾಗದಲ್ಲಿ ಸುತ್ತಲೂ ಚಿಕ್ಕ ರಂಧ್ರಗಳನ್ನು ಮಾಡಬೇಕು. ಭತ್ತವನ್ನು ನಾಟಿ ಮಾಡಿದ 10 ದಿನಗಳ ನಂತರ ಗದ್ದೆಯ ಪ್ರಾರಂಭದಲ್ಲಿ ಈ ಪೈಪನ್ನು (ರಂಧ್ರಗಳಿರುವ ಭಾಗವನ್ನು) ಕೆಸರು ಮಣ್ಣಿನಲ್ಲಿ ಸೇರಿಸಿ ಪೈಪಿನ ಒಳಗಿನ ಮಣ್ಣನ್ನು ಕೈಯಿಂದ ತೆಗೆದು ಹೊರ ಹಾಕಬೇಕು. ಗದ್ದೆಗೆ ನೀರನ್ನು ಹರಿಸಿದಾಗ ನೀರು ರಂಧ್ರಗಳ ಮೂಲಕ ಪೈಪಿನಲ್ಲಿ ಹೊಕ್ಕು ನೀರಿನ ಮಟ್ಟವನ್ನು ಕಾಪಾಡುತ್ತದೆ. ಪ್ರತಿ ಬಾರಿ ಗದ್ದೆಗೆ 5 ಸೆಂ.ಮೀ ನಿಲ್ಲುವವರೆಗೂ ನೀರನ್ನು ಬಿಡಬೇಕು. ಪೈಪಿನಲ್ಲಿ ನೀರು ಭೂಮಿ ಮಟ್ಟದಿಂದ 15 ಸೆಂ.ಮೀ ಕೆಳಗೆ ಹೋದಾಗ ಮತ್ತೊಮ್ಮೆ 5 ಸೆಂ.ಮೀ ನೀರು ನಿಲ್ಲಿಸಬೇಕು, ಈ ಆವೃತಿಯನ್ನು ಕುಸುಮ ಪ್ರಾರಂಭವಾಗುವ ಹಂತದವರೆಗೆ ಮುಂದುವರಿಸಿ,

ಇದರಿಂದ ನೀರಿನಲ್ಲಿ ಶೇ. 25 ರಷ್ಟು ಉಳಿತಾಯವಾಗುವುದು. ನಂತರ ದಿನಗಳಲ್ಲಿ ಕಟಾವು ಮಾಡುವ 10 ದಿನಗಳ ಪೂರ್ವದವರೆಗೂ ಗದ್ದೆಯಲ್ಲಿ 3 ಸೆಂ.ಮೀ ನೀರು ನಿಲ್ಲಿಸಬೇಕು. ಈ ತಂತ್ರಜ್ಞಾನವನ್ನು 2 & 3 ವಲಯಗಳಿಗೆ ಶಿಫಾರಸ್ಸು ಮಾಡಲಾಗಿದೆ.

2. **ಭತ್ತದಲ್ಲಿ ಜೈವಿಕ ಗೊಬ್ಬರಗಳ ಬಳಕೆ:** ಪ್ರತಿ ಎಕರೆಗೆ ಶಿಫಾರಸ್ಸು ಮಾಡಿದ ಶೇ. 75 ರಷ್ಟು ರಸಗೊಬ್ಬರಗಳ ಜೊತೆಗೆ 1.4 ಕಿ.ಗ್ರಾಂ ಅಜೋಸ್ಪಿರಿಲ್ಲಂ ಮತ್ತು 1.4 ಕಿ.ಗ್ರಾಂ ರಂಜಕ ಕರಗಿಸುವ ಜೀವಾಣು ಗೊಬ್ಬರವನ್ನು 20 ಕಿ.ಗ್ರಾಂ ತಿಪ್ಪೇಗೊಬ್ಬರದಲ್ಲಿ ಕಲಿಸಿ ನಾಟಿ ಸಮಯದಲ್ಲಿ ಭೂಮಿಗೆ ಸೇರಿಸುವದರಿಂದ ರಸಗೊಬ್ಬರಗಳ ಪ್ರಮಾಣದಲ್ಲಿ ಶೇ 25 ರಷ್ಟು ಉಳಿತಾಯವಾಗುವದು. ಈ ತಂತ್ರಜ್ಞಾನವನ್ನು 2 & 3 ವಲಯಗಳಿಗೆ ಶಿಫಾರಸ್ಸು ಮಾಡಲಾಗಿದೆ.
3. **ಸೂರ್ಯಕಾಂತಿಯಲ್ಲಿ ಪರಿಷ್ಕೃತ ಬಿತ್ತನೆ ಮಾದರಿ:** ಪರಿಷ್ಕೃತ ಬಿತ್ತನೆ ಮಾದರಿಯಲ್ಲಿ 60 ಸೆಂ.ಮೀ. ಅಂತರದ ಸಾಲುಗಳಲ್ಲಿ ಬಿತ್ತುವುದು ಅಥವಾ ಬೋದು ಮತ್ತು ಸಾಲುಗಳನ್ನು ಮಾಡಿ 30 ಸೆಂ.ಮೀ. ಅಂತರದಲ್ಲಿ ಒಂದು ಗುಣಿಯಲ್ಲಿ 2–3 ಬೀಜಗಳನ್ನು ಕೈಯಿಂದ ಊರುವುದು. ಈ ತಂತ್ರಜ್ಞಾನವನ್ನು 2 & 3 ವಲಯಗಳಿಗೆ ಶಿಫಾರಸ್ಸು ಮಾಡಲಾಗಿದೆ.
4. **ತೊಗರಿಯಲ್ಲಿ ಹನಿ ನೀರಾವರಿ ಮುಖಾಂತರ ರಸಾವರಿ:** ತೊಗರಿಯಲ್ಲಿ ಶಿಫಾರಸ್ಸು ಮಾಡಿದ ರಸಗೊಬ್ಬರವನ್ನು 5 ಸಮ ಕಂತುಗಳಲ್ಲಿ (ಪ್ರತಿ ಕಂತಿಗೆ 16.4 ಕೆ.ಜಿ. ಯಂತೆ ಮಾನೋ ಅಮೋನೀಯಂ ಫಾಸ್ಫೇಟ್ ಮತ್ತು 6.6 ಕೆ.ಜಿ. ಯಂತೆ ಯೂರಿಯಾ) ನಾಟಿ ಮಾಡಿದ 30 ದಿನಗಳ ನಂತರ, ಪ್ರತಿ 15 ದಿನಗಳ ಅಂತರದಲ್ಲಿ (30, 45, 60, 75 ಮತ್ತು 90 ದಿವಸಗಳು) ರಸಾವರಿ ಮಾಡುವುದರಿಂದ ಗಿಡಗಳ ಬೆಳವಣಿಗೆ ಮತ್ತು ಇಳುವರಿ ಹೆಚ್ಚುತ್ತದೆ.
5. **ಮೆಕ್ಕೆಜೋಳೆದಲ್ಲಿ ಕಳೆ ನಿರ್ವಹಣೆ:** ಎಕರೆಗೆ 200 ಗ್ರಾಂ ಅಟ್ರಾಜಿನ್ 50% ಡಬ್ಲ್ಯು ಪಿ. ಬಿತ್ತನೆಯಾದ ದಿನ ಅಥವಾ ಮರುದಿನ ಮಣ್ಣಿನ ಮೇಲೆ ಸಿಂಪಡಿಸಬೇಕು ಹಾಗೂ ಟೆಂಬೊಟ್ರಿಯೋನ್ 34% ಡಬ್ಲ್ಯು / ಡಬ್ಲ್ಯು ಎಸ್.ಸಿ 48 ಗ್ರಾಂ (ಕಳೆಗಳು 3–5 ಎಲೆಗಳ ಹಂತದಲ್ಲಿ) ಬಿತ್ತನೆ ಮಾಡಿದ 25 ರಿಂದ 30 ದಿನಗಳಲ್ಲಿ ಸಿಂಪಡಿಸಬೇಕು. ಪ್ರತಿ ಲೀಟರ್ ಕಳೆನಾಶಕ ಸಿಂಪರಣಾ ದ್ರಾವಣಕ್ಕೆ 5 ಮಿ.ಲೀ ಸರ್ಫಕ್ಟಾಂಟ್ ಬೆರಿಸಿ ಕಳೆಗಳಿಗೆ ಸಿಂಪಡಿಸಬೇಕು. ಜೇಕು ಜಾತಿಯ ಕಳೆಗಳು ಹೆಚ್ಚಾಗಿ ಕಂಡು ಬಂದಲ್ಲಿ ಹ್ಯಾಲೋಸಲ್ಫುರಾನ್ ಮೀಥ್ಯಲ್ 75% ಡಬ್ಲ್ಯು.ಜಿ. 27 ಗ್ರಾಂ /ಎಕರೆಗೆ + 500 ಗ್ರಾಂ ಅಟ್ರಾಜೆನ್ 50% ಡಬ್ಲ್ಯು.ಪಿ. ಸಂಯುಕ್ತ ಕಳೆನಾಶಕವನ್ನು ಪ್ರತಿ ಎಕರೆಗೆ ಬಿತ್ತನೆ ಮಾಡಿದ 15 ರಿಂದ 20 ದಿನಗಳ ನಂತರ (3–5 ಎಲೆ ಹಂತದ ಜೇಕುವಿನ ಮೇಲೆ) ಸಿಂಪಡಿಸಬೇಕು. ಈ ತಂತ್ರಜ್ಞಾನವನ್ನು 1, 2 & 3 ವಲಯಗಳಿಗೆ ಶಿಫಾರಸ್ಸು ಮಾಡಲಾಗಿದೆ.
6. **ಉದ್ದಿನಲ್ಲಿ ಕಳೆ ನಿರ್ವಹಣೆ:** ಪ್ರತಿ ಎಕರೆಗೆ 30 ಗ್ರಾಂ ಇಮೊಜೆತಾಪಿರ್ 35% + ಇಮಾಜಾಮೊಕ್ಸ್ 35% ಡಬ್ಲ್ಯು.ಜಿ. ಸಂಯುಕ್ತ ಕಳೆನಾಶಕವನ್ನು ಬಿತ್ತಿದ 20 ದಿವಸಗಳ ನಂತರ (ಕಳೆಗಳು 2–5 ಎಲೆಗಳ ಹಂತದಲ್ಲಿರುವಾಗ) ಸಿಂಪಡಿಸಬೇಕು. ಪ್ರತಿ ಲೀಟರ್ ಕಳೆನಾಶಕ ಸಿಂಪರಣಾ ದ್ರಾವಣಕ್ಕೆ 2 ಮಿ.ಲೀ. ಎಮ್.ಎಸ್.ಓ ಎಂಬ ಅಂಟು ದ್ರಾವಣವನ್ನು (ಅಡ್ಜುವೆಂಟ್ ಸಹಾಯಕ) ಬೆರಿಸಿ ಬೆಳೆಯಲ್ಲಿರುವ ಕಳೆಗಳ ಮೇಲೆ ಸಿಂಪಡಿಸಬೇಕು. ಈ ತಂತ್ರಜ್ಞಾನವನ್ನು 2 & 3 ವಲಯಗಳಿಗೆ ಶಿಫಾರಸ್ಸು ಮಾಡಲಾಗಿದೆ.
7. **ಸೋಯಾ ಅವರೆಯಲ್ಲಿ ಕಳೆನಿರ್ವಹಣೆ:** ಪೆಂಡಿಮಿಥಲಿನ್ 30% + ಇಮಾಜೆತಾಪಿರ್ 2% @400 ಗ್ರಾಂ ಸಂಯುಕ್ತ ಉದಯಪೂರ್ವ ಕಳೆನಾಶಕವನ್ನು 300 ಲೀಟರ್ ನೀರಿನಲ್ಲಿ ಬೆರಿಸಿ ಒಂದು ಎಕರೆ ಪ್ರದೇಶದ ಮಣ್ಣಿನ ಮೇಲೆ ಸಿಂಪಡಿಸಬೇಕು. ಈ ತಂತ್ರಜ್ಞಾನವನ್ನು 1, 2 & 3 ವಲಯಗಳಿಗೆ ಶಿಫಾರಸ್ಸು ಮಾಡಲಾಗಿದೆ.
8. **ಶೇಂಗಾದಲ್ಲಿ ಕಳೆ ನಿರ್ವಹಣೆ:** ಪ್ರತಿ ಎಕರೆಗೆ 30 ಗ್ರಾಂ ಇಮಾಜೆತಾಪಿರ್ 35% + ಇಮಾಜಾಮೊಕ್ಸ್ 35% ಡಬ್ಲ್ಯೂ.ಜಿ. ಸಂಯುಕ್ತ ಕಳೆನಾಶಕವನ್ನು ಬಿತ್ತಿದ 15 ದಿನಗಳ ನಂತರ (ಕಳೆಗಳು 2–3 ಎಲೆಗಳ ಹಂತದಲ್ಲಿರುವಾಗ) ಸಿಂಪಡಿಸಬೇಕು ಪ್ರತಿ ಲೀಟರ್ ಕಳೆನಾಶಕ ಸಿಂಪರಣಾ ದ್ರಾವಣಕ್ಕೆ 2 ಮಿ.ಲೀ ಎಮ್.ಎಸ್.ಓ. ಎಂಬ ಅಂಟು ದ್ರಾವಣವನ್ನು ಬೆರಿಸಿ ಕಳೆಗಳಿಗೆ ಸಿಂಪಡಿಸಬೇಕು. ನಂತರ ಬಿತ್ತಿದ 35–40 ದಿನಗಳ ನಂತರ ಒಂದು ಬಾರಿ ಎಡೆಕುಂಟೆ ಹೊಡೆಯುವುದು. ಈ ತಂತ್ರಜ್ಞಾನವನ್ನು 1, 2 & 3 ವಲಯಗಳಿಗೆ ಶಿಫಾರಸ್ಸು ಮಾಡಲಾಗಿದೆ.
9. **ಕೂರಿಗೆ ಭತ್ತದಲ್ಲಿ ಕಳೆನಿರ್ವಹಣೆ:** ಸಂಯುಕ್ತ ಉದಯಪೂರ್ವ ಕಳೆನಾಶಕವಾದ (ಪ್ರಿಟಿಲಾಕ್ಲೋರ್ 6 % + ಪೈರಾಜೋಸಲ್ಫೂರೂನ್ ಇಥೈಲ್ 0.15 % ಜಿ.ಆರ್) @ 4.0 ಕೆ.ಜಿ ಭತ್ತ ಬಿತ್ತಿದ ಮೂರು ದಿನಗಳ ಒಳಗೆ ಸಿಂಪಡಿಸುವುದರಿಂದ ಏಕದಳ ಮತ್ತು ದ್ವಿದಳ ಕಳೆಗಳನ್ನು ಹತೋಟಿ ಮಾಡಬಹುದು. ಈ ತಂತ್ರಜ್ಞಾನವನ್ನು 1, 2 & 3 ವಲಯಗಳಿಗೆ ಶಿಫಾರಸ್ಸು ಮಾಡಲಾಗಿದೆ.

10. **ಶೇಂಗಾದಲ್ಲಿ ಪೋಷಕಾಂಶಗಳ ನಿರ್ವಹಣೆ:** ಖುಷ್ಕಿ ಹಾಗೂ ನೀರಾವರಿ ಎರಡೂ ಬೆಳೆಗೆ ಪ್ರತಿ ಎಕರೆಗೆ 8 ಕಿ.ಗ್ರಾಂ ಮ್ಯಾಗ್ನೇಷಿಯಂ ಸಲ್ಫೇಟ್, 1 ಕಿ.ಗ್ರಾಂ ಬೋರಾನ್ ಮತ್ತು ಬೆಳೆ ಬಿತ್ತಿದ 45 ದಿನಗಳ ನಂತರ ಪೋಷಕಾಂಶಗಳ ಮಿಶ್ರಿತ ದ್ರಾವಣವನ್ನು 3 ಮಿ.ಲೀ ಪ್ರತಿ ಲೀಟರ್ ನೀರಿಗೆ ಬೆರೆಸಿ ಸಿಂಪಡಿಸುವುದು.
11. **ಕಡಲೆಯಲ್ಲಿ ಸತುವಿನ ಬಯೋಫೋರ್ಟಿಫಿಕೇಶನ್:** ಸತುವಿನ ಸಲ್ಫೇಟ್ ಶೇ. 0.5 ಮತ್ತು ಕಬ್ಬಿಣದ ಸಲ್ಫೇಟ್ ಶೇ. 0.1 ರ ಮಿಶ್ರಣವನ್ನು ಶೇ. 0.25 ರ ಸುಣ್ಣದ ತಿಳಿ ನೀರಿನ ಜೊತೆಗೆ ಹೂವಾಡುವ ಹಂತದಲ್ಲಿ ಎರಡು ಬಾರಿ ಸಿಂಪರಣೆ ಮಾಡುವುದರಿಂದ ಹೆಚ್ಚಿನ ಇಳುವರಿ ಪಡೆಯಬಹುದು (ಹತ್ತು ದಿನಗಳ ಅಂತರದಲ್ಲಿ). ಈ ತಂತ್ರಜ್ಞಾನವನ್ನು 1, 2 & 3 ವಲಯಗಳಿಗೆ ಶಿಫಾರಸ್ಸು ಮಾಡಲಾಗಿದೆ.
12. **ಹಿಂಗಾರು ಜೋಳದಲ್ಲಿ ಗಂಧಕದ ನಿರ್ವಹಣೆ:** ಹಿಂಗಾರು ಜೋಳದಲ್ಲಿ, ಪ್ರತಿ ಎಕರೆಗೆ 8 ಕಿ.ಗ್ರಾಂ. ಗಂಧಕವನ್ನು ಮಣ್ಣಿಗೆ ಸೇರಿಸುವುದರಿಂದ ಹೆಚ್ಚಿನ ಇಳುವರಿ ಪಡೆಯಬಹುದು. ಈ ತಂತ್ರಜ್ಞಾನವನ್ನು 2 & 3 ವಲಯಗಳಿಗೆ ಶಿಫಾರಸ್ಸು ಮಾಡಲಾಗಿದೆ.
13. **ಹಿಂಗಾರಿ ಜೋಳದಲ್ಲಿ ದ್ರವರೂಪದ ಜೈವಿಕ ಗೊಬ್ಬರಗಳ ಬಳಕೆ:** ದ್ರವರೂಪದ ಅಝೋಸ್ಪಿರಲ್ಲಂ (4 ಮಿ.ಲೀ. / ಕಿ.ಗ್ರಾಂ ಬೀಜಕ್ಕೆ) ಬೀಜೋಪಚಾರ ಮಾಡುವುದರಿಂದ ಅಧಿಕ ಇಳುವರಿ ಪಡೆಯಬಹುದು. ಈ ತಂತ್ರಜ್ಞಾನವನ್ನು 2 & 3 ವಲಯಗಳಿಗೆ ಶಿಫಾರಸ್ಸು ಮಾಡಲಾಗಿದೆ.

ಬೆಳೆ ಸಂರಕ್ಷಣೆ

1. **ಕರಬೂಜದಲ್ಲಿ ಥ್ರಿಪ್ಸ್ ನುಶಿ ಹಾಗೂ ಎಲೆ ಸುರಂಗ ಕೀಟಗಳ ನಿರ್ವಹಣೆ:** ಕರಬೂಜ ಸಸಿಗಳನ್ನು ನಾಟಿ ಮಾಡಿದ ದಿನವೇ ರಕ್ಷಣಾ ಹೊದಿಕೆಯಿಂದ (ಪ್ರೊಟೆಕ್ಷನ್ ಕವರ್) ಮುಚ್ಚುವುದರಿಂದ 40 ದಿವಸಗಳವರೆಗೆ ಯಾವುದೇ ರಾಸಾಯನಿಕ ಕೀಟನಾಶಕಗಳನ್ನು ಬಳಸದೇ ಥ್ರಿಪ್ಸ್ ನುಸಿ ಮತ್ತು ಎಲೆ ಸುರಂಗ ಕೀಟಗಳನ್ನು ನಿರ್ವಹಣೆ ಮಾಡಬಹುದು ಹಾಗೂ ಅಧಿಕ ಇಳುವರಿ ಪಡೆಯಲು ಸಾಧ್ಯ. ಈ ತಂತ್ರಜ್ಞಾನವನ್ನು 1, 2 & 3 ವಲಯಗಳಿಗೆ ಶಿಫಾರಸ್ಸು ಮಾಡಲಾಗಿದೆ.
2. **ಭತ್ತದಲ್ಲಿ ಜಿಗಿ ಹುಳುಗಳ ನಿರ್ವಹಣೆ:** 0.5 ಮಿ. ಲೀ. ಟ್ರೈಫ್ಲ್ಯೂಮೆಝೋಪಿರಿಮ್ 10.6 ಎಸ್.ಸಿ. ಅಥವಾ 0.8 ಗ್ರಾಂ ಪೈಮೆಟ್ರೋಜಿನೇ ಡಬ್ಲ್ಯೂ.ಡಿ.ಜಿ. ಅನ್ನು ಒಂದು ಲೀಟರ ನೀರಿಗೆ ಬೆರೆಸಿ ಸಿಂಪರಣೆ ಮಾಡುವುದರಿಂದ ಭತ್ತದಲ್ಲಿ ಜಿಗಿ ಹುಳುಗಳ ನಿರ್ವಹಣೆ ಮಾಡಬಹುದು. ಈ ತಂತ್ರಜ್ಞಾನವನ್ನು 2 & 3 ವಲಯಗಳಿಗೆ ಶಿಫಾರಸ್ಸು ಮಾಡಲಾಗಿದೆ
3. **ಭತ್ತದಲ್ಲಿ ಕಂದು ಜಿಗಿಹುಳುವಿನ ನಿರ್ವಹಣೆ:** 0.5 ಮಿ.ಲಿ ಬುಪ್ರೋಫೆಜಿನ್ 70 ಡಿ. ಎಫ್1.0 ಲೀಟರ್ ನೀರಿನಲ್ಲಿ ಬೆರೆಸಿ ಪೈರಿನ ಬುಡದಲ್ಲಿ ಸಿಂಪರಣೆ ಮಾಡಬೇಕು. ನಾಟಿ ಮಾಡಿದ 30 ದಿವಸಗಳ ನಂತರ ಪ್ರತಿ ವಾರಕೊಮ್ಮೆ ಗಿಡಗಳ ಬುಡದಲ್ಲಿ ಈ ಕೀಟದ ಇರುವಿಕೆಯನ್ನೂ ಗಮನಿಸಬೇಕು. ಹೂ ಬಿಡುವ ಸಮಯದಿಂದ ಕಾಳು ಗಟ್ಟಿಯಾಗುವ ಹಂತದವರೆಗೆ ಸಸ್ಯ ಸಂರಕ್ಷಣಾ ಕ್ರಮ ಕೈಕೊಳ್ಳುವುದು ಅವಶ್ಯಕ. ಈ ತಂತ್ರಜ್ಞಾನವನ್ನು 2 & 3 ವಲಯಗಳಿಗೆ ಶಿಫಾರಸ್ಸು ಮಾಡಲಾಗಿದೆ.
4. **ಕಡಲೆಯಲ್ಲಿ ಹೆಲಿಕೊವರ್ಪಾ ಎನ್‌ಪಿಐ ಬಳಕೆಯಿಂದ ಕಾಯಿಕೊರಕದ ನಿರ್ವಹಣೆ:** ಕಾಯಿ ಕೊರೆಯುವ ಹುಳುವಿನ ಹತೋಟಿಗಾಗಿ ಬೆಳೆ ಶೇ. 50 ರಷ್ಟು ಹೂಬಿಟ್ಟಾಗ ಮತ್ತು ಕಾಯಿ ಬಲಿಯುವ ಹಂತದಲ್ಲಿದ್ದಾಗ ಬೆಳ್ಳೊಳ್ಳಿ ಮತ್ತು ಹಸಿ ಮೆಣಸಿನಕಾಯಿ ಕಷಾಯವನ್ನು 20 ಮಿ. ಲೀ. ಅಥವಾ ಹೆಲಿಕೋವರ್ಪಾ ಎನ್.ಪಿ.ವಿ (ಎನ್.ಬಿ.ಎ.ಐ.ಆರ್) 2.0 ಮಿ.ಲೀ. ಪ್ರತಿ ಲೀಟರ್ ನೀರಿನಲ್ಲಿ ಬೆರೆಸಿ ಸಿಂಪಡಿಸಬೇಕು. ಈ ತಂತ್ರಜ್ಞಾನವನ್ನು 2 & 3 ವಲಯಗಳಿಗೆ ಶಿಫಾರಸ್ಸು ಮಾಡಲಾಗಿದೆ.
5. **ಭತ್ತದಲ್ಲಿ ಕಾಂಡಕೊಳೆ ರೋಗದ ನಿರ್ವಹಣೆ:** ಪ್ರತಿ ಕಿ.ಗ್ರಾಂ. ಬೀಜಕ್ಕೆ 2.0 ಗ್ರಾಂ ಕಾರ್ಬನ್‌ಡೈಜಿಯಂ 50 ಡಬ್ಲೂ.ಪಿ. ಶಿಲೀಂದ್ರನಾಶಕದಿಂದ ಬೀಜೋಪಚಾರ ಮಾಡಬೇಕು. ನಂತರ ನಾಟಿಗೆ ಮುಂಚೆ ಪ್ರತಿ ಲೀಟರ್ ನೀರಿಗೆ 2.0 ಗ್ರಾಂ. ಕಾರ್ಬನ್‌ಡೈಜಿಯಂ. 50 ಡಬ್ಲೂ.ಪಿ. ಶಿಲೀಂದ್ರನಾಶಕ ಬೆರೆಸಿದ ದ್ರಾವಣದಲ್ಲಿ ಬೇರುಗಳನ್ನು 20 ನಿಮಿಷ ಅದ್ದಬೇಕು. ಗದ್ದೆಯಲ್ಲಿ ರೋಗದ ಲಕ್ಷಣಗಳು ಕಾಣಿಸಿದರೆ ಪ್ರತಿ ಲೀಟರ್ ನೀರಿಗೆ 0.75 ಗ್ರಾಂ. ಥಿಫ್ಲೂಜಮೈಡ್ 24 ಎಸ್.ಸಿ. ಶಿಲೀಂಧ್ರನಾಶಕವನ್ನು ಸಿಂಪಡಿಸಬೇಕು. ಈ ತಂತ್ರಜ್ಞಾನವನ್ನು 2 & 3 ವಲಯಗಳಿಗೆ ಶಿಫಾರಸ್ಸು ಮಾಡಲಾಗಿದೆ.
6. **ಕಡಲೆಯಲ್ಲಿ ಸೊರಗುರೋಗ ಮತ್ತು ಒಣಬೇರು ಕೊಳೆರೋಗ ನಿರ್ವಹಣೆ:** ಪ್ರತಿ ಕಿ. ಗ್ರಾಂ. ಬೀಜಕ್ಕೆ 2 ಗ್ರಾಂ ಕ್ಯಾಪ್ಟಾನ್ 80 ಡಬ್ಲೂ.ಪಿ. ಅಥವಾ ಥೈರಾಮ್ 75 ಡಬ್ಲೂ.ಪಿ. ಅಥವಾ ಮೆಂಕೋಜೆಬ್ 75 ಡಬ್ಲೂ.ಪಿ. ಅಥವಾ 4 ಮಿ. ಲೀ. ಥಯೋಫಿನೆಟ್ ಮಿಥೈಲ್ + ಪೈರಾಕ್ಲೊಸ್ಟ್ರೋಬಿನ್ ಶಿಲೀಂಧ್ರನಾಶಕವನ್ನು 10 ಮಿ.ಲೀ. ನೀರಿಗೆ ಬೆರಸಿ ಪ್ರತಿ ಕಿ. ಗ್ರಾಂ ಬೀಜಕ್ಕೆ ಬೀಜೋಪಚಾರ ಮಾಡಬೇಕು. ಈ ತಂತ್ರಜ್ಞಾನವನ್ನು 2 & 3 ವಲಯಗಳಿಗೆ ಶಿಫಾರಸ್ಸು ಮಾಡಲಾಗಿದೆ.

7. **ಭತ್ತದಲ್ಲಿ ಕಾಡಿಗೆ ರೋಗ ನಿರ್ವಹಣೆ:** ರೋಗರಹಿತ ಬೀಜಗಳನ್ನು ಬಿತ್ತನೆಗೆ ಉಪಯೋಗಿಸಬೇಕು ಬೀಜವನ್ನು ಬಿತ್ತುವುದಕ್ಕೆ ಮೊದಲು 52^0 ಸೆಂ. ಉಷ್ಣಾಂಶವಿರುವ ಬಿಸಿ ನೀರಿನಲ್ಲಿ 10 ನಿಮಿಷ ನೆನೆಸಿ ನಂತರ ಒಣಗಿಸಿ ಬಿತ್ತಬೇಕು. ರೋಗ ಭಾದಿತ ತೆನೆಗಳನ್ನು ತೆಗೆದು ಸುಟ್ಟು ಹಾಕಬೇಕು. ಬೆಳೆ ಬಿತ್ತಿದ 40 ಮತ್ತು 60 ದಿನಗಳ ನಂತರ 0.4 ಗ್ರಾಂ ಟ್ರೈಪ್ಲಾಕ್ಸಿಸ್ಟ್ರೋಬಿನ್ + ಟೆಬ್ಯೂಕೋನಜೋಲ್ ಸಿಂಪಡಿಸಬೇಕು. ಈ ತಂತ್ರಜ್ಞಾನವನ್ನು 2 & 3 ವಲಯಗಳಿಗೆ ಶಿಫಾರಸ್ಸು ಮಾಡಲಾಗಿದೆ.
8. **ಅರಿಶಿಣದಲ್ಲಿ ಎಲೆ ಚುಕ್ಕೆ ರೋಗದ ನಿರ್ವಹಣೆ:** ರೋಗಗಳ ಬಾಧೆ ಕಂಡು ಬಂದ ನಂತರ 2.0 ಗ್ರಾಂ ಮ್ಯಾಂಕೋಜೆಬ್ ಅಥವಾ 1.0 ಮಿ. ಲೀ. ಹೆಕ್ಸಾಕೊನಜೋಲ್ ಪ್ರತಿ ಲೀಟರ್ ನೀರಿನಲ್ಲಿ ಕರಗಿಸಿ 3 ಸಿಂಪರಣೆಯನ್ನು 15 ದಿನಗಳ ಅಂತರದಲ್ಲಿ ಬೆಳೆಗೆ ಸಿಂಪಡಿಸಬೇಕು. ಈ ತಂತ್ರಜ್ಞಾನವನ್ನು 1 & 2 ವಲಯಗಳಿಗೆ ಶಿಫಾರಸ್ಸು ಮಾಡಲಾಗಿದೆ.

ಇತರೆ ತಾಂತ್ರಿಕತೆಗಳು

1. **ರಾಯಚೂರು ಜಿಲ್ಲೆಯ ತುಂಗಭದ್ರಾ ಅಚ್ಚುಕಟ್ಟು ಪ್ರದೇಶದಲ್ಲಿನ ಸವಳು ಭೂಮಿಯ ವಿಶ್ಲೇಷಣೆ ಮತ್ತು ನಕ್ಷೆ ಮಾಡುವುದು:** ಸಿಂಧನೂರು ತಾಲೂಕಿನಲ್ಲಿ ಸವಳು (22.0) ಕ್ಷಾರ (14.6), ಮಾನ್ವಿಯಲ್ಲಿ ಸವಳು (8.00) ಕ್ಷಾರ (18.0) ಹಾಗೂ ರಾಯಚೂರು ಮತ್ತು ದೇವದುರ್ಗ ತಾಲೂಕಿನಲ್ಲಿ ಸವಳು (6.25) ಮತ್ತು ಕ್ಷಾರ (12.5)ದ ಅಂಶವು ಮಣ್ಣಿನ ವಿಶ್ಲೇಷಣೆಯಿಂದ ಕಂಡುಬಂದಿದೆ.
2. **ರಾಯಚೂರು, ಯಾದಗಿರಿ ಮತ್ತು ಕಲಬುರಗಿ ಜಿಲ್ಲೆಗಳ ಆಯ್ದ ಮಳೆಯಾಶ್ರಿತ ಜಲಾನಯನ ಪ್ರದೇಶಗಳಲ್ಲಿ ಸತು ಮತ್ತು ಕಬ್ಬಿಣದ ಸ್ಥಿತಿ ಮತ್ತು ಸುಧಾರಣೆ:** ಕಬ್ಬಿಣದ ಕೊರತೆ ಇರುವ ರಾಯಚೂರು, ಯಾದಗಿರಿ ಮತ್ತು ಕಲಬುರಗಿ ಜಿಲ್ಲೆಗಳಲ್ಲಿ ಮಳೆಯಾಶ್ರಿತದಲ್ಲಿ ಬೆಳೆಯುವ ಎಲ್ಲ ಬೆಳೆಗಳಿಗೆ ಪ್ರತಿ ಎಕೆರೆಗೆ 4 ಕಿ.ಗ್ರಾಂ ಮತ್ತು ನೀರಾವರಿಯಲ್ಲಿ ಬೆಳೆಯುವ ಬೆಳೆಗಳಿಗೆ ಪ್ರತಿ ಎಕೆರೆಗೆ 10 ಕಿ.ಗ್ರಾಂ ನಂತೆ ಕಬ್ಬಿಣದ ಸಲ್ಫೇಟನ್ನು 1:1 ಪ್ರಮಾಣದಲ್ಲಿ ಎರೆಹುಳು ಗೊಬ್ಬರ ಅಥವಾ ಚೆನ್ನಾಗಿ ಕೊಳೆತ ಸಾವಯವ ಗೊಬ್ಬರದೊಂದಿಗೆ ಮಿಶ್ರಣ ಮಾಡಿ, 15 ದಿನ ಕೂಡಿಟ್ಟು, ನಂತರ ನೆರಳಿನಲ್ಲಿ ಒಣಗಿಸಿ ಬಿತ್ತನೆ ಸಮಯದಲ್ಲಿ ಶಿಫಾರಸ್ಸು ಮಾಡಿದ ರಾಸಾಯನಿಕ ಗೊಬ್ಬರಗಳ ಜೊತೆಗೆ ಪೂರೈಸುವುದು ಸೂಕ್ತ.
3. **ಕಡಲೆ ತಳಿ ಜಿಬಿಎಮ್–2 ಸೂಕ್ತವಾದ ಜರಡಿ ಉಪಯೋಗ:** ಕಡಲೆ/ಜಿ.ಬಿ.ಎಮ್–2 ಬೀಜ ಸಂಸ್ಕರಣೆ ಮಾಡುವಾಗ 5.00 ಮಿ.ಮಿ. ದುಂಡನೆ ಆಕಾರದ ಜರಡಿಯನ್ನು ಉಪಯೋಗಿಸುವುದರಿಂದ ಹೆಚ್ಚಿನ ಪ್ರಮಾಣದ ಗುಣಮಟ್ಟದ ಬೀಜವನ್ನು ಪಡೆಯಬಹುದು.
4. **ಸೂಪರ್ ಕ್ರಿಟಿಕಲ್ ಇಂಗಾಲದ ಡೈ ಆಕ್ಸೈಡ್ ಬಳಸಿ ಸ್ಪಿರುಲಿನಾ ಪಾಚಿಯಿಂದ ಫೈಕೊಸೈಯಾನಿನ್ (ನೀಲಿ ವರ್ಣ) ದ್ರವ್ಯವನ್ನು ಬೇರ್ಪಡಿಸುವ ತಂತ್ರಜ್ಞಾನ:** ಆಹಾರ ಪದಾರ್ಥಗಳಲ್ಲಿ ಬಳಸುವ ಕೃತಕ ನೀಲಿವರ್ಣದ ಬದಲಾಗಿ, ಸ್ಪಿರುಲಿನಾ ಪಾಚಿಯಲ್ಲಿರುವ ನೈಸರ್ಗಿಕ ನೀಲಿ ವರ್ಣದ ಫೈಕೊಸೈಯಾನಿನನ್ನು ಆಹಾರ ಶ್ರೇಣಿಯ ವರ್ಣವನ್ನಾಗಿ ಉಪಯೋಗಿಸಬಹುದಾಗಿದೆ. ಸ್ಪಿರುಲಿನಾ ಮ್ಯಾಕ್ಸಿಮಾ ಪಾಚಿಯಿಂದ ಸೂಪರ್ ಕ್ರಿಟಿಕಲ್ ಇಂಗಾಲದ ಡೈ ಆಕ್ಸೈಡ್ ಬಳಸಿ ಬೇರ್ಪಡಿಸುವ ವಿಧಾನದಿಂದ ಹೆಚ್ಚಿನ ಪ್ರಮಾಣದ ಫೈಕೊಸೈಯಾನಿನ್ ದ್ರವ್ಯವನ್ನು ಪಡೆಯಬಹುದಾಗಿದೆ. ಫೈಕೊಸೈಯಾನಿನ್ ರೋಗ ನಿರೋಧಕ ಶಕ್ತಿ ಹೆಚ್ಚಿಸುವಲ್ಲಿ ಸಹಕಾರಿಯಾಗಿದ್ದು ಆಹಾರವನ್ನು ಕೆಡಿಸುವ ಸೂಕ್ಷ್ಮಾಣು ಜೀವಿಗಳಾದ ಇ–ಕೋಲಿ, ಸ್ಟ್ರೆಪ್ಟೋಕೊಕಸ್, ಸಾಲ್ಮೊನೆಲ್ಲಾ ಹತ್ತಿಕ್ಕುವಲ್ಲಿ ಪರಿಣಾಮಕಾರಿಯಾಗಿದೆ. ಹೀಗೆ ಬೇರ್ಪಡಿಸಿದ ಫೈಕೊಸೈಯಾನಿನ್ ದ್ರವ್ಯವನ್ನು ಸೂಕ್ತ ಲೇಪನ ಪದಾರ್ಥದೊಂದಿಗೆ ಬೆರೆಸಿ ಸ್ಪ್ರೇಡ್ರೈಯರ್ ಮೂಲಕ ಪುಡಿ ರೂಪಕ್ಕೆ ಪರಿವರ್ತಿಸಬಹುದಾಗಿದೆ. ಹೀಗೆ ತಯಾರಿಸಿದ ನೀಲಿ ವರ್ಣದ ಪುಡಿಯನ್ನು ಪೆಪ್ಪರ್‌ಮಿಂಟ್, ಸುಹಾಸಿತ ಹಾಲು ಹಾಗೂ ಇತರೆ ಹಾಲಿನ ಉತ್ಪನ್ನಗಳಿಗೆ ಉಪಯೋಗಿಸಬಹುದಾಗಿದೆ.
5. **ಹೆಸರಿನಲ್ಲಿ ಪಲ್ಸ್‌ಮ್ಯಾಜಿಕ್ ಬಳಕೆ:** ಹೆಸರಿನಲ್ಲಿ ಇಳುವರಿ ಹೆಚ್ಚಿಸಲು ಪ್ರತಿ ಲೀಟರ ನೀರಿಗೆ 10 ಗ್ರಾಂ. ಪಲ್ಸ್ ಮ್ಯಾಜಿಕ್ ಬೆರೆಸಿ ಬೆಳೆ ಶೇ. 50 ರಷ್ಟು ಹೂವಾಡುವ ಹಂತದಲ್ಲಿ ಇರುವಾಗ ಸಿಂಪಡಿಸಬೇಕು.
6. **ಉದ್ದಿನಲ್ಲಿ ಪಲ್ಸ್ ಮ್ಯಾಜಿಕ್ ಬಳಕೆ:** ಉದ್ದಿನಲ್ಲಿ ಇಳುವರಿ ಹೆಚ್ಚಿಸಲು ಪ್ರತಿ ಲೀಟರ ನೀರಿಗೆ 10 ಗ್ರಾಂ. ಪಲ್ಸ್ ಮ್ಯಾಜಿಕ್ ಬೆರೆಸಿ ಬೆಳೆ ಶೇ. 50 ರಷ್ಟು ಹೂವಾಡುವ ಹಂತದಲ್ಲಿ ಇರುವಾಗ ಸಿಂಪಡಿಸಬೇಕು.
7. **ನೆರಳು ಮನೆ ಪರದೆಯಲ್ಲಿ ಕರಬೂಜ ಬೆಳೆಯ ಉತ್ಪಾದನೆ:** ಈ ಬೆಳೆಯ ಬೇಸಾಯಕ್ಕೆ 1.0 ಮೀ. ಅಗಲ ಹಾಗೂ 30 ಸೆಂ.ಮೀ. ಎತ್ತರವುಳ್ಳ ಮಡಿಗಳನ್ನು, 50 ಸೆಂ.ಮೀ. ಅಂತರದಲ್ಲಿ ತಯಾರಿಸಬೇಕು. ತದನಂತರ 30 ಮೈಕ್ರಾನ್ ದಪ್ಪವುಳ್ಳ ಪ್ಲಾಸ್ಟಿಕ್ ಹಾಳೆಯನ್ನು ಮಡಿಗಳ ಮೇಲೆ ಹೊದಿಸಬೇಕು. ಹೀಗೆ ತಯಾರಿಸಿದ ಮಡಿಗಳಲ್ಲಿ 50 ಸೆಂ.ಮೀ. ಅಂತರದಲ್ಲಿ, ಮಡಿಯ

ಮಧ್ಯದಲ್ಲಿ ಒಂದೇ ಸಾಲಿನಲ್ಲಿ ಸಸಿಗಳನ್ನು ನಾಟಿ ಮಾಡಬೇಕು. ಬಳ್ಳಿಗಳಿಗೆ ಲಂಬವಾಗಿ ಬೆಳೆಯುವಂತೆ ಆಧಾರ ಒದಗಿಸಬೇಕು, ಪ್ರತಿ ಬಳ್ಳಿಗೆ ಎರಡು ರೆಂಬೆಗಳನ್ನು ಬೆಳೆಸಿ, ಪ್ರತಿ ರೆಂಬೆಗೆ ಒಂದು ಕಾಯಿಯನ್ನು ಮಾತ್ರ ಬೆಳೆಯಲು ಬಿಟ್ಟು, ಕಾಯಿಕಚ್ಚಿದ ನಂತರ ಶೇ. 0.5 ರ 0:0:50 ಪ್ರಮಾಣದ ಸಾರಜನಕ : ರಂಜಕ : ಪೊಟ್ಯಾಷ್ ನೀರಿನಲ್ಲಿ ಕರಗುವ ರಸಾಯನಿಕ ಗೊಬ್ಬರವನ್ನು ಬಳ್ಳಿಯ ಎಲೆಗಳ ಮೇಲೆ ಪ್ರತಿ ವಾರಕ್ಕೊಮ್ಮೆಯಂತೆ ನಾಲ್ಕು ಸಲ ಸಿಂಪಡಿಸಿದಾಗ ಉತ್ತಮ ಗುಣಮಟ್ಟದ ಅಧಿಕ ಇಳುವರಿ ಪಡೆಯಬಹುದು.

8. **ಸುಗಂಧರಾಜ ಗೆಡ್ಡೆಗಳಲ್ಲಿ ಜಿಎ–3 ದ್ರಾವಣದ ಉಪಚಾರ:** ಗಡ್ಡೆಗಳನ್ನು ರಾತ್ರಿಯಿಡಿ ನೀರಿನಲ್ಲಿ ನೆನೆಸಿ 100 ಪಿಪಿಎಮ್ ಜಿಎ3 ದ್ರಾವಣದಲ್ಲಿ ಗಂಟೆಯವರೆಗೆ ಅದ್ದಿ ನಾಟಿ ಮಾಡುವುದರಿಂದ ಉಪಚಾರ ಮಾಡದ ಗಡ್ಡೆಗಳಿಗಿಂತ ಹೆಚ್ಚಿನ ಮೊಳಕೆಯೊಂದಿಗೆ ಉತ್ತಮ ಹೂವಿನ ಇಳುವರಿಯನ್ನು ಪಡೆಯಬಹುದು.

9. **ಸುಗಂಧರಾಜದಲ್ಲಿ ಕಳೆ ನಿರ್ವಹಣೆ:** ಗಡ್ಡೆಗಳ ನಾಟಿಯ 3 ದಿನ ಪೂರ್ವ ಹೆಕ್ಟೇರಿಗೆ 2.12 ಲೀ ಆಕ್ಸಿಫ್ಲೋರೋಫೆನ್ 23.5 ಇ.ಸಿ 1000 ಲೀ. ನೀರಿನಲ್ಲಿ ಬೆರೆಸಿ ಸಿಂಪಡಿಸುವದರಿಂದ ಗಡ್ಡೆಗಳ ಮೊಳಕೆಯ ಪೂರ್ವ (30ದಿವಸ) ಬರುವ ಕಳೆಗಳನ್ನು ಪರಿಣಾಮಕಾರಿಯಾಗಿ ನಿರ್ವಹಣೆ ಮಾಡಬಹುದು. ತದನಂತರ ಬರುವ ಕಳೆಗಳ ಹತೋಟಿಗೆ ಗಡ್ಡೆಗಳ ನಾಟಿಯ 30 ಮತ್ತು 60 ದಿನಗಳ ನಂತರ ಇದೆ ಕಳೆನಾಶಕವನ್ನು (2.12 ಮಿ.ಲೀ. ಪ್ರತಿ ಲೀಟರ್ ನೀರಿಗೆ) ಸಿಂಪರಣೆಗೆ ಉಪಯೋಗಿಸಬೇಕು.

10. **ಚಿಕ್ಕ ಟ್ರಾಕ್ಟರ್‌ನಿಂದ ಕಳೆ ತೆಗೆಯುವ ಮತ್ತು ಗೊಬ್ಬರ ಹಾಕುವ ಯಂತ್ರ:** ಸಣ್ಣ ಟ್ರ್ಯಾಕ್ಟರ್ ಚಾಲಿತ ಎಡೆ ಕುಂಟೆ ಮತ್ತು ಗೊಬ್ಬರ ಬಿತ್ತುವ ಯಂತ್ರದಿಂದ ಏಕಕಾಲಕ್ಕೆ ಕಳೆ ತೆಗೆಯುವ ಮತ್ತು ಗೊಬ್ಬರ ಬಿತ್ತುವ ಕಾರ್ಯವನ್ನು ಮಾಡಬಹುದು. ಪ್ರತಿ ಗಂಟೆಗೆ ಸುಮಾರು 0.32 ಹೆಕ್ಟೇರ್ ಪ್ರದೇಶದಲ್ಲಿ 78 ಪ್ರತಿಶತ ಕಳೆ ತೆಗೆಯುವ ಸಾಮರ್ಥ್ಯ ಹೊಂದಿರುತ್ತದೆ. ಈ ಯಂತ್ರವನ್ನು 2 ಅಡಿಯ ಎತ್ತರದವರೆಗೂ ಬೆಳೆದ ಹಾಗೂ 3 ಅಡಿಗಿಂತ ಅಗಲ ಇರುವ ಬೆಳೆ ಸಾಲುಗಳ ನಡುವೆ ಚಲಿಸಿ ಕಳೆ ತೆಗೆಯಲು ಮತ್ತು ಗೊಬ್ಬರ ಬಿತ್ತಲು ಉಪಯೋಗಿಸಬಹುದು.

11. **ಡ್ರೋನ್ ಸಹಾಯದಿಂದ ಸಿಂಪರಣಾ ಯಂತ್ರ:** ಡ್ರೋನ್ ಚಾಲಿತ ಸಿಂಪರಣಾ ಯಂತ್ರ ಡ್ರೋನ್ ಚಾಲಿತ ಸಿಂಪರಣಾ ಯಂತ್ರವು 20 ಲೀಟರ್ ಸಿಂಪರಣಾ ದ್ರಾವಣ ಸಾಮರ್ಥ್ಯ ಹೊಂದಿದ್ದು ಭತ್ತ, ಶೇಂಗಾ ಹಾಗೂ ಇನ್ನಿತರ ಬೆಳೆಗಳಲ್ಲಿ ಸಿಂಪರಣೆ ಮಾಡಬಹುದು. ಈ ಯಂತ್ರವು ಪ್ರತಿ ಗಂಟೆಗೆ ಸುಮಾರು 2.0 ರಿಂದ 2.5 ಹೆಕ್ಟೇರ್ ಪ್ರದೇಶದಲ್ಲಿ ಸಿಂಪಡಿಸುವ ಸಾಮರ್ಥ್ಯವನ್ನು ಹೊಂದಿರುತ್ತದೆ. ಈ ಸಿಂಪರಣಾ ಯಂತ್ರವನ್ನು ಉಪಯೋಗಿಸಲು ಸರ್ಕಾರದ ನಿಯಮಾವಳಿಗಳನ್ನು ಪಾಲಿಸಬೇಕಾಗುತ್ತದೆ.

12. **ಸೌರ ಶಕ್ತಿಯಿಂದ ರಿಮೋಟ್ ಚಾಲಿತ ಸಿಂಪರಣಾ ಯಂತ್ರ:** ರಿಮೋಟ್ ಚಾಲಿತ ಸೌರಶಕ್ತಿ ಸಿಂಪರಣಾ ಯಂತ್ರವು 100 ಲೀಟರ್ ಸಿಂಪರಣಾ ದ್ರಾವಣ ಸಾಮರ್ಥ್ಯ ಹೊಂದಿದ್ದು ಮೆಣಸಿನಕಾಯಿ, ಶೇಂಗಾ ಹಾಗೂ ಇನ್ನಿತರ ಬೆಳೆಗಳಲ್ಲಿ ಸಿಂಪರಣೆ ಮಾಡಬಹುದು. ಈ ಯಂತ್ರವು ಪ್ರತಿ ಘಂಟೆಗೆ ಸುಮಾರು 1.15 ರಿಂದ 1.26 ಹೆಕ್ಟೇರ್ ಪ್ರದೇಶದಲ್ಲಿ ಸಿಂಪಡಿಸುವ ಸಾಮರ್ಥ್ಯವನ್ನು ಹೊಂದಿರುತ್ತದೆ.

13. **ಕೈಚಾಲಿತ ಭತ್ತದ ಹುಲ್ಲನ್ನು ಪೆಂಡಿಕಟ್ಟುವ ಯಂತ್ರ:** ಇದು ಒಂದು ಕೈಚಾಲಿತ ಸಾಧನವಾಗಿದ್ದು, ಇದರ ಸಹಾಯದಿಂದ ಭತ್ತದ ಹುಲ್ಲಿನ ಪೆಂಡೆಗಳನ್ನಾಗಿ ಮಾಡಲು ಸಹಾಯಕಾರಿಯಾಗಿದೆ. ಈ ಸಾಧನದಿಂದ ಸಾಂದ್ರೀಕೃತಗೊಂಡ ಮತ್ತು ಹುರಿ ದಾರದಿಂದ ಕಟ್ಟಿರುವ ಚೌಕಾಕಾರದ ($60 \times 32 \times 40$ cm^3) ಹುಲ್ಲಿನ ಪೆಂಡೆಗಳನ್ನು ಪಡೆಯಬಹುದು. ಈ ಸಾಧನದಿಂದ ಪ್ರತಿ ದಿನಕ್ಕೆ ಸುಮಾರು 120 ಪೆಂಡೆಗಳನ್ನು ತಯಾರಿಸಬಹುದು. ಟ್ರ್ಯಾಕ್ಟರ್ ಚಾಲಿತ ಪೆಂಡೆ ಕಟ್ಟುವ ಯಂತ್ರಕ್ಕೆ (Baler ಗೆ) ಹೊಲಿಸಿದರೆ, ಈ ಸಾಧನದ ಬೆಲೆಯು ಅತಿ ಕಡಿಮೆಯಾಗಿರುವುದಲ್ಲದೇ, ಇದರ ಕಾರ್ಯಾಚರಣೆಯ ವೆಚ್ಚವು ಕಡಿಮೆಯಾಗಿರುತ್ತದೆ. ಸಂಗ್ರಹಿಸಿರುವ ಹುಲ್ಲಿನಿಂದ ಪೆಂಡೆ ಕಟ್ಟುವ ಕೆಲಸಕ್ಕಾಗಿ ಈ ಸರಳ ಸಾಧನವು, ಸಣ್ಣ ರೈತರಿಗೆ ಅತೀ ಉಪಯುಕ್ತವಾಗಿದೆ ಎಂದು ಕಂಡು ಬಂದಿದೆ.

14. **ಹಚ್ಚೆ ಗಿಡದಿಂದ ಆಸ್ತಮಾ ಹಾಗೂ ಇತರೆ ಉಸಿರಾಟದ ತೊಂದರೆಗಳಿಗೆ ಮದ್ದು ತಯಾರಿಕೆ:** ಹಚ್ಚೆ (ಅಸ್ತಮಾ) ಗಿಡಗಳನ್ನು ಬೇರಿನಿಂದ ಬೇರ್ಪಡಿಸಿ ಸ್ವಚ್ಛ ನೀರಿನಲ್ಲಿ ತೊಳೆದು ಒಣಗಿಸಬೇಕು. ಚೆನ್ನಾಗಿ ಒಣಗಿಸಿದ ಹಚ್ಚೆ ಗಿಡದ ಎಲೆ ಮತ್ತು ಕಾಂಡಗಳನ್ನು ಪುಡಿ ಮಾಡಿ ಸೂಪರ್ ಕ್ರಿಟಿಕಲ್ ತಂತ್ರಜ್ಞಾನದ ಮೂಲಕ ಸಾಂದ್ರೀಕೃತ ದ್ರವವನ್ನು ಬೇರ್ಪಡಿಸಬೇಕು. ಸಾಂದ್ರೀಕೃತ ದ್ರವವನ್ನು ಪಿಷ್ಠ ಪದಾರ್ಥದೊಂದಿಗೆ ಸೂಕ್ತ ಪ್ರಮಾಣದಲ್ಲಿ ಬೆರೆಸಿ ಸ್ಪ್ರೇ ಡ್ರೈಯರ್ ಮೂಲಕ ಪುಡಿಯನ್ನು ತಯಾರಿಸಿ ಕ್ಯಾಪ್ಸೂಲ್‌ಗಳಲ್ಲಿ ತುಂಬಿ PET/ಕಂದುಬಣ್ಣದ ಗಾಜಿನ ಬಾಟಲ್‌ಗಳಲ್ಲಿ ತುಂಬಿ ತಂಪಾದ ಹಾಗು ಶುಷ್ಕ ವಾತಾವರಣದಲ್ಲಿ ಶೇಖರಿಸಿಡಬೇಕು.

ಇದನ್ನು ಅಸ್ತಮಾ ಮತ್ತು ಇತರೆ ಉಸಿರಾಟದ ತೊಂದರೆಗಳಿಗೆ ಪರಿಣಾಮಕಾರಿ ಔಷಧಿಯಾಗಿ ಬಳಸಬಹುದು ಎಂದು ಆಯುರ್ವೇದ ವೈದ್ಯಕೀಯ ಅಧ್ಯಯನದಿಂದ ಕಂಡುಬಂದಿದೆ.

15. **ಬಜೆ ಎಣ್ಣೆಯನ್ನು ತೆಗೆಯುವ ತಾಂತ್ರಿಕತೆ:** ಇಂಗಾಲ ಡೈ ಆಕ್ಸೈಡ್ ಉಪಯೋಗಿಸಿ ಸೂಪರ್ ಕ್ರಿಟಿಕಲ್ ವಿಧಾನದಿಂದ 200 ಬಾರ್ ಒತ್ತಡ ಮತ್ತು 45–55 ಡಿಗ್ರಿ ಸೆಲ್ಸಿಯಸ್ ತಾಪಮಾನದಲ್ಲಿ ಬಜೆ ಎಣ್ಣೆಯನ್ನು ಶೇ.90 ಕ್ಕೂ ಹೆಚ್ಚಿನ ಪ್ರಮಾಣದಲ್ಲಿ ತೆಗೆಯಬಹುದಾಗಿದೆ. ಹೀಗೆ ತೆಗೆದ ಬಜೆ ಎಣ್ಣೆಯಲ್ಲಿ β–ಅಸರೋನ್ ಪ್ರಮಾಣ ಶೇ 26 ರಷ್ಟು ಇರುವುದು ಕಂಡುಬಂದಿದೆ. ಈ ಎಣ್ಣೆಯನ್ನು ಪ್ರತಿ ಲೀಟರ್ ನೀರಿಗೆ 100 ಮೈಕ್ರೋ ಲೀಟರ್ ನಂತೆ ಬೆರೆಸಿ ಉಪಯೋಗಿಸಿದಾಗ ಸ್ಟ್ಯಾಫಿಲೋಕಾಕಸ್ ಆರಿಯಸ್, ಮ್ಯೂಕರ್ ಮತ್ತು ಆಸ್ಪರ್ಜಿಲಸ್ ಮುಂತಾದ ಹಾನಿಕಾರಕ ಸೂಕ್ಷ್ಮಾಣುಜೀವಿಗಳ ಬೆಳವಣಿಗೆಯನ್ನು ಹತೋಟಿಯಲ್ಲಿಡಬಹುದು. ಹಾಗೂ ಬಜೆ ಎಣ್ಣೆಯನ್ನು ಅಂಜೂರ ಹಣ್ಣುಗಳಿಗೆ ಲೇಪಿಸಿದಾಗ ಅವುಗಳನ್ನು 7 ದಿನಗಳವರೆಗೆ ಕೆಡದಂತೆ ಶೇಖರಿಸಿಡಬಹುದಾಗಿದೆ.

16. **ಜೈವಿಕ ವಿಘಟನೀಯ ಆಗುವ ಕೈಟೋಸಿನ್ ನ್ಯಾನೋ ಬೆಳ್ಳಿ ಸಂಯೋಜಿತ ಪ್ಯಾಕೇಜಿಂಗ್ ಫಿಲ್ಮ್ಸ್ ಬಳಕೆ:** ಪಾಲಿವಿನೈಲ್ ಆಲ್ಕೋಹಾಲ್ ದ್ರಾವಣವನ್ನು (2 %) 2 ಗಂಟೆಗಳ ಕಾಲ 80 ಡಿಗ್ರಿ ಸೆಲ್ಸಿಯಸ್ ತಾಪಮಾನದಲ್ಲಿ ಕುದಿಸಿ ನಂತರ ಬೆಳ್ಳಿಯ ನ್ಯಾನೋ ಕಣಗಳನ್ನು ಹೊಂದಿದ ಕೈಟೋಸಿನ್ ದ್ರಾವಣದಲ್ಲಿ (2 % ಕೈಟೋಸಿನ್ ಮತ್ತು ಕೈಟೋಸಿನ್ ಪ್ರಮಾಣದ 1 % ಬೆಳ್ಳಿ ನ್ಯಾನೋ ಕಣಗಳು) 1 : 1 ಅನುಪಾತದಲ್ಲಿ ಬೆರೆಸುವುದು. ನಂತರ ಮಿಶ್ರಣವನ್ನು 94 ಡಿಗ್ರಿ ಸೆಲ್ಸಿಯಸ್ ತಾಪಮಾನದಲ್ಲಿ 30 ನಿಮಿಷಗಳವರೆಗೆ ಕುದಿಸಿ, ಸೂಕ್ತ ಗಾತ್ರದ ಟೆಫ್ಲಾನ್ ತಟ್ಟೆಯಲ್ಲಿ ಹರಡಿ 48 ಗಂಟೆಗಳವರೆಗೆ ಒಣಗಿಸಿದರೆ ಜೈವಿಕ ವಿಘಟನೀಯ ನ್ಯಾನೊಕಾಂಪೋಜಿಟ್ ಪ್ಯಾಕೇಜಿಂಗ್ ಫಿಲ್ಮ್ ತಯಾರಾಗುತ್ತದೆ. ಈ ಪ್ಯಾಕೇಜಿಂಗ್ ಫಿಲ್ಮ್‌ನಿಂದ ಬ್ರೆಡ್ ಮತ್ತು ಅಂಜೂರ ಹಣ್ಣುಗಳನ್ನು ಪ್ಯಾಕ್ ಮಾಡಿ ಇವುಗಳ ಜೀವಿತಾವಧಿಯನ್ನು ಕ್ರಮವಾಗಿ 10 ಮತ್ತು 7 ದಿನಗಳವರೆಗೆ ಕಾಪಾಡಿಕೊಳ್ಳಬಹುದು ಎಂದು ಕಂಡುಬಂದಿದೆ.

3.4.3 ವಾಣಿಜ್ಯೀಕರಣಕ್ಕೆ ಶಿಫಾರಸ್ಸು ಮಾಡಿದ ತಂತ್ರಜ್ಞಾನಗಳು

ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರು, ಅಭಿವೃದ್ಧಿಪಡಿಸಿದ ಆರ್.ಸಿ.ಆರ್.ಎಮ್.ಎಚ್ – 2 ಮೆಕ್ಕೆಜೋಳದ ಹೈಬ್ರೀಡ್‌ನ್ನು ಮಹಾರಾಷ್ಟ್ರ ಹೈಬ್ರಿಡ್ ಸೀಡ್ಸ್ ಕಂಪನಿ ಪ್ರೈವೇಟ್ ಲಿಮಿಟೆಡ್, ಮುಂಬೈ ಇವರ ಜೊತೆಗೆ ವಾಣ್ಯಜ್ಯೀಕರಣವನ್ನು ಮಾಡಿಕೊಂಡಿರುತ್ತದೆ.

3.4.4 ಶಿಫಾರಸ್ಸು ಮಾಡಿದ ಕ್ಷೇತ್ರ ಪ್ರಯೋಗಗಳು

ಅನುವಂಶಿಕತೆ ಮತ್ತು ಸಸ್ಯ ತಳಿ ಸಂವರ್ಧನಾಶಾಸ್ತ್ರ

1 ಉದ್ದು ಬೆಳೆಯ ತಳಿ ಟಿಆರ್‌ಸಿಆರ್‌ಯು–22 (TRCRU-22) ರ ಮೌಲ್ಯಮಾಪನ

2 ತೊಗರಿ ಬೆಳೆಯ ತಳಿ ಜಿಆರ್‌ಜಿ – 152 ರ (GRG-152) ಕಾರ್ಯಕ್ಷಮತೆ

3 ಮೆಣಸಿನಕಾಯಿ ಹೈಬ್ರೀಡ್ – UARChH43 (BCH 42) ಕಾರ್ಯಕ್ಷಮತೆ

4 ಭತ್ತದ ತಳಿ ಆರ್‌ಎನ್‌ಆರ್ 15048ನ (RNR 15048) ಕಾರ್ಯಕ್ಷಮತೆ

5 ಮೆಕ್ಕೆಜೋಳದ ಹೈಬ್ರಿಡ್, ಆರ್‌ಸಿಆರ್‌ಎಮ್‌ಹೆಚ್– 4 ನ (RCRMH-4) ಕಾರ್ಯಕ್ಷಮತೆ

6 ಉದ್ದು ಬೆಳೆಯ ತಳಿ ಬಿಡಿಯು – 12 ನ (BDU-12) ಕಾರ್ಯಕ್ಷಮತೆ

7 ಹೆಸರು ಬೆಳೆಯ ತಳಿ ಟಿಆರ್‌ಸಿಆರ್‌ಎಮ್ – 147ನ ಕಾರ್ಯಕ್ಷಮತೆ

8 ಕಡಲೆ ಬೆಳೆಯ ತಳಿ ಎಂಎಬಿಸಿ–ಡಬ್ಲ್ಯುಆರ್–ಎಸ್‌ಎ – 1 ನ (MABC-WR-SA-1) ಕಾರ್ಯಕ್ಷಮತೆ

9 ಹಿರ್ಸುಟಮ್ ಹತ್ತಿಯ ತಳಿ ವೈವಿಧ್ಯ ಬಿಜಿಡಿಎಸ್ 1033ನ (BGDS-1033) ಕಾರ್ಯಕ್ಷಮತೆ

ಬೇಸಾಯಶಾಸ್ತ್ರ

10 ತೊಗರಿ ಮತ್ತು ಸಜ್ಜೆ ಮಿಶ್ರ ಬೆಳೆ ಪದ್ಧತಿ (1:2) ಯಲ್ಲಿ ಸಾವಯವ ಬೇಸಾಯದ ಸುಧಾರಿತ ಕ್ರಮಗಳು

11 ಕಬ್ಬಿನ ಉತ್ಪಾದನೆಯಲ್ಲಿ ವಿವಿಧ ತಂತ್ರಜ್ಞಾನಗಳ ಕಾರ್ಯಕ್ಷಮತೆ

12 ಹರಳು (ಔಡಲ) ಆಧಾರಿತ ಅಂತರ ಬೆಳೆ ಪದ್ಧತಿಯಲ್ಲಿ ಅಂಟು ಜವಳಿ ತಳಿಗಳ ಉತ್ಪಾದಕತೆ

13 ಕಬ್ಬಿನಲ್ಲಿ ಸಮಗ್ರ ಕಳೆ ನಿರ್ವಹಣೆ

14 ಬಿಟಿ ಹತ್ತಿಯಲ್ಲಿ ಪೋಷಕಾಂಶಗಳ ಉಪಯೋಗ ವೃದ್ಧಿಸುವ ಪ್ರಯೋಗ

15 ನೆಲಗಡಲೆ + ತೊಗರಿ ಅಂತರ ಬೆಳೆ ಪದ್ಧತಿಯಲ್ಲಿ ಕಳೆ ನಿರ್ವಹಣೆ

16 ಭತ್ತದ ಸಸಿಮಡಿಯಲ್ಲಿ ಕಳೆ ನಿರ್ವಹಣೆ

17 ಸೂರ್ಯಕಾಂತಿಯಲ್ಲಿ ಕಳೆ ನಿರ್ವಹಣೆ

18 ಸೂರ್ಯಕಾಂತಿಯಲ್ಲಿ ಪೋಷಕಾಂಶಗಳ ಸಿಂಪರಣೆ

ಕೃಷಿ ಕೀಟಶಾಸ್ತ್ರ

19 ಪ್ರೊಫಿಯಾನಿಲೈಡ್ 30% ಎಸ್‌ಸಿ ಕೀಟನಾಶಕ ಬಳಸಿ ತೊಗರಿಯಲ್ಲಿ ಕಾಯಿಕೊರಕದ ನಿರ್ವಹಣೆ

20 ಕ್ಲೋರ್ಫೆನಾಫಿರ್ 24% ಎಸ್‌ಸಿ ಕೀಟನಾಶಕ ಬಳಸಿ ಕಡಲೆಯಲ್ಲಿ ಕಾಯಿಕೊರಕದ ನಿರ್ವಹಣೆ

21 ತೊಗರಿಯಲ್ಲಿ ಕಾಯಿಕೊರಕದ (ಹೆಲೋಕೋವರ್ಪಾ ಆರ್ಮಿಗೇರಾ) ವಿರುದ್ಧ ಬ್ಯಾಸಿಲಸ್ ಥುರಿಂಜಿಯೆನ್ಸಿಸ್‌ನ ಕ್ಷೇತ್ರ ಮೌಲ್ಯಮಾಪನ

22 ಹತ್ತಿಯಲ್ಲಿ ಗುಲಾಬಿ ಕಾಯಿಕೊರಕದ ನಿರ್ವಹಣೆ

23 ಕಬ್ಬಿನಲ್ಲಿ ಗೊಣ್ಣೆಹುಳು ಮತ್ತು ಕೀಟನಾಶಕ ' ಶಿಲೀಂದ್ರಗಳ ನಿರ್ವಹಣೆ

24 ತೇವ ಮತ್ತು ಹರಡುವಿಕೆಯ ಮಾಧ್ಯಮದ ಮೂಲಕ ಕೀಟನಾಶಕಗಳನ್ನು ಬಳಸಿ ಕೀಟಗಳ ನಿಯಂತ್ರಣ

25 ಫ್ಲಕ್ಸಮೆಟಮೈಡ್ 10% ಇಸಿ ಕೀಟನಾಶಕ ಬಳಸಿ ಮೆಣಸಿನಕಾಯಿಯಲ್ಲಿ ಕೀಟಗಳ ನಿರ್ವಹಣೆ

26 ಫ್ಲಕ್ಸಮೆಟಮೈಡ್ 10% ಇಸಿ ಕೀಟನಾಶಕದಿಂದ ಬದನೆಯಲ್ಲಿ ಜಿಗಿಹುಳು ಕೀಟದ ನಿರ್ವಹಣೆ

27 ಫ್ಲಕ್ಸಮೆಟಮೈಡ್ 10 ಇಸಿ ಕೀಟನಾಶಕದಿಂದ ಬೆಂಡೆಕಾಯಿಯಲ್ಲಿ ಕೀಟಗಳ ನಿರ್ವಹಣೆ

28 ಫ್ಲಕ್ಸಮೆಟಮೈಡ್ 10 ಇಸಿ ಕೀಟನಾಶಕದಿಂದ ತೊಗರಿಯಲ್ಲಿ ಕೀಟಗಳ ನಿರ್ವಹಣೆ

29 ಈರುಳ್ಳಿ ಬೆಳೆಯಲ್ಲಿ ಸಮಗ್ರ ಕೀಟನಿರ್ವಹಣಾ ವೇಳಾಪಟ್ಟಿ ಅಭಿವೃದ್ಧಿ

30 ಬಿಟಿ ಹತ್ತಿಯಲ್ಲಿ ನೈಸರ್ಗಿಕ ಶತ್ರುಗಳ ಮೇಲೆ (SPLAT)ನ ಲಿಂಗಾಕರ್ಷಕ ತಂತ್ರಜ್ಞಾನದ ಬಳಕೆಯ ಪರಿಣಾಮ

31 ಉದ್ದುವಿನಲ್ಲಿ ಲೆಪಿಡೋಪ್ಟೆರಾನ್ ಕೀಟ ಮತ್ತು ರೋಗಗಳ ನಿರ್ವಹಣೆ

32 ಕಬ್ಬಿನಲ್ಲಿ ಆರಂಭಿಕ ಚಿಗುರು ಕೊರೆಯುವ ಮತ್ತು ಗಣಿ ಕೊರೆಯುವ ಕೀಟಗಳ ನಿರ್ವಹಣೆ

33 ಮಾವಿನ ಬೆಳಯಲ್ಲಿ ಜಿಗಿಹುಳುವಿನ ನಿರ್ವಹಣೆ

34 ಭತ್ತದಲ್ಲಿ ಕಾಂಡ ಕೊರಕ ಹುಳುವಿನ ನಿರ್ವಹಣೆ

ಸಸ್ಯ ರೋಗಶಾಸ್ತ್ರ

35 ಸೂರ್ಯಕಾಂತಿಯಲ್ಲಿ ಆಲ್ಟರ್ನೇರಿಯಾ ಎಲೆಚುಕ್ಕೆ ರೋಗಗಳ ನಿರ್ವಹಣೆ

36 ಭತ್ತದಲ್ಲಿ ಕಂದುಬಣ್ಣದ ಚುಕ್ಕೆ ರೋಗಗಳ ನಿರ್ವಹಣೆ.

37 ಕಡಲೆ ಬೆಳೆಯಲ್ಲಿ ಸೊರಗುವಿಕೆ ಮತ್ತು ಬೇರು ಕೊಳೆಯುವಿಕೆ ನಿರ್ವಹಣೆ.

ಬೀಜ ವಿಜ್ಞಾನ ಮತ್ತು ತಂತ್ರಜ್ಞಾನ

38 ಜರಡಿಯಲ್ಲಿ ಕಡಲೆ ತಳಿಯ (ಬಿಜಿಡಿ 103) ಬೀಜಗಳ ಸೋಸುವಿಕೆ

39 ಸೋಯಾಅವರೆ ಜರಡಿ ಗಾತ್ರ (ಡಿಎಸ್ಬಿ–21 ತಳಿ)

40 ಕಾಬುಲಿ ಕಡಲೆ (ಎಂಎನ್‌ಕೆ 1) ಯಲ್ಲಿ ಬಿತ್ತನೆ ಬೀಜದ ಪ್ರಮಾಣದ ನಿರ್ಧರಿಸುವಿಕೆ

ಕೃಷಿ ಸೂಕ್ಷ್ಮ ಜೀವಶಾಸ್ತ್ರ

41 ತೊಗರಿಯಲ್ಲಿ ರೈಜೋಬಿಯಂನ ಕಾರ್ಯದಕ್ಷತೆ ಸುಧಾರಿಸಲು ಪಿಜಿಪಿಆರ್ ತಳಿಗಳ (PGPR strains) ಮೌಲ್ಯಮಾಪನ

42 ಕಡಲೆಯಲ್ಲಿ ಇಳುವರಿ ಹೆಚ್ಚಿಸಲು ಮೀಸೋರೈಜೋಬಿಯಂ ಪ್ರಭೇದಗಳ (*Mesorhizobium* strains) ಉಪಯೋಗ

43 ತೊಗರಿಯಲ್ಲಿ ವಿವಿಧ ಕೃಷಿ ಪರಿಸರ ಪರಿಸ್ಥಿತಿಗಳಲ್ಲಿ ರೈಜೋಬಿಯಂ ತಳಿಗಳ ಕಾರ್ಯಕ್ಷಮತೆ

ಬೆಳೆ ಶರೀರ ಕ್ರಿಯಾಶಾಸ್ತ್ರ

44 ಕಡಲೆ ಬೆಳೆಯಲ್ಲಿ ಕಡಲೆ ಮ್ಯಾಜಿಕ್ ಬಳಕೆ

ಮಣ್ಣು ಮತ್ತು ನೀರು ತಾಂತ್ರಿಕತೆ

45 ತೊಗರಿಯಲ್ಲಿ ಹನಿ ನೀರಾವರಿ ಮತ್ತು ಪ್ಲಾಸ್ಟಿಕ್ ಹೊದಿಕೆಯ ಪ್ರಯೋಗ

3.5 ಪ್ರಗತಿಯಲ್ಲಿನ ಸಂಶೋಧನೆಗಳು

3.5.1 ಬೆಳೆ ಸುಧಾರಣೆ

ಅನುವಂಶಿಕತೆ ಮತ್ತು ಸಸ್ಯ ತಳಿ ಸಂವರ್ಧನೆ

ಏಕದಳ ಧಾನ್ಯಗಳು

ಭತ್ತ

ಅಖಿಲ ಭಾರತದ ಭತ್ತದ ಯೋಜನೆಯಡಿಯಲ್ಲಿ ವಿವಿಧ ಕಟಾವು ಗುಂಪಿನ ವಿವಿಧ ತಳಿಗಳ ಭತ್ತದ ಪ್ರಯೋಗಗಳನ್ನು ಧಾನ್ಯದ ಗಾತ್ರ, ಕಬ್ಬಿಣ ಹಾಗೂ ಸತುವಿನ ಅಂಶ ಮತ್ತು ಉಪ್ಪಿನ ಅಂಶವನ್ನು ತಡೆದುಕೊಳ್ಳುವ ಶಕ್ತಿಯುಳ್ಳ ವಿವಿಧ ತಳಿಗಳನ್ನು ಗುರುತಿಸಲಾಯಿತು. RP Bio 226 ಬ್ಯಾಕ್ಟೀರಿಯಾ ರೋಗ ನಿರೋಧಕ ಮತ್ತು ವಾಣಿಜ್ಯ ಕೃಷಿಗಾಗಿ ಅಭಿವೃದ್ಧಿ ಪಡಿಸಿದ ತಳಿಯಾಗಿದೆ.

ಗೋವಿನ ಜೋಳ

ವಿವಿಧ ಸ್ಥಳಗಳಲ್ಲಿ ತಳಿಗಳನ್ನು ಪರೀಕ್ಷಿಸುವ ಪ್ರಯೋಗದಲ್ಲಿ ಎರಡು ಸಂಕರಣ ತಳಿಗಳು RCRMH3 (ಶಾಖಾ ಸಂಹಿಷ್ಣತೆ) ಮತ್ತು RCRMH4 (ಬರಸಂಹಿಷ್ಣತೆ) ಎರಡು ವರ್ಷದ ಪ್ರಯೋಗ ಪೂರೈಸಿದೆ. ವಲಯ–3 ರಲ್ಲಿ ರಾಜ್ಯದ ಬಹುಸ್ಥಳ ಪ್ರಯೋಗ (MLT) ದಲ್ಲಿ RCRMH4 ಸಂಕರಣ ತಳಿಯು ಇತ್ತೀಚೆಗೆ ಬಿಡುಗಡೆಯಾದ ಸಂಕರಣ ತಳಿ GPMH 1101 ಕ್ಕಿಂತ ಶೇಕಡವಾರು 10.6 ರಷ್ಟು ಅಧಿಕ ಇಳುವರಿಯನ್ನು ದಾಖಲಿಸಿದೆ.

ಜೋಳ

ಅಖಿಲ ಭಾರತ ಸಂಯೋಜಿತ ಜೋಳದ ಸಂಶೋಧನ ಯೋಜನೆ ಅಡಿಯಲ್ಲಿ ಮುಂಗಾರು ಮತ್ತು ಹಿಂಗಾರು ಹಂಗಾಮಿನಲ್ಲಿ ಕೈಗೊಂಡ ಸಿಹಿಜೋಳ, ಬಹುಕಟಾವು ಮೇವು ಮತ್ತು ವಿಶೇಷ ಜೋಳದಲ್ಲಿ ಸಂಶೋಧನೆಯನ್ನು ಮಾಡಲಾಗಿತ್ತು. ಹಿಂಗಾರು ಹಂಗಾಮಿನಲ್ಲಿ ತಳಿಗಳ ಪ್ರಾರಂಭ ಪರೀಕ್ಷೆ, ಸುಧಾರಿತ ತಳಿಗಳ ಪರೀಕ್ಷೆ, ಸಂಕರಣ ಪ್ರಾರಂಭಿಕ ಪರೀಕ್ಷೆ, ಸುಧಾರಿತ ಸಂಕರಣ ಪರೀಕ್ಷೆಗಳನ್ನು ಕೈಗೊಳ್ಳಲಾಗಿತ್ತು. ಹಿಂಗಾರು ಜೋಳದಲ್ಲಿ ಒಂದು ಕೇಂದ್ರಿಯ ಪ್ರಯೋಗವನ್ನು ಕೃಷಿ ಸಂಶೋಧನ ಕೇಂದ್ರದಲ್ಲಿ ಕೈಗೊಳ್ಳಲಾಗಿತ್ತು. ಧಾನ್ಯ ಮತ್ತು ಮೇವು, ಅಧಿಕ ಮೇಣ, ದಪ್ಪಬೀಜ, ಇದ್ದಿಲು ಕೊಳೆರೋಗ ನಿರೋಧಕ, ಗಿಡ್ಡ, ಬೆಳೆಬಾಗುವ ನಿರೋಧಕ, ಸುಳಿನೊಣ ನಿರೋದಕ, ಹಸಿರು ಗುಣಧರ್ಮಗಳಿಗೆ ತಳಿಸಂಕರಣ ಅಭಿವೃದ್ಧಿ ಪಡಿಸಲಾಗಿದೆ.

ಸಿರಿಧಾನ್ಯಗಳು

ಕೃಷಿ ಸಂಶೋಧನಾ ಕೇಂದ್ರ, ಹಗರಿಯಲ್ಲಿ ಅಭಿವೃದ್ಧಿ ಪಡಿಸಿದ ವಿವಿಧ ಸಿರಿಧಾನ್ಯಗಳ ತಳಿಗಳಾದ ಹಗರಿ ರಾಗಿ–13 [FMV 1144], ಹಗರಿ ಬರುಗು–1, ಕೊರಲೆ–1 ಅಖಿಲ ಭಾರತ ಸಂಯೋಜಿತ ಪ್ರಯೋಗಗಳಲ್ಲಿ ಅಧಿಕ ಇಳುವರಿ ನೀಡುವ ತಳಿಗಳೆಂದು ಗುರುತಿಸಲಾಗಿದೆ.

ದ್ವಿದಳ ಧಾನ್ಯಗಳು

ತೊಗರಿ

ಹೆಚ್ಚಿನ ಇಳುವರಿಗಾಗಿ, ನೆಟೆರೋಗ ನಿರೋಧಕತೆಗೆ ಮತ್ತು ಗೊಡ್ಡುರೋಗ (ಸೊರಗು ರೋಗ) ನಿರೋಧಕತೆಗೆ, ತೊಗರಿಯಲ್ಲಿ ಜಿಆರ್‌ಜಿ 152 ತಳಿಯನ್ನು ಅಖಿಲ ಭಾರತ ಸುಸಂಘಟಿತ ತೊಗರಿ ಸಂಶೋಧನೆ ವ್ಯವಸ್ಥೆಯಲ್ಲಿ ಬಿಡುಗಡೆಗಾಗಿ ಗುರುತಿಸಲಾಗಿದೆ.

ಹೆಸರು

ಟಿಆರ್‌ಸಿಆರ್‌ಎಂ –147, ಇದು ಹೆಚ್ಚಿನ ಇಳುವರಿ ಮತ್ತು ಹೆಸರು ಹಳದಿ ನಂಜಾಣುರೋಗಕ್ಕೆ ನಿರೋಧಕತೆ ಹೊಂದಿದ್ದು, ಬೇಸಿಗೆ ಕಾಲದಲ್ಲಿ ವಲಯ–1 ಮತ್ತು ವಲಯ–2 ರ ಕೃಷಿ ಪ್ರಯೋಗಕ್ಕಾಗಿ ಪ್ರಸ್ತಾಪಿಸಲಾಗಿದೆ.

ಉದ್ದು

ಅಧಿಕ ಇಳುವರಿಗಾಗಿ ಹಾಗೂ ಬೂದು ರೋಗ ತಡೆದುಕೊಳ್ಳುವ ಶಕ್ತಿಯುಳ್ಳ ಬಿ.ಡಿ.ಯು–12 ತಳಿಯನ್ನು ವಲಯ–1 ಮತ್ತು ವಲಯ–2 ಕ್ಕೆ ಮುಂಗಾರು ಹಂಗಾಮಿನಲ್ಲಿ ಬೆಳೆಯಲು ಸೂಕ್ತವಾಗಿದೆ ಎಂದು 2019–20 ನೇ ಸಾಲಿನ ರೈತರ ಹೊಲಗಳಲ್ಲಿ ಕ್ಷೇತ್ರ ಪ್ರಯೋಗಕ್ಕಾಗಿ ಬಿಡುಗಡೆಗೊಳಿಸಲಾಗಿದೆ.

ಸೊಯಾಅವರೆ

ಅರವತ್ತೆರೆಡು ಕ್ರಾಸ್‌ಗಳಿಂದ ಪಡೆದ ವಿವಿಧ ಸಂತತಿಗಳನ್ನು ಮುಂದಿನ ಪೀಳಿಗೆಗೆ ಮುಂದುವರಿಸಲಾಗಿದ್ದು, ತಳಿ ಮುಂಚೂಣಿ–1 ಪ್ರಯೋಗಗಳಲ್ಲಿ ಎನ್.ಆರ್.ಸಿ–146 ಮತ್ತು ಡಿ.ಎಸ್–3110 ಉತ್ತಮ ಇಳುವರಿ ನೀಡುವ ತಳಿಗಳು ಎಂದು ಗುರುತಿಸಲಾಗಿದೆ.

ಹುರಳಿ

12 ಹುರಳಿ ತಳಿಗಳನ್ನು ಪರೀಕ್ಷೆಗೆ ಒಳಪಡಿಸಿದಾಗ ಹೆಚ್.ಜಿ–9 ಮತ್ತು ಹೆಚ್.ಜಿ–11 ತಳಿಗಳು ಜಿ.ಪಿ.ಎಮ್–6 ಚೆಕ್‌ಗೆ ಹೋಲಿಸಿದಾಗ ಅಧಿಕ ಇಳುವರಿ ನೀಡುವುದೆಂದು ಗುರುತಿಸಲ್ಪಟ್ಟಿದೆ.

ಎಣ್ಣೆ ಕಾಳು

ಅಗಸೆ

ಅಖಿಲ ಭಾರತ ಅಗಸೆ ಯೋಜನೆಯಡಿಯಲ್ಲಿ ನಾಲ್ಕು ಪ್ರಯೋಗಗಳನ್ನು ಕೈಗೊಂಡಿದ್ದು, ಅಧಿಕ ಇಳುವರಿ ನೀಡುವ ವಿವಿಧ ತಳಿಗಳನ್ನು ಖುಷ್ಕಿ ಮತ್ತು ನೀರಾವರಿಯಾಶ್ರಿತ ಪ್ರದೇಶಗಳಿಗೆ ಉತ್ತಮವೆಂದು ಗುರುತಿಸಲಾಗಿದೆ. ಅಧಿಕ ಇಳುವರಿ ಹಾಗೂ ಬೂದು ರೋಗ ನಿರೋಧಕವುಳ್ಳ ಎರಡು ತಳಿಗಳಾದ RCRL-14 ಮತ್ತು RMLS-11, ತಳಿ ಮುಂಚೂಣಿ ಪ್ರಯೋಗ ತಾಕುಗಳಲ್ಲಿ ಪರೀಕ್ಷಿಸಲು ನೀಡಲಾಗಿತ್ತು. ವಿವಿಧ ಸ್ಥಳಗಳಲ್ಲಿ ಮತ್ತು ಕೇಂದ್ರದಲ್ಲಿ ತಳಿಗಳನ್ನು ಪರೀಕ್ಷಿಸುವ ಪ್ರಯೋಗಗಳಲ್ಲಿ RMLS-11(1005 ಕೆ.ಜಿ/ಹೆ) ಮತ್ತು PYT-3 (1261 ಕೆ.ಜಿ/ಹೆ) ಮತ್ತು PYT-1 (1111.5 ಕೆ.ಜಿ/ಹೆ) ಅಧಿಕ ಇಳುವರಿ ನೀಡುವಂತಹ ತಳಿಗಳು ಎಂದು ಗುರುತಿಸಲಾಯಿತು.

ಶೇಂಗಾ

2018–19 ನೇ ಸಾಲಿನಲ್ಲಿ ಅಖಿಲ ಭಾರತ ಶೇಂಗಾ ವಿಭಾಗದಲ್ಲಿ ಒಟ್ಟಾರೆ 12 ಪ್ರಯೋಗಗಳನ್ನು ಕೈಗೊಂಡಿದ್ದು, ಅದರಲ್ಲಿ 243 ಬಿಡುಗಡೆ ಪೂರ್ವ ತಳಿಗಳನ್ನು ಅಧಿಕ ಇಳುವರಿಗಾಗಿ ಹಾಗೂ ಎಣ್ಣೆ ಅಂಶಕ್ಕೆ ಪರೀಕ್ಷಿಸಲಾಯಿತು. ಆರಂಭಿಕ ಮೌಲ್ಯಮಾಪನ ಪ್ರಯೋಗ–1 ಮತ್ತು ಪ್ರಯೋಗ–2 ಗೆಜ್ಜೆ ಶೇಂಗಾ ಗುಂಪಿನಲ್ಲಿ, ISK-I–2018–16 (2442 ಕೆ.ಜಿ/ಹೆ) ಮತ್ತು SK-I-2017-22 (2488 ಕೆ.ಜಿ/ಹೆ); ಹಬ್ಬು ಶೇಂಗಾ ಗುಂಪಿನಲ್ಲಿ IVK-I-2018-17 (3842 ಕೆ.ಜಿ/ಹೆ) ಮತ್ತು IVK-I-2017-5 (3145 ಕೆ.ಜಿ/ಹೆ) ಎಂಬ ತಳಿಗಳನ್ನು ಅಧಿಕ ಇಳುವರಿ ನೀಡುವುವು ಎಂದು ಗುರುತಿಸಲಾಗಿದೆ. ಬೀಜೋತ್ಪಾದನೆ ಕಾರ್ಯವನ್ನು ವಿವಿಧ ತಳಿಗಳಾದ KDG-128, K-9. ಮತ್ತು R-2001-3 ಗಳಲ್ಲಿ ಕೈಗೊಳ್ಳಲಾಗಿದೆ.

ಕುಸುಬೆ

ವಲಯ ಕೃಷಿ ಸಂಶೋಧನಾ ಕೇಂದ್ರ, ಕಲಬುರಗಿಯಲ್ಲಿ ಮೂರು ಪರೀಕ್ಷಣಾ ಪ್ರಭೇದಗಳನ್ನೊಳಗೊಂಡು, 20 ಕುಸುಬೆ ತಳಿಗಳನ್ನು ಉಪಯೋಗಿಸಿಕೊಂಡು ಕೈಗೊಂಡ ಪ್ರಯೋಗದಲ್ಲಿ Sa G-17 (1453 ಕೆ.ಜಿ/ಹೆ), Sa G-5 (1342 ಕೆ.ಜಿ/ಹೆ), Sa G-1 (1246 ಕೆ.ಜಿ/ಹೆ) ಹಾಗೂ Sa G-14 (1212 ಕೆ.ಜಿ/ಹೆ) ಕುಸುಬೆ ತಳಿಗಳ ಪ್ರಭೇದಗಳು ಅಣ್ಣಿಗೇರಿ–1 ಕ್ಕಿಂತ ಉತ್ತಮ ಇಳುವರಿಯನ್ನು ನೀಡಿವೆ.

ವಾಣಿಜ್ಯ ಬೆಳೆಗಳು

ಹತ್ತಿ

1. ಸಂಕರಣ ಹತ್ತಿ ತಳಿಯಾದ BGDHH 697 ಯನ್ನು ವಲಯ 2 ಮತ್ತು 3 ರಲ್ಲಿ ನೀರಾವರಿಯಾಶ್ರಿತ ಬೆಳೆಯಾಗಿ, ವಲಯ ಸಂಶೋಧನಾ ಮತ್ತು ವಿಸ್ತರಣಾ ಸಮಿತಿ ಸಭೆಯಲ್ಲಿ ಬಿಡುಗಡೆಗೆ ಸ್ವೀಕರಿಸಲಾಯಿತು.
2. ಅಖಿಲ ಭಾರತ ಸಂಯೋಜಿತ ಪ್ರಯೋಗಗಳಲ್ಲಿ ರಾಯಚೂರು ಹತ್ತಿ ವಿಭಾಗದಿಂದ ತಯಾರುಪಡಿಸಲಾದ ತಳಿ RAH 1076 ತಳಿಯನ್ನು ಅತ್ಯುತ್ಯಮ ತಳಿ ಎಂದು ದಕ್ಷಿಣ ಭಾರತದ ಎಲ್ಲಾ ಸಂಶೋಧನಾ ಕೇಂದ್ರಗಳಲ್ಲಿ ಗುರುತಿಸಲಾಯಿತು.
3. ಸಂಕರಣ ಹತ್ತಿ ತಳಿ RAHH 1011 ನ್ನು ದಕ್ಷಿಣ ವಲಯದ ನೀರಾವರಿ ಪ್ರದೇಶಗಳಲ್ಲಿ ಅತ್ಯುತ್ಯಮ ಸಂಕರಣ ತಳಿ ಎಂದು ಪರಿಗಣಿಸಲಾಯಿತು. ಇದು ಹೆಕ್ಟೇರ್‌ಗೆ ಸರಾಸರಿ 22 ರಿಂದ 26 ಕ್ವಿಂಟಾಲ್ ಇಳುವರಿ ನೀಡಿರುತ್ತದೆ.
4. ಗುಂಟೂರಿನ ಲ್ಯಾಮ್ ಸಂಶೋಧನಾ ಕೇಂದ್ರದಲ್ಲಿ ನಡೆದ ಹತ್ತಿಯ ವಾರ್ಷಿಕ ಕಾರ್ಯಗಾರದಲ್ಲಿ ಸುಧಾರಿತ ಹಿರ್ಸುಟಮ್ ಜಾತಿಯ ಹತ್ತಿ ತಳಿ BGDS 1033 ತಳಿಯನ್ನು ಹೆಚ್ಚಿನ ಇಳುವರಿ ಕೊಡುವಂತಹ ತಳಿ ಎಂದು ಗುರುತಿಸಿ ಅಧಿಸೂಚನೆಗೆ ಸರ್ಕಾರಕ್ಕೆ ಸಲ್ಲಿಸಲಾಗಿದೆ.
5. ಹೊಸ ಇಂಟ್ರಾಹಿರ್ಸುಟಮ್ ಸಂಕರಣ ತಳಿಗಳಾದ RAHH 1070 ಮತ್ತು RAHH 1703 ಗಳನ್ನು ಅಧಿಕ ಇಳುವರಿ ಮತ್ತು ಅತ್ಯಂತ ಶ್ರೇಷ್ಠ ಗುಣಮಟ್ಟ ಉಳ್ಳವವೆಂದು ಗುರುತಿಸಲಾಗಿದೆ.

ಮೆಣಸಿನಕಾಯಿ

ಮೆಣಸಿನ ಬೆಳೆಯಲ್ಲಿ ಎರಡು ತಳಿಗಳಾದ G-4-L ಮತ್ತು ರಾಯಚೂರು ಬುಲೆಟ್ ತಳಿಗಳು ಕಾಯಿಕೊರಕ ಕೀಟಗಳಿಗೆ ಹೆಚ್ಚು ನಿರೋಧಕ ಶಕ್ತಿಯನ್ನು ಹೊಂದಿರುತ್ತವೆ ಮತ್ತು PBC-80, G-4-L ಹಾಗೂ M-421 ತಳಿಗಳು ಚಿಬ್ಬು ರೋಗ ನಿರೋಧಕ ಶಕ್ತಿವುಳ್ಳವಾಗಿವೆ. ಅಧಿಕ ಇಳುವರಿ ಉಳ್ಳ ಸಂಕರಣ ತಳಿ UARChH42, UARChH43, PBC 80, JNA1, JNB1, ಬೂದು ರೋಗ ನಿರೋಧಕ ಎಂದು ಗುರುತಿಸಲಾಗಿದೆ. ಮೇಲಿನ ಎರಡು ಸಂಕರಣ ತಳಿಗಳನ್ನು ಅಖಿಲ ಭಾರತ ಯೋಜನೆಯಡಿಲ್ಲಿ ಪರೀಕ್ಷಿಸಲು ನೀಡಲಾಗಿದೆ.

3.5.2 ಬೆಳೆ ಉತ್ಪಾದನೆ

ಭತ್ತ

1. ಕೂರಿಗೆ ಭತ್ತದ ನಾಟಿ ಪದ್ಧತಿಯ ಅಡಿಯಲ್ಲಿ ವಿವಿಧ ಬಿತ್ತನೆಯ ದಿನಾಂಕಗಳಲ್ಲಿ ವಿವಿಧ ಭತ್ತದ ತಳಿಗಳ ಕಾರ್ಯಕ್ಷಮತೆ
2. ಕೂರಿಗೆ ಭತ್ತದಲ್ಲಿ ಹನಿ ನೀರಾವರಿ ಮತ್ತು ರಸ ಗೊಬ್ಬರದ ನಿರ್ವಹಣೆ

ಜೋಳ

1. ಮಳೆಯಾಶ್ರಿತ ಜೋಳದಲ್ಲಿ ವಿವಿಧ ತಳಿಗಳು ಮತ್ತು ರಸಗೊಬ್ಬರಗಳ ಪರಿಣಾಮ.
2. ಹಿಂಗಾರು ಜೋಳದಲ್ಲಿ ಉಳಿದಂತಹ (receding) ತೇವಾಂಶದ ಪರಿಸ್ಥಿತಿಯಲ್ಲಿ ವಿವಿಧ ರಸಗೊಬ್ಬರಗಳ ಪ್ರಮಾಣದಿಂದ ಜೋಳದ ಬೆಳೆವಣಿಗೆ ಮೇಲೆ ಮತ್ತು ಉತ್ಪಾದನೆಯಲ್ಲಿ ಆಗುವ ಪರಿಣಾಮ.
3. ಜೋಳದಲ್ಲಿ ದ್ರವರೂಪದ ಜೈವಿಕ ಗೊಬ್ಬರಗಳ ಬಳಕೆಯಿಂದ ಜೋಳದ ಇಳುವರಿ ಮೇಲೆ ಆಗುವ ಪರಿಣಾಮ.

ತೊಗರಿ

- ತೊಗರಿ ಬೆಳೆಯಲ್ಲಿ ಬರ ನಿರೋಧಕ ಕ್ರಮಗಳು.
- ಎಲೆಗಳ ಮೇಲೆ ಪೋಷಕಾಂಶಗಳ ಸಿಂಪರಣೆಯ ಮೂಲಕ ತೊಗರಿಯ ಉತ್ಪಾದನಾ ಕ್ಷಮತೆಯನ್ನು ಹೆಚ್ಚಿಸುವುದು.
- ತೊಗರಿಯ ಉತ್ಪಾದನೆಯಲ್ಲಿ ತೇವಾಂಶ ಕೊರತೆಯನ್ನು ನಿರ್ವಹಿಸಲು GA_3 (ಜಿಬ್ಬರ್‌ಲಿಕ್ ಆಮ್ಲ)ದ ಪರಿಣಾಮ.
- ತೊಗರಿಯಲ್ಲಿ ಹನಿ ನೀರಾವರಿ ಪದ್ಧತಿ.
- ಹನಿ ನೀರಾವರಿ ಪದ್ಧತಿಯಲ್ಲಿ ತೊಗರಿ ಆಧಾರಿತ ಬೆಳೆ ಪದ್ಧತಿಗಳ ಕಾರ್ಯಕ್ಷಮತೆ.

ಕಡಲೆ

- ಯಾಂತ್ರಿಕ ಕಟಾವು ಪದ್ಧತಿಯಲ್ಲಿ ಅಳವಡಿಸಿರುವ ಕಡಲೆ ತಳಿಗಳ ಉತ್ಪಾದನೆಯನ್ನು ಬಲವರ್ಧನೆಗೊಳಿಸುವುದು.
- ಕಡಲೆ ಆಧಾರಿತ ಅಂತರ ಬೆಳೆ ಪದ್ಧತಿಯಲ್ಲಿ ಕಡಲೆ ಉತ್ಪಾದಕತೆಯನ್ನು ಉನ್ನತಿಕರಿಸುವುದು.
- ನಿಗಧಿತ ಪೋಷಕಾಂಶಗಳುಳ್ಳ ರಸಗೊಬ್ಬರಗಳ ಬಳಕೆಯಿಂದ ಕಡಲೆ ಬೆಳೆಯಲ್ಲಿ ಉತ್ಪಾದನೆ ಮತ್ತು ಲಾಭಾಂಶವನ್ನು ಹೆಚ್ಚಿಸುವುದು.
- ಖುಷ್ಕಿ ಮತ್ತು ಅರೇ ನೀರಾವರಿ ಕಡಲೆಯಲ್ಲಿ ಹೈಡ್ರೊಜೆಲ್ ಬಳಕೆಯಿಂದ ಪರಿಕರಗಳ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸುವುದು
- ಸಿಂಚನ ನೀರಾವರಿ ಪದ್ಧತಿ ಬಳಸಿ ಕಡಲೆಯಲ್ಲಿ ಅಧಿಕ ಇಳುವರಿ

ಸೂರ್ಯಕಾಂತಿ

- ಭತ್ತದ ಗದ್ದೆಯಲ್ಲಿ, ಭತ್ತ ಕಟಾವಿನ ನಂತರ ಸೂರ್ಯಕಾಂತಿ ಬೇಸಾಯದ ಕೃಷಿ ತಾಂತ್ರಿಕತೆಗಳು
- ಸೂರ್ಯಕಾಂತಿ ಆಧಾರಿತ ಬೆಳೆ ಪದ್ಧತಿಯಲ್ಲಿ ಸುಸ್ಥಿರ ಉತ್ಪಾದನೆಗಾಗಿ ಉತ್ತಮ ಕೃಷಿ ಪದ್ಧತಿಗಳು
- ಸೂರ್ಯಕಾಂತಿಯಲ್ಲಿ ಪೋಷಕಾಂಶಗಳ ಸಿಂಪರಣೆ
- ಸವಳು ಮಣ್ಣಿನಲ್ಲಿ ಸೂರ್ಯಕಾಂತಿ ಬೆಳೆಯ ಕೃಷಿ ತಾಂತ್ರಿಕತೆಗಳು

ಹತ್ತಿ

- ಬಿಟಿ ಹತ್ತಿಯಲ್ಲಿ ಸಾರಜನಕ ಕಾರ್ಯಕ್ಷಮತೆಯನ್ನು ಹೆಚ್ಚಿಸುವುದು
- ಹತ್ತಿಯಲ್ಲಿ ರೈತ ಕಾರ್ಮಿಕರ ಸದ್ಬಳಕೆ

ಕಬ್ಬು

- ಕಬ್ಬಿನಲ್ಲಿ ವಿವಿಧ ಬೇಸಾಯ ಪದ್ಧತಿ ಮತ್ತು ನಾಟಿ ಮಾಡುವ ವಿಧಾನಗಳು

ಅಗಸೆ

- ನೀರಾವರಿಯಲ್ಲಿ ಅಗಸೆ ಬೆಳೆಯಲ್ಲಿ ಹೊಸ ಕಳೆನಾಶಕಗಳನ್ನು ಬಳಸಿ ಕಳೆ ನಿರ್ವಹಣೆ ಮಾಡುವುದು.
- ಸೀಮಿತ ನೀರಾವರಿ ಅಡಿಯಲ್ಲಿ ಅಗಸೆ ಬೆಳೆಯ ಬೆಳವಣಿಗೆ ಮತ್ತು ಇಳುವರಿ ಮೇಲೆ ಸೂಕ್ಷ್ಮ ಪೋಷಕಾಂಶಗಳ ಪರಿಣಾಮ.
- ಅಗಸೆ ಬೆಳೆಯ ಉತ್ಪಾದಕತೆ ಮತ್ತು ಲಾಭ ಹೆಚ್ಚಿಸುವಲ್ಲಿ ಬೆಳೆವಣಿಗೆ ನಿಯಂತ್ರಕಗಳ ಪರಿಣಾಮ.

ಗಮ್ ಗಾವರ್ (Gumguar)

- ಹರಳು (ಔಡಲ) ಆಧಾರಿತ ಅಂತರ ಬೆಳೆ ಪದ್ಧತಿಯಲ್ಲಿ ಅಂಟು ಚವಳಿ ತಳಿಗಳ ಉತ್ಪಾದಕತೆ.

ಮೇವಿನ ಬೆಳೆಗಳು

- ಮೇವಿನ ಜೋಳದಲ್ಲಿ ರಸಗೊಬ್ಬರಗಳ ನಿರ್ವಹಣೆ

ಬೆಳೆ ಪದ್ಧತಿ ಮತ್ತು ಸಮಗ್ರ ಕೃಷಿ ಪದ್ಧತಿ

- ತುಂಗಭದ್ರ ನೀರಾವರಿ ಕ್ಷೇತ್ರದಲ್ಲಿ ಭತ್ತ ಆಧಾರಿತ ತರಕಾರಿ/ಔಷಧಿ/ಮಸಾಲೆ ಪದಾರ್ಥಗಳ ಉತ್ಪಾದನಾ ಕೃಷಿ ಪದ್ಧತಿಗಳನ್ನು ಗುರುತಿಸುವಿಕೆ.
- ತುಂಗಭದ್ರ ನೀರಾವರಿ ಕ್ಷೇತ್ರದಲ್ಲಿ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಸೂಕ್ತವಾದ ಸಮಗ್ರ ಕೃಷಿ ಪದ್ಧತಿಯ ಅಳವಡಿಕೆ ಮತ್ತು ಅಭಿವೃದ್ಧಿ.

ಕಳೆ ನಿಯಂತ್ರಣ

- ಭತ್ತದ ಸಸಿ ಮಡಿಯಲ್ಲಿ ಪೆನಾಕ್ಸುಲಂ 24% ಎಸ್.ಸಿ (ಗ್ರಾನೈಟ್) ಕಳೆನಾಶಕ ಬಳಕೆ
- ವಿವಿಧ ರೀತಿಯ ಭತ್ತವನ್ನು ಬೆಳೆಯುವ ಪದ್ಧತಿಗಳಲ್ಲಿ ನೀರು ನಿರ್ವಹಣೆ ಮತ್ತು ಕಳೆ ನಿಯಂತ್ರಣ ಕ್ರಮಗಳು
- ವಿವಿಧ ರೀತಿಯ ಭತ್ತವನ್ನು ಬೆಳೆಯುವ ಪದ್ಧತಿಗಳಲ್ಲಿ ಗೊಬ್ಬರ ಮತ್ತು ಕಳೆಯ ನಿರ್ವಹಣಾ ಕ್ರಮಗಳು
- ಮುಂಗಾರು ಜೋಳದಲ್ಲಿ ಕಳೆ ನಿಯಂತ್ರಣ ಮತ್ತು ಹಿಂಗಾರು ಕಡಲೆಯ ಮೇಲೆ ಅದರ ಪರಿಣಾಮ
- ಹೆಸರು ಬೆಳೆಯಲ್ಲಿ ಕಳೆ ನಿಯಂತ್ರಣ
- ಹತ್ತಿಯಲ್ಲಿ ಪಾರಕ್ವಾಟ್ ಕಳೆನಾಶಕ ಬಳಸಿ ಕಳೆ ನಿಯಂತ್ರಣ ಮತ್ತು ಹಿಂಗಾರು ಉದ್ದಿನ ಮೇಲೆ ಅದರ ಪ್ರಭಾವ
- ಉದ್ದಿನಲ್ಲಿ ಫ್ಲುಜಿಫಾಪ್ 11.1% w/w + ಫೋಮಸಫೆನ್ ಎಸ್ಎಲ್. 11.1% w/w ಕಳೆನಾಶಕ ಬಳಸಿ ಕಳೆ ನಿಯಂತ್ರಣ ಮತ್ತು ಸದರಿ ಬೆಳೆಯಾದ ಹಿಂಗಾರು ಕಡಲೆ ಮೇಲೆ ಅದರ ಪರಿಣಾಮ
- ಹೆಸರಿನಲ್ಲಿ ಫ್ಲುಜಿಫಾಪ್ 11.1% w/w + ಫೋಮಸಫೆನ್ ಎಸ್ಎಲ್. 11.1% w/w ಕಳೆನಾಶಕ ಬಳಸಿ ಕಳೆ ನಿಯಂತ್ರಣ ಮತ್ತು ಸದರಿ ಬೆಳೆಯಾದ ಎಳ್ಳಿನ ಮೇಲೆ ಅದರ ಪರಿಣಾಮ
- ಸೂರ್ಯಕಾಂತಿಯಲ್ಲಿ ಸಮಗ್ರ ಕಳೆ ನಿರ್ವಹಣೆ
- ಶೇಂಗಾ + ತೊಗರಿ ಅಂತರ ಬೆಳೆ ಪದ್ಧತಿಯಲ್ಲಿ ಕಳೆ ನಿರ್ವಹಣೆ
- ಹತ್ತಿಯಲ್ಲಿ ಇಥೈಲ್ಫ್ಲೂರಾಲಿನ್ 36% ಇಸಿ ಕಳೆನಾಶಕ ಬಳಸಿ ಕಳೆ ನಿಯಂತ್ರಣ ಮತ್ತು ಅದರ ನಂತರದ (ಸದರಿ) ಬೆಳೆಯ ಮೇಲೆ ಅದರ ಪರಿಣಾಮ
- ಕಬ್ಬಿನಲ್ಲಿ ಸಮಗ್ರ ಕಳೆ ನಿರ್ವಹಣೆ

ಸಾವಯವ ಕೃಷಿ

- ತೊಗರಿ + ಸೂರ್ಯಕಾಂತಿ ಮಿಶ್ರ ಬೆಳೆ (1:1) ಪದ್ಧತಿಯಲ್ಲಿ ಸಂಪೂರ್ಣ ಸಾವಯವ ಪದ್ಧತಿಯ ಸುಧಾರಿತ ಬೇಸಾಯ ಕ್ರಮಗಳು
- ಹತ್ತಿ ಉತ್ಪಾದನೆಯಲ್ಲಿ ಸಾಯವಯ ಕೃಷಿ ತಂತ್ರಜ್ಞಾನಗಳು

ತೋಟಗಾರಿಕೆ

- ವಿವಿಧ ರೂಪಾಂತರ ಪದ್ಧತಿಗಳು, ಪ್ರತಿಬಳ್ಳಿಯಲ್ಲಿ ಹಣ್ಣುಗಳ ಸಂಖ್ಯೆ ರಂಜಕಯುಕ್ತ ರಸಗೊಬ್ಬರಗಳ ಸಸ್ಯ ಸಿಂಪರಣೆಗೆ ಸಂರಕ್ಷಿತ ಹಾಗೂ ಹೊರವಲಯಗಳಲ್ಲಿ ಬೆಳೆದ ಕರಬೂಜ ಹಣ್ಣಿನ ಬೆಳೆಯ ಅಧ್ಯಯನ.
- ಸುಗಂಧರಾಜ ಬೆಳೆಯಲ್ಲಿ ಕಳೆ ನಿರ್ವಹಣೆ.
- ಸುಗಂಧರಾಜ ಗಡ್ಡೆಗಳ ಮೇಲೆ (GA_3) ಬೆಳೆ ಪ್ರಚೋದಕಗಳ ಪ್ರಭಾವ.

ಮಣ್ಣು ವಿಜ್ಞಾನ ಮತ್ತು ಕೃಷಿ ರಸಾಯನಶಾಸ್ತ್ರ

- ಕರ್ನಾಟಕದ ತುಂಗಭದ್ರಾ ಅಚ್ಚುಕಟ್ಟು ಪ್ರದೇಶಕ್ಕೆ ಭತ್ತ ಆಧಾರಿತ ತರಕಾರಿ/ಔಷಧಿಯ/ಮಸಾಲೆ ಬೆಳೆ ಪದ್ಧತಿಯ ಗುರುತಿಸುವಿಕೆ
- ಕರ್ನಾಟಕದ ತುಂಗಭದ್ರಾ ಅಚ್ಚುಕಟ್ಟು ಪ್ರದೇಶದ ಸಣ್ಣ ರೈತರ ಜೀವನೋಪಾಯ ಸುರಕ್ಷತೆಗಾಗಿ ಸಮಗ್ರ ಕೃಷಿ ವ್ಯವಸ್ಥೆ
- ತುಂಗಭದ್ರಾ ಅಚ್ಚುಕಟ್ಟು ಪ್ರದೇಶದ ಹಂತ–4 ರ ಅಡಿಯಲ್ಲಿ ಉಪ–ಮೇಲ್ಮೈ ಬಸಿಗಾಲುವೆ ಕಾಮಗಾರಿಗಳ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ
- ಕಲಬುರಗಿ, ಯಾದಗಿರಿ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಆಯ್ದ ಸೂಕ್ಷ್ಮ ಜಲಾನಯನ ಪ್ರದೇಶಗಳ ಭೂ ಸಂಪನ್ಮೂಲಗಳ ಅವಿಷ್ಕಾರ / ದಾಸ್ತಾನು

ಜೀವರಸಾಯನ ಶಾಸ್ತ್ರ

- ಕರಗಬಲ್ಲ ಪುನರ್ ಸಂಯೋಜಕ ಪ್ರೋಟೀನ್‌ಗಳ ಉತ್ತಮ ಅಭಿವ್ಯಕ್ತಿಗಾಗಿ ಕ್ರೆಲಾಕ್ಸ್ ಕಾರ್ಯ ವಿಧಾನವನ್ನು ಬಳಸಿಕೊಂಡು ಇ ಕೋಲೈ ವ್ಯವಸ್ಥೆಯಲ್ಲಿ ರಚಿಸುವುದು
- ಎಫ್‌ಟಿ–ಐಆರ್ ಸ್ಪೆಕ್ಟ್ರೋಸ್ಕೋಪಿ ತಂತ್ರಜ್ಞಾನವನ್ನು ಬಳಸಿ ಮಸಾಲೆ ಮತ್ತು ದ್ವಿದಳ ಧಾನ್ಯಗಳಲ್ಲಿ ಕಲುಷಿತ ಮೆಟಿನಿಲ್ ಹಳದಿ ತ್ವರೊತ ಪತ್ತೆ ಮತ್ತು ಪ್ರಮಾಣೀಕರಣ

ಬೆಳೆ ಶರೀರ ಕ್ರಿಯಾಶಾಸ್ತ್ರ

- ಸೋಯಾಅವರೆ ಉತ್ಪಾದಕತೆಯನ್ನು ಹೆಚ್ಚಿಸಲು ಪೋಷಕಾಂಶಗಳು ಮತ್ತು ಸಸ್ಯ ಬೆಳವಣಿಗೆ ಪ್ರಚೋದಕಗಳ ಬಳಕೆ
- ಬರ ಸಹಿಷ್ಣುತೆಗಾಗಿ ವಿವಿಧ ಹೆಸರು ಪ್ರಭೇದಗಳ ಪರೀಕ್ಷೆ
- ಉದ್ದು ಬೆಳೆಯಲ್ಲಿ ಯಾಂತ್ರಿಕ ಕೊಯ್ಲಿಗೆ ಸೂಕ್ತವಾದ ಅಸ್ತಿತ್ವದಲ್ಲಿರುವ ತಳಿಯ ಉತ್ಪಾದಕತೆ ಸುಧಾರಿಸಲು ಗಾಮಾ ವಿಕಿರಣ ತಂತ್ರಜ್ಞಾನದ ಬಳಕೆ.
- ಬರ ಸಹಿಷ್ಣುತೆಗಾಗಿ ವಿವಿಧ ತೊಗರಿ ಪ್ರಭೇದಗಳ ಪರೀಕ್ಷೆ
- ಬದಲಾಗುತ್ತಿರುವ ಹವಾಮಾನ ಸ್ಥಿತಿಯಲ್ಲಿ ಮಧ್ಯಮ ಅವಧಿಯ ಹೆಚ್ಚಿನ ಇಳುವರಿ ಕೊಡುವ ತೊಗರಿ ತಳಿಗಳ ಮೌಲ್ಯಮಾಪನ
- ವಿಭಿನ್ನ ಪೋಷಕಾಂಶಗಳ ಮತ್ತು ನೀರಿನ ನಿರ್ವಹಣೆಯ ಅಡಿಯಲ್ಲಿ ಹೆಚ್ಚಿನ ಉತ್ಪಾದಕತೆಗಾಗಿ ಬೆಳೆಗಳ ಮೌಲ್ಯಮಾಪನ.

ಕೃಷಿ ಸೂಕ್ಷ್ಮ ಅಣುಜೀವಿಶಾಸ್ತ್ರ

- ವಿವಿಧ ಕೃಷಿ ಹವಾಮಾನ ವಲಯಗಳಲ್ಲಿ ತೊಗರಿಯಲ್ಲಿ ರೈಜೋಬಿಯಂ ಜೀವಾಣುಗಳ ಬಳಕೆ
- ಭತ್ತದ ಇಳುವರಿ ಹೆಚ್ಚಿಸಲು ಸತು (Zn) ಕರಗಿಸುವ ಪಿಜಿಪಿಆರ್ ಸೂಕ್ಷ್ಮಾಣುಗಳ ಬಳಕೆ
- ಸೂಪರ್ ಕ್ರಿಟಿಕಲ್ ಇಂಗಾಲದ ಡೈ ಆಕ್ಸೈಡ ಬಳಸಿ ಸ್ಪಿರುಲಿನಾ ಪಾಚಿಯಿಂದ ಫೈಕೋಸಯನಿನ್ ಎಂಬ ನೀಲಿವರ್ಣದ ದ್ರವ್ಯವನ್ನು ಬೇರ್ಪಡಿಸುವ ತಂತ್ರಜ್ಞಾನ.

ಬೀಜ ವಿಜ್ಞಾನ ಮತ್ತು ತಂತ್ರಜ್ಞಾನ

1. ಕಾಬೂಲಿ ಕಡಲೆಯಲ್ಲಿ (ಎಮ್.ಎನ್.ಕೆ–1) ಇಳುವರಿಯನ್ನು ಹೆಚ್ಚಿಸಲು ಗರಿಷ್ಟ ಬಿತ್ತನೆ ಬೀಜದ ಪ್ರಮಾಣವನ್ನು ನಿರ್ಧರಿಸುವುದು.
2. ಕಡಲೆ ಬೀಜಗಳನ್ನು ಶೇಖರಿಸಿಡಲು ಉತ್ತಮ ಪ್ಯಾಕಿಂಕ್ ವಸ್ತುಗಳ ಮೌಲ್ಯಮಾಪನ ಮತ್ತು ಗುರುತಿಸುವಿಕೆ.
3. ಸೋಯಾಅವರೆ ಬೀಜದ ಗುಣಮಟ್ಟವನ್ನು ನಿರ್ವಹಿಸಲು ಅತ್ಯುತ್ತಮ ಬೀಜ ಉಪಚಾರವನ್ನು ಗುರುತಿಸುವುದು.
4. ಸೋಯಾ ಅವರೆ/ಜೆಎಸ್335 ಬೀಜವನ್ನು ಗ್ರೇಡಿಂಗ್ ಮಾಡಲು ಆಯಾತಕಾರದ ಗಾತ್ರದ 3.75ಮಿಮಿ ಜರಡಿ ಉಪಯೋಗಿಸಬಹುದು.

5. ತೋಗರಿ/ಜಿಆರ್‌ಜಿ–811 ಬೀಜವನ್ನು ಗ್ರೇಡಿಂಗ್ ಮಾಡಲು ದುಂಡನೆಯ ಗಾತ್ರದ 3.75ಮಿಮಿ ಜರಡಿ ಉಪಯೋಗಿಸಬಹುದು.

3.5.3 ಬೆಳೆ ಸಂರಕ್ಷಣೆ

ಕೃಷಿ ಕೀಟಶಾಸ್ತ್ರ

- ಇ–ಸ್ಯಾಪ್ ತಂತ್ರಜ್ಞಾನವನ್ನು ಕರ್ನಾಟಕ ರಾಜ್ಯದ್ಯಾಂತ ವಿಸ್ತರಿಸುವ ಯೋಜನೆ
- ಅಝಿಲ್ಲಾ ಮತ್ತು ಸೋಯಾ ಹಾಲು ತಲಾ ಶೇ. 2 ರಷ್ಟು ಹಿಪ್ಪುನೇರಳೆ ಕಟಾವಿನ ನಂತರ 25 ಮತ್ತು 35 ನೇ ದಿನಗಳಲ್ಲಿ ಎಲೆಗಳ ಮೇಲೆ ಸಿಂಪಡಿಸಿದಾಗ ಹಿಪ್ಪುನೇರಳೆ ಬೆಳೆಯ ಮೇಲೆ ಮತ್ತು ಇಂತಹ ಎಲೆಗಳನ್ನು ರೇಷ್ಮೆ ಹುಳುಗಳಿಗೆ ತಿನ್ನಿಸಿ ಬೆಳೆಸಿದಾಗ ಹಿಪ್ಪುನೇರಳೆ ರೇಷ್ಮೆ ಹುಳುಗಳ ಬೆಳವಣಿಗೆ ಮೇಲಿನ ಪರಿಣಾಮ.
- ಮೆಕ್ಕೆಜೋಳದಲ್ಲಿ ಕಾರ್ಬೋಫುರಾನ್ 3% ಜಿ ಕೀಟನಾಶಕ ಬಳಸುವ ಮೂಲಕ ಕಾಯಿ ಕೊರೆಯುವ ಕೀಟಗಳ ನಿಯಂತ್ರಣ.
- ಹತ್ತಿಯಲ್ಲಿ ಕ್ಲೋರಾಂಟ್ರಿನಿಪ್ರೋಲ್ 18.5% ಎಸ್‌ಸಿ ಕೀಟನಾಶಕ ಬಳಕೆಯಿಂದ ಕಾಯಿಕೊರಕಗಳ ನಿರ್ವಹಣೆ.

ಸಸ್ಯ ರೋಗಶಾಸ್ತ್ರ

- ಭತ್ತದ ಬೆಳೆಯಲ್ಲಿ ಎಲೆ ಕವಚ ರೋಗದ ನಿರ್ವಹಣೆ ಮಾಡಲು ಪ್ಲೋಸಿಲಜೋಲ್ 12.5 % + ಕಾರ್ಬೆಂಡೆಜಿಮ್ 25% ಎಸಿ. ಸಿ. 1.0 ಮಿ.ಲೀ. ಪ್ರತಿ ಲೀಟರ್ ನೀರಿನಲ್ಲಿ ಬೆರೆಸಿ ಸಿಂಪಡಿಸುವುದು ಹೆಚ್ಚು ಪರಿಣಾಮಕಾರಿ. ಟ್ರಿಪ್ಲಾಕ್ಸಿಸ್ಟ್ರೋಬಿನ್ 25% + ಟೆಬುಕೊನಜೋಲ್ 50% 75 ಡಬ್ಲೂಜಿ 0.4 ಗ್ರಾಂ./ಲೀ. ಶಿಲೀಂಧ್ರನಾಶಕವನ್ನು ಭತ್ತ ಕವಲೊಡೆಯುವ ಮತ್ತು ಶೇ. 50 ತೆನೆ ಹೊರ ಬರುವ ಹಂತದಲ್ಲಿ ಸಿಂಪಡಿಸುವುದರಿಂದ ಹುಸಿ ಕಾಡಿಗೆ ರೋಗವನ್ನು ತಡೆಗಟ್ಟಬಹುದು.
- ಕ್ಷೇತ್ರ ಪ್ರಯೋಗದಲ್ಲಿ ತೊಗರಿ ತಳಿಗಳಿಂದ ಎಜಿಎಲ್ 1603–2, ಜೆಎಸ್‌ಎ 59–2, ಜಿಪಿಟಿ–1 ಮತ್ತು ಐಸಿಪಿಎಲ್ 15017 ಬಂಜೆ ನಂಜು ರೋಗಕ್ಕೆ ನಿರೋಧಕ ಶಕ್ತಿಯನ್ನು ಹೊಂದಿವೆ.
- ಹೆಸರು ತಳಿಗಳಾದ ಟಿಆರ್‌ಸಿಆರ್‌ಎಂ–146, ಬಿಜಿಎಸ್–9 ಮತ್ತು ಟಿ.ಎಂ. 96–2 ಎಲೆಯ ರೋಗಗಳಿಗೆ ಮಧ್ಯಮ ರೋಗನಿರೋಧಕ ಶಕ್ತಿಯನ್ನು ಹೊಂದಿವೆ.
- ಸುಮಾರು 23 ಉದ್ದು ತಳಿಗಳಲ್ಲಿ, ಪಿ.ಎಂ.ಎಸ್–2 ತಳಿಯು ಬೂದಿರೋಗ ಮತ್ತು ಕಾಯಿ ಕೊಳೆ ರೋಗಗಳಿಗೆ ಮಧ್ಯಮ ರೋಗನಿರೋಧಕ ಶಕ್ತಿಯನ್ನು ಹೊಂದಿದೆ.
- ಪ್ಲೂಬೆಂಡಿಮೈಡ್ 3.5% + ಹೆಕ್ಸಾಕೊನಜೋಲ್ 5% ಪೀಡೆನಾಶಕವು 1250 ಗ್ರಾಂ. ಪ್ರತಿ ಹೆಕ್ಟೇರಿಗೆ ಸಿಂಪಡಿಸಿದಾಗ ಉದ್ದು ಬೆಳೆಯ ಕೀಟಗಳು ಮತ್ತು ಬೂದಿ ರೋಗ ಹತೋಟಿಗೆ ಪರಿಣಾಮಕಾರಿಯಾಗಿದೆ.
- ಸೋಯಾಬೀನ್ ತಳಿಗಳಾದ ಎಂಎಯುಎಸ್–71 ಎಂಎಯುಎಸ್–612, ಡಿಎಸ್‌ಬಿ–32, ಡಿಎಸ್‌ಬಿ–21 ಮತ್ತು ಎಆರ್‌ಎಸ್‌ಬಿ–1 ಕಾಯಿ ಅಂಗಮಾರಿ ರೋಗನಿರೋಧಕ ಶಕ್ತಿ ಹೊಂದಿವೆ.
- ಸೋಯಾಬೀನ್ ಬೆಳೆಯಲ್ಲಿ *ಟ್ರೈಕೊಡರ್ಮ ಹಾರ್ಜಿಯಾನಂ* 5 ಗ್ರಾಂ. / ಪ್ರತಿ ಕೆ.ಜಿ ಬೀಜಕ್ಕೆ ಬೀಜೋಪಚಾರ ಹಾಗೂ ಟೆಬುಕೊನಜೋಲ್ + ಟ್ರಿಪ್ಲಾಕ್ಸಿಸ್ಟ್ರೋಬಿನ್ 0.5 ಮಿಲೀ./ಲೀ. ನೀರಿಗೆ ಬೆರೆಸಿ ಬಿತ್ತಿದ 60 ಮತ್ತು 75 ದಿನಗಳಲ್ಲಿ ಸಿಂಪಡಿಸುವುದರಿಂದ ಬೀಜದಿಂದ ಪ್ರಸಾರವಾಗುವ ರೋಗಗಳನ್ನು ತಡೆಗಟ್ಟಬಹುದು.
- ಸೂರ್ಯಕಾಂತಿ ಕ್ಷೇತ್ರ ಪ್ರಯೋಗದಲ್ಲಿ ಎಲೆಮುಟುರು ನಂಜುರೋಗ ನಿಯಂತ್ರಿಸಲು 5 ಗ್ರಾಂ. / ಗ್ರಾಂ. ಬೀಜಕ್ಕೆ ಇಮಿಡಾಕ್ಲೊಪ್ರಿಡ್ 600 ಎಫ್‌ಎಸ್ ನಿಂದ ಬೀಜೋಪಚಾರ ಮತ್ತು 0.25 ಗ್ರಾಂ. ಲೀ. ನೀರಿಗೆ ಪ್ಲೊನಿಕಮೈಡ್ 50 ಡಬ್ಲುಜಿ ಬಿತ್ತಿದ 30, 45 ಹಾಗೂ 60 ದಿನಗಳಲ್ಲಿ ಸಿಂಪಡಿಸುವುದು ಅತ್ಯಂತ ಪರಿಣಾಮಕಾರಿ ಎಂದು ತಿಳಿದು ಬಂದಿರುತ್ತದೆ.
- ಸೂರ್ಯಕಾಂತಿ ಬೀಜಕ್ಕೆ 10 ಗ್ರಾಂ. / ಕಿ.ಗ್ರಾಂ. *ಸೂಡೊಮೆನಾಸ್ ಪ್ಲೂರೆಸೆನ್ಸ್* ದಿಂದ ಬೀಜೋಪಚಾರ ಮತ್ತು 250 ಕಿ.ಗ್ರಾಂ. ಕೊಟ್ಟಿಗೆ ಗೊಬ್ಬರದಲ್ಲಿ 2.5 ಕಿ.ಗ್ರಾಂ. *ಸೂಡೊಮೊನಾಸ್ ಪ್ಲೂರೆಸೆನ್ಸ್*ನ್ನು ಸಂಪದ್ಭರಿಸಿ ಮಣ್ಣಿಗೆ ಸೇರಿಸಿಸುವುದು ಹಾಗೂ

*ಸೊಡೊಮೊನಾಸ್ ಪ್ಲೂರೆಸೆನ್ಸ್*ನ್ನು ಬಿತ್ತಿದ 35, 45 ಮತ್ತು 60 ದಿನಗಳಲ್ಲಿ ಸಿಂಪಡಿಸುವುದರಿಂದ ಆಲ್ಟರ್‌ನೇರಿಯಾ ಎಲೆ ಚುಕ್ಕೆರೋಗ, ಬೂದಿರೋಗ ಮತ್ತು ನೆಕ್ರೋಸಿಸ್ ರೋಗಗಳನ್ನು ನಿರ್ವಹಣೆ ಮಾಡಬಹುದು.

- ಸೂರ್ಯಕಾಂತಿ ತಳಿಗಳಾದ ಪಿಎಮ್–17 ಮತ್ತು ಪಿಎಮ್ –160 ಆಲ್ಟರ್‌ನೇರಿಯಾ ಎಲೆ ಚುಕ್ಕಿರೋಗಕ್ಕೆ ಮಧ್ಯಮ ರೋಗನಿರೋಧಕ ಶಕ್ತಿ ಹೊಂದಿವೆ ಎಂದು ತಿಳದು ಬಂದಿರುತ್ತದೆ.
- ಆಗಸೆ ಬೆಳೆಯ ಆರ್‌ಆರ್‌ಎನ್–4 ತಳಿಯು ಅತಿ ಹೆಚ್ಚು ಬೂದಿ ರೋಗದ ಒತ್ತಡದಲ್ಲೂ ಹೆಚ್ಚು ರೋಗನಿರೋಧಕ ಶಕ್ತಿಯನ್ನು ಹೊಂದಿರುತ್ತದೆ.
- ಇದಲ್ಲದೆ ಮತ್ತೋಂದು ಕ್ಷೇತ್ರ ಪ್ರಯೋಗದಲ್ಲಿ ಅಗಸೆ ತಳಿಗಳಾದ ಪಿಸಿಎಲ್–33, ಆರ್‌ಎಲ್‌ಎಂಎಸ್–11, ಎಲ್‌ಸಿ–2279 ಗಳು ಬೂದಿ ರೋಗಕ್ಕೆ ಅತೀ ಹೆಚ್ಚು ರೋಗ ನಿರೋಧಕ ಶಕ್ತಿ ಹೊಂದಿವೆ.
- ಮೆಣಸಿನಕಾಯಿ ಕ್ಷೇತ್ರ ಪ್ರಯೋಗದಲ್ಲಿ ರೋಗ ಕಂಡು ತಕ್ಷಣ ಟೆಬುಕೋನಜೋಲ್ 25–9 ಇ.ಸಿ 1.25 ಮಿಲೀ/ಲೀ. ನೀರಿನಲ್ಲಿ ಬೆರೆಸಿ 15 ದಿನಗಳ ಅಂತರದಲ್ಲಿ ಸಿಂಪರಣೆ ಮಾಡುವುದರಿಂದ ಹಣ್ಣು ಕೊಳೆ ರೋಗವನ್ನು ತಡೆಗಟುವುದಲ್ಲದೆ ಹೆಚ್ಚಿನ ಇಳುವರಿ ಪಡೆಯಬಹುದು.

3.5.4 ಕೃಷಿ ತಾಂತ್ರಿಕತೆ ಹಾಗೂ ಸಂಸ್ಕರಣೆ

ಮಣ್ಣು ಮತ್ತು ನೀರು ಸಂರಕ್ಷಣೆ ತಾಂತ್ರಿಕತೆ

- ರಾಯಚೂರು ಹವಾಮಾನ ಸ್ಥಿತಿಯಲ್ಲಿ ಹನಿ ನೀರಾವರಿ ಮತ್ತು ಪ್ಲಾಸ್ಟಿಕ್ ಹೊದಿಕೆ ಅಳವಡಿಸಿ ಬೆಳೆದ ತೊಗರಿ ಬೆಳೆಯ ಸಾಮರ್ಥ್ಯ ಮೌಲ್ಯ ಮಾಪನ.
- ಕೃಷಿ ಹೊಂಡ ಮತ್ತು ಅಂತರ್ಜಲಗಳಲ್ಲಿ ಪ್ಲಾಸ್ಟಿಕ್ ಹೊದಿಕೆ ಬಳಿಸಿ ಕೊಯ್ಲು ಮಾಡಿದ ನೀರನ್ನು ಬೆಳೆ ಉತ್ಪಾದನೆಯಲ್ಲಿ ಸದ್ಬಳಸಿರುವುದು.
- ಸಣ್ಣ ಮತ್ತು ಅತಿ ಸಣ್ಣ ವರ್ಗದ ರೈತರಿಗಾಗಿ ಸಂರಕ್ಷಿತ ಕೃಷಿಗಾಗಿ ರಚನೆ ವಿನ್ಯಾಸದ ಪ್ರಮಾಣೀಕರಣ.
- ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರು ಮುಖ್ಯ ಆವರಣದಲ್ಲಿ ಮಾದರಿ ಜಲಾನಯನ ಸ್ಥಾಪನೆ.
- ಮಳೆಯಾಶ್ರಿತ ಪ್ರದೇಶಗಳಲ್ಲಿ ಸುಧಾರಿತ ಕಾರ್ಯಕ್ರಮ ಏಕೀಕರಣಕ್ಕೆ ಬೆಂಬಲ, ಕೆಡಬ್ಲ್ಯು ಡಿಪಿ 2 ಸುಜಲಾ 3 ಯೋಜನೆ:
- ಸುಜಾಲಾ–3 ಪ್ರಾಯೋಜನೆ ಅಡಿಯಲ್ಲಿ ಆಯ್ದ ಸೂಕ್ಷ್ಮ ಜಲಾನಯನ ಪ್ರದೇಶಗಳಲ್ಲಿ ಸಂಯೋಜಿತ ಜಲವಿಜ್ಞಾನ ಮತ್ತು ಮೌಲ್ಯಮಾಪನ ಮತ್ತು ಮೇಲ್ವಿಚಾರಣೆ.
- ಮಣ್ಣು ಮತ್ತು ಜಲ ಸಂರಕ್ಷಣಾ ಕಾರ್ಯಗಳು/ಕ್ರಮಗಳ ಮೇಲ್ವಿಚಾರಣೆ
- ಜಲವಿಜ್ಞಾನ ಘಟಕದಲ್ಲಿ ಪೈಲೆಟ್ ಆಧಾರದ ಮೇಲೆ ಸಮುದಾಯ ಆಧಾರಿತ ಭೂಮಿ ಮತ್ತು ನೀರು ನಿರ್ವಹಣಾ ಯೋಜನೆ (TLBC tail reach).
- ಶಹಾಪುರ್ ಶಾಖೆ ಕಾಲುವೆ ಪ್ರದೇಶದ ನೀರಾವರಿ ಕಾರ್ಯಕ್ಷಮತೆಯನ್ನು ಅಧ್ಯಯನ ಮಾಡಲು ಸೆನ್ಸಿಂಗ್ ಮತ್ತು ಜಿ.ಐ.ಎಸ್ ತಂತ್ರಜ್ಞಾನಗಳ ಬಳಕೆ.
- ಕಿರು ಜಲಾಯನ ಪ್ರದೇಶದಲ್ಲಿ ನೀರಿನ ಉತ್ಪಾದಕತೆಯನ್ನು ಹೆಚ್ಚಿಸಲು ಅಚ್ಚುಕಟ್ಟು ಪ್ರದೇಶ – ನೀರಿನ ಸಂಗ್ರಹಣೆ ಸಂಬಂಧ ಕಲ್ಪಿಸುವ ಪ್ರಯೋಗ.
- ಕರ್ನಾಟಕದ ಈಶಾನ್ಯ ಒಣ ವಲಯದಲ್ಲಿ (ಸ್ನಾಟ್) ಮಾಡೆಲ್ ಬಳಸಿಕೊಂಡು ಕಿರು ಜಲಾನಯನ ಪ್ರದೇಶದಲ್ಲಿ ಜಲವಿಜ್ಞಾನದ ಅಂಶಗಳನ್ನು ಮಾಡೆಲ್ ಮಾಡುವುದು.
- ಕೃಷಿ ಯಂತ್ರೋಪಕರಣಗಳ ಮೂಲಕ ನಿಖರ ಕೃಷಿಗಾಗಿ ಭೂಅಭಿವೃದ್ಧಿ
- ಆಂತರ್ಜಲ್ ಮಟ್ಟ ಹೆಚ್ಚಿಸಲು ಕೊಳವೆ ಬಾವಿ ಮರುಪೂರಣ ವ್ಯವಸ್ಥೆಯ ಮಾದರಿಯನ್ನು ಹಾಗೂ ಪ್ರಾತ್ಯಕ್ಷಿಕೆ ಮಾಡಲು ಕಾರ್ಯನಿರ್ವಹಿಸುವ ಕೊಳವೆ ಬಾವಿ ಮರುಪೂರಣ ವ್ಯವಸ್ಥೆಯ ಅಭಿವೃದ್ಧಿ ವಿನ್ಯಾಸ ಹಾಗೂ ಅದರ ಅಭಿವೃದ್ಧಿ.
- ಭೂಮಾಪನಾ ಅಧ್ಯಯನಕ್ಕೆ ಜಿಪಿಎಸ್ ಮತ್ತು ಸ್ಮಾರ್ಟ್ ಫೋನ್‌ಗಳು ಹೋಲಿಕೆ

ನೀರಾವರಿ ಮತ್ತು ಬಸಿಗಾಲುವೆ ತಂತ್ರಜ್ಞಾನ

- ಬೆಳೆ ಉತ್ಪಾದನೆಯಲ್ಲಿ ಪುರಸಭೆ ತ್ಯಾಜ್ಯ ನೀರನ್ನು ಜೈವಿಕ ವಿಧಾನದಿಂದ ಶುದ್ಧಿಕರಿಸಿ ಮರುಬಳಕೆ.
- ತುಂಗಭದ್ರಾ ಅಚ್ಚುಕಟ್ಟು ಪ್ರದೇಶದಲ್ಲಿ ಸವಳು ಮತ್ತು ಜೌಗುಭೂಮಿಯ ಸುಧಾರಣೆಗಾಗಿ ನಾಲ್ಕನೇ ಹಂತದ ಒಳಬಸಿಗಾಲುವೆಗಳ ಕಾಮಗಾರಿಗಳ ಉಸ್ತುವಾರಿ ಮತ್ತು ಮೌಲ್ಯಮಾಪನ
- ನೀರಿನ ಉತ್ಪಾದಕತೆಯನ್ನು ಹೆಚ್ಚಿಸುವಿಕೆಯಲ್ಲಿ ಸೌರ ವಿದ್ಯುತ್ ಆಕ್ವಾಫೂನಿಕ್ಸ ವ್ಯವಸ್ಥೆಯ ವಿನ್ಯಾಸ ಮತ್ತು ಅಭಿವೃದ್ಧಿ
- ತುಂಗಭದ್ರಾ ಅಚ್ಚುಕಟ್ಟು ಪ್ರದೇಶದಲ್ಲಿ ಮೋಲ್ ಬಸಿಗಾಲುವೆಗಳ ಮಹತ್ವ
- ತುಂಗಭದ್ರಾ ಅಚ್ಚುಕಟ್ಟು ಪ್ರದೇಶದಲ್ಲಿ ತಡೆ ಮತ್ತು ತಡೆರಹಿತ ಬಸಿಗಾಲುವೆಗಳ ಮೌಲ್ಯಮಾಪನ
- ತುಂಗಭದ್ರಾ ಅಚ್ಚುಕಟ್ಟು ಪ್ರದೇಶದಲ್ಲಿ ತಡೆ ಮತ್ತು ತಡೆ ಏರಿಳಿತ ಬಸಿಗಾಲುವೆಗಳ ಮೌಲ್ಯಮಾಪನ
- ತುಂಗಭದ್ರ ಅಚ್ಚುಕಟ್ಟು ಪ್ರದೇಶದಲ್ಲಿ ವಿವಿಧ ಸೂಕ್ಷ ನೀರಾವರಿ ಪದ್ಧತಿಯಲ್ಲಿ ಟೊಮ್ಯಾಟೊ ಬೆಳೆಯ ಇಳುವರಿ ಮತ್ತು ನೀರು ಬಳಿಕೆ ಸಾಮರ್ಥ್ಯಗಳ ಮೇಲೆ ಹಾಗೂ ಮಣ್ಣಿನ ಗುಣಧರ್ಮಗಳ ಮೇಲೆ ಉಪ್ಪು ನೀರಿನ ಬಳಕೆಯ ಪ್ರಭಾವ ಮತ್ತು ಸಮೊಲೆಷಿನ್ ಮಾಡಲಿಂಗ್ (ಹೈಡ್ರಸ್)
- ಕೃಷ್ಣಾ ಅಚ್ಚುಕಟ್ಟು ಪ್ರದೇಶದ ತೋಟಗಾರಿಕಾ ಬೆಳೆಗಳಲ್ಲಿ ಕೊಳವೆ ಅಂತರ್ಗತ ಬಸಿಗಾಲುವೆಯ ಮಹತ್ವ
- ಕೃಷ್ಣಾ ಅಚ್ಚುಕಟ್ಟು ಪ್ರದೇಶದ ಮೆಣಸಿನಕಾಯಿ ಬೆಳೆಗಳಲ್ಲಿ ನೀರಿನ ಮಟ್ಟ ಮತ್ತು ಉಪ್ಪಿನ ಅಂಶದ ಮಹತ್ವ
- ಕೃಷ್ಣಾ ಅಚ್ಚುಕಟ್ಟು ಪ್ರದೇಶದ ಬಾಳೆಗಿಡದಲ್ಲಿ ಕೊಳವೆ ಅಂತರ್ಗತ ಬಸಿಗಾಲುವೆಯ ಮಹತ್ವ

ಕೃಷಿ ಯಂತ್ರೋಪಕರಣ ಮತ್ತು ಶಕ್ತಿ ತಾಂತ್ರಿಕತೆ

- ಸಣ್ಣ ಟ್ರ್ಯಾಕ್ಟರ್ ಚಾಲಿತ ಉದ್ದ ಸಾಲು ಬೆಳೆಗಳಿಗೆ ಎಡೆ ಕುಂಟೆ ಮತ್ತು ಗೊಬ್ಬರ ಬಿತ್ತುವ ಯಂತ್ರ
- ಡ್ರೋನ್ ಚಾಲಿತ ಸಿಂಪಡಿಸುವ ಯಂತ್ರ
- ರಿಮೋಟ್ ಚಾಲಿತ ಸೌರಶಕ್ತಿ ಸಿಂಪರಣಾ ಯಂತ್ರ

ಸಂಸ್ಕರಣೆ ಹಾಗೂ ಆಹಾರ ತಂತ್ರಜ್ಞಾನ ವಿಭಾಗ

- ಸೂಪರ್ ಕ್ರಿಟಿಕಲ್ ಎಕ್ಸ್‌ಟ್ರ್ಯಾಕ್ಷನ್ ವಿಧಾನದಿಂದ ಹಚ್ಚೆ ಗಿಡದಿಂದ (ಅಸ್ತಮಾ ಗಿಡ) ಬಯೋಆ್ಯಕ್ಟಿವ್ ಕಾಂಪೌಂಡ್ ಬೇರ್ಪಡಿಸುವುದು.
- ಅಕ್ಕಿ ಮತ್ತು ಬೇಳೆ ಮಾಡುವ ಗಿರಣಿಗಳಲ್ಲಿ (ಕಾರ್ಖಾನೆಗಳಲ್ಲಿ) ಹೊರಹೊಮ್ಮುವ ಉಪ–ಉತ್ಪನ್ನಗಳನ್ನು (ಅಕ್ಕಿ ಮತ್ತು ಬೇಳೆ ಚೂರು) ಉಪಯೋಗಿಸಿ ಪೌಷ್ಟಿಕಭರಿತ ತದ್ರೂಪಿ ಅಕ್ಕಿ (ಫಾರ್ಟಿಫೈಡ್ ರೈಸ್ ಅನಲಾಗ್) ತಯಾರಿಸುವ ತಂತ್ರಜ್ಞಾನ.
- ಹಳೆಅಕ್ಕಿ ಅವಲೋಕನಕ್ಕಾಗಿ ಅಮೈಲೋಸ್ ಸಂವೇದಕ (ಸೆನ್ಸರ್) ಅಭಿವೃದ್ಧಿ ಪಡಿಸುವುದು.
- ಎಲ್.ಇ.ಡಿ ಆಧಾರಿತ ಸಂರಕ್ಷಣಾ ತಂತ್ರಜ್ಞಾನದಿಂದ ಆಹಾರದಲ್ಲಿನ ಪೋಷಕಾಂಶ, ಸೂಕ್ಷ್ಮಾಣು ಮತ್ತು ಗುಣಧರ್ಮಗಳ ಮೇಲಿನ ಪ್ರಭಾವ.
- ಕಡಿಮೆ ತೇವಾಂಶದ ಆಹಾರ ಪದಾರ್ಥಗಳನ್ನು ರೇಡಿಯೋ ತರಂಗಗಳಿಂದ ಉಪಚರಿಸಿ ಅವುಗಳ ಜೀವಿತಾವಧಿ ಹೆಚ್ಚಿಸುವುದು ಮತ್ತು ಸೂಕ್ಷ್ಮಾಣು ಜೀವಿಗಳಿಂದ ಸಂರಕ್ಷಿಸುವುದು.
- ಆಹಾರ ತ್ಯಾಜ್ಯದಿಂದ ವಿದ್ಯುಶ್ಚಕ್ತಿ ತಯಾರಿಸಲು ಸೂಕ್ಷ್ಮಾಣು ಜೀವಿ ಇಂಧನ ಕೋಶ ಅಭಿವೃದ್ಧಿ ಪಡಿಸುವುದು.
- ಕೃಷಿ ಸಂಸ್ಕರಣಾ ಘಟಕಗಳ ಸ್ಥಾಪನೆ ಮತ್ತು ಸಂಸ್ಕರಣೆಯ ವಿವಿಧ ತಾಂತ್ರಿಕತೆಗಳ ಬಗ್ಗೆ ತರಬೇತಿ ಮತ್ತು ಪ್ರಾತ್ಯಕ್ಷಿಕೆ.

ನ್ಯಾನೋ ತಂತ್ರಜ್ಞಾನ

- ಕೃಷಿ ಉತ್ಪನ್ನಗಳ ಗುಣಮಟ್ಟ ಕಾಪಾಡಲು ನ್ಯಾನೋ–ಕೀಟನಾಶಕಗಳನ್ನು ಹಸಿರು ತಂತ್ರಜ್ಞಾನದಿಂದ ಅಭಿವೃದ್ಧಿ ಪಡಿಸುವುದು.
- ಭತ್ತದ ಸಿಪ್ಪೆ ಉಪಯೋಗಿಸಿ ಸಿಲಿಕಾ ನ್ಯಾನೋಕಣಗಳನ್ನು ಹಸಿರು ತಂತ್ರಜ್ಞಾನದಿಂದ ತಯಾರಿಸುವುದು ಹಾಗೂ ಅವುಗಳನ್ನು ವಿವಧ ಚಟುವಟಿಕೆಗಳಿಗೆ ಬಳಸುವುದು.
- ನವಣೆಯನ್ನು ವಿಭಿನ್ನ ಗುಣಧರ್ಮಗಳ ಆಧಾರದ ಮೇಲೆ ಬೇರ್ಪಡಿಸುವುದು ಹಾಗೂ ಬೇರ್ಪಡಿಸಿದ ಅಂಶಗಳನ್ನು ಎಕ್ಸ್ಟ್ರುಡೆಡ್ ಪದಾರ್ಥಗಳಲ್ಲಿ ಬಳಸುವುದು.
- ಇಂಗಾಲ ಡೈಆಕ್ಸೈಡ್ ಉಪಯೋಗಿಸಿ ಸೂಪರ್ ಕ್ರಿಟಿಕಲ್ ವಿಧಾನದಿಂದ ಬಜೆ ಎಣ್ಣೆ ತೆಗೆಯುವ ತಂತ್ರಜ್ಞಾನ.
- ಕಿತ್ತಲೆ ಹಣ್ಣಿನ ಸಿಪ್ಪೆಯಲ್ಲಿನ ಎಣ್ಣೆ ತಯಾರಿಕಾ ತಂತ್ರಜ್ಞಾನ ಅಭಿವೃದ್ಧಿ ಪಡಿಸುವುದು.

ನವೀಕರಿಸಬಹುದಾದ ಶಕ್ತಿ ತಾಂತ್ರಿಕ ವಿಭಾಗ

- ಸಂರಕ್ಷಣಾ ಕೃಷಿ ಪದ್ಧತಿಯಲ್ಲಿ ಬಳಸುವ ಎತ್ತಿನ ಚಾಲಿತ ಕೃಷಿ ಯಂತ್ರೋಪಕರಣಗಳು
- ಕೂರಿಗೆ ಭತ್ತ ಬೆಳೆಯಲು ಬಳಸುವ ಎತ್ತಿನ ಸುಧಾರಿತ ಕೃಷಿ ಉಪಕರಣಗಳು
- ಸುಧಾರಿತ ಎತ್ತಿನ ಮನೆ ಬಳಸುವುದರಿಂದ ರಾಸುಗಳ ದೈಹಿಕ ಸ್ಥಿತಿಯಲ್ಲಿ ಸುಧಾರಿಸುವಿಕೆ
- ಸಮಗ್ರ ಕೃಷಿ ಪದ್ಧತಿಯಲ್ಲಿ ಬಳಸುವ ಎತ್ತಿನ ಚಾಲಿತ ಸುಧಾರಿತ ಕೃಷಿ ಉಪಕರಣಗಳ ಬಳಕೆ ಮತ್ತು ತಂತ್ರಜ್ಞಾನ
- ಎತ್ತಿನ ಪಶು ಆಹಾರ ತಯಾರಿಕೆಯಲ್ಲಿ ಬಳಸುವ ಪೌಷ್ಟಿಕ ಆಹಾರದ ಮಹತ್ವ
- ಪಶು ಶಕ್ತಿ ವೃದ್ಧಿಸಲು ಬಳಸುವ ಪೌಷ್ಟಿಕ ಆಹಾರದ ಬಳಕೆಯ ಪದ್ಧತಿ ಅನುಸರಿಸುವಿಕೆ
- ಕಡಲೆ ಬೆಳೆ ಬೆಳೆಯಲು ಬೇಕಾಗುವ ಶಕ್ತಿಯ ಬಳಕೆಯ ಮೌಲ್ಯಮಾಪನ
- ತಮಿಳುನಾಡು ಕೃಷಿ ವಿಶ್ವವಿದ್ಯಾಲಯ ಮಾದರಿಯ ಸುಧಾರಿತ ಒಲೆಗಳ ಮೌಲ್ಯ ಮಾಪನ ಮತ್ತು ಪ್ರಾತ್ಯಕ್ಷತೆ

3.5.5 ಅಣು ಜೀವಶಾಸ್ತ್ರ ಮತ್ತು ಜೈವಿಕ ತಂತ್ರಜ್ಞಾನ

- Functional classification of differentially expressed genes (DEGs) and gene ontology (GO) in maize heat tolerant lines using RNA seq experimental data.
- ಅಧಿಕ ಇಳುವರಿ ಹಾಗೂ ಹವಾಮಾನ ಸ್ಥಿತಿಸ್ಥಾಪಕ ವೈವಿಧ್ಯಗಳಿಗೆ ಹೊಂದುವ ಕಡಲೆ ತಳಿಗಳನ್ನು ಜೀನೋಮಿಕ್ ನೇರವಿನಿಂದ ಅಭಿವೃದ್ಧಿ ಪಡಿಸುವುದು ಮತ್ತು ಆಹಾರ ಮತ್ತು ಪೋಷಕಾಂಶಗಾಗಿ ಸೂಕ್ತವಾದ ಕಡಲೆ ತಳಿಗಳನ್ನು ಕರ್ನಾಟಕದಲ್ಲಿ ಪ್ರಚಾರ ಮಾಡುವುದು.
- ಕಡಲೆ ಮತ್ತು ತೊಗರಿ ಅನುವಂಶಿಕ ಲಾಭವನ್ನು ಹೆಚ್ಚುಸುವ ಮೂಲಕ ರೈತರಿಗೆ ಹೆಚ್ಚಿನ ಆದಾಯ ತಲುಪಿಸುವುದು.
- ಒಟ್ಟು 54 ರಾಯಚೂರು ಗ್ರೀನ್ ಕಾಬುಲಿ ಕಡಲೆ ತಳಿಗಳನ್ನು ಪರೀಕ್ಷೆಗೆ ಒಳಪಡಿಸಲಾಯಿತು.
- ಬಾಳೆ ಹಣ್ಣು ಮತ್ತು ಕಬ್ಬಿನಲ್ಲಿ ಅಂಗಾಂಶ ಕೃಷಿ ಪದ್ಧತಿಯನ್ನು ಪ್ರಮಾಣಿಕರಿಸುವುದು.
- ಅವಶ್ಯ ದ್ರವ್ಯಗಳ ಶಿಲೀಂದ್ರ ನಾಶಕ ಮತ್ತು ಜಂತುನಾಶಕ ಗುಣಧರ್ಮಗಳನ್ನು ಪರೀಕ್ಷಿಸಲಾಯಿತು.
- Machine Vision to uncover sensory events before – during – recovery from suspended animation: *Caenorhabditis elegans* as Model system.
- ಅಂಗಾಶಿಕ ಪದ್ಧತಿಯನ್ನು ಮಾಧ್ಯಮ, ಬೆಳವಣಿಗೆ ಮತ್ತು ಗುಣಧರ್ಮಗಳ ಸೂಕ್ತತೆಯನ್ನು ಏಕಕೋಶ ಪ್ರೋಟಿನ್ ಜೈವಿಕಗೊಬ್ಬರ ಮತ್ತು ಮೀನಿನ ಆಹಾರಕ್ಕಾಗಿ ಪ್ರಮಾಣಿಕರಿಲಾಗಿದೆ.
- ವಿವಿದ ಬಗೆಯ ಭತ್ತದ ಕಂದು ಸಸ್ಯದ ಹೇನುಗಳನ್ನು ಗುರುತಿಸುವುದು ಹಾಗೂ ವಿವಿಧ ಬಗೆಯ ಭತ್ತದ ತಳಿಗಳಲ್ಲಿ ಜೆನೋಮಿಕ್ ನೆರವಿನ ತಳಿ ಅಭಿವೃದ್ಧಿ ಪಡಿಸಲು ಸೂಕ್ತವಿರುವ ಪ್ರಕ್ರಿಯೆಯನ್ನು ಪ್ರಮಾಣಿಕರಿಸಲಾಗಿದೆ.

3.5.6 ಪ್ರಾಣಿ ಶಾಸ್ತ್ರ ಮತ್ತು ಮೀನುಗಾರಿಕೆ:

- ಬಳ್ಳಾರಿ, ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳ ಭತ್ತ ಬೆಳೆಯುವ ಪ್ರದೇಶಗಳಲ್ಲಿ ಹೈನುಗಾರಿಕೆಯು ಪ್ರಮುಖ ಉಪಕಸುಬಾಗಿದ್ದು, ಅಲ್ಲಿನ ಹೈನುರಾಸುಗಳಿಂದ ಸಂಗ್ರಹಿಸಿದ ಹಾಲಿನ ಮಾದರಿಗಳಲ್ಲಿ ಕೀಟನಾಶಕ ಅಂಶವು ಇರುವ ಸಾಧ್ಯತೆಗಳ ಬಗ್ಗೆ ಅಧ್ಯಯನವನ್ನು ಕೈಗೊಳ್ಳಲಾಗಿತ್ತು. ಸಂಗ್ರಹಿಸಿದ್ದ ಒಟ್ಟು ಮಾದರಿಗಳಲ್ಲಿ ಶೇ. 95 ರಷ್ಟು ಮಾದರಿಗಳಲ್ಲಿ ಕೀಟನಾಶಕ ಅಂಶವಿರುವುದು ಪತ್ತೆಯಾಗಿದೆ. ಅದರಲ್ಲಿ ಅಸಿಫೇಟ್ ಕೀಟನಾಶಕ ಅಂಶವು ಶೇ. 27.27 ರಷ್ಟು ಮಾದರಿಗಳಲ್ಲಿ ಪ್ರಮಾಣಿಸಬಹುದಾದ (quantifiable level) ಮಟ್ಟದಲ್ಲಿದೆ.
- ಗಂಗಾವತಿ ಭಾಗದಲ್ಲಿ ದೊಡ್ಡ ದನದ ಹಿಂಡುಗಳನ್ನು ಸಾಕಿರುವ ಗೋಪಾಲಕರ ದನಗಳು ಪ್ರತ್ಯೇಕ ತಳಿಗುಣಗಳನ್ನು ಹೊಂದಿರುವ ಸಾಧ್ಯತೆಗಳ ಬಗ್ಗೆ ಅಧ್ಯಯನವನ್ನು ಕೈಗೊಳ್ಳಲಾಗಿತ್ತು. ಅಧ್ಯಯನದಂತೆ ಗಂಗಾವತಿ ಗೋಪಾಲಕರ ದನಗಳು ಕರ್ನಾಟಕದ ಪ್ರಮುಖ ದನದ ತಳಿಗಳಾದ ಅಮೃತಮಹಲ್, ಹಳ್ಳಿಕಾರ್ ಮತ್ತು ಕಿಲ್ಲಾರ್ ದನಗಳಿಗಿಂತ ವಿಭಿನ್ನ ಬಾಹ್ಯಗುಣಗಳನ್ನು ಹೊಂದಿದ್ದು, ಪ್ರತ್ಯೇಕ ತಳಿ ಎಂದು ಗುರುತಿಸಿಕೊಳ್ಳುವ ಅರ್ಹತೆ ಹೊಂದಿವೆ. ವಂಶವಾಹಿ ಅಧ್ಯಯನದ ಮೂಲಕ ಇದನ್ನು ಖಾತ್ರಿಗೊಳಿಸಬಹುದಾಗಿದ್ದು, ಈ ಬಗ್ಗೆ ಸಂಶೋಧನೆ ಕೈಗೊಳ್ಳಬಹುದಾಗಿದೆ.
- ಕ್ಲೊಸೆಂಟಾಲ್ ಮತ್ತು ಐವರಮೆಕ್ಟಿನ್ ಪರಾವಲಂಬಿನಾಶಕಗಳ ಪರಿಣಾಮದ ಬಗ್ಗೆ ಮೇಕೆಗಳಲ್ಲಿ ಅಧ್ಯಯನವನ್ನು ಕೈಗೊಳ್ಳಲಾಗಿತ್ತು. ಅಧ್ಯಯನದಂತೆ ಐವರಮೆಕ್ಟಿನ್ ಒಳ ಮತ್ತು ಹೊರಪರಾವಲಂಬಿಗಳು ಎರಡರ ಮೇಲೂ ಪರಿಣಾಮಕಾರಿಯಾಗಿದ್ದು, ಕ್ಲೊಸೆಂಟಾಲ್ ಔಷಧಿಗಿಂತ ಉತ್ತಮವೆಂದು ಕಂಡುಬಂದಿದೆ.
- ಪ್ರೋಬೋಟಿಕ್‌ಗಳನ್ನು ಪ್ರತಿ ಕ್ವಿಂಟಾಲಿಗೆ 250 ಗ್ರಾಂ ನಂತೆ ಬಳಸುವುದರಿಂದ ಕೆಂಗುರಿಗಳಲ್ಲಿ ಉತ್ತಮ ದೇಹ ಬೆಳವಣಿಗೆ ಕಂಡುಬರುತ್ತದೆ.
- ರಾಯಚೂರು ಜಿಲ್ಲೆಯಲ್ಲಿ ಕುರಿ–ಮೇಕೆಗಳಲ್ಲಿ ಬ್ರುಸೆಲ್ಲಾ ರೋಗವಿರುವ ಸಾಧ್ಯತೆ ಬಗ್ಗೆ ಅಧ್ಯಯನವನ್ನು ಕೈಗೊಳ್ಳಲಾಗಿ, ರೋಗದ ಪ್ರಮಾಣವು ಕುರಿಗಳಲ್ಲಿ ಶೇ. 1.33 ಮತ್ತು ಮೇಕೆಗಳಲ್ಲಿ ಶೇ. 2.09 ಇರುವುದು ಧೃಡಪಟ್ಟಿದೆ.
- ಯೂರಿಯದಿಂದ ಪೌಷ್ಠೀಕರಿಸಿದ ಭತ್ತದ ಹುಲ್ಲನ್ನು ಕೆಲಸಕ್ಕೆ ಬಳಸುವ ಎತ್ತುಗಳಿಗೆ ನೀಡುವುದರಿಂದ ಮೂರರಲ್ಲಿ ಒಂದನೇ ಭಾಗದಷ್ಟು ಪ್ರೋಟೀನ್‌ಗೆ ತಗುಲುವ ಖರ್ಚನ್ನು ಭರಿಸಬಹುದಾಗಿರುತ್ತದೆ.
- ಲಾಟಿಸ್ ಕ್ಯಾಲ್ಸಿಫರ್ ಎಂಬ ಸಮುದ್ರದ ಮೀನನ್ನು ಸಿಹಿನೀರಿನಲ್ಲಿ ಬೆಳೆಸಬಹುದಾಗಿದ್ದು, ಅದು ಆರು ತಿಂಗಳಿನಲ್ಲಿ ಸರಾಸರಿ 350 ಗ್ರಾಂ ತೂಕವನ್ನು ಪಡೆಯುವುದು ಅಧ್ಯಯನದಿಂದ ತಿಳಿದು ಬಂದಿದೆ.
- ಕಡಿಮೆ ಅವಧಿಯ ಸಿಹಿನೀರು ಮೀನುಗಾರಿಕೆಗೆ ತಿಲಾಪಿಯಾ ಮೀನುಗಳಿಗಿಂತ GIFT ಸೂಪರ್ ಗಂಡು ಮೀನುಗಳು ಹೆಚ್ಚು ಸೂಕ್ತವೆಂದು ಅಧ್ಯಯನದಿಂದ ತಿಳಿದು ಬಂದಿದ್ದು, ಇವುಗಳು ಅತಿ ವೇಗದ ಬೆಳವಣಿಗೆಯನ್ನು ಹೊಂದಿ, ಆರು ತಿಂಗಳ ಅವಧಿಯಲ್ಲಿ 800 ಗ್ರಾಂ ಬೆಳವಣಿಗೆಯನ್ನು ಹೊಂದುತ್ತವೆ.

3.5.7 ಕೃಷಿ ಅರ್ಥಶಾಸ್ತ್ರ

- ಈಶಾನ್ಯ ಕರ್ನಾಟದ ಪ್ರದೇಶಕ್ಕೆ ಒಳಪಡುವ 13 ಮುಖ್ಯ ಬೆಳೆಗಳ ಸಮಗ್ರವೆಚ್ಚವನ್ನು ಕಲೇಹಾಕಲಾಗಿತ್ತು, ಒಟ್ಟು ವೆಚ್ಚವು ರೈತರು ಪಾವತಿಸಿರುವ ವಂತಿಕೆ ವೆಚ್ಚಗಳು ಹಾಗೂ ಕುಟುಂಬ ಕಾರ್ಮಿಕರ ವೆಚ್ಚವು ಒಳಗೊಂಡಿರುತ್ತದೆ.
- ಭತ್ತದ ಉತ್ಪಾದನಾ ವೆಚ್ಚವು ಪ್ರತಿ ಕ್ವಿಂಟಾಲಗೆ 1234/– ಕ್ವಿಂಟಾಲ್ ಅದೇರೀತಿ ಕಲಬುರಗಿ ಜಿಲ್ಲೆಯ ತೊಗರಿ ಉತ್ಪಾದನಾ ವೆಚ್ಚವು ಪ್ರತಿ ಕ್ವಿಂಟಾಲ್ 5493/– ಕ್ವಿಂಟಾಲ್.
- ಹತ್ತಿ, ಹಿಂಗಾರಿ ಜೋಳ, ಸೋಯಾಅವರೆಗಳ ಉತ್ಪಾದನಾ ವೆಚ್ಚವು ಪ್ರತಿ ಕ್ವಿಂಟಾಲ್‌ಗೆ 4098/– ಕ್ವಿಂಟಾಲ್ ಜೋಳಕ್ಕೆ 2651/– ಕ್ವಿಂಟಾಲ್ ಹಾಗೂ ಸೋಯಾಅವರೆಗೆ 3541/– ಕ್ವಿಂಟಾಲ್
- ಸಜ್ಜೆ, ಸೋಯಾಅವರೆ ಮತ್ತು ಕಡಲೆಗಳ ಕ್ವಿಂಟಾಲ್ ಉತ್ಪಾದನಾ ವೆಚ್ಚವು ಕೇಂದ್ರದ ಬೆಂಬಲ ಬೆಲೆಗಿಂತ ಹೆಚ್ಚಾಗಿರುವದು ಕಂಡುಬಂದಿರುತ್ತದೆ.

- ಸಾಂಸ್ಥಿಕೇತರ ಮೂಲಗಳಿಂದ ಸಾಲ ಸೌಲಭ್ಯ, ವಲಸೆ, ದಿವಾಳಿಯಿಂದ ಮನೆ ಆಸ್ತಿ ಪಾಸ್ತಿಗಳ ಮಾರಾಟ, ಅನಪಯುಕ್ತ ಬೀಳು ಭೂಮಿ, ಹಳ್ಳಿಗಳಲ್ಲೇ ಜೀವನೋಪಾಯ ನಡೆಸಲು ವೈವಿದ್ಯಮಯ (ಸಮೃದ್ಧಿಗೊಳಿಸುವುದು) ರೀತಿಯಲ್ಲಿ ಅವಕಾಶಗಳನ್ನು ಸೃಷ್ಟಿಸುವುದು ಹವಾಮಾನ ವೈಪರೀತ್ಯಾದಿಂದ ಪಾರಾಗಲು ಮಳೆ ನೀರು ಕೋಯ್ಲು ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳುವುದು.
- ಕೊಪ್ಪಳ ಜಿಲ್ಲೆಯಲ್ಲಿ ಅಂತರ್ಜಾಲ ನೀರಾವರಿಯ ಆರ್ಥಿಕ ಬಳಕೆಯ ದಕ್ಷತೆಯು ರೈವಂಕಿ–1 ಕಿರು ಜಲಾಯನ ಪ್ರದೇಶದಲ್ಲಿ ರೂ. ಮೆಣಸಿನಕಾಯಿಗೆ 5017/– ಎಕರೆ ಇಂಚು ನಂತರ ಮೆಕ್ಕೆಜೋಳ ರೂ. 441/– ಎಕರೆ, ಹತ್ತಿ ರೂ. 432/– ಎಕರೆ ಇಂಚು, ಶೇಂಗಾ ಮತ್ತು ಸೂರ್ಯಕಾಂತಿ ರೂ. 182/– ಎಕರೆ ಇಂಚು, ಮತ್ತು ಕಬ್ಬು ಎಕರೆಗೆ ರೂ. 90/– ಎಕರೆ ಇಂಚು ಅದೇರೀತಿ ಕವಲಕೇರಿ–4 ಮೈಕ್ರೊ ವಾಟರ್‌ಶೇಡ್‌ನಲ್ಲಿ ಇಚು ಮೆಣಸಿನಕಾಯಿ ರೂ. 3666/– ಎಕರೆ ಇಂಚು ನಂತರ ಮೆಕ್ಕೆಜೋಳ ರೂ. 686/– ಎಕರೆ ಇಂಚು ಸೂರ್ಯಕಾಂತಿ ರೂ. 223/– ಎಕರೆ ಇಂಚು ಶೇಂಗಾ ರೂ. 200/– ಎಕರೆ ಇಂಚು ಮತ್ತು ಹತ್ತಿ ರೂ. 124/– ಎಕರೆ ಇಂಚು ಎಂದು ಕಂಡು ಬಂದಿರುತ್ತದೆ.
- ಕೊಪ್ಪಳ ಮತ್ತು ರಾಯಚೂರು, ಯಾದಗೀರ ಜಿಲ್ಲೆಗಳಲ್ಲಿ ಆಯ್ದ ಸೂಕ್ಷ್ಮ ಜಲಾನಯನ ಪ್ರದೇಶಗಳಲ್ಲಿನ ಒಟ್ಟಾರೆ ಅಂತರ್ಜಲ ದುರ್ಬಳಕೆಯನ್ನು ಪರಿಗಣಿಸಿದಾಗ ಸಾಮಾನ್ಯ ಮಳೆ ಪರಿಸ್ಥಿತಿಯಲ್ಲಿಯು ಕೂಡಾ ಆಯ್ದ ಎಲ್ಲಾ ಸೂಕ್ಷ್ಮ ಜಲಾನಯನ ಪ್ರದೇಶಗಳಲ್ಲಿ ಅಂತರ್ಜಲವು ಹೆಚ್ಚು ದುರ್ಬಳಕೆಯಾಗಿರುವುದಿಲ್ಲ ಸೂಕ್ತವಾದ ಬೆಳೆ ಮಾದರಿ ಮತ್ತು ನೀರಿನ ಸಂರಕ್ಷಣಾ ವಿಧಾನಗಳಿಂದ ನೀರಾವರಿ ಪ್ರದೇಶವನ್ನು ವಿಸ್ತರಿಸಲು ಇನ್ನೂ ಅವಕಾಶವಿದೆ.

3.5.8 ಬೀಜೋತ್ಪಾದನೆ

ಕೋಷ್ಟಕ 32: 2018–19 ನೇ ಸಾಲಿನ ಬೀಜೋತ್ಪಾದನಾ ಕಾರ್ಯಕ್ರಮಗಳ ವಿವರ (ಕ್ವಿಂಟಾಲ್‌ಗಳಲ್ಲಿ)

ಬೆಳೆ	ತಳಿ	ತಳಿವರ್ಧಕ	ಮೂಲ	ಪ್ರಮಾಣಿತ	ನಿಜ	ಒಟ್ಟು
ಭತ್ತ	ಗಂಗಾವತಿ ಸೋನಾ	10	600	2770	100	3480
	ಆರ್‌ಎನ್‌ಆರ್–15048	-	-	-	-	-
	ಬಿಪಿಟಿ5204	-	100	100	-	200
	ಒಟ್ಟು	**10**	**700**	**2870**	**100**	**3680**
ಮೆಕ್ಕೆಜೋಳ	ಎಸ್‌ಎ ಟಾಲ್	-	-	-	10	10
	ಆರ್‌ಸಿಆರ್–ಎಮ್‌ಹೆಚ್2	-	-	-	35	35
	ಒಟ್ಟು	**-**	**-**	**-**	**45**	**45**
ನವಣೆ	ಹೆಚ್‌ಎಮ್‌ಟಿ100–1	-	-	10	-	10
	ಹೆಚ್‌ಎನ್–46	-	-	-	2	2
	ಡಿಹೆಚ್‌ಎಫ್‌ಟಿ109–3	-	-	-	2	2
	ಒಟ್ಟು	**-**	**-**	**10**	**4**	**14**
ಜೋಳ	ಎಮ್‌35–1	-	30	150	70	250
	ಒಟ್ಟು	**-**	**30**	**150**	**70**	**250**
ಹೆಸರು	ಬಿಜಿಎಸ್9	5.35	16.75	134.61	60	216.71
	ಒಟ್ಟು	**5.35**	**16.75**	**134.61**	**60**	**216.71**
ಉದ್ದು	ಟಿಎಯು–1	5	-	-	-	5
	ಒಟ್ಟು	**5**	**-**	**-**	**-**	**5**
ತೊಗರಿ	ಟಿಎಸ್3ಆರ್	**11**	**29**	**254**	**250**	**544**
	ಜಿಆರ್‌ಜಿ811	**10**	**36.65**	**214**	**170**	**430.65**
	ಬಿಎಸ್‌ಎಮ್‌ಆರ್736	**10**	**40**	**-**	**-**	**50**
	ಮಾರುತಿ	**18**	**-**	**-**	**-**	**18**

	(ಐಸಿಪಿ 8863)					
	ಆಶಾ (ಐಸಿಪಿಎಲ್ 87119)	**5**	**-**	**-**	**-**	**5**
	ಒಟ್ಟು	**54**	**105.65**	**468**	**420**	**1047.65**
ಕಡಲೆ	ಜೆಜಿ11	210	180	1050	-	1440
	ಎ1	5	-	-	-	5
	ಜಿಬಿಎಮ್2	20	-	18	2601	2639
	ಬಿಜಿಡಿ103	20	10	813	-	843
	ಎಮ್ಎನ್ಕೆ1	7	-	-	-	7
	ಒಟ್ಟು	**262**	**190**	**1881**	**2601**	**4934**
ಸೆಣಬು	ಲೋಕಲ್ (ಸ್ಥಳೀಯಾ)	-	-	-	15	15
	ಒಟ್ಟು	**-**	**-**	**-**	**15**	**15**
ಸೋಯಾಬೀನ್	ಡಿಎಸ್ಬಿ–1	**-**	**-**	**144.1**	**6**	**150.1**
	ಜೆಎಸ್335	**142**	**123.3**	**385**	**-**	**650.3**
	ಒಟ್ಟು	**142**	**123.3**	**529.1**	**6**	**800.4**
	ಒಟ್ಟು	**-**	**-**	**-**	**15**	**15**
ಶೇಂಗಾ	ಕೆ9	-	-	16	-	16
	ಕೆಜಿಡಿ128	-	-	-	22	22
	ಜಿ–2–52	-	-	35	15	50
	ಒಟ್ಟು	-	-	**51**	**37**	**73**
ಸೂರ್ಯಕಾಂತಿ	ಸಿಎಮ್ಎಸ್38ಎ	1.50	-	-	-	1.5
	ಆರ್127–1	0.50	-	-	-	0.5
	ಆರ್ಎಸ್ಎಫ್ಹೆಚ್1887	-	-	25	-	25
	ಒಟ್ಟು	**2**	**-**	**25**	**-**	**2**
ಕುಸುಬೆ	ಎಸ್ 144	-	-	-	8	8
	ಒಟ್ಟು	**-**	**-**	**-**	**8**	**8**
ಹತ್ತಿ	ಎಸ್ಸಿಎಸ್–793	-	-	-	4	4
	ಬಿಜಿಡಿಎಸ್–1063	2	-	-	8	10
	ಒಟ್ಟು	**2**	**-**	**-**	**12**	**14**

3.6 ಮಂಜೂರಾದ ಹೊಸ ಸಂಶೋಧನಾ ಪ್ರಾಯೋಜನೆಗಳು 2018–19

ಕೋಷ್ಟಕ 33: ಮಂಜೂರಾದ ಹೊಸ ಸಂಶೋಧನಾ ಪ್ರಾಯೋಜನೆಗಳು 2018–19

ಕ್ರ.ಸಂ.	ಯೋಜನೆ ಹೆಸರು	ಅನುದಾನ ಸಂಸ್ಥೆ	ಯೋಜನಾ ಮುಖ್ಯಸ್ಥರು	ಅನುದಾನದ ಮೊತ್ತ (ರೂ. ಲಕ್ಷಗಳಲ್ಲಿ)
1. Indian Council of Agricultural Research (ICAR), New Delhi				
1	Sustainable intensification of rice fallows in command area	ಭಾರತೀಯ ಕೃಷಿ ಅನುಸಂಧಾನ ಪರಿಷತ್	ಡಾ. ಬಿ.ಕೆ. ದೇಸಾಯಿ	26.00

ಕ್ರ.ಸಂ.	ಯೋಜನೆ ಹೆಸರು	ಅನುದಾನ ಸಂಸ್ಥೆ	ಯೋಜನಾ ಮುಖ್ಯಸ್ಥರು	ಅನುದಾನದ ಮೊತ್ತ (ರೂ. ಲಕ್ಷಗಳಲ್ಲಿ)
	and their carbon foot print estimation	(NICRA), ನವದೆಹಲಿ		
2	Insecticide resistance management (IRM) dessemination of pink boll worm management strategies	ಕೇಂದ್ರೀಯಾ ಹತ್ತಿ ಸಂಶೋಧನಾ ಸಂಸ್ಥೆ, ನಾಗಪುರ	ಡಾ. ಎ.ಜಿ. ಶ್ರೀನಿವಾಸ	8.75
3	Seed Hub Project Creation of seed hubs for increasing indigenous production of Oilseeds (Soybean)	ಭಾರತೀಯ ಕೃಷಿ ಅನುಸಂಧಾನ ಪರಿಷತ್ ಮತ್ತು ಭಾರತೀಯ ಎಣ್ಣೆಕಾಳು ಬೆಳೆಗಳ ಸಂಶೋಧನಾ ಸಂಸ್ಥೆ, ಇಂದೋರ್	ಡಾ. ಬಸವೇ ಗೌಡ,	50.0 (Seed Infrastructure) 100.0 (Revolving Fund)
2. FSSAI, New Delhi				
4	Study to generate baseline data on occurrence of heavy metals in vegetables	FSSAI, ನವದೆಹಲಿ	ಡಾ. ನಾಗರಾಜ ಎಮ್. ನಾಯ್ಕ್	10.89
3. Baba Atomic Research Centre (BARC), Mumbai				
5	Field Evaluation of Trombay Crop Mutants and Selections and Research Activities in Agriculture	ಭಾಭಾ ಪರಮಾಣು ಸಂಶೋಧನಾ ಕೇಂದ್ರ, ಟ್ರಾಂಬೆ, ಮುಂಬಯಿ	ಡಾ. ಪ್ರಕಾಶ್ ಹೆಚ್. ಕೂಚನೂರ್	11.816
6	Integration of sterile insect technique in the management of guava fruit fly n Karnataka	BRNS ಮತ್ತು ಭಾಭಾ ಪರಮಾಣು ಸಂಶೋಧನಾ ಕೇಂದ್ರ, ಟ್ರಾಂಬೆ, ಮುಂಬಯಿ	ಡಾ. ಬಿ.ಎಸ್. ಕಲ್ಮಠ	13.459
7	Integration of sterile infect release technique in the management of guava fruitfly (bactro cera corrcta) diptra: Pechritidae in Karnataka region		ಡಾ. ಬಸವರಾಜ ಎಸ್. ಕಲ್ಮಠ	33.99400
8	Induction of genetic variability for earliness, grain yield and improved seed qualities using gama rays in sorghum		ಡಾ. ಗಿರೀಶ್	22.00
4. Government of India (GOI) Projects, New Delhi				
9	Creation of Seed Infrastructure Facilities(SMSP)	ಕೃಷಿ ಮತ್ತು ಸಹಕಾರ ಇಲಾಖೆ, ಭಾರತ ಸರ್ಕಾರ	ಡಾ. ಬಸವೇಗೌಡ,	95.0
10	Performace of Medicial plants as intercrops in Melia Dubai based agroforestry system	ಔಷಧೀಯ ಮಂಡಳಿ, ಕೇರಳ	ಡಾ. ಶಾಮರಾವ ಕುಲಕರ್ಣಿ	4.00

ಕ್ರ.ಸಂ.	ಯೋಜನೆ ಹೆಸರು	ಅನುದಾನ ಸಂಸ್ಥೆ	ಯೋಜನಾ ಮುಖ್ಯಸ್ಥರು	ಅನುದಾನದ ಮೊತ್ತ (ರೂ. ಲಕ್ಷಗಳಲ್ಲಿ)
	under organic production sytem			
5. Central Institute of Cotton Research, Nagpur, Maharashtra				
11	Insecticide Resistance Management (IRM)Dissemination of Pink Bollworm Management Strategies	DBT, ನವದೆಹಲಿ (CICR, ನಾಗಪುರ)	ಡಾ. ಎ.ಜಿ. ಶ್ರೀನಿವಾಸ	4.375
6. Department of Bio Technology (DBT), New Delhi				
12	Foldscope to study biodiversity in plants, microbes and insects.	DBT, ನವದೆಹಲಿ	ಡಾ. ಜೆ.ಆರ್. ದಿವಾನ್	8.00
13	Center of Excellence on Climate Change Research for Plant Protection : Pest and Disease Management for Climate Change Adaptatio	DST, ನವದೆಹಲಿ (ICRISAT, ಹೈದ್ರಾಬಾದ)	ಡಾ. ಎ.ಜಿ. ಶ್ರೀನಿವಾಸ	30.08
14	Bhoo Samrudi Project, KVK, Bidar	ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆ, ಬೆಂಗಳೂರು	ಡಾ. ಆರ್.ಸಿ. ದೇಶಮುಖ್,	6.30
15	Heat Stress Tolerant Maize for South Asia through Public Private Partnership (HTMA-II)	CIMMYT, ಮೆಕ್ಸಿಕೋ	ಡಾ. ಪ್ರಕಾಶ್ ಹೆಚ್. ಕೂಚನೂರ್	14.018
7. International Crops Research Institute for the Semi-Arid Tropics (ICRISAT), Hyderabad				
16	Delivering more produce and income to farmers through enhancing genetic gains for pigeonpea and chickpea	ICRISAT, ಹೈದ್ರಾಬಾದ	ಡಾ. ಮುನಿಸ್ವಾಮಿ ಮತ್ತು ಡಾ. ಶರಣಬಸಪ್ಪ ಎರಿ	9.3093
17	Improve Mungbean (Green Gram) and Vegetable Cowpea Productivity in Karnataka State	ICRISAT, ಹೈದ್ರಾಬಾದ. ಪ್ರಾಯೋಜಕರು RKVY	ಡಾ. ಬಿ.ಕೆ. ದೇಸಾಯಿ ಮತ್ತು ಚನ್ನಬಸವಣ್ಣ	7.00
8. SUJALA-III Project - World Bank funded throgh Govt. of Karnataka				
18	Sujala-III Project KVK, Bidar	ಕೃಷಿ ನಿರ್ದೇಶಕರು, ಬೆಂಗಳೂರು	ಡಾ. ಆರ್.ಸಿ. ದೇಶಮುಖ್,	1.50
9. Government of Karnataka (GoK), Bangalore				
19	Variety / Hybrid Seed Testing	ಕೃಷಿ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು	ಡಾ. ಐ. ಶಂಕರಗೌಡ	16.00

ಕ್ರ.ಸಂ.	ಯೋಜನೆ ಹೆಸರು	ಅನುದಾನ ಸಂಸ್ಥೆ	ಯೋಜನಾ ಮುಖ್ಯಸ್ಥರು	ಅನುದಾನದ ಮೊತ್ತ (ರೂ. ಲಕ್ಷಗಳಲ್ಲಿ)
20	Zero Budget Natural Farming (ZBNF)	ಕರ್ನಾಟಕ ಸರ್ಕಾರ, ಬೆಂಗಳೂರು	ಡಾ. ಬಿ.ಕೆ. ದೇಸಾಯಿ ಮತ್ತು ಡಾ. ಸತ್ಯನಾರಾಯಣರಾವ	1000.00
21	Production of High Quality Seeds in Vegetable crops	ರಾಷ್ಟ್ರೀಯ ತೋಟಗಾರಿಕೆ ಮಿಶನ್	ಡಾ. ಎನ್.ಎಮ್. ಶಕುಂತಲಾ	1.75
10. Karnataka State Bio-Fuel Development Board (KSBDB), Bangalore				
22	Bio-fuel Unit KVK, Bidar	KSBEDB, ಬೆಂಗಳೂರು	ಡಾ. ಆರ್.ಸಿ. ದೇಶಮುಖ್,	3.0
11. National Food Security Mission through GoK				
23	DE Office Blackgram & Greengram	ವಿಸ್ತರಣಾ ನಿರ್ದೇಶಕರು, ಕೃವಿವಿ, ರಾಯಚೂರು	ಡಾ. ಆರ್.ಸಿ. ದೇಶಮುಖ್,	0.75
24	DE Office Large Scale Demonstration of foxtail millet	ಶಿಕ್ಷಣ ನಿರ್ದೇಶಕರು, ಕೃವಿವಿ, ರಾಯಚೂರು	ಡಾ. ಆರ್.ಸಿ. ದೇಶಮುಖ್,	0.50
12. National Mission on Oilseeds and Oilpalm through GoK				
25	DE Office Soyabean(Oil Seeds) NMOOP	ವಿಸ್ತರಣಾ ನಿರ್ದೇಶಕರು, ಕೃವಿವಿ, ರಾಯಚೂರು	ಡಾ. ಆರ್.ಸಿ. ದೇಶಮುಖ್,	2.83
13. Demand Driven/University funded projects				
26	Studies on quality parameters of CGMS based hybrids UARChH42 and UARChH43 in chilli	ಕರ್ನಾಟಕ ಸರ್ಕಾರ,	ಡಾ. ಬಿ.ವಿ. ತೆಂಬುರ್ನೆ	0.50
27	Development of high yielding, short duration castor varieties with dwarf stature suitable for inter cropping systems	ಕೃವಿವಿ, ರಾಯಚೂರು	ಡಾ. ಶಿವಕುಮಾರ ಕೆ.	1.50
28	Method development, validation and base line data generation of heavy metals in vegetables using ICPMS	ಕೃವಿವಿ, ರಾಯಚೂರು	ಡಾ. ನಾಗರಾಜ ಎಮ್. ನಾಯ್ಕ್	3.00
29	Screening of maize inbred lines for drought tolerance and development of drought tolerant hybrids	ಸಂಶೋಧನಾ ನಿರ್ದೇಶನಾಲಯ, ಕೃವಿವಿ, ರಾಯಚೂರು	ಡಾ. ಬಿ. ಅರುಣಕುಮಾರ	2.000
14. Public Private Partnership (PPP) Projects				
30	Evaluation of bio-efficacy & phytotoxicity of UPF 513 against early and late blight of Tomato, alternaria leaf spot, grey mildew and anthracnose	ಯುನೈಟೆಡ್ ಫಾಸ್ಫರಸ್ ಲಿಮಿಟೆಡ್, ಮುಂಬಯಿ	ಡಾ. ಮಲ್ಲಿಕಾರ್ಜುನ ಕೆಂಗನಾಳ್	17.16

ಕ್ರ.ಸಂ.	ಯೋಜನೆ ಹೆಸರು	ಅನುದಾನ ಸಂಸ್ಥೆ	ಯೋಜನಾ ಮುಖ್ಯಸ್ಥರು	ಅನುದಾನದ ಮೊತ್ತ (ರೂ. ಲಕ್ಷಗಳಲ್ಲಿ)
	of Cotton and powdery mildew, cercospora leaf spot and rust of Blackgram			
31	Evaluation of Metolachlor 50% EC against complex weed flora in Cotton and its effect on succeeding crop	ಯುನೈಟೆಡ್ ಫಾಸ್ಫರಸ್ ಲಿಮಿಟೆಡ್, ಮುಂಬಯಿ	ಡಾ. ಜಿ.ಎಸ್. ಯಡಹಳ್ಳಿ	7.92
32	Evaluation of Metoachlor 50% EC against complex weed flora in Maize and its effect on succeeding crop	ಯುನೈಟೆಡ್ ಫಾಸ್ಫರಸ್ ಲಿಮಿಟೆಡ್, ಮುಂಬಯಿ	ಡಾ. ಜಿ.ಎಸ್. ಯಡಹಳ್ಳಿ	7.15
33	Evaluation of bio-efficacy and phytotoxicity of Sulfentrazone 39.6% SC against weed flora on Soybean and its effect on soybean crop	ಯುನೈಟೆಡ್ ಫಾಸ್ಫರಸ್ ಲಿಮಿಟೆಡ್, ಮುಂಬಯಿ	ಡಾ. ಜಿ.ಎಸ್. ಯಡಹಳ್ಳಿ	3.575
34	Evaluation of bio-efficacy of GPI 515 (Acetamiprid 25% + Bifenthrin 25% WG) and Dinotefuran 20% SG against insect pests of Bt Cotton and its effect on natural enemies as well as phytotoxicity	ಯುನೈಟೆಡ್ ಫಾಸ್ಫರಸ್ ಲಿಮಿಟೆಡ್, ಮುಂಬಯಿ	ಡಾ. ಎಸ್.ಜಿ. ಹಂಚಿನಾಳ್	6.875
35	Evaluation of GOD I003 13.3% SC against insect pests of Okra and Brinjal and phytotoxicity on crops as well as effect on natural enemies	ಗೋದ್ರೆಜ್ ಅಗ್ರೋವೆಟ್ ಲಿಮಿಟೆಡ್, ಮುಂಬಯಿ	ಡಾ. ಎ.ಜಿ. ಶ್ರೀನಿವಾಸ	4.95
36	Studies on Survey, Bio-efficacy and Phytotoxicity Evaluation of IFFC016 Chilli and IFC017, IFC018 andIFFC020 on Cotton against major foliar fungal diseases	ಇಂಡೋಫಿಲ್ ಇಂಡಸ್ಟ್ರೀಸ್ ಲಿಮಿಟೆಡ್, ಮುಂಬಯಿ	ಡಾ. ಗುರುರಾಜ್ ಸುಂಕದ	22.13
37	Studies of bio-efficacy of BAS 306 02 I 240 SC (Chlorfenapyr 240SC), BAS 325 01 I and BAS 450 o1 I 300 SC against insect pests of vegetables and Cotton	ಬಿ.ಎ.ಎಸ್.ಎಫ್. ಇಂಡಿಯಾ ಲಿಮಿಟೆಡ್, ಹೊಸ ಮುಂಬಯಿ	ಡಾ. ಅರುಣ್‌ಕುಮಾರ ಹೊಸಮನಿ	23.43

ಕ್ರ.ಸಂ.	ಯೋಜನೆ ಹೆಸರು	ಅನುದಾನ ಸಂಸ್ಥೆ	ಯೋಜನಾ ಮುಖ್ಯಸ್ಥರು	ಅನುದಾನದ ಮೊತ್ತ (ರೂ. ಲಕ್ಷಗಳಲ್ಲಿ)
38	Management of major paddy pests through novel insecticides (Pymetrozine 35% + Fipronil 8% WG – UPI 917), Pymetrozine 36% + Dinotefuran 11% WG – UPI 1316) and Dinotefuran 20% SG	ಯುನೈಟೆಡ್ ಫಾಸ್ಫರಸ್ ಲಿಮಿಟೆಡ್, ಮುಂಬಯಿ	ಡಾ. ಸುಜಾಯ್ ಹುರಳಿ	14.336
39	Evaluation of bio-efficacy and phytotoxicity of herbicide UPH 2916 against complex weed flora of Pigeonpea	ಯುನೈಟೆಡ್ ಫಾಸ್ಫರಸ್ ಲಿಮಿಟೆಡ್, ಮುಂಬಯಿ	ಡಾ. ಪಂಡಿತ್ ಎಸ್. ರಾಥೋಡ್	6.60
40	Bio-efficacy of Flonicamid 50% WG and Chlorfluazuron 5.4% EC against insect pests of Tomato	ಯುನೈಟೆಡ್ ಫಾಸ್ಫರಸ್ ಲಿಮಿಟೆಡ್, ಮುಂಬಯಿ	ಡಾ. ಹರಿಶ್ಚಂದ್ರ ನಾಯ್ಕ್	11.30
41	Bio-efficacy of Flonicamid 50% WG, Chlorfuazuron 5.4% EC and Acephate 50% + Imidacloprid 1.8% SP against insect pests of Chilli	ಯುನೈಟೆಡ್ ಫಾಸ್ಫರಸ್ ಲಿಮಿಟೆಡ್, ಮುಂಬಯಿ	ಡಾ. ಹರಿಶ್ಚಂದ್ರ ನಾಯ್ಕ್	14.828
42	Evaluation of Trifloxystrobin 25% + Tebuconazole 50% WG against sheath blight, blast and grain discoloration diseases of Paddy	ಕ್ರಾಪ್ ಸೈನ್ಸ್ ಪೈವೇಟ್ ಲಿಮಿಟೆಡ್, ಅಹಮದಾಬಾದ್	ಡಾ. ಪ್ರಮೇಶ್ ಡಿ.	1.925
43	Evaluation of bio-efficacy and phytotoxicity studies of BAS 325 01 I 150 SC (Teflubenzuron 75 g/l + Alphacypermethrin 75 g/l) on major pests of Pigeonpoea and Chickpea	ಬಿ.ಎ.ಎಸ್.ಎಫ್. ಇಂಡಿಯಾ ಲಿಮಿಟೆಡ್, ಹೊಸ ಮುಂಬಯಿ	ಡಾ. ವಿ. ರಾಚಪ್ಪ	7.898
44	Evaluation of bio-efficacy and phytotoxicity of BAS 750 02 F 400 SC against sheath blight and grain discoloration diseases of Rice	ಬಿ.ಎ.ಎಸ್.ಎಫ್. ಇಂಡಿಯಾ ಲಿಮಿಟೆಡ್, ಹೊಸ ಮುಂಬಯಿ	ಡಾ. ಪ್ರಮೇಶ್ ಡಿ.	4.015
45	Evaluation of bio-efficacy and phytotoxicity of Metiram 70%	ಬಿ.ಎ.ಎಸ್.ಎಫ್. ಇಂಡಿಯಾ ಲಿಮಿಟೆಡ್,	ಡಾ. ಶ್ರೀದೇವಿ ಎಸ್. ಚೌವಾಣ್	4.07

ಕ್ರ.ಸಂ.	ಯೋಜನೆ ಹೆಸರು	ಅನುದಾನ ಸಂಸ್ಥೆ	ಯೋಜನಾ ಮುಖ್ಯಸ್ಥರು	ಅನುದಾನದ ಮೊತ್ತ (ರೂ. ಲಕ್ಷಗಳಲ್ಲಿ)
	WG against anthracnose and powdery mildew diseases of Cucumber	ಹೊಸ ಮುಂಬಯಿ		
46	Evaluation of bio-efficacy and phytotoxicity of Metiram 70% WP against alternaria leaf spot, rust and grey mildew diseases of Cotton	ಬಿ.ಎ.ಎಸ್.ಎಫ್. ಇಂಡಿಯಾ ಲಿಮಿಟೆಡ್, ಹೊಸ ಮುಂಬಯಿ	ಡಾ. ಶ್ರೀದೇವಿ ಎಸ್. ಚೌವಾಣ್	4.62
47	Evaluation of tank-mix adjuvants for fungicide formulation of Picoxystrobin 6.76% + Tricyclazole 20.73% w/w WG against blast diseases of Paddy	ಕ್ರೋಡಾ ಇಂಡಿಯಾ ಕಂಪನಿ ಪ್ರೈವೇಟ್ ಲಿಮಿಟೆಡ್, ಹೊಸ ಮುಂಬಯಿ	ಡಾ. ಪ್ರಮೇಶ್ ಡಿ.	2.50
48	Evaluation of bio-efficacy, phytotoxicity and effect on natural enemies of PII 8007 (Broflanilide) 20% SC against insect pests of Bt Cotton and Tomato	ಪಿ.ಐ. ಇಂಡಸ್ಟ್ರೀಸ್ ಲಿಮಿಟೆಡ್ ಗುರುಗಾಂವ್	ಡಾ. ಎ.ಜಿ. ಶ್ರೀನಿವಾಸ	8.80
49	Evaluation of bio-efficacy, phytotoxicity and residual effect of Dinotefuran + Ethion (PII 50 55% EC) and Dinotefuran (PII 070 70% WG) on major pests of Paddy	ಪಿ.ಐ. ಇಂಡಸ್ಟ್ರೀಸ್ ಲಿಮಿಟೆಡ್ ಗುರುಗಾಂವ್	ಡಾ. ಸುಜಾಯ್ ಹುರಳಿ	8.25
50	Evaluation of Humesol on growth, yield and quality of Cucumber	ಪಿ.ಐ. ಇಂಡಸ್ಟ್ರೀಸ್ ಲಿಮಿಟೆಡ್ ಗುರುಗಾಂವ್	ಡಾ. ಮುಕೇಶ್‌ಕುಮಾರ್ ಮೀನ	4.84
51	Evaluation of bio-efficacy and phytotoxicity studies of Atabron (Chlorfulazuron 5.4% EC) against major lepidopteran insect pests of Pigeonpea, Chickpea and Soybean and Ulala (Flonicamid 50% WG) against sucking pests of Soybean	ಯುನೈಟೆಡ್ ಫಾಸ್ಫರಸ್ ಲಿಮಿಟೆಡ್, ಮುಂಬಯಿ	ಡಾ. ವಿ. ರಾಚಪ್ಪ	8.382
52	Evaluation of bio-efficacy and phytotoxicity of GPF 215	ಯುನೈಟೆಡ್ ಫಾಸ್ಫರಸ್ ಲಿಮಿಟೆಡ್, ಮುಂಬಯಿ	ಡಾ. ಮಲ್ಲಿಕಾರ್ಜುನ ಕೆಂಗನಾಳ್	5.94

ಕ್ರ.ಸಂ.	ಯೋಜನೆ ಹೆಸರು	ಅನುದಾನ ಸಂಸ್ಥೆ	ಯೋಜನಾ ಮುಖ್ಯಸ್ಥರು	ಅನುದಾನದ ಮೊತ್ತ (ರೂ. ಲಕ್ಷಗಳಲ್ಲಿ)
	against sheath blight, blast, brown spot, dirty panicle and false smut of Paddy			
53	Bio-efficacy of GOD – H007 43% SG against Weeds in Non Cropped Area	ಗೋದ್ರೆಜ್ ಅಗ್ರೋವೆಟ್ ಲಿಮಿಟೆಡ್, ಮುಂಬಯಿ	ಡಾ. ಬಿ.ಕೆ. ದೇಸಾಯಿ ಡಾ. ಆನಂದ ಎನ್.	1.925
15. Any Other				
54	Bio-tech Kisan Hub (ISAP)Project, KVK, Bidar	ಭಾರತೀಯ ವಿಜ್ಞಾನ ಮತ್ತು ತಾಂತ್ರಿಕತೆ ವಿಭಾಗ ಮತ್ತು ಜೈವಿಕ ತಂತ್ರಜ್ಞಾನ ವಿಭಾಗ, ಭಾರತ ಸರ್ಕಾರ, ನವದೆಹಲಿ	ಶ್ರೀ ಆರ್.ಸಿ. ದೇಶ್‌ಮುಖ್	14.25
55	Short-Term Training on Agricultural & allied aspects for farmers by innovative/awardee farmers 2017-18	ವಿಸ್ತರಣಾ ನಿರ್ದೇಶನಾಲಯ, ಕೃವಿವಿ, ರಾಯಚೂರು	ಶ್ರೀ ಆರ್.ಸಿ. ದೇಶ್‌ಮುಖ್	2.50
56	Integrated Horticulture Development Project, (FPOs)KVK, Bidar	ತೋಟಗಾರಿಕೆ ವಿಭಾಗ, ಬೀದರ್	ಶ್ರೀ ಆರ್.ಸಿ. ದೇಶ್‌ಮುಖ್	3.09
57	Daesi Programme KVK,Bidar	MANAGE, ಹೈದ್ರಾಬಾದ & DEASI ಡೀಲರ್ಸ್‌ಗಳು	ಶ್ರೀ ಆರ್.ಸಿ. ದೇಶ್‌ಮುಖ್	7.80
58	Sorghum Testing Trial	ಭಾರತೀಯ ಸಿರಿಧಾನ್ಯಗಳ ಸಂಶೋಧನಾ ಸಂಸ್ಥೆ, ಹೈದ್ರಾಬಾದ	ಡಾ. ವಿಕಾಸ್ ವಿ. ಕುಲಕರ್ಣಿ	0.89
16. RKVY Projects				
59	Green Synthesis and Characterization of Nano Pesticide for Enhancing the Quality of Agricultural Produce	ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ, ಕರ್ನಾಟಕ ಸರ್ಕಾರ, ಬೆಂಗಳೂರು	ಡಾ. ಶರಣಗೌಡ ಹೀರೆಗೌಡರ್	125.00
60	Establishment of State-of-Art Processing and Value Addition Centre for Millets at UAS Raichur, ICAR-KVK, Kalaburagi, ICAR-KVK, Bellari (Hagari) Campuses	ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ, ಕರ್ನಾಟಕ ಸರ್ಕಾರ, ಬೆಂಗಳೂರು	ಡಾ. ಉದಯಕುಮಾರ ಆರ್. ನಿಡ್ಡೋಣಿ	375.00
			Total	**2220.27**

4. ಕೃಷಿ ವಿಸ್ತರಣಾ

ರಾಯಚೂರು ಕೃಷಿ ವಿಶ್ವವಿದ್ಯಾಲಯವು ಮೂರು ಪ್ರಮುಖ ಕಾರ್ಯಗಳನ್ನು ನಿರ್ವಹಿಸುತ್ತದೆ. ಅವುಗಳೆಂದರೆ, ಬೋಧನೆ, ಸಂಶೋಧನೆ ಮತ್ತು ವಿಸ್ತರಣೆ. ವಿಸ್ತರಣಾ ನಿರ್ದೇಶನಾಲಯವು ಕಲ್ಯಾಣ–ಕರ್ನಾಟಕ ಭಾಗದ ರಾಯಚೂರು, ಯಾದಗಿರಿ, ಬೀದರ, ಕಲಬುರಗಿ, ಬಳ್ಳಾರಿ ಹಾಗೂ ಕೊಪ್ಪಳ ಜಿಲ್ಲೆಗಳಲ್ಲಿ ಕೃಷಿ ಅಭಿವೃದ್ಧಿ ಮತ್ತು ರೈತರ ಕಲ್ಯಾಣಕ್ಕಾಗಿ ಕಾರ್ಯಚಟುವಟಿಕೆಗಳನ್ನು ಕೈಗೊಳ್ಳುವ ಜವಾಬ್ದಾರಿಯನ್ನು ಹೊಂದಿದೆ.

4.1 ಉದ್ದೇಶಗಳು

- ಸ್ಥಳ ನಿರ್ದಿಷ್ಟ ಸುಸ್ಥಿರ ನೈಸರ್ಗಿಕ ಸಂಪನ್ಮೂಲ ಬಳಕೆಗೆ ಸೂಕ್ತ ತಂತ್ರಜ್ಞಾನವನ್ನು ಗುರುತಿಸಲು ರೈತರ ತಾಕುಗಳಲ್ಲಿ ತಂತ್ರಜ್ಞಾನ ಪರೀಕ್ಷೆಗಳನ್ನು ನಡೆಸುವುದು.
- ಉತ್ಪನ್ನ ಮಾಹಿತಿ ಪಡೆಯಲು ಹಾಗೂ ರೈತರ ಅಭಿಪ್ರಾಯ ತಿಳಿಯಲು ವಿವಿಧ ಬೆಳೆಗಳ ಮತ್ತು ಉದ್ಯಮಗಳ ಮುಂಚೂಣಿ ಪ್ರಾತ್ಯಕ್ಷಿಕೆಗಳನ್ನು ರೈತರ ತಾಕುಗಳಲ್ಲಿ ಏರ್ಪಡಿಸುವುದು.
- ರೈತರಿಗೆ ನೂತನ ತಂತ್ರಜ್ಞಾನದ ಮರುಪರಿಶೀಲನೆ ಹಾಗೂ ಪ್ರಾತ್ಯಕ್ಷಿಕೆಗಳ ತಂತ್ರಜ್ಞಾನದ ಬಗ್ಗೆ ತರಬೇತಿ ಕಾರ್ಯಕ್ರಮಗಳನ್ನು ಏರ್ಪಡಿಸುವುದು ಮತ್ತು ವಿವಿಧ ಇಲಾಖೆಗಳ ವಿಸ್ತರಣಾ ಕಾರ್ಯಕರ್ತರರುಗಳಿಗೆ ಆಧುನಿಕ ತಂತ್ರಜ್ಞಾನದ ಬೆಳವಣಿಗೆಯ ಬಗ್ಗೆ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.
- ನೂತನ ಕೃಷಿ ತಂತ್ರಜ್ಞಾನಗಳ ಜಾಗೃತಿಗಾಗಿ ಹಲವಾರು ಸೂಕ್ತ ವಿಸ್ತರಣಾ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದು.
- ರೈತರ ಅಗತ್ಯಕ್ಕನುಗುಣವಾಗಿ ಗುಣಮಟ್ಟದ ಬೀಜ, ಕಸಿಗಿಡಗಳು, ಜಾನುವಾರು ತಳಿಗಳು, ಪ್ರಾಣಿಜನ್ಯ ಉತ್ಪನ್ನಗಳು ಮತ್ತು ಜೈವಿಕ ಉತ್ಪನ್ನಗಳನ್ನು ಒದಗಿಸುವುದು (ಕೃಷಿ ವಿಜ್ಞಾನ ಕೇಂದ್ರಗಳಲ್ಲಿ).
- ಜಿಲ್ಲೆಯ ಕೃಷಿ ಆರ್ಥಿಕತೆಯ ಅಭಿವೃದ್ಧಿಗಾಗಿ ಶ್ರಮಿಸುವ ಸರ್ಕಾರಿ, ಖಾಸಗಿ ಹಾಗೂ ಸ್ವಯಂಪ್ರೇರಿತ ಸಂಸ್ಥೆಗಳಿಗೆ ಅಗತ್ಯವಿರುವ ಕೃಷಿ ತಂತ್ರಜ್ಞಾನಗಳ ಹಾಗೂ ಸಂಪನ್ಮೂಲ ಕೇಂದ್ರವಾಗಿ ಕಾರ್ಯ ನಿರ್ವಹಿಸುವುದು.

4.2 ಕಾರ್ಯಚಟುವಟಿಕೆಗಳು

ವಿಸ್ತರಣಾ ನಿರ್ದೇಶನಾಲಯವು ಕೃಷಿ ವಿಸ್ತರಣಾ ಸೇವೆಯನ್ನು ತರಬೇತಿ ಕಾರ್ಯಕ್ರಮಗಳು, ಪ್ರಾತ್ಯಕ್ಷಿಕೆಗಳು, ಕ್ಷೇತ್ರೋತ್ಸವಗಳು, ಕ್ಷೇತ್ರ ಪರೀಕ್ಷೆಗಳು, ಮುಂಚೂಣಿ ಪ್ರಾತ್ಯಕ್ಷಿಕೆಗಳು, ತಂತ್ರಜ್ಞಾನ ಮಾಸಾಚರಣೆ, ರೈತರ ಶೈಕ್ಷಣಿಕ ಪ್ರವಾಸಗಳು ಹಾಗೂ ಕೃಷಿಮೇಳಗಳ ಮುಖಾಂತರ ರೈತ ಸಮುದಾಯಕ್ಕೆ ಸೇವೆಯನ್ನು ಪೂರೈಸುತ್ತಿದೆ. ವಿಸ್ತರಣಾ ನಿರ್ದೇಶನಾಲಯವು ಈ ಮೇಲಿನ ವಿಸ್ತರಣಾ ಕಾರ್ಯಚಟುವಟಿಕೆಗಳನ್ನು ತನ್ನ ಅಂಗ ಸಂಸ್ಥೆಗಳಾದ 7 ಕೃಷಿ ವಿಜ್ಞಾನ ಕೇಂದ್ರಗಳು ಹಾಗೂ 4 ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರಗಳ ಮುಖಾಂತರ ಕಾರ್ಯನಿರ್ವಹಿಸುತ್ತಿದೆ. ರೈತರಿಗೆ ಕೃಷಿ ಹಾಗೂ ಕೃಷಿ ಸಂಬಂದಿತ ಮಾಹಿತಿಗಳನ್ನು ಪೂರೈಸಲು ವಿಜ್ಞಾನಿಗಳು ರೈತ ಕ್ಷೇತ್ರ ಭೇಟಿ, ಸಮಸ್ಯಾತ್ಮಕ ತಾಕುಗಳಿಗೆ ಭೇಟಿ ಹಾಗೂ ರಾಜ್ಯ ಸರ್ಕಾರದ ಕೃಷಿ ಹಾಗೂ ಇತರೆ ಅಭಿವೃದ್ಧಿ ಇಲಾಖೆಗಳ ಸಹಯೋಗದೊಂದಿಗೆ ತರಬೇತಿ ಕಾರ್ಯಕ್ರಮಗಳ ಆಯೋಜನೆ, ಮುಂಗಾರು–ಹಿಂಗಾರು ಹಂಗಾಮಿನ ಬೆಳೆಗಳಲ್ಲಿ ಕೀಟ ಹಾಗೂ ರೋಗಗಳ ಸಮೀಕ್ಷೆ, ವಿಸ್ತರಣಾ ಅಧಿಕಾರಿಗಳ ಕಾರ್ಯಕ್ಷಮತೆ ಹೆಚ್ಚಿಸುವಲ್ಲಿ ತರಬೇತಿ ಕಾರ್ಯಕ್ರಮ ಆಯೋಜಿಸುವಿಕೆ ಮುಂತಾದ ಕಾರ್ಯಚಟುವಟಿಕೆಗಳನ್ನು ನಿರ್ವಹಿಸುತ್ತಾ ಕೃಷಿ ಕ್ಷೇತ್ರದ ಸಮಗ್ರ ಬೆಳವಣಿಗೆಯಲ್ಲಿ ಕಾರ್ಯ ಪ್ರವೃತ್ತವಾಗಿರುವುದು. ಕೃಷಿಯಲ್ಲಿ ರೈತರು ಎದುರಿಸುತ್ತಿರುವ ಕ್ಷೇತ್ರ ಮಟ್ಟದ ಸಮಸ್ಯೆಗಳು, ತಂತ್ರಜ್ಞಾನಗಳ ಬೇಡಿಕೆ ಇತರೆ ಅವಶ್ಯಕತೆಗಳನ್ನು ಸಂಗ್ರಹಿಸಿ ವಿಶ್ವವಿದ್ಯಾಲಯದ ಸಂಶೋದನಾ ವಿಭಾಗಕ್ಕೆ ಹಸ್ತಾಂತರಿಸಿ, ರೈತರ ಬೇಡಿಕೆಗಳಿಗೆ ಅನುಗುಣವಾದ ತಂತ್ರಜ್ಞಾನಗಳನ್ನು ಪುನಃ ರೈತ ಸಮುದಾಯಕ್ಕೆ ನೀಡುವುದು.

4.3 ವಿಸ್ತರಣಾ ನಿರ್ದೇಶನಾಲಯದ ಘಟಕ / ವಿಭಾಗಗಳು

- ಕೃಷಿ ವಿಜ್ಞಾನ ವಸ್ತು ಸಂಗ್ರಹಾಲಯ
- ಕೃಷಿ ವಿಸ್ತರಣಾ ಶಿಕ್ಷಣ ಸಂಸ್ಥೆಗಳು
- ICAR ಕೃಷಿ ವಿಜ್ಞಾನ ಕೇಂದ್ರಗಳು

4.3.1 ಕೃಷಿ ವಿಜ್ಞಾನ ವಸ್ತು ಸಂಗ್ರಹಾಲಯ

ಕೃಷಿ ವಿಜ್ಞಾನ ವಸ್ತು ಸಂಗ್ರಹಾಲಯವು ಕೃಷಿ ಮತ್ತು ವಿಶ್ವವಿದ್ಯಾಲಯದ ಬೆಳವಣಿಗೆ ಇತಿಹಾಸ ಅಭಿವೃದ್ಧಿಪಡಿಸಿದ ತಂತ್ರಜ್ಞಾನಗಳು, ನೂತನ ಆವಿಷ್ಕಾರಗಳು, ಸಂದ ಪುರಸ್ಕಾರಗಳು, ಮಾಡಿಕೊಂಡ ಒಡಂಬಡಿಕೆಗಳು ಇತ್ಯಾದಿ ಮಾಹಿತಿಯನ್ನು ಪ್ರದರ್ಶಿಸಲಾಗಿದೆ. ಕೃಷಿ ಹಾಗೂ ಕೃಷಿ ಸಂಬಂಧಿತ ವಿಷಯಗಳಿಗೆ ಸಂಬಂಧ ಪಟ್ಟ ತಂತ್ರಜ್ಞಾನಗಳ ಪೋಸ್ಟರ್‌ಗಳು, ನಕ್ಷೆಗಳು, ಛಾಯಾ ಚಿತ್ರಗಳು, ಜೀವಂತ ಮಾದರಿಗಳು ಇತ್ಯಾದಿ ಮಾಹಿತಿಗಳನ್ನು ವಸ್ತು ಸಂಗ್ರಹಾಲಯ ಕಟ್ಟಡದಲ್ಲಿ ಅಚ್ಚುಕಟ್ಟಾಗಿ ಪ್ರದರ್ಶಿಸಲಾಗಿದೆ. ವಸ್ತು ಸಂಗ್ರಹಾಲಯಕ್ಕೆ ರೈತರು, ರೈತ ಮಹಿಳೆಯರು, ಯುವಕರು, ಕೃಷಿ ಪ್ರವಾಸ ನಿಮಿತ್ತ ಭೇಟಿ ನೀಡುವ ವಿದ್ಯಾರ್ಥಿಗಳು ಅಲ್ಲದೇ ಸ್ಥಳೀಯ ಸಾರ್ವಜನಿಕರು ಒಳಗೊಂಡಂತೆ ಇಲ್ಲಿಯವರೆಗೆ ಸುಮಾರು 3000 ಕ್ಕೂ ಹೆಚ್ಚು ಜನ ಭೇಟಿ ನೀಡಿರುತ್ತಾರೆ.

4.3.2 ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರಗಳು

ವಿಸ್ತರಣಾ ನಿರ್ದೇಶನಾಲಯದ ಅಡಿಯಲ್ಲಿ ಬಳ್ಳಾರಿ ಜಿಲ್ಲೆಯ ಹೂವಿನಹಡಗಲಿ, ಯಾದಗಿರ ಜಿಲ್ಲೆಯ ಭೀಮರಾಯನಗುಡಿ, ರಾಯಚೂರು ಜಿಲ್ಲೆಯ ಲಿಂಗಸೂಗೂರು ಮತ್ತು ಕೊಪ್ಪಳದಲ್ಲಿ ಒಟ್ಟು ನಾಲ್ಕು ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ. ಈ ವಿಸ್ತರಣಾ ಕೇಂದ್ರಗಳು ಸಂಶೋಧನಾ ಫಲಿತಾಂಶಗಳ ಕಾರ್ಯಕ್ಷಮತೆಯ ಮೌಲ್ಯಮಾಪನ, ರುಜುವಾತಾದ ಫಲಿತಾಂಶಗಳ ಪ್ರಾತ್ಯಕ್ಷಿಕೆ, ಒಳ ಹಾಗೂ ಹೊರ ಆವರಣ ತರಬೇತಿ ಕಾರ್ಯಕ್ರಮಗಳ ಆಯೋಜನೆ ಮತ್ತು ಇತರ ಅಭಿವೃದ್ಧಿ ಇಲಾಖೆಗಳ, ಪರಿಕರ ವಿಜೆನ್ಸಿಗಳ ಮತ್ತು ಸರಕಾರೇತರ ಸಂಸ್ಥೆಗಳ ಸಹಯೋಗದೊಂದಿಗೆ ವಿಸ್ತರಣಾ ಚಟುವಟಿಕೆಗಳನ್ನು ನಿರ್ವಹಿಸುತ್ತಿವೆ.

ಕ್ರ.ಸಂ	ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರಗಳು	ಜಿಲ್ಲೆ	ಸ್ಥಾಪನೆ
1	ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರ, ಹೂವಿನಹಡಗಲಿ	ಬಳ್ಳಾರಿ	1996
2	ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರ, ಭೀಮರಾಯನಗುಡಿ	ಯಾದಗಿರಿ	2002
3	ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರ, ಲಿಂಗಸೂಗೂರು	ರಾಯಚೂರು	2010
4	ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರ, ಕೊಪ್ಪಳ	ಕೊಪ್ಪಳ	2011

ಕ್ಷೇತ್ರ ಪ್ರಯೋಗಗಳು: ರೈತರ ಜಮೀನುಗಳಲ್ಲಿ ವಿಜ್ಞಾನಿಗಳ ಸಂಶೋಧನೆಯ ಪ್ರಯೋಗಗಳ ಕಾರ್ಯಕ್ಷಮತೆಯನ್ನು ಮೌಲ್ಯಮಾಪನ ಮಾಡಲು ಕ್ಷೇತ್ರ ಪ್ರಯೋಗಗಳನ್ನು ಕೈಗೊಳ್ಳಲಾಗಿತ್ತು. ಸುಮಾರು 40 ರೈತರನ್ನೊಳಗೊಂಡಂತೆ 22 ಕ್ಷೇತ್ರ ಪ್ರಯೋಗಗಳನ್ನು ನಡೆಸಲಾಗಿದೆ.

ಪ್ರಾತ್ಯಕ್ಷಿಕೆಗಳು: ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರಗಳಲ್ಲಿ 350 ರೈತರನ್ನು ಒಳಗೊಂಡಂತೆ 130 ಹೇ. ಕ್ಷೇತ್ರದಲ್ಲಿ 35 ಕೃಷಿ ತಂತ್ರಜ್ಞಾನಗಳ ಪ್ರಾತ್ಯಕ್ಷಿಕೆಗಳನ್ನು ಆಯೋಜಿಸಿದೆ. ಈ ಪ್ರಾತ್ಯಕ್ಷಿಕೆಗಳಲ್ಲಿ ಬೆಳೆ ಸಂರಕ್ಷಣೆ, ನೂತನ ಬೇಸಾಯ ಕ್ರಮಗಳು, ತೃಣಧಾನ್ಯಗಳ ಬೇಸಾಯ, ಸಮಗ್ರ ಬೆಳೆ ನಿರ್ವಹಣೆ ಮುಂತಾದ ತಂತ್ರಜ್ಞಾನಗಳನ್ನು ರೈತರು ಅಳವಡಿಸಿಕೊಳ್ಳಲು ಉತ್ತೇಜಿಸಲು ರೈತರ ಜಮೀನಿನಲ್ಲಿ ಮುಂಚೂಣಿ ಪ್ರಾತ್ಯಕ್ಷಿಕೆಗಳನ್ನು ಕೈಗೊಳ್ಳಲಾಗಿತ್ತು.

ತರಬೇತಿ ಕಾರ್ಯಕ್ರಮಗಳು: ವಿಸ್ತರಣಾ ಶಿಕ್ಷಣ ಕೇಂದ್ರಗಳು ಸುಮಾರು 44 ಒಳ ಆವರಣ ತರಬೇತಿ ಹಾಗೂ 43 ಹೊರ ಆವರಣ ತರಬೇತಿಗಳನ್ನು ಹಮ್ಮಿಕೊಂಡು 4826 ರೈತರು ಹಾಗೂ ರೈತ ಮಹಿಳೆಯರಿಗೆ ಕೃಷಿ ಸಂಬಂದಿತ ವಿವಿಧ ವಿಷಯಗಳಲ್ಲಿ ತರಬೇತಿ ನೀಡಲಾಗಿದೆ. ಗ್ರಾಮೀಣ ಯುವಕ ಯುವತಿಯರಿಗೆ 49 ತರಬೇತಿಗಳನ್ನು ನಡೆಸಲಾಗಿ ಸುಮಾರು 2637 ಗ್ರಾಮೀಣ ಯುವಕ ಯುವತಿಯರು ಲಾಭ ಪಡೆದುಕೊಂಡಿರುತ್ತಾರೆ ಮುಂದುವರಿದು ಕೃಷಿ ಹಾಗೂ ಕೃಷಿ ಸಂಬಂದಿತ ಅಭಿವೃದ್ಧಿ ಇಲಾಖೆಗಳ ವಿಸ್ತರಣಾ ಅಧಿಕಾರಿಗಳಿಗೆ ಪ್ರತ್ಯೇಕವಾಗಿ 52 ತರಬೇತಿ ಕಾರ್ಯಕ್ರಮಗಳ ಮುಖಾಂತರ ಸುಮಾರು 2760 ವಿಸ್ತರಣಾ ಕಾರ್ಯಕರ್ತರಿಗೆ ತರಬೇತಿಯನ್ನು ನೀಡಲಾಗಿದೆ.

4.3.3 ಭಾರತೀಯ ಕೃಷಿ ಅನುಸಂಧಾನ ಪರಿಷತ್ ಕೃಷಿ ವಿಜ್ಞಾನ ಕೇಂದ್ರಗಳು

ಭಾರತೀಯ ಕೃಷಿ ಅನುಸಂಧಾನ ಪರಿಷತ್, ನವದೆಹಲಿ ಇವರ ಅನುದಾನದಲ್ಲಿ ಬೀದರ, ರಾಯಚೂರು, ಬಳ್ಳಾರಿ, ಕಲಬುರಗಿ, ಗಂಗಾವತಿ, ರದ್ದೇವಾಡಗಿ ಹಾಗೂ ಕವಡಿಮಟ್ಟಿಯಲ್ಲಿ ಒಟ್ಟು 7 ಕೃಷಿ ವಿಜ್ಞಾನ ಕೇಂದ್ರಗಳು ಕೃ.ವಿವಿ, ರಾಯಚೂರು ಉಸ್ತುವಾರಿಯಲ್ಲಿ ಕಾರ್ಯನಿರ್ವಹಿಸುತ್ತಿವೆ. ತಂತ್ರಜ್ಞಾನ ಪರಿಶೀಲನೆ, ಪರಿಷ್ಕರಣೆ, ಕ್ಷೇತ್ರ ಪರೀಕ್ಷೆ, ಮುಂಚೂಣಿ ಪ್ರಾತ್ಯಕ್ಷಿಕೆ ಹಾಗೂ ತರಬೇತಿ ಚಟುವಟಿಕೆಗಳನ್ನು ಹಮ್ಮಿಕೊಳ್ಳುತ್ತಿವೆ ಕೃಷಿ ವಿಜ್ಞಾನ ಕೇಂದ್ರಗಳು ಜಿಲ್ಲೆಯ ಕೃಷಿ ಆರ್ಥಿಕತೆಯನ್ನು ಸುಧಾರಿಸಲು, ಸಾರ್ವಜನಿಕ ಮತ್ತು ಖಾಸಗಿ ವಲಯಗಳಲ್ಲಿ ಕೃಷಿ ತಂತ್ರಜ್ಞಾನಗಳ ಜ್ಞಾನ ಕೇಂದ್ರ ಮತ್ತು ಸಂಪನ್ಮೂಲ ಕೇಂದ್ರವಾಗಿ ಕಾರ್ಯ ನಿರ್ವಹಿಸುತ್ತಿವೆ.

ಕ್ರ.ಸಂ	ಕೃಷಿ ವಿಜ್ಞಾನ ಕೇಂದ್ರಗಳು	ಜಿಲ್ಲೆ	ಸ್ಥಾಪನೆ
1.	ಕೃಷಿ ವಿಜ್ಞಾನ ಕೇಂದ್ರ, ಬೀದರ	ಬೀದರ	1985
2.	ಕೃಷಿ ವಿಜ್ಞಾನ ಕೇಂದ್ರ, ರಾಯಚೂರು	ರಾಯಚೂರು	1994
3.	ಕೃಷಿ ವಿಜ್ಞಾನ ಕೇಂದ್ರ, ಹಗರಿ	ಬಳ್ಳಾರಿ	1995
4.	ಕೃಷಿ ವಿಜ್ಞಾನ ಕೇಂದ್ರ, ಕಲಬುರಗಿ	ಕಲಬುರಗಿ	1999
5.	ಕೃಷಿ ವಿಜ್ಞಾನ ಕೇಂದ್ರ, ಗಂಗಾವತಿ	ಕೊಪ್ಪಳ	2004
6.	ಕೃಷಿ ವಿಜ್ಞಾನ ಕೇಂದ್ರ, ರದ್ದೆವಾಡಗಿ	ಕಲಬುರಗಿ–ಎ	2012
7	ಕೃಷಿ ವಿಜ್ಞಾನ ಕೇಂದ್ರ, ಕವಡಿಮಟ್ಟಿ	ಯಾದಗಿರ	2017

4.3.3.1 ಕ್ಷೇತ್ರ ಪರೀಕ್ಷೆಗಳು

ವಿವಿಧ ಬೇಸಾಯ ವ್ಯವಸ್ಥೆಗಳಡಿಯಲ್ಲಿ ಸ್ಥಳ ನಿರ್ದಿಷ್ಟ ಕೃಷಿ ತಂತ್ರಜ್ಞಾನಗಳನ್ನು ಗುರುತಿಸಲು ಕ್ಷೇತ್ರದಲ್ಲಿಯೇ ಪರೀಕ್ಷೆಗಳನ್ನು ಕೈಗೊಳ್ಳಲಾಗಿದ್ದು ಬೆಳೆ ಅಭಿವೃದ್ಧಿ ವಿಷಯದಲ್ಲಿ 5 ತಂತ್ರಜ್ಞಾನಗಳನ್ನು, ಬೆಳೆ ಉತ್ಪಾದನೆಯಲ್ಲಿ 5 ತಂತ್ರಜ್ಞಾನಗಳನ್ನು, ಬೆಳೆ ಸಂರಕ್ಷಣೆಯಲ್ಲಿ 2 ತಂತ್ರಜ್ಞಾಗಳನ್ನು, ತೋಟಗಾರಿಕೆಯಲ್ಲಿ 2 ತಂತ್ರಜ್ಞಾನಗಳನ್ನು, ಗೃಹ ವಿಜ್ಞಾನದಲ್ಲಿ 3 ತಂತ್ರಜ್ಞಾಗಳನ್ನು ಹಾಗೂ ಹೈನುಗಾರಿಕೆಯಲ್ಲಿ 1 ತಂತ್ರಜ್ಞಾನವನ್ನು ಪರಿಷ್ಕರಿಸಲಾಗಿ ರೈತರೊಂದಿಗೆ ತಂತ್ರಜ್ಞಾನಗಳ ಮಾಹಿತಿಯನ್ನು ಹಂಚಿಕೊಳ್ಳಲಾಗಿದೆ.

I. ಬೆಳೆ ಅಭಿವೃದ್ಧಿ

- ಅಧಿಕ ಉತ್ಪಾದನೆಗಾಗಿ ಶೇಂಗಾ ಬೆಳೆಯ ತಳಿಗಳ ಮೌಲ್ಯಮಾಪನ
- ಭತ್ತದ ಬೆಳೆ ನಂತರ ಸಾಸಿವೆ ಹೊಸ ತಳಿಗಳ ಕ್ಷೇತ್ರ ಪರಿಶೀಲನೆ
- ಹೊಸ ಬೆಂಡಿ ತಳಿಗಳ ಕ್ಷೇತ್ರ ಪರಿಶೀಲನೆ
- ಬೇಸಿಗೆ ಕಾಲಕ್ಕೆ ನೀರಾವರಿ ಪದ್ಧತಿಯಲ್ಲಿ ಬೆಳೆಯುವ ಎಳ್ಳು ಬೆಳೆಯ ಸ್ವೇತಾ ತಳಿಯ ಪರಿಶೀಲನೆ ಪ್ರಾತ್ಯಕ್ಷಿಕೆ
- ಶುಂಠಿ ತಳಿಗಳ ಪರಿಶೀಲನೆ ಪ್ರಾತ್ಯಕ್ಷಿಕೆ
- ಕಡಲೆ ಬೆಳೆಯಲ್ಲಿ ತಳಿಗಳ ಇಳುವರಿ ಸಾಮರ್ಥ್ಯದ ಪರೀಕ್ಷೆ
- ಹೊಸ ಅಲಸಂಧಿ ತಳಿಗಳ ಕ್ಷೇತ್ರ ಪರಿಶೀಲನೆ

II. ಬೆಳೆ ಉತ್ಪಾದನೆ

- ಏರು ಮಡಿ ಪದ್ಧತಿಯಲ್ಲಿ ತೊಗರಿ ತಳಿಗಳ ಮೌಲ್ಯಮಾಪನ
- ಕಡಲೆಯಲ್ಲಿ ಗಂಧಕ ಮತ್ತು ಸತುವಿನ ಕೊರೆತೆ ನಿಗಿಸುವ ತಂತ್ರಜ್ಞಾನಗಳ ಪರಿಶೀಲನೆ ಪ್ರಾತ್ಯಕ್ಷಿಕೆ.

III. ಬೆಳೆ ಸಂರಕ್ಷಣೆ

- ಈರುಳ್ಳಿ ಬೆಳೆಯಲ್ಲಿ ನುಸಿ ಮತ್ತು ನೇರಳೆ ಮಜ್ಜಿಗೆ ರೋಗದ ನಿರ್ವಹಣೆ ತಾಂತ್ರಿಕತೆಗಳ ಪರೀಕ್ಷೆ
- ಕಡಲೆ ಬೆಳೆಯಲ್ಲಿ ಕೊಳೆ ರೋಗ ಮತ್ತು ಸೊರಗು ರೋಗದ ನಿರ್ವಹಣೆ ತಾಂತ್ರಿಕತೆಗಳ ಪರೀಕ್ಷೆ

IV. ತೋಟಗಾರಿಕೆ

- ಅಧಿಕ ಉತ್ಪಾದನೆಗಾಗಿ ಚೆಂಡು ಹೂ ತಳಿಗಳ ಮೌಲ್ಯಮಾಪನ
- ಅಧಿಕ ಉತ್ಪಾದನೆಗಾಗಿ ಈರುಳ್ಳಿ ಬೆಳೆಯ ತಳಿಗಳ ಮೌಲ್ಯಮಾಪನ

V. ಪ್ರಾಣಿ ವಿಜ್ಞಾನ

- ಬಹುವಾರ್ಷಿಕ ಮೇವಿನ ಜೋಳದ ಬೀಜದ ತಳಿಗಳ ಮೌಲ್ಯಮಾಪನ

VI. ಗೃಹ ವಿಜ್ಞಾನ

- ವಿವಿಧ ಕೃಷಿ ಪದ್ಧತಿಗಳನ್ನು ಅಳವಡಿಸಿಕೊಂಡ ಕೃಷಿ ಕುಟುಂಬಗಳಲ್ಲಿ ಸಮರ್ಪಕ ಪೌಷ್ಟಿಕತೆ ನಿರ್ಧರಿಸುವ ಮಾಪನಗಳ ಮೌಲ್ಯಮಾಪನ.
- ಪೋಷಕಾಂಶ ಭದ್ರತೆಗಾಗಿ ನ್ಯೂನ ಪೋಷಣೆ ತಡೆಗಟ್ಟಲು ಬೆಳೆ ಪದ್ಧತಿಗಳ ಪರಿಶೀಲನೆ
- ಮಕ್ಕಳ ಮತ್ತು ಕೃಷಿ ನಿರತ ಹೆಣ್ಣು ಮಕ್ಕಳಲ್ಲಿ "ಸಿ" ಜೀವ ಸತ್ವ ಕೊರತೆ ಕಂಡು ಹಿಡಿದು, "ಸಿ" ಜೀವ ಸತ್ವ ಭರಿತ ಆಹಾರದ ಮುಖಾಂತರ ನಿರ್ವಹಣೆ ಮಾಡುವುದು.

4.3.3.2. ಮುಂಚೂಣಿ ಪ್ರಾತ್ಯಕ್ಷಿಕೆಗಳು

ಕೃಷಿ ವಿಜ್ಞಾನ ಕೇಂದ್ರಗಳು ನೂತನ ಹಾಗೂ ಆಯಾ ಪ್ರದೇಶಕ್ಕೆ ಅನುಗುಣವಾದ ಪರಿಶೀಲಿಸಿದ ಕೃಷಿ ತಂತ್ರಜ್ಞಾನಗಳನ್ನು ರೈತರ ಜಮೀನಿನಲ್ಲಿ ಮುಂಚೂಣಿ ಪ್ರಾತ್ಯಕ್ಷಿಕೆಗಳಾಗಿ ಕೈಗೊಂಡು ಗ್ರಾಮೀಣ ಭಾಗದ ರೈತರಲ್ಲಿ ನೂತನ ಕೃಷಿ ತಂತ್ರಜ್ಞಾನಗಳ ಬಳಕೆಗಳ ಬಗ್ಗೆ ಅರಿವು ಹಾಗೂ ಜನಪ್ರಿಯಗೊಳಿಸುವುದು. 2018–19ನೇ ಸಾಲಿನಲ್ಲಿ ಒಟ್ಟು 54 ಕೃಷಿ ತಂತ್ರಜ್ಞಾನಗಳನ್ನು ಪ್ರಾತ್ಯಕ್ಷಿಕೆಗಳ ಮೂಲಕ ಸುಮಾರು 188 ಹೇ. ಪ್ರದೇಶದಲ್ಲಿ ರೈತರ ಜಮೀನಿನಲ್ಲಿ ಕೈಗೊಂಡು ಮಾಹಿತಿಯನ್ನು ನೀಡಲಾಗಿದೆ.

4.3.3.3 ತರಬೇತಿ ಕಾರ್ಯಕ್ರಮಗಳು

ಕೃಷಿ ವಿಜ್ಞಾನ ಕೇಂದ್ರಗಳು 2018–19ನೇ ಸಾಲಿನಲ್ಲಿ ರೈತರಿಗೆ, ರೈತ ಮಹಿಳೆಯರಿಗೆ, ಯುವಕರಿಗೆ, ವಿಸ್ತರಣಾ ಕಾರ್ಯಕರ್ತರಿಗೆ ತರಬೇತಿಗಳನ್ನು ನೀಡಿವೆ.

- **ಒಳ ಆವರಣ ತರಬೇತಿಗಳು:** ಕೃಷಿ ವಿಜ್ಞಾನ ಕೇಂದ್ರಗಳು ಬೆಳೆ ಉತ್ಪಾದನೆ, ಮಣ್ಣು ವಿಜ್ಞಾನ, ಬೆಳೆ ಸಂರಕ್ಷಣೆ, ಕೃಷಿ ತಾಂತ್ರಿಕತೆ, ತೋಟಗಾರಿಕೆ, ಗೃಹ ವಿಜ್ಞಾನ, ಪಶು ಸಂಗೋಪನೆ, ಕೃಷಿ ಮಾರುಕಟ್ಟೆ, ಬೀಜ ವಿಜ್ಞಾನ, ಸಂಸ್ಕರಣೆ ಮತ್ತು ಮೌಲ್ಯವರ್ಧನೆ ವಿಷಯಗಳಲ್ಲಿ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸುವುದರ ಜೊತೆಗೆ ರೈತರಿಂದ ರೈತರಿಗಾಗಿ ಅಲ್ಪಾವಧಿ ತರಬೇತಿ ಕಾರ್ಯಕ್ರಮಗಳ ಸಹಿತವಾಗಿ ಒಟ್ಟು 178 ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಿ ಸುಮಾರು 7853 ರೈತರಿಗೆ ಮಾಹಿತಿಯನ್ನು ನೀಡಿದೆ.
- **ಹೊರ ಆವರಣ ತರಬೇತಿಗಳು:** ಕೃಷಿ ವಿಜ್ಞಾನ ಕೇಂದ್ರಗಳು ಗ್ರಾಮೀಣ ಭಾಗದ ರೈತರನ್ನು ತಲುಪಲು ಕೃಷಿ ತಂತ್ರಜ್ಞಾನಗಳನ್ನು ಜನಪ್ರಿಯಗೊಳಿಸಲು ಹೊರ ಆವರಣ ತರಬೇತಿಗಳನ್ನು ಕೃಷಿಯ ವಿವಿಧ ವಿಷಯಗಳಲ್ಲಿ ಗ್ರಾಮೀಣ ಭಾಗದಲ್ಲಿಯೇ ತರಬೇತಿಯನ್ನು ಆಯೋಜಿಸಿದೆ. ಒಟ್ಟು 298 ತರಬೇತಿ ಕಾರ್ಯಕ್ರಮವನ್ನು ಆಯೋಜಿಸಿ 13647 ರೈತರಿಗೆ ಮಾಹಿತಿಯನ್ನು ನೀಡಿದೆ.
- **ಗ್ರಾಮೀಣ ಯುವಕ / ಯುವತಿಯರಿಗೆ:** ಕೃಷಿ ವಿಜ್ಞಾನ ಕೇಂದ್ರಗಳು ಗ್ರಾಮೀಣ ಭಾಗದ ಯುವಕ / ಯುವತಿಯರಿಗಾಗಿಯೇ ಪ್ರತ್ಯೇಕವಾಗಿ ಕೃಷಿಯ ವಿವಿಧ ವಿಷಯಗಳಲ್ಲಿ ತರಬೇತಿಗಳನ್ನು ಕೈಗೊಂಡು ಮಾಹಿತಿಯನ್ನು ನೀಡಿದೆ ಒಟ್ಟು 91 ತರಬೇತಿಗಳನ್ನು ಆಯೋಜಿಸಿ 3571 ಯುವ ಜನತೆಗೆ ಮಾಹಿತಿಯನ್ನು ನೀಡಿದೆ.
- **ವಿಸ್ತರಣಾ ಕಾರ್ಯಕರ್ತರಿಗೆ ತರಬೇತಿಗಳು:** ಕೃಷಿ ವಿಜ್ಞಾನ ಕೇಂದ್ರಗಳು, ಕೃಷಿ ಹಾಗೂ ಸಂಬಂದಿತ ಅಭಿವೃದ್ಧಿ ಇಲಾಖೆಗಳ ವಿಸ್ತರಣಾ ಅಧಿಕಾರಿಗಳಿಗೆ ಕೃಷಿ, ತೋಟಗಾರಿಕೆ, ಹೈನುಗಾರಿಕೆ, ಮೀನು ಸಾಕಾಣಿಕೆ, ಆಡು ಸಾಕಾಣಿಕೆ ಮುಂತಾದ

ವಿಷಯಗಳಲ್ಲಿ ತರಬೇತಿಯನ್ನು ನೀಡಿ ಸರಕಾರಿ ಹಾಗೂ ಸರಕಾರೇತರ ಇಲಾಖೆಗಳ ವಿಸ್ತರಣಾ ಸಿಬ್ಬಂದಿಗಳ ಕಾರ್ಯಕ್ಷಮತೆ ಹೆಚ್ಚಿಸುವಲ್ಲಿ ಪ್ರಮುಖ ಪಾತ್ರವಹಿಸಿವೆ. 2018–19ನೇ ಸಾಲಿನಲ್ಲಿ ಒಟ್ಟು 122 ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಿದ್ದು 4557 ವಿಸ್ತರಣಾ ಕಾರ್ಯಕರ್ತರಿಗೆ ತರಬೇತಿಯನ್ನು ನೀಡಿದೆ.

4.3.3.4. ತಂತ್ರಜ್ಞಾನದ ಸೇವಾ ಪೂರೈಕೆ

ಕೃಷಿ ವಿಜ್ಞಾನ ಕೇಂದ್ರಗಳು ರೈತರುಗಳಿಗೆ ಮುಂಚೂಣಿ ಪ್ರಾತ್ಯಕ್ಷಿಕೆಗಳು, ಕ್ಷೇತ್ರ ಪರೀಕ್ಷೆಗಳು, ತರಬೇತಿ ಕಾರ್ಯಕ್ರಮಗಳು ಇವುಗಳ ಜೊತೆಗೆ ಕೃಷಿ ಮಾಹಿತಿ ಹಾಗೂ ನೂತನ ತಂತ್ರಜ್ಞಾನಗಳನ್ನು ಗ್ರಾಮೀಣ ಭಾಗದ ರೈತರಿಗೆ ತಲುಪಲು ವಿವಿಧ ರೀತಿಯ ವಿಸ್ತರಣಾ ಕಾರ್ಯಕ್ರಮಗಳನ್ನು ಆಯೋಜಿಸಿ ತಂತ್ರಜ್ಞಾನ ಸೇವಾ ಪೂರೈಕೆಯಲ್ಲಿ ರೈತ ಸಮುದಾಯಕ್ಕೆ ಸಹಕಾರಿಯಾಗಿದೆ. ಈ ಕುರಿತಾದ ವಿವರವಾದ ವಿವಿಧ ಕಾರ್ಯಕ್ರಮಗಳ ತಂತ್ರಜ್ಞಾನ ಸೇವಾ ಪೂರೈಕೆಯು ಈ ಕೆಳಗಿನಂತಿವೆ.

ಕೋಷ್ಟಕ 34: ತಂತ್ರಜ್ಞಾನ ಸೇವಾ ಪೂರೈಕೆ ಕಾರ್ಯಕ್ರಮಗಳು ಮತ್ತು ಭಾಗವಹಿಸಿದವರ ಸಂಖ್ಯೆ

ಕಾರ್ಯಕ್ರಮಗಳು	ಕಾರ್ಯಕ್ರಮಗಳ ಸಂಖ್ಯೆ	ಭಾಗವಹಿಸಿದವರ ಸಂಖ್ಯೆ
ಗುಂಪು ಸಭೆಗಳು	78	3398
ಕೃಷಿ ಸಂಬಂಧಿತ ಉಪನ್ಯಾಸಗಳು	156	3406
ಕೃಷಿ ಸಂಬಂಧಿತ ಕಾರ್ಯಾಗಾರಗಳು	10	824
ಪ್ರಮುಖ ಬೆಳೆಗಳ ಜಾಗೃತಿ ಕಾರ್ಯಕ್ರಮಗಳು	15	425
ಮಣ್ಣು ಮತ್ತು ನೀರಿನ ಆರೋಗ್ಯ ಕುರಿತು ಶಿಬಿರ	12	999
ರೈತರ ಕ್ಷೇತ್ರ ಭೇಟಿ	1273	3522
ಜಾನುವಾರು ಆರೋಗ್ಯ ಸಪ್ತಾಹ	19	1537
ಕೃಷಿ ಅಭಿಯಾನ ಕಾರ್ಯಕ್ರಮಗಳು	152	8294
ಕ್ಷೇತ್ರತೋತ್ಸವ ಆಯೋಜನೆ	74	6077
ಬೀಜ ದಿನೋತ್ಸವ (ಮುಂಗಾರು/ಹಿಂಗಾರು)	14	2034
ಕೃಷಿ ಗೋಷ್ಠಿಗಳು	20	2345
ವಸ್ತು ಪ್ರದರ್ಶನ	25	60209
ಕೃಷಿ ಮೇಳ	20	96883
ರೈತರ ಶೈಕ್ಷಣಿಕ ಪ್ರವಾಸ	16	517
ಕೃಷಿ ಸಾಕ್ಷ್ಯ ಚಿತ್ರ ಪ್ರದರ್ಶನ	98	3183
ರೇಡಿಯೋ ಕಾರ್ಯಕ್ರಮಗಳು	90	3004
ದೂರದರ್ಶನ ಕಾರ್ಯಕ್ರಮಗಳು	70	1
ಗುಲಾಬಿ ಕಾಯಿಕೊರಕ ಸಮೀಕ್ಷೆ ಹಾಗೂ ರೈತರಲ್ಲಿ ಜಾಗೃತಿ ಮೂಡಿಸುವುದು	27	779
ಪ್ರಧಾನ ಮಂತ್ರಿ ಫಸಲ ಭೀಮಾ ಯೋಜನೆ (ಜಾಗೃತಿ ಕಾರ್ಯಕ್ರಮಗಳು)	34	4068

4.3.3.5 ಇತರ ವಿಸ್ತರಣಾ ಚಟುವಟಿಕೆಗಳು

- ಕೃಷಿ ಹಾಗೂ ಕೃಷಿ ಸಂಬಂಧಿತ ಇಲಾಖೆಗಳ ಸಹಯೋಗದೊಂದಿಗೆ ರೈತರ ಸಮಸ್ಯಾತ್ಮಕಗಳ ತಾಕುಗಳಿಗೆ ಭೇಟಿ ನೀಡಿದ ಸಂಖ್ಯೆ 188
- ಕೃಷಿ ವಿಜ್ಞಾನ ಕೇಂದ್ರ/ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರಗಳಿಗೆ ಮಾಹಿತಿ ಪಡೆಯಲು ಭೇಟಿ ನೀಡಿದ ರೈತರುಗಳ ಸಂಖ್ಯೆ 9732
- ದೂರವಾಣಿ ಮುಖಾಂತರ ಮಾಹಿತಿ ಪಡೆದ ರೈತರುಗಳ ಸಂಖ್ಯೆ 28593
- ಮೊಬೈಲ್ ಎಸ್.ಎಮ್.ಎಸ್ ಮುಖಾಂತರ ಕೃಷಿ ತಂತ್ರಜ್ಞಾನವನ್ನು ತಲುಪಿಸಿದ ಸಂಖ್ಯೆ 36748
- ತರಬೇತಿ ಕಾರ್ಯಕ್ರಮಗಳಲ್ಲಿ ವಿಜ್ಞಾನಿಗಳು ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ ತರಬೇತಿಗಳ ಸಂಖ್ಯೆ 504
- ಮಣ್ಣಿನ ಮಾದರಿಗಳ ವಿಶ್ಲೇಷಿಸಿದ ಸಂಖ್ಯೆ 3075
- ನೀರಿನ ಮಾದರಿಗಳ ವಿಶ್ಲೇಷಿಸಿದ ಸಂಖ್ಯೆ 1131
- ವಾಟ್ಸ್ ಆಪ್ ಸಂದೇಶಗಳು 135000

4.3.3.6 ನೂತನ ಉಪಕ್ರಮಗಳು

- **ಕೃಷಿ ನೈಪುಣ್ಯತೆ ಅಭಿವೃದ್ಧಿ ತರಬೇತಿ ಕಾರ್ಯಕ್ರಮ**

ಭಾರತೀಯ ಕೃಷಿ ಅನುಸಂಧಾನ ಸಂಸ್ಥೆ, ನವದೆಹಲಿ ಹಾಗೂ ಭಾರತ ಸರ್ಕಾರದ ಸಹಭಾಗಿತ್ವದಲ್ಲಿ ಮತ್ತು ಭಾರತೀಯ ಕೃಷಿ ನೈಪುಣ್ಯತೆ ಅನುಸಂಧಾನ ಸಂಸ್ಥೆಯ (ASCI) ಸಹಯೋಗದೊಂದಿಗೆ ಕೃಷಿ ನೈಪುಣ್ಯತೆ ಅಭಿವೃದ್ಧಿ ತರಬೇತಿ ಕಾರ್ಯಕ್ರಮವನ್ನು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರು 2018–19 ನೇ ಸಾಲಿನಲ್ಲಿ ಕೃಷಿ ವಿಜ್ಞಾನ ಕೇಂದ್ರ ರಾಯಚೂರು, ಕೃಷಿ ವಿಜ್ಞಾನ ಕೇಂದ್ರ ಗಂಗಾವತಿ, ಕೃಷಿ ವಿಜ್ಞಾನ ಕೇಂದ್ರ, ಕವಡಿಮಟ್ಟಿ ಹಾಗೂ ಬೀಜ ವಿಜ್ಞಾನ ಹಾಗೂ ತಂತ್ರಜ್ಞಾನ ವಿಭಾಗದ ವತಿಯಿಂದ ಸುಮಾರು 25 ದಿನಗಳ 6 ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಈ 6 ಕೃಷಿ ನೈಪುಣ್ಯತೆ ಅಭಿವೃದ್ಧಿ ತರಬೇತಿ ಕಾರ್ಯಕ್ರಮದಲ್ಲಿ ಹೈನುಗಾರಿಕೆ, ಅಣಬೆ ಬೇಸಾಯ, ಗುಣಮಟ್ಟದ ಬೀಜೋತ್ಪಾದನೆ ಹಾಗೂ ಎರೆಹುಳು ಗೊಬ್ಬರ ತಯಾರಿಕೆ ವಿಷಯಗಳ ಕುರಿತಾದ ತರಬೇತಿಯಲ್ಲಿ ಪ್ರತಿ ತರಬೇತಿಗೆ 20 ರೈತರಂತೆ ಸುಮಾರು 120 ಯುವ ರೈತರಿಗೆ ತರಬೇತಿ ನೀಡಲಾಗಿದೆ.

- **ಜೇನು ಕೃಷಿ ಪ್ರಾತ್ಯಕ್ಷಿಕೆ ಘಟಕ**

ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರ, ಕೊಪ್ಪಳದಲ್ಲಿ ದಿ.22.08.2018 ರಂದು ಜಿಲ್ಲೆಯ ರೈತರಿಗೆ ಜೇನು ಸಾಕಾಣಿಕೆ ಹಾಗೂ ಅದರ ಪ್ರಾಮುಖ್ಯತೆ ಕುರಿತು ಮಾಹಿತಿ ನೀಡಲು ಜೇನು ಕೃಷಿ ಪ್ರಾತ್ಯಕ್ಷಿಕೆ ಘಟಕವನ್ನು ಸ್ಥಾಪಿಸಲಾಗಿರುತ್ತದೆ. ಕೊಪ್ಪಳ ಜಿಲ್ಲೆಯು ಜೇನು ಕೃಷಿಗೆ ಪ್ರಶಸ್ತವಾಗಿದ್ದು, ಈಗಾಗಲೇ ಜೇನು ಕೃಷಿಕರ ಸಂಘವು ಕೇಂದ್ರದ ವಿಜ್ಞಾನಿಯಾದ ಶ್ರೀ ಪಿ.ಆರ್. ಬದರಿಪ್ರಸಾದ ಇವರ ಮಾರ್ಗದರ್ಶನದಲ್ಲಿ ಸ್ಥಾಪಿತವಾಗಿದ್ದು, ಇನ್ನೂ ಹೆಚ್ಚಿನ ರೈತರಿಗೆ ಜೇನು ಕೃಷಿಯನ್ನು ಪರಿಚಯಿಸುವಲ್ಲಿ ಇವರ ಪ್ರಾತ್ಯಕ್ಷಿಕೆ ಘಟಕವು ಸಹಕಾರಿಯಾಗಲಿದೆ. ಈ ನಿಟ್ಟಿನಲ್ಲಿ ರೈತರಿಗೆ ಸೂಕ್ತ ತರಬೇತಿಯನ್ನು ನೀಡುವ ಉದ್ದೇಶದಿಂದ ಹಾಗೂ ರೈತರ ಬೇಡಿಕೆ ಆಧಾರದ ಮೇಲೆ ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರ ಹಾಗೂ ಜಂಟಿ ಕೃಷಿ ನಿರ್ದೇಶಕರು, ಕೊಪ್ಪಳ ಇವರ ಸಂಯುಕ್ತಾಶ್ರಯದಲ್ಲಿ ಪ್ರಗತಿಪರ ರೈತರ ತಾಂತ್ರಿಕ ಆವಿಷ್ಕಾರಗಳನ್ನು ತರಬೇತಿಗಳ ಮೂಲಕ ಇತರ ರೈತರಿಗೆ ತಲುಪಿಸುವ ಅಲ್ಪಾವಧಿ ತರಬೇತಿ ಕಾರ್ಯಕ್ರಮದಡಿ 'ಬೆಳೆಗಳ ಇಳುವರಿ ಹಾಗೂ ರೈತರ ಆದಾಯ ದ್ವಿಗುಣಕ್ಕಾಗಿ ಜೇನು ಸಾಕಾಣಿಕೆ' ಕುರಿತು ದಿನಾಂಕ: 18.09.2018 ರಿಂದ 20.09.2018 ರವರೆಗೆ 3 ದಿನಗಳ ತರಬೇತಿಯನ್ನು ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರ, ಕೊಪ್ಪಳದಲ್ಲಿ ಆಯೋಜಿಸಲಾಗಿರುತ್ತದೆ.

4.3.3.7 ಮಹತ್ವದ ಸಾಧನೆಗಳು

- ಕೃಷಿ ವಿಜ್ಞಾನ ಕೇಂದ್ರ ಯಾದಗಿರಿ ಮತ್ತು ರಾಯಚೂರು ಮುಖಾಂತರ 50 ಹಳ್ಳಿಗಳಲ್ಲಿ ಕೃಷಿ ತಂತ್ರಜ್ಞಾನಗಳನ್ನು ವರ್ಗಾವಣೆ ಮಾಡಿರುವುದರಿಂದ, ಕೃಷಿ ಕಲ್ಯಾಣ ಅಭಿಯಾನ, ನೀತಿ ಆಯೋಗ, ಕೇಂದ್ರ ಸರ್ಕಾರ ಕೈಗೊಂಡಿರುವ ಸಮೀಕ್ಷೆ ಪ್ರಕಾರ ದೇಶದ ಒಟ್ಟು 107 ಮಹತ್ವಾಕಾಂಕ್ಷಿ ಜಿಲ್ಲೆಗಳ ಪಟ್ಟಿಯಲ್ಲಿರುವ ಯಾದಗಿರಿ ಮತ್ತು ರಾಯಚೂರು ಜಿಲ್ಲೆಗಳು ಕ್ರಮವಾಗಿ ಪ್ರಥಮ ಮತ್ತು ತೃತೀಯ ಶ್ರೇಣಿಯನ್ನು ಪಡೆದುಕೊಂಡಿವೆ.
- ಕೃಷಿ ವಿಶ್ವವಿದ್ಯಾಲಯವು "ಕೂರಿಗೆ ಭತ್ತದ" ಬೇಸಾಯವನ್ನು ಕಳೆದ ನಾಲ್ಕು ವರ್ಷಗಳಿಂದ ಪರಿಚಯಿಸಿದರಿಂದ ಈ ತಂತ್ರಜ್ಞಾನವು 79500 ಹೇ. ಪ್ರದೇಶವನ್ನು ಆವರಿಸಿದೆ.
- ವಿಶ್ವವಿದ್ಯಾಲಯವು ಆವಿಷ್ಕರಿಸಿದ ತೊಗರಿ ನಾಟಿ, ಕುಡಿ ಚಿವಟುವ ಪದ್ಧತಿ ಮತ್ತು ಪಲ್ಸ್ ಮ್ಯಾಜಿಕ್ ತಂತ್ರಜ್ಞಾನಗಳನ್ನು 65000 ಹೇ. ಪ್ರದೇಶಗಳಲ್ಲಿ ರೈತರು ಅಳವಡಿಸಿದ ಪರಿಣಾಮವಾಗಿ ರೈತರಿಗೆ ಲಾಭ ಮಾಡಿಕೊಟ್ಟಿವೆ.
- ಕೃಷಿ ವಿಜ್ಞಾನ ಕೇಂದ್ರಗಳ ಮಣ್ಣು ಪರೀಕ್ಷೆ ಕೇಂದ್ರಗಳಲ್ಲಿ 3075 ಮಣ್ಣು ಹಾಗೂ 1131 ನೀರಿನ ಮಾದರಿಗಳನ್ನು ವೈಜ್ಞಾನಿಕ ರೀತಿಯಲ್ಲಿ ವಿಶ್ಲೇಷಿಸಿ ರೈತರಿಗೆ ಮಾಹಿತಿ ನೀಡಲಾಗಿದೆ.
- 27–28$^{ನೇ}$ ಜನವರಿ, 2019 ರಂದು ಎರಡು ದಿನಗಳ 'ರೈತ ಸಮ್ಮೇಳನ'ವನ್ನು ಆಯೋಜಿಸಲಾಗಿತ್ತು. ಸದರಿ ಮೇಳದಲ್ಲಿ ಬದಲಾಗುತ್ತಿರುವ ಹವಾಮಾನದಲ್ಲಿ ನೀರಿನ ಮಹತ್ವ, ಹವಾಮಾನಕ್ಕೆ ಸೂಕ್ತ ಕೃಷಿ ಪರ್ಯಾಯ ಪದ್ಧತಿಗಳು, ರೈತರ ಅವಿಷ್ಕಾರಗಳು ವಿಶೇಷ ಉಪನ್ಯಾಸ ಕಾರ್ಯಕ್ರಮಗಳನ್ನು ಏರ್ಪಡಿಸಿ ಸುಮಾರು 5000 ರೈತರಿಗೆ ಮಾಹಿತಿ ನೀಡುವುದರೊಂದಿಗೆ ಪ್ರಶಂಷೆಗೊಳಗಾಯಿತು. ನೀರು ಮಾನವ ರಾಜೇಂದ್ರ ಸಿಂಗ್ ವಿಶೇಷ ಅತಿಥಿಯಾಗಿ ಸಮಾರಂಭದಲ್ಲಿ ಭಾಗವಹಿಸಿದ್ದರು.
- ಹತ್ತಿಯಲ್ಲಿ ಗುಲಾಬಿ ಕಾಯಿಕೊರಕ ಹಾಗೂ ಗೋವಿನ ಜೋಳದಲ್ಲಿ ಸೈನಿಕ ಹುಳುವಿನ ನಿಯಂತ್ರಣಕ್ಕಾಗಿ ಕಲ್ಯಾಣ–ಕರ್ನಾಟಕ ಪ್ರದೇಶದಾದ್ಯಂತ ಕೃಷಿ ಇಲಾಖೆಯ ಸಹಯೋಗದೊಂದಿಗೆ ಸಮೀಕ್ಷೆ ಕೈಗೊಂಡು ಸುಮಾರು 1.5 ಲಕ್ಷ ರೈತರಿಗೆ ಸಮಗ್ರ ಕೀಟ ನಿಯಂತ್ರಣ ಕ್ರಮಗಳ ಬಗ್ಗೆ ಮಾಹಿತಿ ನೀಡಲಾಗಿದೆ.
- ಕೃಷಿ ವಿಶ್ವವಿದ್ಯಾಲಯವು ಕಲ್ಯಾಣ–ಕರ್ನಾಟಕ ಪ್ರದೇಶದ ಪ್ರತಿ ರೈತ ಸಂಪರ್ಕ ಕೇಂದ್ರಗಳಿಗೆ ಒಬ್ಬ ವಿಜ್ಞಾನಿಯಂತೆ ಸುಮಾರು 162 ರೈತ ಸಂಪರ್ಕ ಕೇಂದ್ರಗಳಿಗೆ ನಿಯೋಜನೆಗೊಳಿಸಿ ಗ್ರಾಮ ಮಟ್ಟದಲ್ಲಿ ಕೃಷಿ ಸಂಬಂಧಿತ ಸಲಹೆ / ಮಾಹಿತಿಯನ್ನು ನೀಡಲಾಗುತ್ತಿದೆ.

4.3.3.8 ಆಚರಿಸಲಾದ ಪ್ರಮುಖ ಕಾರ್ಯಕ್ರಮಗಳು

ಕೃಷಿ ವಿಜ್ಞಾನ ಕೇಂದ್ರಗಳಲ್ಲಿ ವಿವಿಧ ವಿಸ್ತರಣಾ ಚಟುವಟಿಕೆಗಳ ಕಾರ್ಯಗಳನ್ನು ನಿರ್ವಹಿಸುವುದರ ಜೊತೆಗೆ ರೈತರಲ್ಲಿ ಹಾಗೂ ಸಾರ್ವಜನಿಕರಲ್ಲಿ ಕೃಷಿ, ಪರಿಸರ ಹಾಗೂ ಇತರೆ ವಿಷಯಗಳ ಕುರಿತಾಗಿ ಅರಿವು ಹಾಗೂ ಜಾಗೃತಿ ಮೂಡಿಸುವುದರ ಸಲುವಾಗಿ ಈ ಕೆಳಗಿನ ಪ್ರಮುಖ ಕಾರ್ಯಕ್ರಮಗಳು ಹಾಗೂ ದಿನಾಚರಣೆಗಳನ್ನು ಆಚರಿಸಲಾಗಿದೆ.

ಕೋಷ್ಟಕ 35: ಆಚರಿಸಲಾದ ಪ್ರಮುಖ ಕಾರ್ಯಕ್ರಮಗಳು

ಕಾರ್ಯಕ್ರಮ / ದಿನಾಚರಣೆ	ದಿನಾಂಕ
ಜೇನು ದಿನಾಚರಣೆ	20.05.2018
ವಿಶ್ವ ಪರಿಸರ ದಿನ	05.06.2018
ವಿಶ್ವ ಯೋಗ ದಿನಾಚರಣೆ	21.06.2018
ತೋಟಗಾರಿಕಾ ದಿನಾಚರಣೆ	10.07.2018
ಜೈವಿಕ ಇಂಧನ ದಿನಾಚರಣೆ	10.08.2018
ರಾಷ್ಟ್ರೀಯ ಪೌಷ್ಟಿಕಾಂಶ ವಾರ ಆಚರಣೆ	01.09.2018
ಪಾರ್ಥೇನಿಯಂ ಜಾಗೃತಿ ಜಾತಾ	04.09.2018
ಸ್ವಚ್ಚತಾಹಿ ಸೇವಾ ದಿವಸ	14.09.2018
ಬೀಜ ದಿನಾಚರಣೆ	26.09.2018
ರೈತ ಮಹಿಳಾ ದಿನಾಚರಣೆ	15.10.2018
ವಿಶ್ವ ಆಹಾರ ದಿನಾಚರಣೆ	16.10.2018

ವಿಶ್ವ ಮಣ್ಣು ಆರೋಗ್ಯ ದಿನಾಚರಣೆ	05.12.2018
ತಂತ್ರಜ್ಞಾನ ವಾರ ಆಚರಣೆ	06.12.2018
ರೈತರ ದಿನಾಚರಣೆ	23.12.2018

4.3.3.9 ದೇಸಿ ಕಾರ್ಯಕ್ರಮ (DAESI)

ದೇಸಿ (DAESI), ಡಿಪ್ಲೋಮಾ ಕಾರ್ಯಕ್ರಮ ಕೃಷಿ ಪರಿಕರ ವಿತರಕರಿಗೆ ಒಂದು ವರ್ಷದ ಅವಧಿಯ ಡಿಪ್ಲೋಮಾ ಆಗಿದ್ದು, ಇದರಲ್ಲಿ ಪರಿಕರ ವಿತರಕರ ಜ್ಞಾನವನ್ನು ನವೀಕರಿಸುವ ಮತ್ತು ಕೃಷಿ ತಾಂತ್ರಿಕತೆಗಳನ್ನು ವರ್ಗಾಯಿಸುವ ಉದ್ದೇಶದಿಂದ, ಪರಿಕರ ವಿತರಕರನ್ನು'ಪೂರಕ ವಿಸ್ತರಣಾ ಕಾರ್ಯಕರ್ತರನ್ನಾಗಿ' ಬಳಸಿಕೊಳ್ಳುವ ಉದ್ದೇಶ ಹೊಂದಿದೆ. ಕೃಷಿ ಮತ್ತು ರೈತರ ಕಲ್ಯಾಣ ಸಚಿವಾಲಯ, ಭಾರತ ಸರ್ಕಾರ ಈ ಕಾರ್ಯಕ್ರಮದ ಒಟ್ಟಾರೆ ನಿರ್ವಹಣೆಯ ಜವಬ್ದಾರಿಯನ್ನು ಹೊಂದಿದ್ದು, ಹೈದರಾಬಾದ್‌ನಲ್ಲಿರುವ MANAGE ಸಂಸ್ಥೆಗೆ ಆಯಾ ರಾಜ್ಯಗಳ SAMETI ಕೇಂದ್ರಗಳ ಮುಖಾಂತರ ಅನುಷ್ಠಾನಗೈಯುವ ಅಧಿಕಾರ ನೀಡಿದೆ. ಕೃಷಿ ಪರಿಕರ ವಿತರಕರನ್ನು ಪೂರಕ ವಿಸ್ತರಣಾ ಕಾರ್ಯಕರ್ತರನ್ನಾಗಿ ಸಿದ್ದಪಡಿಸಿ ರೈತರಿಗೆ ಉತ್ತಮ ಸೇವೆ ನೀಡಲು ಮತ್ತು ಜೊತೆಗೆ ರಾಷ್ಟ್ರೀಯ ಕೃಷಿ ವಿಸ್ತರಣೆಯನ್ನು ಬಲಪಡಿಸುವುದು ಈ ಕಾರ್ಯಕ್ರಮದ ಗುರಿಯಾಗಿದೆ.

ಉದ್ದೇಶಗಳು

- ಕೃಷಿ ಕ್ಷೇತ್ರದ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಸ್ಥಳೀಯ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವುದು.
- ಪರಿಕರ ಮಾರಾಟಗಾರರ ಸಾಮರ್ಥ್ಯವನ್ನು ಮತ್ತು ನಿರ್ವಹಣೆಯನ್ನು ಉನ್ನತೀಕರಿಸುವುದು.
- ಕೃಷಿಗೆ ಸಂಬಂದಿಸಿದಂತೆ ಕಾನೂನುಗಳ ಬಗ್ಗೆ ಜ್ಞಾನವನ್ನು ಒದಗಿಸುವುದು.
- ಗ್ರಾಮೀಣ ಮಟ್ಟದಲ್ಲಿ ಕೃಷಿಕರಿಗೆ ಒಂದೇ ಸೂರಿನಡಿ ಮಾಹಿತಿ ದೊರೆಯುವಂತೆ ಮಾಡುವುದು.

ಈ ಕಾರ್ಯಕ್ರಮದಡಿ 48 ವಾರಗಳಲ್ಲಿ ಮಾಹಿತಿಯನ್ನು ಪ್ರತಿ ಭಾನುವಾರ ಮತ್ತು ರಜಾದಿನದಂದು ಒದಗಿಸಲಾಗುವುದು. ಒಟ್ಟು 40 ತರಗತಿಗಳು ಮತ್ತು 8 ಕ್ಷೇತ್ರ ಭೇಟಿಗಳು ಈ ಪಠ್ಯಕ್ರಮದಲ್ಲಿ ಒಳಗೊಂಡಿದೆ.

ಕೃಷಿ ಪರಿಕರಗಳ ವಿತರಕರ ತರಬೇತಿ ಕಾರ್ಯಕ್ರಮ (ದೇಸೀ)ದಡಿ ಒಟ್ಟು 11 ಕಾರ್ಯಕ್ರಮಗಳ ಮೂಲಕ 450 ಕೃಷಿ ಪರಿಕರಗಳ ವಿತರಕರಿಗೆ ಯಶಸ್ವಿಯಾಗಿ ತರಬೇತಿ ನೀಡಿದ್ದಲ್ಲದೇ ಪ್ರಸಕ್ತ ಸಾಲಿನಲ್ಲಿ 7 ಕೃಷಿ ವಿಜ್ಞಾನ ವಿಸ್ತರಣಾ ಕೇಂದ್ರಗಳ ಮುಖಾಂತರ ಒಟ್ಟು 270 ಕೃಷಿ ಪರಿಕರಗಳ ವಿತರಕರಿಗೆ ತರಬೇತಿಯನ್ನು ನೀಡಲಾಗುತ್ತಿದೆ.

4.3.3.10. ವಿಸ್ತರಣಾ ಪ್ರಾಯೋಜನೆ.

ವಿಸ್ತರಣಾ ನಿರ್ದೇಶನಾಲಯದ ಅಡಿಯಲ್ಲಿ 2018–19ನೇ ಸಾಲಿನಲ್ಲಿ ಸುಮಾರು 16 ವಿಸ್ತರಣಾ ಕಾರ್ಯಕ್ರಮಗಳು/ಯೋಜನೆಗಳು ಜಾರಿಗೊಳಿಸಲಾಗಿದೆ.

4.3.3.11 ಕೃಷಿಮೇಳ / ರೈತ ಸಮ್ಮೇಳನ

ಬರಗಾಲದಿಂದ ತತ್ತರಿಸಿದ ಪ್ರಸಕ್ತ ಸಮಯದಲ್ಲಿ ಕೃಷಿ ಮೇಳಕ್ಕೆ ಪರ್ಯಾಯವಾಗಿ ಕೃಷಿ ಸಮಸ್ಯೆಗಳಿಗೆ ಸೂಕ್ತ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಕೃಷಿ ಪರಿಣಿತರು, ಪರಿಸರ ತಜ್ಞರು ಹಾಗೂ ಅನುಭವಿಕರೊಂದಿಗೆ ಚರ್ಚೆ ಮತ್ತು ಸಂವಾದ ಕೈಗೊಳ್ಳುವುದು ಸೂಕ್ತವೆನಿಸಿದೆ. ಇದು ಸಮಸ್ತ ರೈತಬಾಂಧವರಿಗೆ ಚೇತೋಹಾರಿಯಾಗುವುದು. ಅವರ ಅನುಭವಗಳ ಅವಲೋಕನ ಹಾಗೂ ಇತರರಿಗೆ ಅಳವಡಿಸಿಕೊಳ್ಳಲು ಮತ್ತು ಆತ್ಮಸ್ಥೈರ್ಯ ಹೆಚ್ಚಿಸುವಲ್ಲಿ ಸೂಕ್ತ ವೇದಿಕೆ ಒದಗಿಸಬೇಕೆನ್ನುವುದು ವಿಶ್ವವಿದ್ಯಾಲಯದ ಉದ್ದೇಶ. ಆದಾಯ ಹೆಚ್ಚಿಸಿಕೊಳ್ಳಲು ವಿವಿಧ ಕೃಷಿ ಉಪ ಕಸುಬುಗಳನ್ನು ಅಳವಡಿಸಿಕೊಂಡು ಸಾಧನೆಗೈದ ರೈತರೊಂದಿಗೆ ಅನುಭವ ಹಾಗೂ ವಿಮರ್ಶೆಗೆ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯವು ಎರಡು ದಿನದ ಈ ರೈತರ ಸಮ್ಮೇಳನವನ್ನು "ಬದಲಾಗುತ್ತಿರುವ ಹವಾಮಾನದಲ್ಲಿ ಸುಭದ್ರ ಕೃಷಿ" ಎಂಬ ಧ್ಯೇಯದೊಂದಿಗೆ ಹಮ್ಮಿಕೊಂಡಿದೆ. ಹೈದ್ರಾಬಾದ್–ಕರ್ನಾಟಕದ ರೈತರ ಹೆಮ್ಮೆಯ ವಿಶ್ವವಿದ್ಯಾಲಯದ ಈ ವಿಶೇಷ ಪರ್ವದಲ್ಲಿ ಸಮಸ್ತ ರೈತಬಾಂಧವರ ಉಪಯೋಗಕ್ಕಾಗಿ ಈ ಸಮ್ಮೇಳನವನ್ನು ದಿನಾಂಕ: 27–28 ಜನವರಿ, 2019, ಪ್ರೇಕ್ಷಾಗೃಹ ಕೃವಿವಿ, ರಾಯಚೂರಿನಲ್ಲಿ ಆಯೋಜಿಸಲಾಯಿತು.

ಈ ಎರಡು ದಿನಗಳ ಕಾರ್ಯಕ್ರಮದ ಅಡಿಯಲ್ಲಿ ಪ್ರಾತ್ಯಕ್ಷಿಕೆಗಳು, ಚರ್ಚಾ ಕೂಟಗಳು, ವಿಜ್ಞಾನಿಗಳ ಜೊತೆ ವಿಚಾರ ವಿನಿಮಯ ಚರ್ಚೆ, ರೈತರಿಂದ ರೈತರಿಗೆ ತರಬೇತಿ ಕಾರ್ಯಕ್ರಮಗಳು ಅಚ್ಚುಕಟ್ಟಾಗಿ ಏರ್ಪಡಿಸಲಾಗಿದೆ. ಸದರಿ ಸಮ್ಮೇಳನದಲ್ಲಿ ಸುಮಾರು 5 ಸಾವಿರ ರೈತ ಬಾಂಧವರು, ರೈತ ಮಹಿಳೆಯರು, ಸ್ವಸಹಾಯ ಗುಂಪುಗಳು ಸರ್ಕಾರದ ವಿವಿಧ ಇಲಾಖೆಯ ಅಧಿಕಾರಗಳು ಹಾಗೂ ವಿಜ್ಞಾನಿಗಳು, ಸರಕಾರೇತರ ಸಂಸ್ಥೆಗಳು, ಸಹಾಕರ ಸಂಘ ಸಂಸ್ಥೆಗಳು, ಶಾಲಾ ವಿದ್ಯಾರ್ಥಿಗಳು ಭಾಗವಹಿಸಿ ರೈತ ಸಮ್ಮೇಳನದ ಲಾಭ ಪಡೆದುಕೊಂಡರು.

5 ಆರ್ಥಿಕ ಸಂಪನ್ಮೂಲ

5.1 ಆರ್ಥಿಕ ಮೂಲಗಳು

ರಾಜ್ಯ ಸರಕಾರವು ಚಾಲಿಯಲ್ಲಿರುವ ಕಾರ್ಯಕ್ರಮಗಳನ್ನು ಮುಂದುವರೆಸಲು, ವೇತನ ಅನುದಾನದ ಅಡಿಯಲ್ಲಿ ನಿರ್ವಹಣಾ ಆರ್ಥಿಕ ನೆರವನ್ನು ಒದಗಿಸಿದೆ. ಸಾಮಾನ್ಯ ಅನುದಾನದಡಿಯಲ್ಲಿ ಅಸ್ತಿತ್ವದಲ್ಲಿರುವ ಕಾರ್ಯಕ್ರಮಗಳನ್ನು ಬಲಪಡಿಸಲು ಹಾಗೂ ಆಡಳಿತವನ್ನೊಳಗೊಂಡಂತೆ ಭೋದನೆ, ಸಂಶೋಧನೆ, ವಿಸ್ತರಣಾ ಮತ್ತು ಶೈಕ್ಷಣಿಕ ಕಾರ್ಯಕ್ರಮಗಳ ನವೀನ ಚಟುವಟಿಕೆಗಳನ್ನು ಕೈಗೊಳ್ಳಲು ಸಾಮಾನ್ಯ ಅನುದಾನವನ್ನು ಒದಗಿಸಿದೆ.

ವಿಸ್ತರಣಾ ಶಿಕ್ಷಣ ತರಬೇತಿ ಕಾರ್ಯಕ್ರಮಗಳು ಮತ್ತು ತಾತ್ಪೂರ್ತಿಕ ಸಂಶೋಧನಾ ಪ್ರಯೋಜನೆಗಳನ್ನು ಕೈಗೊಳ್ಳಲು ರಾಜ್ಯ ಅಭಿವೃದ್ಧಿ ಇಲಾಖೆಗಳು ಆರ್ಥಿಕ ನೆರವನ್ನು ಒದಗಿಸಿದೆ.

ಭಾರತೀಯ ಕೃಷಿ ಅನುಸಂಧಾನ ಪರಿಷತ್ತಿನ ಚಾಲ್ತಿಯಲ್ಲಿರುವ ಪ್ರಾಯೋಜನೆಗಳನ್ನು ಕೈಗೊಳ್ಳಲು ಭಾರತೀಯ ಕೃಷಿ ಅನುಸಂಧಾನ ಪರಿಷತ್ತಿನ ಅಖಿಲ ಭಾರತ ಸಹಯೋಜಿತ ಸಂಶೋಧನಾ ಯೋಜನೆಗಳಿಗೆ ಭಾರತೀಯಾ ಕೃಷಿ ಅನುಸಂದಾನ ಪರಿಷತ್ತು ಅನುದಾನವನ್ನು ಒದಗಿಸಿದೆ. ಇದರೆ ಸಂಶೋಧನಾ ಯೋಜನೆಗಳಿಗೆ ಹಾಗೂ ತಾತ್ಪೂರ್ತಿಕ ಸಂಶೋಧನಾ ಪ್ರಯೋಜನೆಗಳಿಗೆ ರಾಜ್ಯ ಸರಕಾರವು ಅನುದಾನವನ್ನು ಒದಗಿಸಿದೆ.

ಸಂಶೋಧನೆ ಮತ್ತು ವಿಸ್ತರಣಾ ಕಾರ್ಯಕ್ರಮಗಳನ್ನು ಆಯೋಜಿಸಲು ವಿವಿಧ ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಸಂಸ್ಥೆಗಳು/ ಏಜನ್ಸಿಗಳು ಸಹ ಅನುದಾನ ನೀಡಿವೆ.

ಬೇಸಯ ಚಟುವಟಿಕೆ, ಬೀಜ ಉತ್ಪಾದನೆ, ಸಸಿಮಡಿ ಚಟುವಟಿಕೆಗಳಿಂದ, ವಿದ್ಯಾರ್ಥಿ ಶುಲ್ಕ ಸಂಗ್ರಹಣೆ ಹಾಗೂ ಮುಂತಾದ ಚಟುವಟಿಕೆಗಳಿಂದ ಆಂತರಿಕ ಸಂಪನ್ಮೂಲವನ್ನು ಕ್ರೂಡೀಕರಿಸಿ ಆದಾಯವನ್ನು ರೂಪಿಸಿಕೊಳ್ಳಲಾಗುತ್ತಿದೆ.

5.2 ಅನುದಾನಗಳ ಸ್ವೀಕೃತಿ

5.2.1 ರಾಜ್ಯ ಸರಕಾರದ ಅನುದಾನ

5.2.1.1 ವೇತನ ಅನುದಾನ

ರಾಜ್ಯ ಸರ್ಕಾರವು 2018–19 ಸಾಲಿನಲ್ಲಿ ವೇತನ ಅನುದಾನವಾಗಿ **ರೂ. 5266.70 ಲಕ್ಷಗಳನ್ನು** ಮಂಜೂರು ಮಾಡಿದೆ.

5.2.1.2 ಸಾಮಾನ್ಯ ಅನುದಾನ

ರಾಜ್ಯ ವಾರ್ಷಿಕ ಯೋಜನೆ

ರಾಜ್ಯ ಸರ್ಕಾರವು 2018–19ನೇ ಸಾಲಿನಲ್ಲಿ ಕೃಷಿ ಶಿಕ್ಷಣಕ್ಕಾಗಿ **ರೂ. 1724.00 ಲಕ್ಷಗಳನ್ನು** ಮತ್ತು ಕೃಷಿ ಸಂಶೋಧನೆಗೆ **ರೂ. 2263.00 ಲಕ್ಷಗಳನ್ನು** ಒಟ್ಟು **ರೂ. 3987.00 ಲಕ್ಷಗಳನ್ನು** ಚಾಲ್ತಿಯಲ್ಲಿರುವ ಚಟುವಟಿಕೆಗಳ ಅಡಿಯಲ್ಲಿ ನಿರಂತರವಾಗಿ ನಡೆಯುತ್ತಿರುವ ಭೋದನೆ, ಸಂಶೋಧನೆ, ವಿಸ್ತರಣಾ ಶಿಕ್ಷಣ ಹಾಗೂ ಸಾಮಾನ್ಯ ಆಡಳಿತಗಳಿಗೆ ಬಿಡುಗಡೆ ಮಾಡಿದೆ.

5.2.1.3 ರಾಜ್ಯ ಸರ್ಕಾರದ ಇಲಾಖೆಗಳ ಅನುದಾನದ ತಾತ್ಪೂರ್ತಿಕ ಯೋಜನೆಗಳು

ವಿಶ್ವವಿದ್ಯಾಲಯವು ಸರ್ಕಾರದ ಇಲಾಖೆಗಳಿಂದ ತಾತ್ಪೂರ್ತಿಕ ಸಂಶೋಧನಾ ಪ್ರಾಯೋಜನೆಗಳಿಗೆ **ರೂ.842.62 ಲಕ್ಷಗಳನ್ನು** ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯ ಪ್ರಾಯೋಜನೆಗಳಿಗೆ **ರೂ.500.00 ಲಕ್ಷಗಳನ್ನು** ಸ್ವೀಕರಿಸಿದೆ.

5.2.2 ಭಾರತೀಯ ಕೃಷಿ ಅನುಸಂಧಾನ ಪರಿಷತ್ತಿನ ಅನುದಾನಗಳು

ಭಾರತೀಯ ಕೃಷಿ ಅನುಸಂಧಾನ ಪರಿಷತ್ 2018–19 ನೇ ಸಾಲಿನಲ್ಲಿ ಈ ಮುಂದೆ ವಿವರಿಸಿದೆ, ವಿವಿಧ ಶೀರ್ಷಿಕೆಗಳಡಿ **ರೂ. 781.63 ಲಕ್ಷಗಳ** ಅನುದಾನವನ್ನು ಬಿಡುಗಡೆ ಮಾಡಿದೆ. (ಕೋಷ್ಟಕ 38 ರಲ್ಲಿ)

ಕೋಷ್ಟಕ 36: ಭಾರತೀಯ ಕೃಷಿ ಅನುಸಂಧಾನ ಪರಿಷತ್‌ನಿಂದ ಸ್ವೀಕರಿಸಿದ ಧನಸಹಾಯ

ಕ್ರ. ಸಂ.	ಶೀರ್ಷಿಕೆಗಳು	ಬಿಡುಗಡೆ ಮಾಡಿದ ಮೊತ್ತ (ಲಕ್ಷ ರೂ.ಗಳಲ್ಲಿ)
1	ತಾತ್ಪೂರ್ತಿಕ ಮತ್ತು ಅಖಿಲ ಭಾರತ ಸಂಯೋಜಿತ ಸಂಶೋಧನಾ ಪ್ರಾಯೋಜನೆಗಳು	781.63
	ಒಟ್ಟು	781.63

5.2.3 ಭಾರತ ಸರ್ಕಾರದ ವಿವಿಧ ಇಲಾಖೆಗಳ ಅನುದಾನದ ಯೋಜನೆಗಳು

ಭಾರತ ಸರ್ಕಾರದ ಅನುದಾನ

2018–19 ನೇ ಸಾಲಿನಲ್ಲಿ ಭಾರತ ಸರ್ಕಾರದ ವಿವಿಧ ಇಲಾಖೆಗಳಾದ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯ, ಜೈವಿಕ ತಂತ್ರಜ್ಞಾನ ಇಲಾಖೆ, ವೈಜ್ಞಾನಿಕ ಮತ್ತು ಕೈಗಾರಿಕ ಸಂಶೋಧನಾ ಪರಿಷತ್, ಕೃಷಿ ಮತ್ತು ಸಹಕಾರ ಮುಂತಾದ ಇಲಾಖೆಗಳಿಂದ ನಿರ್ದಿಷ್ಟಪಡಿಸಿ ಸಂಶೋಧನಾ ಕಾರ್ಯಕ್ರಮಗಳಿಗೆ ಕೃಷಿ ವಿಶ್ವವಿದ್ಯಾಲಯವು **ರೂ.701.31 ಲಕ್ಷಗಳನ್ನು** ಸ್ವೀಕರಿಸಿದೆ.

5.2.4 ಇತರ ಏಜನ್ಸಿಗಳ ಧನಸಹಾಯದ ಯೋಜನೆಗಳು

2018–19 ನೇ ಸಾಲಿನಲ್ಲಿ ಇತರ ಏಜನ್ಸಿಗಳಿಂದ **ರೂ.554.53 ಲಕ್ಷಗಳನ್ನು** ಧನಸಹಾಯವನ್ನು ಸ್ವೀಕರಿಸಲಾಗಿದೆ.

5.2.5 2018–19ರ ಸಾಲಿನ ಸ್ವೀಕೃತಿಗಳ ಸಾರಾಂಶ

2018–19 ನೇ ಸಾಲಿನಲ್ಲಿ ಸ್ವೀಕೃತಿಗಳ ಸಾರಾಂಶ (ತಾತ್ಕಾಲಿಕ)

ವಿಶ್ವವಿದ್ಯಾನಿಲಯವು 2018–19 ನೇ ಸಾಲಿನಲ್ಲಿ ಸ್ವೀಕರಿಸಿದ (ತಾತ್ಕಾಲಿಕ) ಒಟ್ಟು ಅನುದಾನದ ವಿವರವನ್ನು ಕೋಷ್ಟಕ 39 ರಲ್ಲಿ ನೀಡಲಾಗಿದೆ.

ಕೋಷ್ಟಕ 37: ವಿವಿಧ ಮೂಲಗಳಿಂದ ಸ್ವೀಕರಿಸಿದ ಅನುದಾನ

ಕ್ರ. ಸಂ.	ಮೂಲ	ಮಂಜೂರಾತಿ	ಬಿಡುಗಡೆ	ಬಳಕೆ
I	**ರಾಜ್ಯ ಸರ್ಕಾರ**			
	ಯೋಜನೇತರ ಅನುದಾನ	-	-	
	ಯೋಜನಾ ಅನುದಾನ	8826.73	8826.73	9153.11
	ಗ್ರಾ.ಕೃ.ಕಾ.ಅ. (ರೈ.ಸಂ.ಕೇ.)	-	-	
	ತಾತ್ಪೂರ್ತಿಕ ಯೋಜನೆಗಳು	842.62	842.62	571.58
	ಒಟ್ಟು – I	**9669.35**	**9669.35**	**9724.69**
II	**ಭಾರತೀಯ ಕೃಷಿ ಅನುಸಂಧಾನ ಪರಿಷತ್ತು**			
	ಕೆವಿಕೆ	807.81	807.81	927.54
	ಅಭಿವೃದ್ಧಿ ಅನುದಾನ	0	0	0

	ಸಂಯೋಜಿತ ಸಂಶೋಧನಾ ಪ್ರಾಯೋಜನೆಗಳು	781.63	781.63	656.05
	ಒಟ್ಟು –II	**1589.44**	**1589.44**	**1583.59**
III	**ಭಾರತ ಸರ್ಕಾರ / ಇತರೆ**			
	ಭಾರತ ಸರ್ಕಾರ	701.31	701.31	535.85
	ಇತರ ಏಜನ್ಸಿಗಳು	572.55	572.55	274.60
	ಆಂತರಿಕ ಸ್ವೀಕೃತಿ	2479.54	2479.54	
	ರಾ.ಕೃ.ವಿ.ಯೋ.	500.00	500.00	112.76
	ನಬಾರ್ಡ್	--	--	220.64
	ಎಸ್.ಸಿ.ಪಿ.ಎಸ್./ಟಿ.ಎಸ್.ಪಿ.	430.00	430.00	143.05
	ಒಟ್ಟು – III	**4683.40**	**4683.40**	**1286.90**
	ಒಟ್ಟಾರೆ (I+II+III)	**15942.19**	**15942.19**	**12595.18**

5.3 2018–19ನೇ ಸಾಲಿನ ಖರ್ಚು

5.3.1 ರಾಜ್ಯ ಸರಕಾರದ ಅನುದಾನ

5.3.1.1 ವೇತನ ಅನುದಾನ

ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯವರಿಗೆ ಬಡ್ತಿಯ ನೀಡುವ ಮೂಲಕ ಮತ್ತು ಹೆಚ್ಚುವರಿ ಭತ್ಯ ಪಾವತಿಸುವ ನಿಟ್ಟಿನಲ್ಲಿ ಯೋಜನೇತರ ವೇತನದಡಿ ವೆಚ್ಚದ ಅಂಶ ಪ್ರತಿವರ್ಷ ಹೆಚ್ಚುತ್ತಲಿದೆ.

ರಾಜ್ಯ ಸರ್ಕಾರದಿಂದ ಪಡೆದ ಅನುದಾನ (ಯೋಜನೇತರ) ವೆಚ್ಚ

ಕ್ರ. ಸಂ.	ವರ್ಗ	2018–19
1	ವೇತನ ವೆಚ್ಚ	6170.15
2	ವೇತನೇತರ ವೆಚ್ಚ	3342.56
	ಒಟ್ಟು	**9512.71**

5.3.1.2 ಸಾಮಾನ್ಯ ಅನುದಾನ

2018–19ನೇ ಸಾಲಿನಲ್ಲಿ ರಾಜ್ಯ ಸರ್ಕಾರದ ಸಾಮಾನ್ಯ ಅನುದಾನ ರೂ. 1601.00 ಲಕ್ಷಗಳನ್ನು ಕೃಷಿ ಶಿಕ್ಷಣಕ್ಕೆ ಹಾಗೂ ರೂ.7222.70 ಲಕ್ಷಗಳನ್ನು ಕೃಷಿ ಸಂಶೋಧನೆಗೆ ಸಂಪೂರ್ಣವಾಗಿ ಬಳಸಿಕೊಳ್ಳಲಾಗಿದೆ.

5.3.1.3 ರಾಜ್ಯ ಸರ್ಕಾರದ ಇಲಾಖೆಗಳಿಂದ ಅನುದಾನಿತ ತಾತ್ಪೂರ್ತಿಕ ಯೋಜನೆಗಳು

ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯನ್ನು ಒಳಗೊಂಡಂತೆ ವಿಶ್ವವಿದ್ಯಾನಿಲಯವು ರಾಜ್ಯ ಸರ್ಕಾರದ ವಿವಿಧ ಇಲಾಖೆಗಳ ಅನುದಾನದಲ್ಲಿ ಹಾಗೂ ಹಿಂದಿನ ವರ್ಷದ ಖರ್ಚಾಗದೆ ಬಾಕಿ ಉಳಿದ ಹಣ ಯಾವುದು ಇರುವುದಿಲ್ಲ. 2018–19 ನೇ ಸಾಲಿನಲ್ಲಿ ನಬಾರ್ಡ ಅನುದಾನದಡಿ ಯಾವುದೇ ಅನುದಾನವು ಸ್ವೀಕೃತಿಯಾಗಿರುವುದಿಲ್ಲ. 2018–19 ನೇ ಸಾಲಿನಲ್ಲಿ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಅನುದಾನದಡಿಯಲ್ಲಿ **ರೂ.225.69 ಲಕ್ಷಗಳನ್ನು** ಖರ್ಚು ಮಾಡಲಾಗಿದೆ.

5.3.2 ಭಾರತೀಯ ಕೃಷಿ ಅನುಸಂಧಾನ ಪರಿಷತ್ತಿನ ಅನುದಾನಗಳು

ಅ) ಅಭಿವೃದ್ಧಿ ಅನುದಾನಗಳು

2018–19 ನೇ ಸಾಲಿನಲ್ಲಿ ರಾಷ್ಟ್ರೀಯ ಕೃಷಿ ಅನುಸಂಧಾನ ಪರಿಷತ್ತು ಅನುಮೋದಿತ ವಿವಿಧ ಅಭಿವೃದ್ಧಿ ಕಾರ್ಯಗಳಿಗೆ **ರೂ.807.81 ಲಕ್ಷಗಳನ್ನು** ಖರ್ಚು ಮಾಡಲಾಗಿದೆ.

ಆ) ಸಂಶೋಧಾನ ಪ್ರಯೋಜನೆಗಳು– ಭಾರತೀಯ ಕೃಷಿ ಅನುಸಂಧಾನ ಪರಿಷತ್ತು

ಹೊಸ ಹಾಗೂ ಮುಂದುವರಿದ ಪ್ರಯೋಜನೆಗಳಿಗೆ 2018–19 ನೇ ಸಾಲಿನಲ್ಲಿ **ರೂ. 781.63 ಲಕ್ಷಗಳನ್ನು** ಖರ್ಚು ಮಾಡಲಾಗಿದೆ.

5.3.3 ಭಾರತ ಸರ್ಕಾರದ ವಿವಿಧ ಇಲಾಖೆಗಳ ಅನುದಾನದ ಯೋಜನೆಗಳು

ಭಾರತ ಸರ್ಕಾರದ ವಿವಿಧ ವಿವಿಧ ಇಲಾಖೆಗಳ ಅನುದಾನದ ವಿವಿಧ ಪ್ರಯೋಜನೆಗಳಿಗೆ **ರೂ.538.11 ಲಕ್ಷಗಳನ್ನು** ಖರ್ಚು ಮಾಡಲಾಗಿದೆ.

5.3.4 ಇತರ ಏಜನ್ಸಿಗಳ ಧನಸಹಾಯದ ಯೋಜನೆಗಳು

ಇತರ ಏಜನ್ಸಿಗಳ ಧನಸಾಹಯದಿಂದ 2018–19ನೇ ಸಾಲಿನಲ್ಲಿ ಒಟ್ಟು **ರೂ.374.92 ಲಕ್ಷಗಳನ್ನು** ಖರ್ಚು ಮಾಡಲಾಯಿತು. 2018–19 ಅವಧಿಯಲ್ಲಿ ವಿಶ್ವವಿದ್ಯಾಲಯಕ್ಕೆ ಸ್ವೀಕೃತಿಗೊಂಡದ್ದು, ಒಟ್ಟು **ರೂ. 554.53 ಲಕ್ಷಗಳು** ಅದರಲ್ಲಿ **ರೂ. 374.92 ಲಕ್ಷಗಳು** ಖರ್ಚಾಗಿದೆ.

5.4 ನಿವೃತ್ತಿ ಸೌಲಭ್ಯದ ಲೆಕ್ಕದ ವಿವರಗಳು

5.4.1 ಭವಿಷ್ಯ ನಿಧಿ

ಈ ನಿಧಿಯಲ್ಲಿ 01.04.2018 ರಂತೆ ಒಟ್ಟು 425 ಖಾತೆಗಳಿದ್ದು, ಅವುಗಳಲ್ಲಿ 35 ಜಿ.ಪಿ.ಎಫ್. ಖಾತೆಗಳ ರೂ. 1,19,26,583/– ಮೊತ್ತವನ್ನು ಅಂತಿಮ ಇತ್ಯರ್ಥಗೊಳಿಸಿ ನಿವೃತ್ತಿ ಹೊಂದಿದವರಿಗೆ/ರಾಜಿನಾಮೆ ನೀಡಿದವರಿಗೆ/ಮೃತಪಟ್ಟ ಸಿಬ್ಬಂದಿಗಳ ಕುಟುಂಬದವರಿಗೆ ಪಾವತಿಸಲಾಗಿದೆ. ಇದರಂತೆ ದಿನಾಂಕ: 31.03.2019 ರಂದು ಒಟ್ಟು 586 ಖಾತೆಗಳಿವೆ. (196 ಎಮ್.ಆರ್.ಇ ಸಿಬ್ಬಂದಿಗಳನ್ನು ಸಕ್ರಮಗೊಳಿಸಲಾಗಿದೆ)

5.4.2 ಕುಟುಂಬ ಕಲ್ಯಾಣ ನಿಧಿ

ಕುಟುಂಬ ಕಲ್ಯಾಣ ನಿಧಿಯು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನಲ್ಲಿ ಚಾಲ್ತಿಯಲ್ಲಿರುವುದಿಲ್ಲ.

5.4.3 ಗುಂಪು ಉಳಿತಾಯ ಲಿಂಕ್ಡ್ ವಿಮಾ ಯೋಜನೆ

ನೌಕರರ ಪ್ರಯೋಜನಕ್ಕಾಗಿ 1991 ಆಗಸ್ಟ್ 1 ರಿಂದ ಜಾರಿಗೆ ಬರುವಂತೆ ಗುಂಪು ಉಳಿತಾಯ ಲಿಂಕ್ಡ್ ವಿಮಾ ಯೋಜನೆಯನ್ನು ಪರಿಚಯಿಸಲಾಗಿದೆ. 01.04.2018 ಕ್ಕೆ 766 ಸಿಬ್ಬಂದಿಯಿದ್ದರು. ನಿವೃತ್ತಿ/ಮರಣ/ರಾಜೀನಾಮೆ ಸಂದರ್ಭದಲ್ಲಿ 5054805 ಮೊತ್ತದ 38 ಜನ ನೌಕರ ಹಕ್ಕೋತ್ತಾಯ ನಮೂನೆಗಳನ್ನು ಭಾರತದ ಭಾರತೀಯ ಜೀವ ವಿಮಾ ನಿಗಮಕ್ಕೆ ಸಲ್ಲಿಸಲಾಗಿದೆ. 31.03.2019 ಕ್ಕೆ ಈ ಯೋಜನೆಯಲ್ಲಿ 728 ಸಿಬ್ಬಂದಿ ಈ ಯೋಜನೆಯಲ್ಲಿದ್ದಾರೆ.

5.4.4. ನಿವೃತ್ತಿ ವೇತನ ನಿಧಿ

ವಿಶ್ವವಿದ್ಯಾಲಯವು 01.04.2018 ರಂದು 134 ನಿಯಮಿತ ಹಾಗೂ 26 ಕುಟುಂಬ ನಿವೃತ್ತಿ ಒಳಗೊಂಡಂತೆ ಒಟ್ಟು 160 ನಿವೃತ್ತಿ ವೇತನದಾರರನ್ನು ಹೊಂದಿದೆ. 01.04.2018 ರಿಂದ 31.03.2019 ರ ವರೆಗಿನ ಅವಧಿಯಲ್ಲಿ 26 ಜನ ಹೊಸ ನಿವೃತ್ತಿ ವೇತನದಾರರ ಹಾಗೂ 10 ಜನ ಕುಟುಂಬ ವೇತನದಾರರ ವೇತನವನ್ನು ಆರಂಭಿಸಲಾಗಿದೆ. 14 ಜನರ ನಿವೃತ್ತವೇತನ ಮತ್ತು 5 ಜನರ ಕುಟುಂಬ ವೇತನದಾರರ ವೇತನವನ್ನು ಅವರ ಜೀವನ ಪ್ರಮಾಣ ಪತ್ರವನ್ನು ಸಲ್ಲಿಸದೇ ಇರುವ ಕಾರಣ ವೇತನವನ್ನು ತಾತ್ಕಾಲಿಕವಾಗಿ

ನಿಲ್ಲಿಸಲಾಗಿದೆ. ಹೀಗಾಗಿ 31.03.2019ಕ್ಕೆ ನಿವೃತ್ತ ವೇತನದಾರರು 163 ನಿಯಮಿತ ನಿವೃತ್ತವೇತನದಾರರು ಹಾಗೂ 33 ಕುಟುಂಬ ವೇತನದಾರರು ಒಳಗೊಂಡಂತೆ 196 ಜನ ನಿವೃತ್ತವೇತನದಾರರಿದ್ದರು. 01.04.2018 ರಿಂದ 31.03.2019 ರ ಅವಧಿಯಲ್ಲಿ 7,98,68,116 ಮೊತ್ತವನ್ನು ನಿವೃತ್ತಿ ವೇತನ, ಗ್ರ್ಯಾಚ್ಯುಟಿ ಮತ್ತು ಕಮ್ಯುಟೇಶನ್ ರೂಪದಲ್ಲಿ ನಿವೃತ್ತಿ ವೇತನದಾರರಿಗೆ / ಕುಟುಂಬ ನಿವೃತ್ತಿದಾರರಿಗೆ ಪಾವತಿಸಲಾಗಿದೆ.

5.5 ಸಾಲ ಮತ್ತು ಮುಂಗಡಗಳ ಲೆಕ್ಕ ವಿವರಗಳು

5.5.1 ಗೃಹ ನಿರ್ಮಾಣ ನಿವೇಶನ ಖರೀದಿ/ಗೃಹ ದುರಸ್ತಿ ಮುಂಗಡಗಳು

2018–19 ನೇ ಅವಧಿಯಲ್ಲಿ ಗೃಹ ನಿರ್ಮಾಣ/ನಿವೇಶನ ಖರೀದಿ/ಗೃಹ ದುರಸ್ತಿ/ಸಾಲ ಮರುಪಾವತಿಗಳಿಗೆ ಯಾವುದೇ ಅರ್ಜಿಗಳು ಸ್ವೀಕರಿಸಲಾಗಿರುವುದಿಲ್ಲ.

5.5.2 ವಾಹನ ಖರೀದ ಮುಂಗಡ

2018–19 ನೇ ಸಾಲಿನಲ್ಲಿ 01.04.2018 ರಿಂದ 31.03.2019 ಅವಧಿಯ ವರೆಗೆ ಮೋಟಾರ್ ಕಾರು, ಮೋಟಾರ್ ಸೈಕಲ್, ಮೊಪೆಡ್ ಮತ್ತು ಬೈಸಿಕಲ್ ಖರೀದಿಗೆ ಮುಂಗಡವಾಗಿ ರೂ. 2,73,236/– ಗಳನ್ನು ಜಿ.ಪಿ.ಎಫ್. ನಿಧಿಯಿಂದ ಪರಿನಿಯಮ 34 (3)(ಎ)(II) ಅನ್ವಯ ಮಂಜೂರಾತಿ ನೀಡಲಾಗಿದೆ.

5.6 ಶಾಸನಬದ್ಧ ಲೆಕ್ಕ ಪರಿಶೋಧಕರಿಂದ ಖಾತೆಗಳ ಲೆಕ್ಕ ಪರಿಶೋಧನೆ

2017–18ರ ವಾರ್ಷಿಕ ಖಾತೆಗಳನ್ನು ಪೂರ್ಣಗೊಳಿಸಿ. ಅದನ್ನು ಅಪರ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ, ಪ್ರಾಂತೀಯ ಕಛೇರಿ ಕಲಬುರಗಿ ಇವರಿಂದ ಲೆಕ್ಕ ಪರಿಶೋಧನೆಗೆ ಸಲ್ಲಿಸಲಾಗಿದ್ದು, ಅಂತಿಮ ವರದಿ ಇನ್ನೂ ಸಿದ್ದಪಡಿಸಿರುವುದಿಲ್ಲ. 2016–17 ನೇ ಸಾಲಿನ ಲೆಕ್ಕ ಪರಿಶೋಧನೆಯು ಪೂರ್ಣಗೊಂಡಿದ್ದು, ಲೆಕ್ಕ ಪರಿಶೋಧನಾ ವರದಿಯ ಅನುಪಾಲನಾ ವರದಿಯನ್ನು ಹಣಕಾಸು ಸಮಿತಿ ಹಾಗೂ ಮಾನ್ಯ ಆಡಳಿತ ಮಂಡಳಿಯ ಒಪ್ಪಿಗೆ ಪಡೆದು ಈಗಾಗಲೇ ಕರ್ನಾಟಕ ಸರ್ಕಾರಕ್ಕೆ ಸಲ್ಲಿಸಲಾಗಿದೆ.

6. ಮಾನವ ಸಂಪನ್ಮೂಲ ಮತ್ತು ಅಭಿವೃದ್ಧಿ

6.1 ಶಿಕ್ಷಕ/ವಿಜ್ಞಾನಿಗಳಿಗೆ ದೊರೆತ ಪುರಸ್ಕಾರ/ಪ್ರಶಸ್ತಿ/ಮನ್ನಣೆಯ ವಿವರ

ಕ್ರ. ಸಂ.	ಶಿಕ್ಷಕ/ವಿಜ್ಞಾನಿ/ಸಂಸ್ಥೆ ಹೆಸರು	ಪುರಸ್ಕಾರ/ಪ್ರಶಸ್ತಿ/ಮನ್ನಣೆಯ ಹೆಸರು	ಪುರಸ್ಕಾರ ಪ್ರಶಸ್ತಿ ನೀಡಿದ ಸಂಸ್ಥೆಯ ಹೆಸರು
1.	ಡಾ. ಎಮ್. ನೇಮಿಚಂದ್ರಪ್ಪ ಪ್ರಾಧ್ಯಾಪಕರು, ಕೃತಾಮ, ರಾಯಚೂರು	ಎಸ್.ಸಿ.ಎಸ್.ಐ. ಲೀಡರ್‌ಶಿಪ್ ಪ್ರಶಸ್ತಿ	ಊಟಿ, ತಮಿಳು ನಾಡು
2.	ಡಾ. ಎಮ್. ವೀರನಗೌಡ ಡೀನ್ (ಕೃಷಿ ತಾಂತ್ರಿಕ), ಕೃತಾಮ, ರಾಯಚೂರು	ಕೃಷಿಯಲ್ಲಿ ಅತ್ಯುತ್ತಮ ವಿಜ್ಞಾನಿ ಪ್ರಶಸ್ತಿ	ನಾಗ್ ಲಾಮ್ ವಿಶ್ವವಿದ್ಯಾಲಯ, ಹೂಚಿಮಿನ್ ಸಿಟಿ, ವಿಯೆಟ್ನಾಮ್, 2018
		ಮಾರ್ಗದರ್ಶನ ಮಾಡಿದ ಪ್ರಬಂಧಕ್ಕೆ ಅತ್ಯುತ್ತಮ ರಾಷ್ಟ್ರೀಯ ಪ್ರಶಸ್ತಿ	ಕೊಟ್ಟಾಯಮ್ ತಾಂತ್ರಿಕ ಮಹಾವಿದ್ಯಾಲಯ, (ಕೇರಳ)
		ಅತ್ಯುತ್ತಮ ಪ್ರಬಂಧ ಪ್ರಶಸ್ತಿ	ಇಂಡಿಯನ್ ಸೂಸೈಟಿ ಫಾರ್ ಟೆಕ್ನಿಕಲ್ ಎಜುಕೇಶನ್, ನವದೆಹಲಿ
3.	ಡಾ. ಬಸವೇಗೌಡ ಪ್ರಾಧ್ಯಾಪಕರು ಮತ್ತು ವಿಶೇಷ ಅಧಿಕಾರಿಗಳು, ಬೀಜ ಘಟಕ	ಜೀವಮಾನ ಸಾಧನೆ ಪ್ರಶಸ್ತಿ	ದಿ ಸೂಸೈಟಿ ಆಫ್ ಟ್ರೊಫಿಕಲ್ ಅಗ್ರಿಕಲ್ಚರ್, ನವದೆಹಲಿ

	ಕೇಂದ್ರ, ಕೃವಿವಿ, ರಾಯಚೂರು		
4.	ಡಾ. ಪ್ರಮೋದ ಕಟ್ಟಿ, ಪ್ರಾಧ್ಯಾಪಕರು ಮತ್ತು ಸಂಪಾದಕರು, ಪ್ರಕಟಣಾ ಕೇಂದ್ರ, ಕೃವಿವಿ, ರಾಯಚೂರು	ಜೀವಮಾನ ಸಾಧನೆ ಪ್ರಶಸ್ತಿ	ಇಂಟರ್‌ನ್ಯಾಶನಲ್ ಅಸೋಸಿಯೇಶನ್ ಆಫ್ ರಿಸರ್ಚ್ ಅಂಡ್ ಡೆವಲಪ್‌ಮೆಂಟ್ ಆರ್ಗಾನೈಜೇಶನ್ (ಐಎಆರ್‌ಡಿಒ) ಪಣಜಿ, ಗೋವಾ
5.	ಡಾ. ಎ.ಜಿ. ಶ್ರೀನಿವಾಸ ಪ್ರಾಧ್ಯಾಪಕರು (ಕೀಟಶಾಸ್ತ್ರ) ಕೃಮವಿ, ರಾಯಚೂರು	ಶ್ರೀ ದೊಡ್ಡ ರಾಘವ ರೆಡ್ಡಿ ಸ್ಮಾರಕ ರಾಷ್ಟ್ರೀಯ ದ್ವೈವಾರ್ಷಿಕ ಪ್ರಶಸ್ತಿ	ಪ್ಲಾಂಟ್ ಪ್ರೊಟೆಕ್ಷನ್ ಅಸೋಸಿಯೇಶನ್ ಆಫ್ ಇಂಡಿಯಾ, ಹೈದ್ರಾಬಾದ್.
6.	ಇಂಜಿನಿಯರ್ ಶ್ರೀನಿವಾಸ ದೇಶಪಾಂಡೆ, ಸಹಾಯಕ ಪ್ರಾಧ್ಯಾಪಕರು, ಕೃತಾಮ, ರಾಯಚೂರು	ಅತ್ಯುತ್ತಮ ಪೋಸ್ಟರ್ ಪ್ರಸ್ತುತಿ ಪ್ರಶಸ್ತಿ	ಕೃಷಿ ವಿಶ್ವವಿದ್ಯಾಲಯ, ರಾಯಚೂರು
7.	ಡಾ. ಉದಯಕುಮಾರ್ ನಿಡ್ಡೋಣಿ, ಸಹ ಪ್ರಾಧ್ಯಾಪಕರು ಕೃತಾಮ, ರಾಯಚೂರು	ಅತ್ಯುತ್ತಮ ಪೋಸ್ಟರ್ ಪ್ರಸ್ತುತಿ ಪ್ರಶಸ್ತಿ	ಕೃಷಿ ವಿಶ್ವವಿದ್ಯಾಲಯ, ರಾಯಚೂರು
8.	ಡಾ. ಎನ್.ಎಮ್. ಶಕುಂತಲಾ ಪ್ರಾಧ್ಯಾಪಕರು ಕೃಮವಿ, ರಾಯಚೂರು	ಅತ್ಯುತ್ತಮ ಮೌಖಿಕ ಪ್ರಸ್ತುತಿ ಪ್ರಶಸ್ತಿ	ನಾಗ್ ಲಾಮ್ ವಿಶ್ವವಿದ್ಯಾಲಯ, ಹೂಚಿಮಿನ್ ಸಿಟಿ, ವಿಯೆಟ್ನಾಮ್,
		ಅತ್ಯುತ್ತಮ ಮೌಖಿಕ ಪ್ರಸ್ತುತಿ ಪ್ರಶಸ್ತಿ	ಬನಾರಸ್ ಹಿಂದೂ ವಿಶ್ವವಿದ್ಯಾಲಯ,
9.	ಇಂಜಿನೀಯರ್ ದಿನೇಶ ಬಿ.ಎಲ್. ಸಹಾಯಕ ಪ್ರಾಧ್ಯಾಪಕರು, ಕೃತಾಮ, ರಾಯಚೂರು	ಅತ್ಯುತ್ತಮ ಮೌಖಿಕ ಪ್ರಸ್ತುತಿ ಪ್ರಶಸ್ತಿ	ಕೃಷಿ ವಿಶ್ವವಿದ್ಯಾಲಯ, ರಾಯಚೂರು
		ಅತ್ಯುತ್ತಮ ಪೋಸ್ಟರ್ ಪ್ರಸ್ತುತಿ ಪ್ರಶಸ್ತಿ	8ನೇ ಇಂಟರ್‌ನ್ಯಾಶನಲ್ ಫೂಡ್ ಕನ್‌ವೆಂಶನ್, ಹೆಚ್‌ಎಎಸ್‌ಟಿಎಜಿ, ಸಿಎಫ್‌ಟಿಆರ್‌ಐ, ಮೈಸೂರು
10.	ಡಾ. ವಿಜಯ್‌ಕುಮಾರ್ ಕುರ್ನಾಲಿಕರ್, ಸಹಾಯಕ ಪ್ರಾಧ್ಯಾಪಕರು (ಬೀಜ ವಿಜ್ಞಾನ), ಕೃಮವಿ, ರಾಯಚೂರು	SERS ಪರಿಸರ ಸಂರಕ್ಷಣಾ ಸಂಶೋಧನಾ ಪ್ರಶಸ್ತಿ	ನಾಂಗ್ ಲಾಮ್ ವಿಶ್ವವಿದ್ಯಾಲಯ, ಹೂಚಿಮಿನ್ ಸಿಟಿ, ವಿಯೆಟ್ನಾಮ್,
		ಭಾರತೀಯ ಸೇನೆಯಲ್ಲಿ ಲೆಫ್ಟಿನೆಂಟ್ ಆಗಿ ನಿಯೋಜಿಸಿದ ಪ್ರಶಸ್ತಿ	ಎನ್‌ಸಿಸಿ, ಒಟಿಎ ಕಾಂಪ್‌ಟೇ, 26–11–2018 ರಿಂದ 23–02–2019 ಎನ್‌ಸಿಸಿ, ಆಫೀಸರ್ಸ್ ಟ್ರೇನಿಂಗ್ ಅಕಾಡೆಮಿ ನಾಗಪುರ, ಮಹಾರಾಷ್ಟ್ರ
11	ಡಾ. ಶರಣಗೌಡ ಹೆಚ್. ಸಹಾಯಕ ಪ್ರಾಧ್ಯಾಪಕರು, ಕೃತಾಮ, ರಾಯಚೂರು	ಅತ್ಯುತ್ತಮ ಮೌಖಿಕ ಪ್ರಸ್ತುತಿ ಪ್ರಶಸ್ತಿ	ಕೃಷಿ ವಿಶ್ವವಿದ್ಯಾಲಯ, ರಾಯಚೂರು
		ಅತ್ಯುತ್ತಮ ಪೋಸ್ಟರ್ ಪ್ರಸ್ತುತಿ ಪ್ರಶಸ್ತಿ	ಹೆಚ್‌ಎಎಸ್‌ಟಿಎಜಿ, ಸಿಎಫ್‌ಟಿಆರ್‌ಐ, ಮೈಸೂರು
12	ಡಾ. ವಾಣಿಶ್ರೀ ಎಸ್. ಸಹಾಯಕ ಪ್ರಾಧ್ಯಾಪಕರು, ಕೃತಾಮ, ರಾಯಚೂರು	NESA ಹಸಿರು ತಂತ್ರಜ್ಞಾನ ನವೀಕರಣ ಪ್ರಶಸ್ತಿ	ಎನ್‌ಇಎಸ್‌ಎ, ನವದೆಹಲಿ
13	ಡಾ. ಅನುಪಮ ಸಿ ಸಹಾಯಕ ಪ್ರಾಧ್ಯಾಪಕರು, ಕೆವಿಕೆ, ರಾಯಚೂರು	ರಾಜ್ಯಮಟ್ಟದ ಪಶುಮೇಳ ಮತ್ತು ಮತ್ಸ್ಯಮೇಳ ಅತ್ಯುತ್ತಮ ಪ್ರದರ್ಶನ ಮಳಿಗೆ ಪ್ರಶಸ್ತಿ	ಕರ್ನಾಟಕ ರಾಜ್ಯ ಸರಕಾರ

14	ಡಾ. ಸುನಿಲ್ ಶಿರವಾಳ ಸಹಾಯಕ ಪ್ರಾಧ್ಯಾಪಕರು, ಕೃತಾಮ, ರಾಯಚೂರು	ಯುವ ವಿಜ್ಞಾನಿ ಪ್ರಶಸ್ತಿ	ಇಂಟರ್‌ನ್ಯಾಶನಲ್ ಕಾನ್ಫೆರೆನ್ಸ್ ಆನ್ ಫೂಡ್ ಆಂಡ್ ಅಗ್ರಿಕಲ್ಚರ್, ಎಂಡ್ಲಿಂಗ್ ಕಾನ್ಫೆರೆನ್ಸ್, ಪುಣೆ, ಮಹಾರಾಷ್ಟ್ರ
15	ಡಾ. ಎನ್. ಶಿವಶಂಕರ್ ಮುಖ್ಯಸ್ಥರು, ಪಿಪಿಎಂಸಿ, ಕೃವಿವಿ, ರಾಯಚೂರು	ಕಿತ್ತಳೆ ಜ್ಞಾನ ಕಾರ್ಯಕ್ರಮ ಪ್ರಶಸ್ತಿ	ಸೆಂಟರ್ಸ್ ಫಾರ್ ಡೆವೆಲಪ್‌ಮೆಂಟ್ ಇನ್ನೋವೇಶನ್, ವ್ಯಾಗೆನಿಂಗೆನ್ ಯುನಿವರ್ಸಿಟಿ, ನೆದರ್‌ಲ್ಯಾಂಡ್ಸ್

6.2 ಅಂತರರಾಷ್ಟ್ರೀಯ ತರಬೇತಿ / ಸಭೆ / ಸಮ್ಮೇಳನ / ಕಾರ್ಯಾಗಾರಕ್ಕೆ ಭಾಗವಹಿಸಿದವರ ವಿವರ

ಕೃಷಿ ವಿಶ್ವವಿದ್ಯಾಲಯ, ರಾಯಚೂರು ಮಾನವ ಸಂಪನ್ಮೂಲದ ಅಭಿವೃದ್ಧಿಗಾಗಿ, ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಯನ್ನು ರಾಷ್ಟ್ರೀಯ. ಅಂತರರಾಷ್ಟ್ರೀಯ ಸಂಸ್ಥೆಗಳಲ್ಲಿ ಆಯೋಜಿಸಿದ ತರಬೇತಿ ಕಾರ್ಯಕ್ರಮಗಳಿಗೆ ಹಾಗೂ ಉನ್ನತ ವ್ಯಾಸಂಗಕ್ಕಾಗಿ ನಿಯೋಜಿಸುತ್ತಾ ಬಂದಿದೆ. ಈ ಸಾಲಿನಲ್ಲಿ ನಿಯೋಜಿಸಲಾದ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ, ಹಾಜರಾದ ರಾಷ್ಟ್ರೀಯ, ಅಂತರರಾಷ್ಟ್ರೀಯ ವಿಚಾರ ಸಂಕೀರಣ ಕಾರ್ಯಾಗಾರ ಹಾಗೂ ತರಬೇತಿಗಳ (21 ದಿನಗಳ, 10 ದಿನಗಳ) ವಿವರ.

ಕೋಷ್ಟಕ 38: ಅಂತರರಾಷ್ಟ್ರೀಯ ತರಬೇತಿ / ಸಭೆ / ಸಮ್ಮೇಳನ / ಕಾರ್ಯಾಗಾರಕ್ಕೆ ಭಾಗವಹಿಸಿದವರ ವಿವರ

ಕ್ರ.ಸಂ.	ಶಿಕ್ಷಕ ವಿಜ್ಞಾನಿಗಳ ಹೆಸರು	ತರಬೇತಿ / ಸಭೆ / ಸಮ್ಮೇಳನ / ಕಾರ್ಯಾಗಾರ / ತರಬೇತಿಯ ಹೆಸರು	ದಿನಾಂಕ	ಸಂಘಟಕರು
1	ಡಾ. ಎಮ್. ವೀರನಗೌಡ ಡೀನ್ (ಕೃತಾಂ),	International Conference on “Innovative approaches in Applied Science and Technologies”	13–17 ಜೂನ್, 2018	ನಾಂಗ್ ಲಾಮ್ ವಿಶ್ವವಿದ್ಯಾಲಯ, ಹೂಚಿಮಿನ್ ಸಿಟಿ, ವಿಯೆಟ್ನಾಮ್
2	ಡಾ. ರಾಕೇಶ್ ಮಠದ್ ಸಹಾಯಕ ಪ್ರಾಧ್ಯಾಪಕರು	CRYO-2018 International Conference on cryobiology and low temperature biology	10–13 ಜುಲೈ, 2018	ಮ್ಯಾಡ್ರಿಡ್ ಸ್ಪೇನ್ ಸೂಸೈಟಿ ಆಫ್ ಕ್ರೈಯೋಬೈಯೋಲೋಜಿ, ಯನೈಟೆಡ್ ಕಿಂಗ್‌ಡಮ್
3	ಡಾ. ಪ್ರಮೇಶ ಸಹಾಯಕ ಪ್ರಾಧ್ಯಾಪಕರು	International Conférence at Bangkok, Thailand	22–25 ನವೆಂಬರ್, 2018	ಐಪಿಎಸ್, ನವದೆಹಲಿ ಮತ್ತು ಎಪಿಪಿಎಆರ್‌ಐ, ಬ್ಯಾಂಕಾಕ್
4	ಡಾ. ಎನ್. ಶಿವಶಂಕರ್ ಪ್ರಾಧ್ಯಾಪಕರು ಪಿಪಿಎಮ್‌ಸಿ	Short course on Responsible aquaculture for food security and economic progress	25 ನವೆಂಬರ್, 2018 ರಿಂದ 15 ಡಿಸೆಂಬರ್, 2018	ಸಿಡಿಆರ್‌ಐ, ವ್ಯಾಗೆನಿಂಗೆನ್ ವಿಶ್ವವಿದ್ಯಾಲಯ, ನೆದರ್‌ಲ್ಯಾಂಡ್ಸ್.

6.3 ಕೋಷ್ಟಕ 39: ರಾಷ್ಟ್ರಮಟ್ಟದ ತರಬೇತಿ/ ವಿಚಾರಗೋಷ್ಠಿ/ ಸಮ್ಮೇಳನ / ಚರ್ಚೆ / ಕಾರ್ಯಾಗಾರ/ ತರಬೇತಿಗಳಲ್ಲಿ ಭಾಗವಹಿಸಿದವರ ವಿವರ.

ಕ್ರ.ಸಂ.	ಶಿಕ್ಷಕ ವಿಜ್ಞಾನಿಗಳ ಹೆಸರು	ರಾಷ್ಟ್ರೀಯ ತರಬೇತಿ/ ವಿಚಾರ ಸಂಕೀರಣ/ ಸಮ್ಮೇಳನ/ ಕಾರ್ಯಾಗಾರ/ ತರಬೇತಿಯ ಹೆಸರು	ದಿನಾಂಕ	ಸಂಘಟಕರು
1	ಡಾ. ಅನುಪಮಾ ಸಿ.	Nutrition-Sensitive	14–16	ಭೋಪಾಲ್, ಮಧ್ಯ ಪ್ರದೇಶ

		Agriculture and Nutrition Literacy”	ಎಪ್ರಿಲ್, 2018	
2	ಡಾ. ಬಸವೇಗೌಡ ವಿಶೇಷ ಅಧಿಕಾರಿ (ಬೀಜ)	“Creation of seed hub for enhancing quality seeds availability of major oilseeds crops”	11 ಜೂನ್, 2018	ಐಸಿಎಆರ್ – ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಐಲ್‌ಸೀಡ್ಸ್ ರೀಸರ್ಚ್, ರಾಜೇಂದ್ರ ನಗರ, ಹೈದ್ರಾಬಾದ್
3	ರಾಜೇಶ್ ಎನ್.ಎಲ್. ಸಹಾಯಕ ಪ್ರಾಧ್ಯಾಪಕರು	Utilization of internet services in Sujala-III project	20 ಜೂನ್, 2018	ಎನ್‌ಐಸಿ ಮತ್ತು ಐಐಟಿ, ದೆಹಲಿ
4	ಡಾ. ಬಸವೇಗೌಡ ವಿಶೇಷ ಅಧಿಕಾರಿ (ಬೀಜ)	International Conference on Agril. Horticulture and Plant Sciences	28–29 ಜೂನ್, 2018	ಶಿಮ್ಲಾ ಹಿಮಾಚಲ ಪ್ರದೇಶ
5	ಡಾ. ಅಮೃತಾ ಟಿ. ಜೋಶಿ ಪ್ರಾಧ್ಯಾಪಕರು (ಕೃಷಿ ಅರ್ಥಶಾಸ್ತ್ರ)	National Workshop on ‘Ensuring Remunerative Prices& Stable Market to Farmers Produce	26 ಜುಲೈ, 2018	ಕೆಎಪಿಸಿ, ಕರ್ನಾಟಕ ಸರಕಾರ ಸಿಒಸಿಎಮ್‌ಐ ಯುನಿಟ್ ಮತ್ತು ಅಲುಮಿನಿ ಅಸೋಸಿಯೇಶನ್, ಕೃವಿವಿ, ಬೆಂಗಳೂರು
6	ಡಾ. ಎ.ಆರ್. ಕುರುಬರ ಪ್ರಾಧ್ಯಾಪಕರು	National conference on doubling farmers income for sustainable and harmonious agriculture	11–12 ಆಗಸ್ಟ್, 2018	ಐಸಿಎಆರ್–ಐಐಏನ್‌ಆರ್‌ಜಿ. ರಾಂಚಿ
7	ಡಾ. ಅಮೃತಾ ಟಿ. ಜೋಶಿ ಪ್ರಾಧ್ಯಾಪಕರು (ಕೃಷಿ ಅರ್ಥಶಾಸ್ತ್ರ)	Meeting on providing Dashboard-(KRIPA) access to line Depts and Universities	14 ಸೆಪ್ಟೆಂಬರ್, 2018	ಕೆಎಪಿಸಿ, ಕರ್ನಾಟಕ ಸರಕಾರ ಬೆಂಗಳೂರು
8	ಡಾ. ಮಹಾದೇವ ಸ್ವಾಮಿ ಪ್ರಾಧ್ಯಾಪಕರು	Biological Control Approaches and Applications	27–29 ಸೆಪ್ಟೆಂಬರ್, 2018	ಎನ್‌ಬಿಎಐಆರ್, ಬೆಂಗಳೂರು
9	ಡಾ. ಗುರುರಾಜ ಸುಂಕದ್ ಪ್ರಾಧ್ಯಾಪಕರು	Biological Control Approaches and Applications	27–29 ಸೆಪ್ಟೆಂಬರ್, 2018	ಎನ್‌ಬಿಎಐಐಆರ್, ಬೆಂಗಳೂರು
10	ಡಾ. ದೇವಾನಂದ ಮಸ್ಕಿ ಸಹಾಯಕ ಪ್ರಾಧ್ಯಾಪಕರು	'Global Water Security Conference for Agriculture and Natural Resources'.	3–6 ಅಕ್ಟೋಬರ್, 2018	ಎಎಸ್‌ಎಬಿಇ ಮತ್ತು ಇಂಡಿಯನ್ ಸೂಸೈಟಿ ಆಫ್ ಅಗ್ರಿಕಲ್ಚುರಲ್ ಇಂಜಿನೀಯರ್ಸ್ (ಐಎಸ್‌ಎಇ)
11	ಡಾ. ಬಿ.ಎಸ್. ಪೋಲಿಸ್‌ಗೌಡರ್ ಪ್ರಾಧ್ಯಾಪಕರು (IDE)	Global Water Security Conference for Agriculture and Natural Resources	3–6 ಅಕ್ಟೋಬರ್, 2018	ಹೈದ್ರಾಬಾದ್, ತೆಲಂಗಾಣ ರಾಜ್ಯ
12	ಡಾ. ಪ್ರಸಾದ ಎಸ್.	Global Water Security	3–6	ಹೈದ್ರಾಬಾದ್,

	ಕುಲಕರ್ಣಿ ಸಹಾಯಕ ಪ್ರಾಧ್ಯಾಪಕರು (IDE)	Conference for Agriculture and Natural Resources	ಅಕ್ಟೋಬರ್, 2018	ತೆಲಂಗಾಣ ರಾಜ್ಯ
13	ಡಾ. ನೇಮಿಚಂದ್ರಪ್ಪ ಪ್ರಾಧ್ಯಾಪಕರು	Global Water Security Conference for Agriculture and Natural Resources	3–6 ಅಕ್ಟೋಬರ್, 2018	ಹೈದ್ರಾಬಾದ್, ತೆಲಂಗಾಣ ರಾಜ್ಯ
14	ಡಾ. ಬಿ. ಮಹೇಶ್ವರ ಬಾಬು ಪ್ರಾಧ್ಯಾಪಕರು	Global Water Security Conference for Agriculture and Natural Resources	3–6 ಅಕ್ಟೋಬರ್, 2018	ಹೈದ್ರಾಬಾದ್, ತೆಲಂಗಾಣ ರಾಜ್ಯ
15	ನಾಗರಾಜ ಎಮ್. ನಾಯಕ್ ಸಹಾಯಕ ಪ್ರಾಧ್ಯಾಪಕರು	Microbial food safety Management	9–10 ಅಕ್ಟೋಬರ್, 2018	ಎಫ್ಎಸ್ಎಸ್ಎಐ, ನವದೆಹಲಿ
16	ಡಾ. ಸುಮಾ ಟಿ.ಸಿ. ಸಹಾಯಕ ಪ್ರಾಧ್ಯಾಪಕರು	Global Reserach Initiatives for sustainable agriculture and allied sciences (GRISAAS)	28–30 ಅಕ್ಟೋಬರ್, 2018	ರಾಜಸ್ಥಾನ ಕೃಷಿ ವಿಶ್ವವಿದ್ಯಾಲಯ, ಜೈಪುರ
17	ಬಸವರಾಜ ಡಿ. ಸಹಾಯಕ ಪ್ರಾಧ್ಯಾಪಕರು	Biodiversity conservation-Recent developments and future	16–17 ನವೆಂಬರ್, 2018	ಕುವೆಂಪು ವಿಶ್ವವಿದ್ಯಾಲಯ ಶಂಕರ್ಘಟ್ಟ, ಶಿವಮೊಗ್ಗ
18	ನಾಗರಾಜ ಎಮ್. ನಾಯಕ್ ಸಹಾಯಕ ಪ್ರಾಧ್ಯಾಪಕರು	Biotechnological research and innovation for sustainable development (Bio-SD-2018)	22–25 ನವೆಂಬರ್, 2018	ಐಐಸಿಟಿ, ಹೈದ್ರಾಬಾದ್
19	ಡಾ. ಜಿ.ಎಮ್. ಹಿರೇಮಠ್ ಸಹಾಯಕ ಪ್ರಾಧ್ಯಾಪಕರು (ಕೃಷಿ ಅರ್ಥಶಾಸ್ತ್ರ)	National Facilitators Development Programme	26 ನವೆಂಬರ್ 2018 ರಿಂದ 5 ಡಿಸೆಂಬರ್, 2018	ಸಿಸಿಎಸ್ ನ್ಯಾಶನಲ್ ಇನ್ಸ್ಟಿಟ್ಯೂಟ್ ಆಫ್ ಅಗ್ರಿಕಲ್ಚುರಲ್ ಮಾರ್ಕೇಟಿಂಗ್, ಜೈಪುರ
20	ರಾಜೇಶ್ ಎನ್.ಎಲ್. ಸಹಾಯಕ ಪ್ರಾಧ್ಯಾಪಕರು	"Statistical methods for insect pests and diseases forecasting"	27 ನವೆಂಬರ್, 2018	ಕೃಷಿ ವಿಶ್ವವಿದ್ಯಾಲಯ, ರಾಯಚೂರು
21	ಡಾ. ಎಸ್.ಬಿ. ಗೌಡರ್ವಿಜ್ಞಾನಿ (ಸಸ್ಯರೋಗಶಾಸ್ತ್ರ)	Pest and Disease Prediction Model	27 ನವೆಂಬರ್, 2018	ಡಿಎಸ್ಟಿ, ಐಸಿಆರ್ಐಎಸ್ಎಟಿ, ಕೃವಿವಿ, ರಾಯಚೂರು
22	ದೊಡ್ಡಬಸವ ಸಹಾಯಕ ಪ್ರಾಧ್ಯಾಪಕರು	Conservation and Utilization of Plant Genetic Resources in Medicinal and Aromatic Crops	3–23 ಡಿಸೆಂಬರ್, 2018	ಕೃಷಿ ತೋಟಗಾರಿಕಾ ಮಹಾವಿದ್ಯಾಲಯ, ಶಿರಸಿ ಕೃಷಿ ತೋಟಗಾರಿಕಾ ವಿಶ್ವವಿದ್ಯಾಲಯ, ಬಾಗಲಕೋಟ,
23	ಡಾ. ಭವಾನಿ ವಿಷಯ ತಜ್ಞರು	“Ergonomic interventions for	11–20 ಡಿಸೆಂಬರ್,	ಒಯುಎಟಿ, ಭುವನೇಶ್ವರ್

		designing women friendly agricultural technologies for reduction of occupational health hazards”	2018	
24	ಡಾ. ಗುರುರಾಜ ಸುಂಕದ್ ಪ್ರಾಧ್ಯಾಪಕರು	Cutting Edge Approaches for Sustainable Plant Disease Management and Ensuring Farmer Profit	21–23 ಡಿಸೆಂಬರ್, 2018	ನ್ಯಾಶನಲ್ ರೀಸರ್ಚ್ ಸೆಂಟರ್ ಫಾರ್ ಬನಾನ ಮತ್ತು ಇಂಡಿಯನ್ ಫೈಟೋಪಾಥೋಲೋಜಿಕಲ್ ಸೂಸೈಟಿ, ತಿರುಚಿನಪಳ್ಳಿ, ತಮಿಳು ನಾಡು
25	ಡಾ. ಅಮರೇಶ್ ವಾಯ್.ಎಸ್. ಸಹಾಯಕ ಪ್ರಾಧ್ಯಾಪಕರು	Cutting Edge Approaches for Sustainable Plant Disease Management and Ensuring Farmer Profit	21–23 ಡಿಸೆಂಬರ್, 2018	ನ್ಯಾಶನಲ್ ರೀಸರ್ಚ್ ಸೆಂಟರ್ ಫಾರ್ ಬನಾನ ಮತ್ತು ಇಂಡಿಯನ್ ಫೈಟೋಪಾಥೋಲೋಜಿಕಲ್ ಸೂಸೈಟಿ, ತಿರುಚಿನಪಳ್ಳಿ, ತಮಿಳು ನಾಡು
26	ಡಾ. ಎಮ್.ಬಿ. ಪಾಟೀಲ್ ಮುಖ್ಯಸರು ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರ	Cutting Edge Approaches for Sustainable Plant Disease Management and Ensuring Farmer Profit	21–23 ಡಿಸೆಂಬರ್, 2018	ನ್ಯಾಶನಲ್ ರೀಸರ್ಚ್ ಸೆಂಟರ್ ಫಾರ್ ಬನಾನ ಮತ್ತು ಇಂಡಿಯನ್ ಫೈಟೋಪಾಥೋಲೋಜಿಕಲ್ ಸೂಸೈಟಿ, ತಿರುಚಿನಪಳ್ಳಿ, ತಮಿಳು ನಾಡು
27	ಡಾ. ಮಲ್ಲಿಕಾರ್ಜುನ ಕೆಂಗನಾಳ್ ಹಿರಿಯ ವಿಜ್ಞಾನಿ	Cutting Edge Approaches for Sustainable Plant Disease Management and Ensuring Farmer Profit	21–23 ಡಿಸೆಂಬರ್, 2018	ನ್ಯಾಶನಲ್ ರೀಸರ್ಚ್ ಸೆಂಟರ್ ಫಾರ್ ಬನಾನ ಮತ್ತು ಇಂಡಿಯನ್ ಫೈಟೋಪಾಥೋಲೋಜಿಕಲ್ ಸೂಸೈಟಿ, ತಿರುಚಿನಪಳ್ಳಿ, ತಮಿಳು ನಾಡು
28	ಡಾ. ಎಸ್.ಬಿ. ಗೌಡರ್ ವಿಜ್ಞಾನಿ (ಸಸ್ಯರೋಗಶಾಸ್ತ್ರ)	Cutting Edge Approaches for Sustainable Plant Disease Management and Ensuring Farmer Profit	21–23 ಡಿಸೆಂಬರ್, 2018	ನ್ಯಾಶನಲ್ ರೀಸರ್ಚ್ ಸೆಂಟರ್ ಫಾರ್ ಬನಾನ ಮತ್ತು ಇಂಡಿಯನ್ ಫೈಟೋಪಾಥೋಲೋಜಿಕಲ್ ಸೂಸೈಟಿ, ತಿರುಚಿನಪಳ್ಳಿ, ತಮಿಳು ನಾಡು
29	ಶ್ರೀ ಚೇತನ್ ಟಿ. ಸಹಾಯಕ ಪ್ರಾಧ್ಯಾಪಕರು	Contemporary Methods of Conservation and Management of Plant Genetic Resources in Sub tropical fruit crops with special reference to grapes, pomegranate and citrus	8–28 ಜನವರಿ, 2019	ಕೃಷಿ ತೋಟಗಾರಿಕಾ ವಿಶ್ವವಿದ್ಯಾಲಯ, ಬಾಗಲಕೋಟ.

30	ಡಾ. ಕೆ.ವಿ. ಪ್ರಕಾಶ್ ಸಹಾಯಕ ಪ್ರಾಧ್ಯಾಪಕರು	"Engineering Technologies for Precision and Climate Smart Agriculture".	28–30 ಜನವರಿ, 2019	ಇಂಡಿಯನ್ ಸೂಸೈಟಿ ಆಫ್ ಅಗ್ರಿಕಲ್ಚುರಲ್ ಇಂಜಿನೀಯರ್ಸ್ (ಐಎಸ್ಎಇ)
31	ಡಾ. ದೇವಾನಂದ ಮಸ್ಕಿ ಸಹಾಯಕ ಪ್ರಾಧ್ಯಾಪಕರು	"Engineering Technologies for Precision and Climate Smart Agriculture".	28–30 ಜನವರಿ, 2019	ಇಂಡಿಯನ್ ಸೂಸೈಟಿ ಆಫ್ ಅಗ್ರಿಕಲ್ಚುರಲ್ ಇಂಜಿನೀಯರ್ಸ್ (ಐಎಸ್ಎಇ)
32	ಡಾ. ಎ.ಆರ್. ಕುರುಬರ ಪ್ರಾಧ್ಯಾಪಕರು	National conference on NHB	5–6 ಫೆಬ್ರುವರಿ, 2019	ಎನ್‌ಹೆಚ್‌ಬಿ, ನವದೆಹಲಿ
33	ಡಾ. ವಿಶ್ವನಾಥ ಜೆ ಪ್ರಿನ್ಸಿಪಲ್ ಸೈಂಟಿಸ್ಟ್ ಮತ್ತು ಮುಖ್ಯಸ್ಥರು	Resilient Agriculture in Saline Environments under Changing Climate: Challenges & Opportunities"	7 - 9 ಫೆಬ್ರುವರಿ, 2019	ಐಎಸ್ಎಸ್ಎಸ್‌ಡಬ್ಲ್ಯೂ ಕರ್ನಾಳ್ ಮತ್ತು ಐಸಿಎಆರ್– ಸಿಎಸ್ಎಸ್ಆರ್‌ಐ, ಕರ್ನಾಳ್
34	ಡಾ. ಎ.ಆರ್. ಕುರುಬರ ಪ್ರಾಧ್ಯಾಪಕರು	BSMA for restructuring of PG courses	21–23 ಫೆಬ್ರುವರಿ, 2019	ಬಿಸಿಕೆವಿ, ಮೋಹನ್‌ಪುರ ಪಶ್ಚಿಮ ಬಂಗಾಳ
35	ಡಾ. ಅಮೃತಾ ಟಿ. ಜೋಶಿ ಪ್ರಾಧ್ಯಾಪಕರು (ಕೃಷಿ ಅರ್ಥಶಾಸ್ತ್ರ)	Experience sharing workshop of COCMI Cells under KAPC	23–24 ಫೆಬ್ರುವರಿ, 2019	ಕೆಎಪಿಸಿ, ಕರ್ನಾಟಕ ಸರಕಾರ ಕೃಷಿ ಅರ್ಥಶಾಸ್ತ್ರ ವಿಭಾಗ ಕೃಷಿ ವಿಶ್ವವಿದ್ಯಾಲಯ, ರಾಯಚೂರು
36	ಡಾ. ಗುರುರಾಜ ಸುಂಕದ್ ಪ್ರಾಧ್ಯಾಪಕರು	Recent Challenges and Opportunities in Sustainable Plant Health Management	26–28 ಫೆಬ್ರುವರಿ, 2019	ಇನ್‌ಸ್ಟಿಟ್ಯೂಟ್ ಆಫ್ ಅಗ್ರಿಕಲ್ಚುರಲ್ ಸೈನ್ಸೆಸ್, ಬನಾರಸ್ ಹಿಂದೂ ಯುನಿವರ್ಸಿಟಿ, ವಾರಣಾಸಿ, ಉತ್ತರ ಪ್ರದೇಶ
37	ಡಾ. ಎನ್.ಎಮ್. ಶಕುಂತಲಾ ಪ್ರಾಧ್ಯಾಪಕರು	NATIONAL SEED CONGRESS on Quality seed : a key component for doubling the farmers income	19–21 ಫೆಬ್ರುವರಿ, 2018	ಬನಾರಸ್ ಹಿಂದೂ ಯುನಿವರ್ಸಿಟಿ, ವಾರಣಾಸಿ, ಉತ್ತರ ಪ್ರದೇಶ
38	ಡಾ. ಪ್ರಸಾದ ಎಸ್. ಕುಲಕರ್ಣಿ ಸಹಾಯಕ ಪ್ರಾಧ್ಯಾಪಕರು (IDE)	*Futuristic Farmer-led Irrigation: Pressurized Pipe Network Technologies and Automation for Enhanced Water-use Efficiency".*	6–7 ಮಾರ್ಚ್, 2019	ಎಫ್‌ಕೆಸಿಸಿಐ, ಬೆಂಗಳೂರು
39	ಡಾ. ಸುರೇಶ್ ಕೆ	"Empowerment and	11–13	ಜಿಕೆವಿಕೆ

	ಸಹಾಯಕ ಪ್ರಾಧ್ಯಾಪಕರು (ಕೃಷಿ ಅರ್ಥಶಾಸ್ತ್ರ)	Entrepreneurial Development in Agriculture"	ಮಾರ್ಚ್ 2019	ಕೃವಿವಿ, ಬೆಂಗಳೂರು

6.4 ನೇಮಕಾತಿಗಳು

ವಿಶ್ವವಿದ್ಯಾಲಯದ ಆಡಳಿತಾತ್ಮಕ ಕಛೇರಿಯ ಆಡಳಿತಾಧಿಕಾರಿಗಳು, ಕುಲಸಚಿವರ ನೇರ ನಿಯಂತ್ರಣದಲ್ಲಿ ಕಾರ್ಯನಿರ್ವಹಿಸಿ ವಿಶ್ವವಿದ್ಯಾಲಯದ ಬೋಧನಾ ಸಿಬ್ಬಂದಿ ಮತ್ತು ಸಹಾಯಕ ಸಿಬ್ಬಂದಿಯ ನೇಮಕಾತಿ ಮತ್ತು ನಿವೃತ್ತಿ ಕುರಿತ ಮಾನವ ಸಂಪನ್ಮೂಲ ಅಭಿವೃದ್ಧಿ, ಕಾರ್ಯ ಚಟುವಟಿಕೆಗಳನ್ನು ನೋಡಿಕೊಳ್ಳುತ್ತಾರೆ.

6.4.1 ಪ್ರಸಕ್ತ ವರ್ಷದಲ್ಲಿ ಒಂದು ಸಹಾಯಕ ಪ್ರಾಧ್ಯಾಪಕರು (ತೋಟಗಾರಿಕೆ) ಹುದ್ದೆಯನ್ನು ನೇಮಕಾತಿ ಮಾಡಲಾಗಿದೆ.

6.4.2 ವಿಶ್ವವಿದ್ಯಾಲಯವು ಪ್ರಸಕ್ತ ವರ್ಷದಲ್ಲಿ ಸೇವೆ ಮತ್ತು ಅನುಕಂಪ ಆಧಾರದಲ್ಲಿ 19 ಬೋಧಕೇತರ ಸಿಬ್ಬಂದಿಗಳನ್ನು ನೇಮಕಾತಿ ಮಾಡಲಾಗಿದೆ.

ಕೋಷ್ಟಕ 40: ಅನುಕಂಪ ಆಧಾರದಲ್ಲಿ ಬೋಧಕೇತರ ಸಿಬ್ಬಂದಿಗಳ ನೇಮಕಾತಿ ವಿವರ

ಕ್ರ. ಸಂ	ಹೆಸರು	ಹುದ್ದೆ	ಕಾರ್ಯನಿರ್ವಹಿಸುತ್ತಿರುವ ಸ್ಥಳ
1.	ಶ್ರೀಮತಿ. ಬೀಬಿ ಆಯಿಶಾ ಗಂಡ ದಿ. ಶ್ರೀ ಇಬ್ರಾಹಿಮ್ ಪೀರಸಾಬ್,	ಪ್ರಯೋಗ ಶಾಲಾ ಸಹಾಯಕ	ಕೃಷಿ ಮಹಾವಿದ್ಯಾಲಯ, ಭೀಮರಾಯನಗುಡಿ
2.	ಶ್ರೀ. ಮಲ್ಲಿಕಾರ್ಜುನ ತಂದೆ ದಿ. ಶ್ರೀ ಶಿವಪ್ಪ	ಕೃಷಿ ಕಾರ್ಮಿಕ	ಕೃಷಿ ಸಂಶೋಧನಾ ಕೇಂದ್ರ, ಕವಡಿಮಟ್ಟಿ
3.	ಶ್ರೀ. ಮನೋಜ ತಂದೆ ದಿ. ಶ್ರೀ ವೆಂಕಟೇಶ	ಸಹಾಯಕ ಕುಕ್–ಕಂ–ಕೇರ್‌ಟೇಕರ್	ಆಸ್ತಿ ವಿಭಾಗ, ಕೃ.ವಿ.ವಿ.,ರಾಯಚೂರು
4.	ಶ್ರೀ. ಮೌನೇಶ ತಂದೆ ದಿ. ಶ್ರೀ ಪ್ರಾಣೇಶ ಮಾನಯ್ಯ	ಪ್ರಯೋಗಶಾಲಾ ಸಹಾಯಕ	ಕೃಷಿ ಸಂಶೋಧನಾ ಕೇಂದ್ರ, ಗಂಗಾವತಿ
5.	ಶ್ರೀ ನಾಗಪ್ಪ ತಂದೆ ದಿ. ಶ್ರೀ ಹನುಮಂತ	ಕೃಷಿ ಕಾರ್ಮಿಕ	ಕೃಷಿ ಸಂಶೋಧನಾ ಕೇಂದ್ರ, ಕವಡಿಮಟ್ಟಿ
6.	ಶ್ರೀ. ಸಂದೀಪ್ ಕುಮಾರ ಯಾದವ.ಜಿ., ತಂದೆ ದಿ. ಶ್ರೀ ಜಿ. ಬಸವರಾಜ	ಸುದ್ದಿವಾಹಕ	ಕೃಷಿ ಸಂಶೋಧನಾ ಕೇಂದ್ರ, ಕಲಬುರಗಿ
7.	ಶ್ರೀ. ವೀರಭದ್ರಪ್ಪ ತಾಯಿ ದಿ. ಶ್ರೀಮತಿ ಸುಜ್ಞಾನಮ್ಮ	ಕೃಷಿ ಕಾರ್ಮಿಕ	ಕೃಷಿ ಮಹಾವಿದ್ಯಾಲಯ, ಭೀಮರಾಯನಗುಡಿ
8.	ಶ್ರೀ. ಮಲ್ಲೇಶ ತಾಯಿ ಶ್ರೀಮತಿ ಶರಣಮ್ಮ ವಕ್ರಾಣಿ	ಪ್ರಯೋಗಶಾಲಾ ಸಹಾಯಕ	ಕೃಷಿ ಮಹಾವಿದ್ಯಾಲಯ, ರಾಯಚೂರು
9.	ಶ್ರೀ. ನರಸಿಂಹಲು ತಾಯಿ ಶ್ರೀಮತಿ ತಾಯಮ್ಮ ಕಾಮಪ್ಪ	ಲಘುವಾಹನ ಚಾಲಕ	ಆಸ್ತಿ ವಿಭಾಗ, ಕೃ.ವಿ.ವಿ., ರಾಯಚೂರು

10.	ಶ್ರೀ ಹುಸೇನ್ ಬಾಷಾ ತಂದೆ ಶ್ರೀ ಮೌಲಾ ರಾಂಪೂರ	ಕೃಷಿ ಕಾರ್ಮಿಕ	ಮುಖ್ಯ ಕೃಷಿ ಸಂಶೋಧನಾ ಕೇಂದ್ರ, ರಾಯಚೂರು
11.	ಶ್ರೀ ಶ್ರೀನಿವಾಸ ತಾಯಿ ಶ್ರೀಮತಿ ಚಂದ್ರಮ್ಮ ನರಸಿಂಹಲು	ಕಾವಲುಗಾರ	ಮುಖ್ಯ ಕೃಷಿ ಸಂಶೋಧನಾ ಕೇಂದ್ರ, ರಾಯಚೂರು
12.	ಶ್ರೀ ನರಸಿಂಹಲು ತಾಯಿ ಶ್ರೀಮತಿ ಹುಲಿಗೆಮ್ಮ ತಿಮ್ಮಪ್ಪ	ಸುದ್ದಿವಾಹಕ	ಮುಖ್ಯ ಕೃಷಿ ಸಂಶೋಧನಾ ಕೇಂದ್ರ, ರಾಯಚೂರು
13.	ಶ್ರೀ ಈರಪ್ಪ ತಂದೆ ದಿ. ಶ್ರೀ ದೇವೇಂದ್ರಪ್ಪ ಬಡ್ಡೆಳ್ಳಿ,	ಕೃಷಿ ಕಾರ್ಮಿಕ	ಕೃಷಿ ಮಹಾವಿದ್ಯಾಲಯ, ಭೀಮರಾಯನಗುಡಿ
14.	ಶ್ರೀಮತಿ ಪಾರ್ವತಿ ಗಂಡ ಶ್ರೀ ವಿರುಪಾಕ್ಷಿ ಬಸವರಾಜ,	ಕೃಷಿ ಕಾರ್ಮಿಕ	ಮುಖ್ಯ ಕೃಷಿ ಸಂಶೋಧನಾ ಕೇಂದ್ರ, ರಾಯಚೂರು
15.	ಶ್ರೀ ಶಿವಕುಮಾರ ತಾಯಿ ದಿ. ಶ್ರೀಮತಿ ಸೀತಿ ಭಾಯಿ	ಸುದ್ದಿವಾಹಕ	ಕೃಷಿ ಮಹಾವಿದ್ಯಾಲಯ, ಭೀಮರಾಯನಗುಡಿ
16.	ಶ್ರೀ ನಾಗಪ್ಪ ತಾಯಿ ದಿ. ಶ್ರೀಮತಿ ಭೀಮವ್ವ	ಕೃಷಿ ಕಾರ್ಮಿಕ	ಕೃಷಿ ಸಂಶೋಧನಾ ಕೇಂದ್ರ, ಮಾಳನೂರು
17.	ಶ್ರೀ ಮೆಹಿಬೂಬ ಪಾಶಾ ತಂದೆ ದಿ. ಶ್ರೀ ಉಸ್ಮಾನ ಬೆನ್ನೂರು	ಕ್ಷೇತ್ರ ಸಹಾಯಕ	ಕೃಷಿ ಸಂಶೋಧನಾ ಕೇಂದ್ರ, ಭೀಮರಾಯನಗುಡಿ
18.	ಶ್ರೀಮತಿ ಪದ್ಮಮ್ಮ ಗಂಡ ದಿ. ಶ್ರೀ ಬಸವರಾಜ ಬೂದೆಪ್ಪ	ಕೃಷಿ ಕಾರ್ಮಿಕ	ಮುಖ್ಯ ಕೃಷಿ ಸಂಶೋಧನಾ ಕೇಂದ್ರ, ರಾಯಚೂರು
19.	ಶ್ರೀ ಸಣ್ಣ ದುರುಗಪ್ಪ ತಾಯಿ ದಿ. ಶ್ರೀಮತಿ ರಂಗಮ್ಮ ತಾಯಪ್ಪ	ಕೃಷಿ ಕಾರ್ಮಿಕ	ಬೀಜ ಘಟಕ, ಕೃ.ವಿ.ವಿ., ರಾಯಚೂರು

6.5 ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ವಿವರ

ವಿಶ್ವವಿದ್ಯಾಲಯವು 49 ಪ್ರಾಧ್ಯಾಪಕರು, 78 ಸಹ ಪ್ರಾಧ್ಯಾಪಕರು ಮತ್ತು 389 ಸಹಾಯಕ ಪ್ರಾಧ್ಯಾಪಕರ ಮಂಜೂರಾದ ಹುದ್ದೆಗಳಿದ್ದು ಒಟ್ಟು ಮಂಜೂರಾದ 516 ಹುದ್ದೆಗಳಲ್ಲಿ 266 ಭರ್ತಿ ಮಾಡಲಾಗಿದ್ದು, 250 ಹುದ್ದೆಗಳು ಖಾಲಿ ಇವೆ. ಈ ಹುದ್ದೆಗಳನ್ನು ಅನುಮೋದಿತ ನೇಮಕಾತಿ ಮೂಲಕ ಭರ್ತಿಮಾಡುವ ಪ್ರಯತ್ನಗಳನ್ನು ಮಾಡಲಾಗುತ್ತಿದೆ. ಈ ಮಧ್ಯೆ, ಅಗತ್ಯವೆನಿಸಿದಲ್ಲಿ ಸಿಬ್ಬಂದಿಗಳನ್ನು ಗುತ್ತಿಗೆ ಆಧಾರದ ಮೇರೆಗೆ ತಾತ್ಕಾರ್ಲಿಕವಾಗಿ ನೇಮಕ ಮಾಡಿಕೊಳ್ಳಲಾಗಿದೆ.

ವಿಶ್ವವಿದ್ಯಾಲಯವು 1015 ಮಂಜೂರಾದ ಸೇವಾ ಸಿಬ್ಬಂದಿಗಳನ್ನು ಹೊಂದಿದ್ದು, ಅದರಲ್ಲಿ 553 ಹುದ್ದೆಗಳು ಖಾಲಿ ಇವೆ. ವಿಶ್ವವಿದ್ಯಾಲಯವು ನೇಮಕಾತಿಗೆ ಅನುಮತಿಯನ್ನು ಪಡೆಯುವಲ್ಲಿ ಸರಕಾರದ ಗಮನಕ್ಕೆ ತರುವಲ್ಲಿ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತಲಿದೆ.

ಬೋಧನೆ: ಬೋಧನೆ/ವಿಸ್ತರಣೆ/ಸಂಶೋಧನಾ ಸಿಬ್ಬಂದಿ ವಿವರ

ಹುದ್ದೆ	ಮಂಜೂರಾದಹುದ್ದೆ	ಭರ್ತಿ ಮಾಡಿದಹುದ್ದೆ	ಖಾಲಿ ಇರುವಹುದ್ದೆ
ಪ್ರಾಧ್ಯಾಪಕರು	49	1	48
ಸಹ ಪ್ರಾಧ್ಯಾಪಕರು	78	4	74
ಸಹಾಯಕ ಪ್ರಾಧ್ಯಾಪಕರು	389	261	128
ಒಟ್ಟು	**516**	**266**	**250**

ಬೋಧಕೇತರ ಸಿಬ್ಬಂದಿ: ಬೋಧಕೇತರ ಸಿಬ್ಬಂದಿ ವಿವರ

ಹುದ್ದೆ	ಮಂಜೂರಾದ	ಭರ್ತಿ ಮಾಡಿದ	ಖಾಲಿ ಇರುವ
ವೃಂದ – ಎ	40	22	18
ವೃಂದ – ಬಿ	48	23	25
ವೃಂದ – ಸಿ	683	325	357
ವೃಂದ – ಡಿ	244	91	153
ಒಟ್ಟು	**1015**	**461**	**553**

6.6 ನಿವೃತ್ತಿ: ವಯೋ ನಿವೃತ್ತಿ ಹೊಂದಿದ ಸಿಬ್ಬಂದಿಯವರ ವಿವರ ದಿನಾಂಕ 01–04–2018 ರಿಂದ 31–03–2019ರವರೆಗೆ

ಕೋಷ್ಟಕ 41: ಬೋಧನೆ ಮತ್ತು ಬೋಧಕೇತರ ಸಿಬ್ಬಂದಿ ವರ್ಗದವರು ನಿವೃತ್ತಿ ವಿವರ.

ಕ್ರ.ಸಂ	ನೌಕರರ ಹೆಸರು, ಹುದ್ದೆ, ಮತ್ತು ಸ್ಥಳ	ನೌಕರರ ಸಂ.	ಜನ್ಮ ದಿನಾಂಕ	ನಿವೃತ್ತಿ ಹೊಂದಿದ ದಿನಾಂಕ
1	ಶ್ರೀಮತಿ. ಜಿ. ಈರಮ್ಮ ಕೃಷಿ ಕಾರ್ಮಿಕಳು, ಕೃ.ಸಂ.ಕೇಂದ್ರ, ಹಗರಿ	11057	20–4–1958	30–4–2018
2	ಶ್ರೀಮತಿ. ಖಾಜಾಬಿ ಬೂದೂರು ಕೃಷಿ ಕಾರ್ಮಿಕಳು, ಮು.ಕೃ.ಸಂ.ಕೇಂದ್ರ, ರಾಯಚೂರು	10922	06–4–1958	30–4–2018
3	ಶ್ರೀ. ಸೂರ್ಯಕಾಂತ ಕಾರ್ಯದರ್ಶಿಗಳು ಕುಲಪತಿಗಳ ಕಛೇರಿ, ಕೃ.ವಿ.ವಿ..ರಾಯಚೂರು	12422	01–6–1958	31–5–2018
4	ಶ್ರೀ. ಗಣೇಶ ಕೆ. ಕಂಬಿ ಹಿರಿಯ ಪ್ರಯೋಗ ಶಾಲಾ ಸಹಾಯಕ ಕೃ.ಸಂ.ಕೇಂದ್ರ, ಹಗರಿ	11070	01–6–1958	31–5–2018
5	ಶ್ರೀಮತಿ. ಶೋಭಾ ಎನ್ ಪಾಟೀಲ್ ಪ್ರಯೋಗ ಶಾಲಾ ಸಹಾಯಕ ಕೃ.ಮ.ವಿ., ಭೀಮರಾಯನಗುಡಿ	12294	01–6–1958	31–5–2018
6	ಶ್ರೀಮತಿ. ಮಹಾದೇವಿ ಶರಣಪ್ಪ ಕೃಷಿ ಕಾರ್ಮಿಕಳು, ಕೃ.ಸಂ.ಕೇಂದ್ರ, ಬೀದರ	12856	01–6–1958	31–5–208
7	ಶ್ರೀ. ಲಿಂಗಪ್ಪ ರಾಂಪೂರ ಕೃಷಿ ಕಾರ್ಮಿಕರು, ಕೃ.ಮ.ವಿ, ರಾಯಚೂರು	11450	01–6–1958	31–5–2018
8	ಶ್ರೀ. ಖಾಜಾ ಹುಸೇನ ಕೃಷಿ ಕಾರ್ಮಿಕರು, ಕೃ.ಸಂ.ಕೇಂದ್ರ, ಧಡೇಸೂಗೂರು	12950	01–6–1958	31–5–2018
9	ಶ್ರೀಮತಿ. ರಸೂಲಬೀ ಹೊನ್ನೂರಸಾಬ್ ಕೃಷಿ ಕಾರ್ಮಿಕಳು, ಮು.ಕೃ.ಸಂ.ಕೇಂದ್ರ, ರಾಯಚೂರು	12121	20–5–1958	31–5–2018
10	ಶ್ರೀಮತಿ. ಮಹಾದೇವಿ ಹನುಮಂತ ಕೃಷಿ ಕಾರ್ಮಿಕಳು, ಮು.ಕೃ.ಸಂ.ಕೇಂದ್ರ, ರಾಯಚೂರು	13073	01–6–1958	31–5–2018
11	ಶ್ರೀ. ಸಣ್ಣ ಮೂಕಪ್ಪ ಕೃಷಿ ಕಾರ್ಮಿಕರು, ಕೃ.ಸಂ.ಕೇಂದ್ರ, ಹಗರಿ	12187	01–6–1958	31–5–2018
12	ಶ್ರೀ. ಎಂ.ಎಸ್. ನಾಗೋಡ್ ಸಹ ಪ್ರಾಧ್ಯಾಪಕರು (ತೋಟಗಾರಿಕೆ) ಕೃ.ತಾಂ.ಮ.ವಿ., ರಾಯಚೂರು	10423	10–6–1956	30–6–2018
13	ಶ್ರೀ. ನಾರಾಯಣಪ್ಪ ತಂ. ತಮ್ಮಣ್ಣ	12647	11–6–1958	30–6–2018

	ಕೃಷಿ ಕಾರ್ಮಿಕರು, ಕೃ.ಸಂ.ಕೇಂದ್ರ, ಕವಡಿಮಟ್ಟಿ			
14	ಶ್ರೀಮತಿ. ನಾಗರತ್ನಮ್ಮ ಕೃಷಿ ಕಾರ್ಮಿಕರು, ಕೃ.ಸಂ.ಕೇಂದ್ರ, ಸಿರುಗುಪ್ಪ	11918	05–6–1958	30–6–2018
15	ಶ್ರೀ. ನರಸಣ್ಣ ಹಿರಿಯ ಕ್ಷೇತ್ರ ಸಹಾಯಕರು ಕೃ.ಸಂ.ಕೇಂದ್ರ, ಧಡೇಸೂಗೂರು	11952	15–6–1958	30–6–2018
16	ಶ್ರೀ. ಅಗ್ನಾಳ ಎಂ. ಬಿ. ಪ್ರಾಧ್ಯಾಪಕರು ಹಾಗೂ ವಿಸ್ತರಣಾ ಮುಂದಾಳು ಕೃ.ವಿ.ಶಿ.ಕೇಂದ್ರ, ಭೀಮರಾಯನಗುಡಿ	11542	15–7–1956	31–7–2018
17	ಶ್ರೀ. ವೆಂಕೋಬರಾವ್ ಹಿರಿಯ ಕ್ಷೇತ್ರ ಸಹಾಯಕರು, ಕೃ.ಮ.ವಿ, ರಾಯಚೂರು	12510	03–7–1958	31–7–2018
18	ಶ್ರೀ. ನೀಲು ತಂ. ವಾಲು ಕೃಷಿ ಕಾರ್ಮಿಕಳು, ಕೃ.ಮ.ವಿ., ಭೀಮರಾಯನಗುಡಿ	12667	17–7–1958	31–7–2018
19	ಶ್ರೀ. ನಾಗಾರಾಜ ಕೆ. ಸಹ ಪ್ರಾಧ್ಯಾಪಕರು (ಗಣಿತ) ಕೃ.ತಾಂ.ಮ.ವಿ., ರಾಯಚೂರು	10640	01–9–1956	31–8–2018
20	ಶ್ರೀಮತಿ. ಲಕ್ಷ್ಮೀ ಶಂಕ್ರಪ್ಪ ಹಿರಿಯ ಕೃಷಿ ಕಾರ್ಮಿಕರು ಮು.ಕೃ.ಸಂ.ಕೇಂದ್ರ, ರಾಯಚೂರು	11422	06–8–1958	31–8–2018
21	ಶ್ರೀಮತಿ. ಭೀಮವ್ವ ಮಲ್ಲಯ್ಯ ಕೃಷಿ ಕಾರ್ಮಿಕಳು, ಮು.ಕೃ.ಸಂ.ಕೇಂದ್ರ, ರಾಯಚೂರು	10890	08–8–1958	31–8–2018
22	ಶ್ರೀಮತಿ. ತಿಮ್ಮವ್ವ ಅಸ್ಕಿಹಾಳ ಕೃಷಿ ಕಾರ್ಮಿಕಳು, ಮು.ಕೃ.ಸಂ.ಕೇಂದ್ರ, ರಾಯಚೂರು	11056	18–8–1958	31–8–2018
23	ಶ್ರೀಮತಿ. ಶೇಕುಬಾಯಿ ಶಕುಂತಲಾ ಕೃಷಿ ಕಾರ್ಮಿಕಳು, ಕೃ.ಮ.ವಿ., ಭೀಮರಾಯನಗುಡಿ	20293	15–8–1958	31–8–2018
24	ಶ್ರೀ. ಹೆಚ್. ಗಂಗಾಧರ ಹಿರಿಯ ಕ್ಷೇತ್ರ ಸಹಾಯಕರು ಕೃ.ಸಂ.ಕೇಂದ್ರ, ಸಿರುಗುಪ್ಪ	11073	12–9–1958	30–9–2018
25	ಶ್ರೀಮತಿ. ಐನೇರು ನೀಲಮ್ಮ ಕೃಷಿ ಕಾರ್ಮಿಕಳು (ಸಂಖ್ಯಾತಿರಿಕ್ತ ಹುದ್ದೆ) ಕೃ.ಸಂ.ಕೇಂದ್ರ, ಧಡೇಸೂಗೂರು	20462	15–9–1958	30–9–2018
26	ಶ್ರೀಮತಿ. ನ್ಯಾಮತಬೀ ಖಾದರಸಾಬ ಕ್ಷೇತ್ರ ಕಾರ್ಮಿಕಳು, ಕೃ.ಸಂ.ಕೇಂದ್ರ, ಕಲಬುರಗಿ	11994	28–11–1958	30–11–2018
27	ಶ್ರೀ. ನಾಗರಾಜ ಬಿ ಹಿರಿಯ ಪ್ರಯೋಗ ಶಾಲಾ ಸಹಾಯಕರು ಕೃ.ಸಂ.ಕೇಂದ್ರ, ಹಗರಿ	11913	18–02–1959	28–2–2019
28	ಶ್ರೀಮತಿ. ಸುಶೀಲಮ್ಮ ಅರ್ಜುನ ಕೃಷಿ ಕಾರ್ಮಿಕಳು, ಕೃ.ಸಂ.ಕೇಂದ್ರ, ಬೀದರ	20513	02–02–1959	28–2–2019
29	ಶ್ರೀಮತಿ. ಹೇಮವ್ವ ಹನುಮಂತ ಕೃಷಿ ಕಾರ್ಮಿಕಳು, ಕೃ.ಸಂ.ಕೇಂದ್ರ, ಗಂಗಾವತಿ	11189	19–03–1959	31–3–2019

ವೈದ್ಯಕೀಯ ಕಾರಣದ ಮೇಲೆ ನಿವೃತ್ತಿ ಹೊಂದಿದ ಸಿಬ್ಬಂದಿ ವಿವರ ದಿನಾಂಕ 01–04–2018 ರಿಂದ 31–03–2019 ರವರೆಗೆ

ಕ್ರ.ಸಂ	ನೌಕರರ ಹೆಸರು, ಹುದ್ದೆ, ಮತ್ತು ಸ್ಥಳ	ನೌಕರರ ಸಂ.	ಜನ್ಮ ದಿನಾಂಕ	ವೈ.ಕಾ. ನಿವೃತ್ತಿ

				ಹೊಂದಿದ ದಿನಾಂಕ
30	ಶ್ರೀಮತಿ. ಹುಲಿಗೆಮ್ಮ ತಿಮ್ಮಪ್ಪ ಕೃಷಿ ಕಾರ್ಮಿಕಳು, ಮು.ಕೃ.ಸಂ.ಕೇಂದ್ರ, ರಾಯಚೂರು	–	–	30–6–2018
31	ಶ್ರೀ. ಮೌಲಾ ರಾಂಪೂರ ಕೃಷಿ ಕಾರ್ಮಿಕ, ಮು.ಕೃ.ಸಂ.ಕೇಂದ್ರ, ರಾಯಚೂರು	–	–	30–6–2018
32	ಶ್ರೀಮತಿ. ಶರಣಮ್ಮ ವಕ್ರಾಣಿ ಕೃಷಿ ಕಾರ್ಮಿಕಳು, ಕೃ.ಮ.ವಿ, ರಾಯಚೂರು	–	–	30–6–2018
33	ಶ್ರೀಮತಿ. ತಾಯಮ್ಮ ಕಾಮಪ್ಪ ಕೃಷಿ ಕಾರ್ಮಿಕಳು, ಕೃ.ಮ.ವಿ, ರಾಯಚೂರು ಅಸಸ	–	–	31–10–2018

7. ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಮತ್ತು ನಿರ್ವಹಣೆ

ಕೃಷಿ ವಿಶ್ವವಿದ್ಯಾಲಯವು ಮುಖ್ಯ ಆವರಣದ ಜೊತೆಗೆ ಮಹಾವಿದ್ಯಾಲಯಗಳು, ಸಂಶೋಧನಾ ಕೇಂದ್ರಗಳು ಮತ್ತು ಕೃಷಿ ವಿಜ್ಞಾನ ಕೇಂದ್ರಗಳನ್ನು ವಿಶ್ವವಿದ್ಯಾಲಯದ ವ್ಯಾಪ್ತಿಯ ಆರು ಈಶಾನ್ಯ ಜಿಲ್ಲೆಗಳಲ್ಲಿ ಹೊಂದಿದೆ. ತನ್ನ ಎಲ್ಲಾ ಕ್ಯಾಂಪಸ್‌ಗಳಲ್ಲಿ ಮೂಲಸೌಕರ್ಯಗಳನ್ನು ಅಭಿವೃದ್ಧಿಪಡಿಸುವ ಮತ್ತು ನಿರ್ವಹಿಸುವ ಸಲುವಾಗಿ ವಿಶ್ವವಿದ್ಯಾಲಯದ ಆಸ್ತಿ ವಿಭಾಗವು ಆಸ್ತಿ ಅಧಿಕಾರಿಗಳ ನೇತೃತ್ವದಡಿಯಲ್ಲಿ ಕಾರ್ಯನಿರ್ವಹಿಸುತ್ತದೆ ಮತ್ತು ಕಛೇರಿಯ ಅಗತ್ಯವಾದ ಸಿವಿಲ್ ಕಾಮಗಾರಿಗಳಿಗೆ KTPP ನಿಯಮಾವಳಿಗಳ ಪ್ರಕಾರ ವಿವಿಧ ಚಟುವಟಿಕೆಗಳ ಟೆಂಡರ್ ಮಾಡಲು ಅನುಕೂಲ ಮಾಡಿಕೊಡುತ್ತದೆ. ರಾಜ್ಯ ಸರಕಾರದ ಅಭಿವೃದ್ಧಿ, ಐಸಿಎಆರ್ ಮತ್ತು ಇತರ ಯೋಜನೆ ಅನುದಾನಗಳ ಅಡಿಯಲ್ಲಿ 2018–19ರ ಅವಧಿಯಲ್ಲಿ ಆಸ್ತಿ ಶಾಖೆಯಿಂದ ಕೈಗೊಂಡ ಮೂಲಸೌಕರ್ಯ ಅಭಿವೃದ್ಧಿ ಕಾರ್ಯಗಳನ್ನು ಕೆಳಗೆ ನೀಡಲಾಗಿದೆ.

ಕೋಷ್ಟಕ 42: ಪ್ರಸಕ್ತ ಆರ್ಥಿಕ ಸಾಲಿನಲ್ಲಿ ಪೂರ್ಣಗೊಂಡ ಕಾಮಗಾರಿಗಳ ವಿವರ

ಕ್ರಮ ಸಂಖ್ಯೆ	ರಾಯಚೂರು ಆವರಣ	ಕಾಮಗಾರಿಯ ಅಂದಾಜು ವೆಚ್ಚ ಲಕ್ಷಗಳಲ್ಲಿ	ಅನುದಾನ
ರಾಯಚೂರು ಆವರಣ			
1	ಕೃಷಿ ವಿಶ್ವವಿದ್ಯಾಲಯದ ರಾಯಚೂರಿನಲ್ಲಿ ಕೃಷಿ ಮಹಾವಿದ್ಯಾಲಯದ ಹಿಂದಿನ ಭಾಗದ (ನೆಲಮಹಡಿ) ನಿರ್ಮಿಸುವ ಕೆಲಸ.	330.28	ಆರ್.ಆಯ್.ಡಿ.ಎಫ್.ಅನುದಾನ
2	ಕೃಷಿ ತಾಂತ್ರಿಕ ಮಹಾವಿದ್ಯಾಲಯ ರಾಯಚೂರಿನಲ್ಲಿ (ಎರಡನೇ ಮಹಡಿ) ನಿರ್ಮಿಸುವ ಕೆಲಸ.	234.3	ಆರ್.ಆಯ್.ಡಿ.ಎಫ್.ಅನುದಾನ
3	ಕೃಷಿ ವಿಶ್ವವಿದ್ಯಾಲಯ ರಾಯಚೂರು ಕೃಷಿ ಯಂತ್ರೋಪಕರಣಗಳ ಪರೀಕ್ಷಣಾ ಪ್ರಯೋಗಾಲಯ ಕಟ್ಟಡದ ಕಾಮಗಾರಿ ಕೆಲಸ.	109.34	ಡಿ.ಓ.ಎ.ಸಿ. (ಭಾರತ ಸರ್ಕಾರ) ಅನುದಾನ
4	ಕೃಷಿ ವಿಶ್ವವಿದ್ಯಾಲಯ ಆವರಣದಲ್ಲಿ ಆಡಳಿತ ಭವನದ ಎದರು ಮುಖ್ಯ ದ್ವಾರ ನಿರ್ಮಿಸುವ ಕೆಲಸ.	37.36	ಕೃವಿವಿ ಅನುದಾನ
ಕೃಷಿ ಸಂಶೋಧನಾ ಕೇಂದ್ರ, ಗಂಗಾವತಿ.			
5	ಕೃಷಿ ಸಂಶೋಧನಾ ಕೇಂದ್ರ ಗಂಗಾವತಿಯಲ್ಲಿ ಸಂಶೋಧನಾ ಸಂಕೀರ್ಣ ಕಟ್ಟಡ ನಿರ್ಮಿಸುವ ಕೆಲಸ.	352.26	ಕೃವಿವಿ ಅನುದಾನ
ಕೃಷಿ ಮಹಾವಿದ್ಯಾಲಯ ಕಲಬುರಗಿ			
6	ಕೃಷಿ ಮಹಾವಿದ್ಯಾಲಯ ಕಲಬುರ್ಗಿಯಲ್ಲಿ ಕಾಲೇಜಿನ ಎರಡನೇ ಮಹಡಿಯ (ಭಾಗ–1) ನಿರ್ಮಿಸುವ ಕೆಲಸ.	280.71	ಕೃವಿವಿ ಅನುದಾನ

ಕೃಷಿ ಸಂಶೋಧನಾ ಕೇಂದ್ರ, ಜಾನವಾಡ (ಬೀದರ)			
7	ಕೃಷಿ ಸಂಶೋಧನಾ ಕೇಂದ್ರ ಬೀದರ (ಜಾನವಾಡ) ದಲ್ಲಿ ಡೀಪ್ಲೋಮಾ ಕಾಲೇಜಿನ (ನೆಲ ಮಹಡಿ) ನಿರ್ಮಿಸುವ ಕೆಲಸ.	325.28	ಆರ್.ಆಯ್.ಡಿ.ಎಫ್.ಅನುದಾನ
	ಒಟ್ಟು	**1669.53**	

ಆರ್ಥಿಕ ಸಾಲಿನಲ್ಲಿ ಪೂರ್ಣಗೊಂಡ ಕಾಮಗಾರಿಗಳ ವಿವರ

ಕೋಷ್ಟಕ 43: 2018–19 ನೇ ಆರ್ಥಿಕ ಸಾಲಿನಲ್ಲಿ ಹೊಸ ಕಾಮಗಾರಿಗಳ ವಿವರ

ಕ್ರಮ ಸಂಖ್ಯೆ	ರಾಯಚೂರು ಆವರಣ	ಕಾಮಗಾರಿಯ ವೆಚ್ಚ ಲಕ್ಷಗಳಲ್ಲಿ	ಅನುದಾನ
ರಾಯಚೂರು ಆವರಣ			
1	ಮುಖ್ಯ ಕೃಷಿ ಸಂಶೋಧನಾ ಕೇಂದ್ರ ರಾಯಚೂರಿನ ಹೊಸ ಏರಿಯಾದಲ್ಲಿ ಕ್ಷೇತ್ರ ಪ್ರಯೋಗಾಲಯ ನಿರ್ಮಿಸುವ ಕೆಲಸ.	8.06	ಕೃ.ವಿ.ವಿ.
2	ಕೃಷಿ ವಿಶ್ವವಿದ್ಯಾಲಯ ರಾಯಚೂರಿನಲ್ಲಿ ಸಾವಯವ ಕೃಷಿ ಸಂಶೋಧನಾ ಕಟ್ಟಡದ ಮುಂದೆ ಓಡಾಡುವ ದಾರಿಗೆ ಪೇವರ್ಸ್ ಅಳವಡಿಸುವ ಕೆಲಸ.	5.34	ಕೃ.ವಿ.ವಿ.
3	ಕೃಷಿ ವಿಶ್ವವಿದ್ಯಾಲಯ ರಾಯಚೂರಿನಲ್ಲಿ ಹವಾಮಾನ ಬದಲಾವಣೆ ಅಧ್ಯಯನ ಕೇಂದ್ರ ಮುಂದೆ ದ್ವಿಚಕ್ರ ವಾಹನ ನಿಲುಗಡೆ ಶೆಡ್ ಮತ್ತು ಫೇವರ್ಸ್ ಅಳವಡಿಸುವ ಕೆಲಸ.	7.74	ಕೃ.ವಿ.ವಿ.
4	ಕೃಷಿ ತಾಂತ್ರಿಕ ಮಹಾವಿದ್ಯಾಲಯ ರಾಯಚೂರಿನಲ್ಲಿ ಮಲ್ಟಿ ಜಿಮ್ ವರ್ಕಸ್ಟೇಷನ್‌ಗಾಗಿ ಹಳೆಯ ಪ್ರೇಕ್ಷಾಗೃಹದಲ್ಲಿ ಕಾಂಕ್ರೇಟ್ ಹಾಸಿಗೆ ಅಳವಡಿಸುವ ಕೆಲಸ.	4.27	ಕೃ.ವಿ.ವಿ.
5	ಕೃಷಿ ವಿಶ್ವವಿದ್ಯಾಲಯ ರಾಯಚೂರಿನಲ್ಲಿ ಎತ್ತುಗಳ ಶೆಡ್‌ನಿ ನವೀಕರಣ ಕೆಲಸ.	5.13	ಕೃ.ವಿ.ವಿ.
6	ಕೃಷಿ ತಾಂತ್ರಿಕ ಮಹಾವಿದ್ಯಾಲಯ ರಾಯಚೂರಿನಲ್ಲಿ 62.5 KVA /50 ಏಫ್‌ಡೀಸೆಲ್ ಜನರೇಟರ್ ಸೆಟ್ ಅಳವಡಿಸು ಕೆಲಸ.	7.40	ಕೃ.ವಿ.ವಿ.
7	ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಹಳೆಯ ಕೃಷ್ಣಾ ಬಾಲಕರ ವಸತಿ ನಿಲಯಕ್ಕೆ ಅಲ್ಯುಮಿನಿಯಂ ಕಿಡಕಿಗೆ ಸೊಳ್ಳೆ ಪರದೆ ಅಳವಡಿಸುವ ಕೆಲಸ.	9.38	ಕೃ.ವಿ.ವಿ.
8	ಕೃಷಿ ವಿಶ್ವವಿದ್ಯಾಲಯದ ಕ್ರೀಡಾಂಗಣಕ್ಕೆ ಮೊರಮ್ ಹಾಕುವ ಕೆಲಸ.	5.25	ಕೃ.ವಿ.ವಿ.
9	ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ವಸತಿ ಗೃಹಗಳಾದ ಎ–2, ಸಿ1, ಸಿ2, ಸಿ3, ಸಿ4, ಸಿ5, ಸಿ6, ಡಿ3, ಡಿ4, ಡಿ5, ಡಿ6, ಡಿ7, ಡಿ8, ಡಿ11, ಡಿ12 ವಸತಿ ಗೃಹಗಳಿಗೆ ವಿದ್ಯುತ್ತೀಕರಣ ರಿಪೇರಿ ಕೆಲಸ.	8.97	ಕೃ.ವಿ.ವಿ.
ಕೃಷಿ ಸಂಶೋಧನಾ ಕೇಂದ್ರ ಗಂಗಾವತಿ.			
10	ಕೃಷಿ ಸಂಶೋಧನಾ ಕೆಂದ್ರ ಗಂಗಾವತಿಯಲ್ಲಿ ಹಳೆಯ ಮತ್ತು ಹೊಸ ಕೃಷಿ ಹೊಂಡಕ್ಕೆ ತಂತಿ ಬೇಲಿ ಅಳವಡಿಸುವ ಕೆಲಸ.	9.36	ಕೃ.ವಿ.ವಿ.
ಕೃಷಿ ಸಂಶೋಧನಾ ಕೇಂದ್ರ ಹಗರಿ.			

11	ಕೃಷಿ ಸಂಶೋಧನಾ ಕೇಂದ್ರ ಹಗರಿಯಲ್ಲಿ ಕೃಷಿ ಸಲಕರಣೆಗಳ ಶೆಡ್ ನಿರ್ಮಿಸುವ ಕೆಲಸ.	9.08	ಕೃ.ವಿ.ವಿ.
12	ಕೃಷಿ ಸಂಶೋಧನಾ ಕೆಂದ್ರ ಹಗರಿಯಲ್ಲಿ ಡಿಪ್ಲೋಮಾ ಕಾಲೇಜಿಗೆ ಹೆಚ್.ಟಿ. & ಎಲ್.ಟ. 63KVA. ಟ್ರಾನ್ಸ್ ಫಾರ್ಮರ್ ಅಳವಡಿಸುವ ಕೆಲಸ.	3.74	ಕೃ.ವಿ.ವಿ.
13	ಕೃಷಿ ಸಂಶೋಧನಾ ಕೇಂದ್ರ ಹಗರಿಯಲ್ಲಿ ಅಥಿತಿ ಗೃಹಕ್ಕೆ ಹವಾ ನಿಯಂತ್ರಕಗಳನ್ನು ಅಳವಡಿಸುವ ಕುರಿತು.	3.52	ಕೃ.ವಿ.ವಿ.
ಕೃಷಿ ಮಹಾವಿದ್ಯಾಲಯ ಭೀಮರಾಯನಗುಡಿ ಆವರಣ.			
14	ಕೃಷಿ ಮಹಾವಿದ್ಯಾಲಯ ಭೀಮರಾಯನಗುಡಿಯಲ್ಲಿ ಬೀಜ ಉತ್ಪಾದನಾ ಘಟಕಕ್ಕೆ 62.5 KVA /50 KW ಡಿ.ಜೆ. ಸೆಟ್ ಅಳವಡಿಸುವ ಕುರಿತು.	7.39	ಕೃ.ವಿ.ವಿ.
15	ಕೃಷಿ ಮಹಾವಿದ್ಯಾಲಯ ಭೀಮರಾಯನಗುಡಿಯಲ್ಲಿ ಅಂಗಾಂಶ ಕೃಷಿ ಪ್ರಯೋಗಾಲಯ 25KVA/20KW ಡೀಸೆಲ್ ಜನರೇಟರ್ ಸೆಟ್ ಅಳವಡಿಸುವ ಕುರಿತು.	5.40	ಕೃ.ವಿ.ವಿ.
ಕೃಷಿ ಸಂಶೋಧನಾ ಕೇಂದ್ರ ಬೀದರ.			
16	ಕೃಷಿ ಸಂಶೋಧನಾ ಕೇಂದ್ರ ಬೀದರಿನಲ್ಲಿ ಡಿಪ್ಲೋಮಾ ಕಾಲೇಜಿಗೆ ಹೆಚ್.ಟಿ & ಎಲ್.ಟಿ. ಲೈನ್ 63ಕೆ.ವಿ.ಎ ಟ್ರಾನ್ಸ್‌ಫಾರ್ಮರ್ ಅಳವಡಿಸುವ ಕೆಲಸ.	4.79	ಕೃ.ವಿ.ವಿ.
	ಒಟ್ಟು ಮೊತ್ತ	**104.82**	

8. ಯೋಜನೆಗಳ ಆಯೋಜನೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಘಟಕ (ಪಿ.ಪಿ.ಎಂ.ಸಿ.)

ಯೋಜನೆಗಳ ಪ್ರಾಮುಖ್ಯತೆಯನ್ನು ಅರಿತು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ ಪ್ರಯೋಜನಾ ಯೋಜನೆ ಮತ್ತು ಮೇಲ್ವಿಚಾರಣಾ ಘಟಕವನ್ನು (ಪಿ.ಪಿ.ಎಂ.ಸಿ.) ಸ್ಥಾಪಿಸಲಾಯಿತು. ಕುಲಪತಿಗಳ ಮಾರ್ಗದರ್ಶನದಲ್ಲಿ ಮುಖ್ಯಸ್ಥರ ನೇತೃತ್ವದಲ್ಲಿ ಪಿ.ಪಿ.ಎಂ.ಸಿ.ಯು ತನ್ನ ಕಾರ್ಯಚಟುವಟಿಕೆಗಳನ್ನು ನಿರ್ವಹಿಸುತ್ತಿದೆ. ಈ ಘಟಕವು ಶಿಕ್ಷಣ, ಸಂಶೋಧನೆ, ವಿಸ್ತರಣೆ ಮತ್ತು ಆಡಳಿತ ಸಿಬ್ಬಂದಿಗಳ ಸಹಯೋಗದೊಂದಿಗೆ ವಿವಿಧ ಕಾರ್ಯಗಳನ್ನು ನಿರ್ವಹಿಸುತ್ತಿದೆ. ವಿಶ್ವವಿದ್ಯಾಲಯದ ಅಭಿವೃದ್ಧಿ ದೃಷ್ಟಿಕೋನದಿಂದ ಯೋಜನೆಗಳನ್ನು ರೂಪಿಸುವುದು ಈ ಘಟಕದ ಪ್ರಮುಖ ಉದ್ದೇಶವಾಗಿರುತ್ತದೆ. ನಿರ್ದಿಷ್ಟ ಇಲಾಖೆ, ಮಹಾವಿದ್ಯಾಲಯ ಅಥವಾ ಯೋಜನೆಗಳ ಮೌಲ್ಯಮಾಪನಕ್ಕೆ ಕಾಲಕಾಲಕ್ಕೆ ಆಂತರಿಕ ಅಥವಾ ಬಾಹ್ಯ ತಜ್ಞರನ್ನು ಒಳಗೊಂಡ ನಿರ್ದಿಷ್ಟ ತಂಡ ಅಥವಾ ಕಾರ್ಯಪಡೆಗಳ ಸಹಕಾರದಿಂದ ವಿವಿಧ ಯೋಜನೆಗಳನ್ನು ರೂಪಿಸುತ್ತದೆ.

ವಿವಿಧ ಕಾರ್ಯಚಟುವಟಿಕೆಗಳ ಅಂಕಿ ಅಂಶಗಳನ್ನು ಹಾಗೂ ಮಾಹಿತಿಗಳನ್ನು ಕ್ರೋಡೀಕರಿಸಿ, ಅವುಗಳ ಆಧಾರದ ಮೇಲೆ ಭವಿಷ್ಯದಲ್ಲಿ ವಿಶ್ವವಿದ್ಯಾಲಯದ ಅಭಿವೃದ್ಧಿಗೆ ಅನುಕೂಲಕರವಾದ ಯೋಜನೆಗಳನ್ನು ರೂಪಿಸುವುದರಲ್ಲದೇ, ವಿಶ್ವವಿದ್ಯಾಲಯದ ದೃಷ್ಟಿಕೋನದ ವರದಿಗಳನ್ನು ತಯಾರಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತದೆ.

ಇದಲ್ಲದೇ, ವಿಶ್ವವಿದ್ಯಾಲಯದ ಸಂಶೋಧನಾ ನಿರ್ದೇಶನಾಲಯದೊಂದಿಗೆ ಜೊತೆಗೂಡಿ ಮೂಲ ಸೌಕರ್ಯ ಮತ್ತು ಸಂಶೋಧನಾ ಕೇಂದ್ರಗಳನ್ನು ರೂಪಿಸುವಲ್ಲಿ ಈ ಘಟಕವು ವಿಶೇಷ ಪಾತ್ರವನ್ನು ವಹಿಸಿದೆ. ಈ ಘಟಕವು ವಿಶ್ವವಿದ್ಯಾಲಯಕ್ಕೆ ಬಾಹ್ಯ ಸಂಸ್ಥೆಗಳಿಂದ ಅನುದಾನವನ್ನು ತರುವಲ್ಲಿ ಪ್ರಮುಖ ಪಾತ್ರವನ್ನು ವಹಿಸಿದೆ.

ಕೋಷ್ಟಕ 44: 2018–19ರಲ್ಲಿ ವಿಶ್ವವಿದ್ಯಾಲಯ ಇತರೆ ಸಂಸ್ಥೆಗಳೊಂದಿಗೆ ಮಾಡಿಕೊಂಡ ಹೊಸ ಒಪ್ಪಂದಗಳ ವಿವರ.

ಕ್ರ.ಸಂ.	ಸಂಸ್ಥೆಯ ಹೆಸರು	ಉದ್ದೇಶ
1	ರಾಷ್ಟ್ರೀಯ ಶೈಕ್ಷಣಿಕ ಠೇವಣಿ (NAD)	ಪದವಿ ಪ್ರಮಾಣಪತ್ರಗಳನ್ನು NAD ಜಾಲತಾಣದಲ್ಲಿ ಠೇವಣಿ ಇಡುವುದು
2	ಮೆ. ಜೈನ್ ಇರ್ರಿಗೇಶನ್ ಸಿಸ್ಟಮ್ ಲಿಮಿಟೆಡ್,	ಕೃಷಿ ಮತ್ತು ಸಂಬಂಧಿತ ಕ್ಷೇತ್ರಗಳಲ್ಲಿನ ಸಂಶೋಧನೆಯ

	ಜಾಲಗಾಂವ್, ಮಹಾರಾಷ್ಟ್ರ.	ಮುಂದುವರಿಕೆಯಲ್ಲಿ ಪಾಲುದಾರರಾಗಿ ಸಹಕರಿಸುವುದು.
3	ಸೇವಾಶ್ರಮ ಖಾದಿ ಗ್ರಾಮ ಇಂಡಸ್ಟ್ರೀಸ್, ರಾಯಚೂರು	ಆಹಾರ ಸಂಸ್ಕರಣೆ ಮತ್ತು ಮೌಲ್ಯವರ್ಧನ
4	ಟೇಸ್ಟ್ ಬಡ್ಜ್, ಇಂಡಸ್ಟ್ರೀಸ್, ರಾಯಚೂರು	ಹಿಟ್ಟು ಮತ್ತು ಉಪ್ಪಿನಕಾಯಿ ಮತ್ತು ಮೌಲ್ಯವರ್ಧಿತ ಉತ್ಪನ್ನಗಳ ಮಾರಾಟ
5	ಅಭಿ ಆರ್ಗಾನಿಕ್ ಹಬ್, ರಾಯಚೂರು	ಮೌಲ್ಯವರ್ಧಿತ ಉತ್ಪನ್ನಗಳ ಮರುಪಾವಿ ಮತ್ತು ಮಾರ್ಕೆಟಿಂಗ್
6	ಫಾರ್ಮ್ ಬಂಡಿ, ರಾಯಚೂರು	ಆಹಾರ ಸಂಸ್ಕರಣ ಉದ್ಯಮ
7	ರಾಧೇ ಆಗ್ರೋ ಇಂಡಸ್ಟ್ರೀಸ್, ರಾಯಚೂರು	ಆಹಾರ ಸಂಸ್ಕರಣ ಉದ್ಯಮ
8	ಮಿಸ್ಟರ್ ಮಿಲ್ಲೆಟ್, ರಾಯಚೂರು	ಆಹಾರ ಸಂಸ್ಕರಣ ಉದ್ಯಮ

8.1 ರಾಷ್ಟ್ರೀಯ ಜ್ಞಾನ ಜಾಲ (National Knowledge Network)

ರಾಷ್ಟ್ರೀಯ ಜ್ಞಾನ ಜಾಲದ ಸದಸ್ಯತ್ವವನ್ನು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರು ಹೊಂದಿರುತ್ತದೆ. ರಾಷ್ಟ್ರೀಯ ಜ್ಞಾನ ಜಾಲದಿಂದ, ಅತೀ ವೇಗದ ಅಂತರ್ಜಾಲ ಮೂಲಕ ದೇಶದ ಪ್ರಮುಖ ರಾಷ್ಟ್ರೀಯ ಸಂಶೋಧನಾ ಸಂಸ್ಥೆಗಳೊಂದಿಗೆ ಸಂಪರ್ಕಜಾಲದಿಂದ ಮಾಹಿತಿ ಸಂಗ್ರಹಣೆ, ಮಾಹಿತಿ ವಿನಿಮಯಕ್ಕೆ ಬೆನ್ನೆಲುಬಾಗಿದೆ. ಇಂತಹ ಜ್ಞಾನ ಜಾಲದ ಉದ್ದೇಶವೇನೆಂದರೆ ರಾಷ್ಟ್ರದ ಸಂಶೋಧನೆಯಲ್ಲಿ ಗುಣಮಟ್ಟದ ಸಂಸ್ಥೆಗಳ ಸ್ಥಾಪನೆ, ಸಂಶೋಧನೆಗೆ ಬೇಕಾಗುವ ಸೌಲಭ್ಯಗಳು ಮತ್ತು ತರಬೇತಿ ಪಡೆದ ವೃತ್ತಿಪರರನ್ನು ಒದಗಿಸುವುದು, ವಿಮರ್ಶಾತ್ಮಕ ಮತ್ತು ಉದಯೋನ್ಮುಖ ಕ್ಷೇತ್ರದಲ್ಲಿ ವಿವಿಧ ವಿಭಾಗದ ವಿಜ್ಞಾನಿಗಳು, ಸಂಶೋಧಕರು ಹಾಗೂ ವಿದ್ಯಾರ್ಥಿಗಳು ಮತ್ತು ಭೌಗೋಳಿಕ ವಿಜ್ಞಾನಿಗಳು ಸೇರಿ ಕಾರ್ಯ ನಿರ್ವಹಿಸಲು ಅನುವು ಮಾಡಿಕೊಡುತ್ತದೆ.

8.2 ರಾಷ್ಟ್ರೀಯ ಶೈಕ್ಷಣಿಕ ಠೇವಣಿ (National Academic Depository)

ವಿಶ್ವವಿದ್ಯಾಲಯವು ರಾಷ್ಟ್ರೀಯ ಶೈಕ್ಷಣಿಕ ಠೇವಣಿ ಜೊತೆ ಹೊಂದಿದ್ದು, ವಿದ್ಯಾರ್ಥಿಗಳಿಗೆ ನೀಡಲಾಗುವ ಎಲ್ಲಾ ಶೈಕ್ಷಣಿಕ ಪ್ರಶಸ್ತಿಗಳನ್ನು ಶಾಶ್ವತವಾಗಿ ಮತ್ತು ಸುರಕ್ಷಿತವಾಗಿ ದಾಖಲಿಸುವ ಉದ್ದೇಶದಿಂದ ಎಲ್ಲಾ ಪ್ರಮಾಣ ಪತ್ರಗಳನ್ನು ಈ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಿದೆ. ವಿದ್ಯಾರ್ಥಿಗಳು ಅದನ್ನು ಅವಶ್ಯಕತೆ ಇದ್ದಾಗ ರಾಷ್ಟ್ರೀಯ ಶೈಕ್ಷಣಿಕ ಠೇವಣಿಯಿಂದ ಪಡೆಯಬಹುದು. ಇದು ನಕಲಿ ಮತ್ತು ಖೋಟಾ ಕಾಗದದ ಪ್ರಮಾಣಪತ್ರಗಳಿಗೆ ಪರಿಣಾಮಕಾರಿ ತಡೆಗಟ್ಟುವಿಕೆಯನ್ನು ಮಾಡುತ್ತದೆ ಜೊತೆಗೆ ಪರಿಣಾಮಕಾರಿ ಮತ್ತು ಪಾರದರ್ಶಕ ಆಡಳಿತವನ್ನು ಹೊಂದಿರುತ್ತದೆ.

9. ಶಾಸನಬದ್ಧ ಕೋಶಗಳು

9.1 ಮಾಹಿತಿ ಹಕ್ಕು ಅಧಿನಿಯಮ – 2005ರ ಅನುಷ್ಠಾನ

ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರು ಪಾರದರ್ಶಕ ಆಡಳಿತ, ನೇಮಕಾತಿ ಮತ್ತು ಆಯ್ಕೆ ಪ್ರಕ್ರಿಯೆಯಲ್ಲಿ ಪಾರದರ್ಶಕತೆಯನ್ನು ಕಾಪಾಡಿಕೊಂಡು ಬಂದಿದೆ. ಅಲ್ಲದೇ, ಸರಕಾರಿ ನಿಯಮಾನುಸಾರ ಮಾಹಿತಿ ಹಕ್ಕು ಅಧಿನಿಯಮ–2005 ಕಾಯ್ದೆಯನ್ನು ವಿಶ್ವವಿದ್ಯಾಲಯದಲ್ಲಿ ಅನುಷ್ಠಾನಗೊಳಿಸಿದೆ. ಅದರಂತೆ ಮಾಹಿತಿ ಹಕ್ಕು ಅಧಿನಿಯಮ–2005ರ ಪ್ರಕರಣ 4(1)(ಬಿ) ರನ್ವಯ ಅರ್ಜಿ ನಮೂನೆ, ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಮತ್ತು ಮೇಲ್ಮನವಿ ಪ್ರಾಧಿಕಾರ ಅಧಿಕಾರಿಗಳ ಹೆಸರುಗಳು, ಪದನಾಮಗಳು ಮತ್ತು ಇತರ ಸಂಪರ್ಕ ಮಾಹಿತಿಯ ವಿವರಗಳನ್ನು ವಿಶ್ವವಿದ್ಯಾಲಯದ ಅಂತರ್ಜಾಲ www.uasraichur.edu.in ನಲ್ಲಿ ಕಾಲಾನುಕ್ರಮಗೊಳಿಸಿ ಕ್ರಮಕೈಗೊಳ್ಳಲಾಗಿದೆ. ಜೊತೆಗೆ ನಿಯಮಾನುಸಾರ ನಿಗದಿತ ಅವಧಿಯಲ್ಲಿ ಸಾರ್ವಜನಿಕರಿಗೆ ಮಾಹಿತಯನ್ನು ಒದಗಿಸಲಾಗಿದೆ.

ಪ್ರಸಕ್ತ 2018–19ನೇ ಸಾಲಿನಲ್ಲಿ ವಿಶ್ವವಿದ್ಯಾಲಯದ ಅಡಿಯಲ್ಲಿ ಬರುವ ಎಲ್ಲಾ ಸಾರ್ವಜನಿಕ ಮಾಹಿತಿ ಅಧಿಕಾರಿಗಳಲ್ಲಿ ಸ್ವೀಕೃತವಾದ ಒಟ್ಟು ಕ್ರೋಡೀಕೃತ 80 ಅರ್ಜಿಗಳು ಬಂದಿದ್ದು, ಸದರಿ ಅರ್ಜಿಗಳನ್ನು ನಿಯಮಾನುಸಾರ ಪರಿಶೀಲಿಸಿ ಸಂಬಂಧಪಟ್ಟ ಅರ್ಜಿದಾರರಿಗೆ ನಿಗದಿತ ಅವಧಿಯೊಳಗೆ ಮಾಹಿತಿಯನ್ನು ವಿಲೇವಾರಿ ಮಾಡಲಾಗಿದೆ.

2018–19ನೇ ಸಾಲಿನಲ್ಲಿ ಈ ವಿಶ್ವವಿದ್ಯಾಲಯದಲ್ಲಿ ಸ್ವೀಕೃತವಾದ ಎಲ್ಲ ಕ್ರೋಡೀಕೃತ ಅರ್ಜಿಗಳ ಮಾಹಿತಿಯನ್ನು ನಿಗದಿತ ವಾರ್ಷಿಕ ವರದಿ ನಮೂನೆಯಲ್ಲಿ ಮೇಲಾಧಿಕಾರಿಗಳಿಗೆ ಕಳುಹಿಸಿಕೊಡಲಾಗಿದೆ.

9.2 ರ್ಯಾಗಿಂಗ್ ನಿಗ್ರಹ ಕೋಶ

ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರಿನ ಎಲ್ಲಾ ಕೃಷಿ ಮಹಾವಿದ್ಯಾಲಯ ಮತ್ತು ಕೃಷಿ ತಾಂತ್ರಿಕ ಮಹಾವಿದ್ಯಾಲಯಗಳಲ್ಲಿ ಹೊಸದಾಗಿ ಬರುವ ವಿದ್ಯಾರ್ಥಿಗಳಿಗೆ ಹಿರಿಯ ವಿದ್ಯಾರ್ಥಿಗಳಿಂದ ಎದುರಾಗುವ ಅಹಿತಕರ ಘಟನೆಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಮತ್ತು ಅವರ ಕ್ಷೇಮಾಭಿವೃದ್ಧಿಗಾಗಿ ರ್ಯಾಗಿಂಗ್ ನಿಗ್ರಹ ಕೋಶ ಸ್ಥಾಪಿಸಲಾಗಿದೆ. ಪ್ರತಿಯೊಂದು ಮಹಾವಿದ್ಯಾಲಯದ ರ್ಯಾಗಿಂಗ್ ನಿಗ್ರಹ ಕೋಶದ ವತಿಯಿಂದ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ. ಕೋರ್ಸಿನ ತರಗತಿಗಳು ಪ್ರಾರಂಭಗೊಳ್ಳುವ ಪೂರ್ವದಲ್ಲಿ ವಿದ್ಯಾರ್ಥಿಗಳ ಓರಿಯಿಂಟೇಶನ್ ಕಾರ್ಯಕ್ರಮದಲ್ಲಿ ರ್ಯಾಗಿಂಗ್ ನಿಗ್ರಹಕ್ಕೆ ಸಂಬಂಧಿಸಿದಂತೆ ಭಿತ್ತಿಪತ್ರಗಳ ಪ್ರದರ್ಶನ ಹಾಗೂ ರೂಪಕಗಳ ಮೂಲಕ ಜಾಗೃತಿ ಮೂಡಿಸಲಾಗುತ್ತಿದೆ.

1. ವಿದ್ಯಾರ್ಥಿಗಳು ರೂಪಕಗಳು ಹಾಗೂ ಭಿತ್ತಿಪತ್ರ ಮೂಲಕ ಮೋಸ ಮತ್ತು ಕೆಟ್ಟ ಸಮಯದಲ್ಲಿ ನಡೆಸಿದ ಅತಿರೇಕದ ದುರ್ನಡತೆಗಳನ್ನು ನಿರೂಪಿಸುವ ಭಿತ್ತಿಪತ್ರ ತೋರ್ಪಡಿಸಲಾಗಿದೆ. ಈ ರೀತಿಯ ಚಟುವಟಿಕೆಗಳಲ್ಲಿ ಭಾಗಿಯಾದವರಿಗೆ ನೀಡಲಾಗುವ ಶಿಕ್ಷೆಯ ಕುರಿತು ತೋರ್ಪಡಿಸಲಾಗಿದೆ. ವಿಶ್ವವಿದ್ಯಾಲಯದ ಧನ ಸಹಾಯ ಆಯೋಗ ಮತ್ತು ಕೃಷಿ ಅನುಸಂಧಾನ ಪರಷತ್, ನವದೆಹಲಿಯ ನಿಯಮಾವಳಿ ಹಾಗೂ ಮಾರ್ಗದರ್ಶನದಂತೆ ರ್ಯಾಗಿಂಗ್ ನಿಗ್ರಹ ಕುರಿತು ಮನಮುಟ್ಟುವಂತೆ ಮೌಖಿಕವಾಗಿ ಹಾಗೂ ಭಿತ್ತಿ ಪತ್ರಗಳ ಮೂಲಕ ಸಂದೇಶವೊಂದನ್ನು ಎಲ್ಲ ಮಹಾಗಿದ್ಯಾಲಯದ ಪ್ರಾಂಗಣದಲ್ಲಿ ಎದ್ದು ಕಾಣುವಂತೆ ಅಳವಡಿಸಲಾಗಿದೆ. ರ್ಯಾಗಿಂಗ್ ತಡೆಗಟ್ಟುವ ಕುರಿತು ಮತ್ತು ಈ ರೀತಿಯ ದುರದುಷ್ಟಕರ ಚಟುವಟಿಕೆಗಳಲ್ಲಿ ಭಾಗಿಯಾಗಿ ಅವರು ಅನುಭವಿಸುವ ಶಿಕ್ಷೆಗಳ ಬಗ್ಗೆ ಕಿರು ಚಿತ್ರ ಪ್ರದರ್ಶನ ಕೂಡಾ ಮಾಡಲಾಗಿದೆ.
2. ಹೊಸದಾಗಿ ಬಂದಂತಹ ವಿದ್ಯಾರ್ಥಿಗಳಿಗಾಗಿ ಒಂದು ತಿಂಗಳವರೆಗೆ ಅಥವಾ ಅವರು ಅಲ್ಲಿನ ಪರಿಸರಕ್ಕೆ ಹೊಂದಿಕೊಳ್ಳುವವರೆಗೆ ಪ್ರತ್ಯೇಕ ಕೊಠಡಿ ವ್ಯವಸ್ಥೆ ಮಾಡಿಸುವು, ಈ ಕೊಠಡಿಗಳನ್ನು ಹಗಲು ಮತ್ತು ರಾತ್ರಿ ವೇಳೆಯಲ್ಲಿ ನಿಲಯಪಾಲಕರು / ಕೇರ್‌ಟೇಕರ್ ರವರು ನಿಗಾ ವಹಿಸಲು ಏರ್ಪಾಡು ಮಾಡಲಾಗಿದೆ. ಎಲ್ಲಾ ಮಹಾವಿದ್ಯಾಲಯಗಳ ಆವರಣದ ಸೂಕ್ಷ್ಮ ಪ್ರದೇಶಗಳಾದ ಅಂದರೆ ವಸತಿ ನಿಲಯಗಳಲ್ಲಿ, ಉಪಹಾರ ಗೃಹದಲ್ಲಿ, ಪ್ರಯೋಗಾಲಯಗಳಲ್ಲಿ, ಹೊರಾಂಗಣದಲ್ಲಿ ಹಾಗೂ ಇತರೇ ಮುಖ್ಯ ಸ್ಥಳಗಳಲ್ಲಿ ಸಿ.ಸಿ.ಟಿ.ವಿ. ಅಳವಡಿಸಲಾಗಿದೆ. ಎಲ್ಲ ಮಹಾವಿದ್ಯಾಲಯಗಳ ವಿದ್ಯಾರ್ಥಿನಿಯರ ವಸತಿ ನಿಲಯಕ್ಕೆ ವಿಶೇಷ ರಕ್ಷಣಾ ಕಾವಲುಗಾರರನ್ನು ನೇಮಿಸಲಾಗಿದೆ. ಅದೇ ರೀತಿ ವಿದ್ಯಾರ್ಥಿಗಳ ಸುರಕ್ಷತೆಗಾಗಿ ಎಲ್ಲ ಮಹಾವಿದ್ಯಾಲಯಗಳ ಆವರಣದಲ್ಲಿ ಸಿ.ಸಿ.ಟಿ.ವಿ. ಗಳನ್ನು ಅಳವಡಿಸಲಾಗಿದೆ.
3. ವಿಶ್ವವಿದ್ಯಾಲಯದ ಎಲ್ಲ ಅಧೀನ ಮಹಾವಿದ್ಯಾಲಯಗಳಲ್ಲಿ ರ್ಯಾಗಿಂಗ್ ನಿಗ್ರಹ ಸಮಿತಿಯನ್ನು ರಚಿಸಿ, ಜಾಗರೂಕತೆಗಾಗಿ ಒಂದು ತಿಂಗಳುವರೆಗೆ ಆ ಸಮಿತಿಯ ಸದಸ್ಯರು ಆಯ್ದ ಪ್ರದೇಶಗಲ್ಲಿ ಸಮೀಕ್ಷಿಸುವುದಕ್ಕೆ ವ್ಯವಸ್ಥೆ ಮಾಡಲಾಗಿದೆ. ಈ ಪ್ರಕ್ರಿಯೆಯು ನಿರಂತರವಾಗಿರುತ್ತದೆ. ಸಮಿತಿಯ ಸದಸ್ಯರ ಪಟ್ಟಿಯನ್ನು ಎಲ್ಲ ವಿದ್ಯಾರ್ಥಿಗಳಿಗೆ ವಿತರಿಸಲಾಗಿದೆ ಹಾಗೂ ಸಮಸ್ಯೆ ಉಂಟಾದಾಗ ವಿದ್ಯಾರ್ಥಿಗಳು ತಕ್ಷಣ ಸಮಿತಿಯ ಸದಸ್ಯರಿಗೆ ರ್ಯಾಗಿಂಗ್ ಕುರಿತು ದೂರು ಸಲ್ಲಿಸುಬಹುದಾಗಿದೆ. ಇದರಿಂದ ತ್ವರಿತವಾಗಿ ಸಮರ್ಪಕ ಕ್ರಮ ಕೈಗೊಳ್ಳಲು ಅನುಕೂಲವಾಗುವುದು.
4. ಪ್ರತಿಯೊಬ್ಬ ವಿದ್ಯರ್ಥಿಗೂ ಒಬ್ಬ ಶಿಕ್ಷಕರನ್ನು ಸಮಾಲೋಚಕ ಆಗಿ ನಿಯೋಜಿಸಿ ವಿದ್ಯಾರ್ಥಿ ಮತ್ತು ಅವರ ಮಧ್ಯೆ ತಿಳುವಳಿಕೆ ಸೇತುವೆ ಅಭಿವೃದ್ಧಿಪಡಿಸಲಾಗಿದೆ. ಅವರು ವಿದ್ಯಾರ್ಥಿಯ ಸಮಸ್ಯೆಗಳನ್ನು ತಿಳಿದುಕೊಂಡು ಆಪ್ತ ಸಮಾಲೋಚನೆ ಮೂಲಕ ಪರಿಹರಿಸುವ ವಾತಾವರಣವು ಎಲ್ಲಾ ಮಹಾವಿದ್ಯಾಲಯಗಳಲ್ಲಿದೆ. ಸಮಾಲೋಚಕರು ವಿದ್ಯಾರ್ಥಿಗಳ ಪೋಷಕರಂತೆ ಕೆಲಸ ನಿರ್ವಹಿಸುವರು ಹಾಗೂ ಪ್ರತಿ ಹದಿನೈದು ದಿನಗಳಿಗೊಮ್ಮೆ ವಿದ್ಯಾರ್ಥಿಗಳ ಸಮಾಲೋಚನೆ ನಡೆಸುತ್ತಾರೆ. ವಿದ್ಯಾರ್ಥಿಗಳಿಗೆ ನಿಯೋಜಿಸಲಾದ ಸಮಾಲೋಚಕರು ಆ ವಿದ್ಯಾರ್ಥಿಯ ಶೈಕ್ಷಣಿಕ ಚಟುವಟಿಕೆಗಳು ಮತ್ತು ವಿದ್ಯಾರ್ಥಿಯ ಪೋಷಕರ ಮಧ್ಯೆ ಸೇತುವೆಯಂತೆ ಕೆಲಸ ನಿರ್ವಹಿಸುವರು.
5. ಎಲ್ಲಾ ವಿದ್ಯಾರ್ಥಿಗಳು ವಿಶ್ವವಿದ್ಯಾಲಯದ ಧನ ಸಹಾಯ ಆಯೋಗ ಮತ್ತು ಕೃಷಿ ಅನುಸಂಧಾನ ಪರಿಷತ್, ನವದೆಹಲಿಯ ನಿಯಮಾವಳಿಗಳಂತೆ ಸ್ವತಃ ಘೋಷಣೆಯ ಮೂಲಕ ತಾವು ಯಾವುದೇ ತರಹದ ರ್ಯಾಗಿಂಗ್ ಚಟುವಟಿಕೆಗಳಲ್ಲಿ ಭಾಗವಹಿಸುವುದಿಲ್ಲ ಎಂದು ಪ್ರಾಮಾಣೀಕರಿಸುವುದನ್ನು ಕಡ್ಡಾಯಗೊಳಿಸಲಾಗಿದೆ. ಇದಕ್ಕೆ ಸಂಬಂದಿಸಿದಂತೆ ವಿದ್ಯಾರ್ಥಿಗಳ ಪಾಲಕರಿಂದ ಹಾಗೂ ಪೋಷಕರಿಂದ ಹಿಂಬರಹ ಕೂಡ ಪಡೆಯಲಾಗಿದೆ. ವಿದ್ಯಾರ್ಥಿಗಳಿಗೆ ರ್ಯಾಗಿಂಗ್ ಚಟುವಟಿಕೆಗಳಲ್ಲಿ ಪಾಲ್ಗೊಳ್ಳದಿರಲು ಎಚ್ಚರಿಸಿ, ಒಂದು ವೇಳೆ ಭಾಗವಹಿಸಿರುವುದು ಕಂಡುಬಂದರೆ ಅದಕ್ಕೆ ತಕ್ಕ ಶಿಸ್ತು ಕ್ರಮ ಎದುರಿಸಬಹುದಾಗುತ್ತದೆಎಂಬುದನ್ನು ತಿಳಿಸಲಾಗಿದೆ.

6. ನೂತನ ನಿಯಮಾವಳಿಯಂತೆ ವಿದ್ಯಾರ್ಥಿಗಳು ರ್‍ಯಾಗಿಂಗ್ ಸಮಸ್ಯೆಯನ್ನು ಎದುರಿಸಿದರೆ ಅವರು ಈ ಕುರಿತು ಸಹಾಯ ಪಡೆಯಲು ಸಹಾಯವಾಣಿಯ ಬಳಕೆಗೆ ಅಥವಾ ಅವರು ಟೋಲ್ ಫ್ರೀ ಸಂಖ್ಯೆ 1800–180–55522 ಗೆ ಕರೆಮಾಡಿ ತಮಗೆ ಎದುರಾದ ರ್‍ಯಾಗಿಂಗ್ ಕುರಿತು ಸಮಸ್ಯೆಗಳನ್ನು ತಿಳಿಸಬಹುದಾಗಿದೆ. ಅಲ್ಲದೇ ಅವರು helpline@antiragging.in ಗೆ ಮಿಂಚಂಚೆ ಮೂಲಕ ಕೂಡಾ ದೂರನ್ನು ಸಲ್ಲಿಸಬಹುದಾಗಿದೆ. ಈ ಕಾಯಿದೆಯನ್ವಯ ವಿಶ್ವವಿದ್ಯಾಲಯದಲ್ಲಿ ಪ್ರಕರಣವೊಂದು ಕಂಡುಬಂದಿದ್ದು, ಈ ಪ್ರಕರಣದಲ್ಲಿ ಭಾಗಿಯಾಗಿದ್ದ ವಿದ್ಯಾರ್ಥಿಗಳ ವಿರುದ್ಧ ಈಗಾಗಲೇ ವಿಶ್ವವಿದ್ಯಾಲಯದಿಂದ ಕಟ್ಟುನಿಟ್ಟಿನ ಶಿಸ್ತು ಕ್ರಮ ಕೈಗೊಳ್ಳಲಾಗಿದೆ.
7. ಪ್ರತಿಯೊಂದು ಮಹಾವಿದ್ಯಾಲಯಗಳ ವಸತಿ ನಿಲಯಗಳಲ್ಲಿ ನಲಯಪಾಲಕರು ಹಾಗೂ ಕೇರಟೇಕರ್‌ಗಳು ಹೆಚ್ಚು ಕೆಲಸ ನಿರ್ವಹಿಸುತ್ತಿದ್ದು, ವಿದ್ಯಾರ್ಥಿಗಳು ತಮ್ಮ ರ್‍ಯಾಗಿಂಗ್ ಕುರಿತ ಸಮಸ್ಯೆಗಳನ್ನು ತಮ್ಮ ನಿಲಯಪಾಲಕರ ಗಮನಕ್ಕೆ ತರುವುದು.
8. ಎಲ್ಲ ಮಹಾವಿದ್ಯಾಲಯಗಳ ವಸತಿ ನಿಲಯಗಳಲ್ಲಿ ವಿದ್ಯಾರ್ಥಿನಿಯರಿಗೆ ರಾತ್ರಿ 7.00 ಗಂಟೆಗೆ ಹಾಗೂ ವಿದ್ಯಾರ್ಥಿಗಳಿಗೆ ರಾತ್ರಿ 8.00 ಗಂಟೆಗೆ ಹಾಜರಾತಿ ತೆಗೆದುಕೊಳ್ಳಲು ನಿಲಯಪಾಲಕರಿಗೆ ಸೂಚಿಸಲಾಗಿದೆ. ರಾತ್ರಿ ವೇಳೆಯಲ್ಲಿ ಯಾವ ವಿದ್ಯಾರ್ಥಿಗೂ ನಿಲಯಪಾಲಕರ ಅನುಮತಿಯಿಲ್ಲದೇ ವಸತಿನಿಲಯದ ಆವರಣದಿಂದ ಹೊರಗೆ ಹೋಗಲು ಅವಕಾಶವಿರುವುದಿಲ್ಲ.
9. ಎಲ್ಲ ಮಹಾವಿದ್ಯಾಲಯಗಳಲ್ಲಿ ಭಾರತೀಯ ಕೃಷಿ ಅನುಸಂಧಾನ ಪರಿಷತ್ ಮತ್ತು ಅನಿವಾಸಿ ಭಾರತೀಯ ವಿದ್ಯಾರ್ಥಿಗಳ ವಿಶೇಷ ಕಾಳಜಿಗಾಗಿ ವಸತಿನಿಲಯದಲ್ಲಿ ಪ್ರತ್ಯೇಕ ಭಾಗ/ಕೊಠಡಿಗಳ ವ್ಯವಸ್ಥೆ ಮಾಡಲಾಗಿದೆ.

9.3 ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ಕೋಶ

ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ಕೋಶವನ್ನು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರಿನಲ್ಲಿ 2017–18 ರ ಸಾಲಿನಲ್ಲಿ ಸ್ಥಾಪಿಸಲಾಯಿತು. ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳ ಸಲುವಾಗಿ ಎಸ್.ಸಿ.ಪಿ/ಟಿ.ಎಸ್.ಪಿ ಯೋಜನೆಗಳ ಅಡಿಯಲ್ಲಿ ಅನೇಕ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ. 2018–19ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಈ ಕೆಳಗಿನ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿದೆ.

1. ಎಲ್ಲಾ ಸ್ನಾತಕ / ಸ್ನಾತಕೋತ್ತರ / ಪಿ.ಹೆಚ್.ಡಿ. ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಉದ್ದೇಶಕ್ಕಾಗಿ 69 ಲ್ಯಾಪ್‌ಟಾಪ್‌ಗಳನ್ನು ವಿತರಿಸಲಾಯಿತು.
2. ವಿದ್ಯಾರ್ಥಿಗಳಿಗೆ ರಾಜ್ಯ ಮತ್ತು ಅಖಿಲ ಭಾರತ ಶೈಕ್ಷಣಿಕ ಪ್ರವಾಸಗಳಿಗೆ ರೂ. 5,000/– ಮತ್ತು ರೂ. 10,000/– ಪ್ರವಾಸ ಭತ್ಯೆ ನೀಡಲಾಗಿದೆ.
3. ಸ್ನಾತಕೋತ್ತರ / ಪಿ.ಹೆಚ್.ಡಿ. ವಿದ್ಯಾರ್ಥಿಗಳಿಗೆ ಪ್ರಬಂಧವನ್ನು ಮುದ್ರಿಸಲು ಪ್ರತಿ ವಿದ್ಯಾರ್ಥಿಗೆ ರೂ. 15,000/– ಮತ್ತು ರೂ. 20,000/– ನೀಡಲಾಯಿತು.
4. ಈ ಕೋಶದ ಹೊರತಾಗಿ ಎಸ್.ಸಿ/ಎಸ್.ಟಿ ವಿದ್ಯಾರ್ಥಿಗಳು ತಂಗಿರುವ ಎಲ್ಲಾ ಹಾಸ್ಟೇಲ್‌ಗಳಿಗೆ ಆರ್ಥಿಕವಾಗಿ ಸಹಕರಿಸಿದ್ದು ಪ್ರತಿ ಹಾಸ್ಟೇಲ್‌ಗೆ ರೂ. 15.00 ಲಕ್ಷ ಮತ್ತು ಒಟ್ಟು ಮೊತ್ತ ಸುಮಾರು ರೂ. 90.00 ಲಕ್ಷಗಳ ಸಹಾಯ ನೀಡಲಾಗಿದೆ.

9.4 ಮಹಿಳೆಯರ ಕುಂದುಕೊರತೆಗಳ ನಿರ್ವಹಣಾ ಕೋಶ

ಯು.ಜಿ.ಸಿ. – ಸಕ್ಷಮ (Measures for ensuring the safety of women and programmes for gender sensitization on campuses - UGC Publication, 2013) ಮತ್ತು ರಾಜ್ಯ ಪತ್ರ ದಿನಾಂಕ: 24–04–2013ರಲ್ಲಿ ಪ್ರಕಟಿತ "The Sexual Harasment of Women at Work Place (Prevention, Prohibition and Redressal) Act, 2013 ರ ಉದ್ದೇಶಗಳನ್ನು ಅನುಷ್ಠಾನಗೊಳಿಸಲು ಹಾಗೂ ಮಹಿಳೆಯರ ಮೇಲಿನ ದೌರ್ಜನ್ಯಗಳನ್ನು ತಡೆಗಟ್ಟಲು ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಲು ಕೃಷಿ ವಿಶ್ವವಿದ್ಯಾಲಯವು 2018–19ನೇ ಸಾಲಿನಲ್ಲಿ ತನ್ನ ವ್ಯಾಪ್ತಿಯಲ್ಲಿನ ಎಲ್ಲಾ ಆವರಣಗಳಲ್ಲಿ ಆಂತರಿಕ ದೂರು ನೀಡುವ ಸಮಿತಿಗಳನ್ನು ರಚಿಸಲಾಯಿತು. ಇದುವರೆಗೆ ಯಾವುದೇ ವಿಧವಾದ ದೂರು ಬಂದಿರುವುದಿಲ್ಲ.

10 ವಿಶ್ವವಿದ್ಯಾಲಯದ ಮುಖ್ಯ ಕೇಂದ್ರಗಳು

10.1 ನ್ಯಾನೋ ತಂತ್ರಜ್ಞಾನ ಕೇಂದ್ರ

ನ್ಯಾನೋತಂತ್ರಜ್ಞಾನ ಕೇಂದ್ರವು 2015–16ರ ಅವಧಿಯಲ್ಲಿ ಕರ್ನಾಟಕ ಸರ್ಕಾರ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ ಅಡಿಯಲ್ಲಿ ಸ್ಥಾಪಿಸಲಾಯಿತು. ಈ ನ್ಯಾನೋತಂತ್ರಜ್ಞಾನವು ಬಹುಶಾಸ್ತ್ರೀಯ ವಿಷಯವಾಗಿದ್ದು, ಇದು ರಸಾಯನ ಶಾಸ್ತ್ರ, ಜೀವಶಾಸ್ತ್ರ, ಭೌತಶಾಸ್ತ್ರ, ವಸ್ತು ವಿಜ್ಞಾನ ಇಂಜಿನೀಯರಿಂಗ್, ಪರಿಸರ ಮತ್ತು ಕೃಷಿ ಸೇರಿದಂತೆ ಅನೇಕ ವಿಷಯಗಳನ್ನು

ಒಳಗೊಂಡಿದೆ. ನ್ಯಾನೋತಂತ್ರಜ್ಞಾನವು ಅಣುಗಳು, ಪರಮಾಣುಗಳು ಮತ್ತು ಅನ್ವಿಕ ಸಮೂಹಗಳನ್ನು ಕ್ರಿಯಾತ್ಮಕ ರಚನೆಗಳಾಗಿ ಪರಿವರ್ತಿಸುವಲ್ಲಿ ಕುಶಲತೆಯಿಂದ ಕಾರ್ಯನಿರ್ವಹಿಸುತ್ತವೆ ಮತ್ತು ಕ್ರಿಯಾತ್ಮಕ ವಸ್ತುಗಳನ್ನು ಹಾಗೂ ವಿಭಿನ್ನ ಗುಣಲಕ್ಷಣಗಳ ಸಾಧನೆಗಳನ್ನು ರಚಿಸಲು ಸಾಧ್ಯವಾಗಿದೆ. ನ್ಯಾನೋ ತಂತ್ರಜ್ಞಾನ ಕೇಂದ್ರವು 2017–18ರ ಅವಧಿಯಲ್ಲಿ ISO 9001:2015 ಇತ್ತೀಚಿಗೆ ಪ್ರಮಾಣೀಕರಿಸಲ್ಪಟ್ಟಿದ್ದು ಮತ್ತು 2018–19ರಲ್ಲಿ ನವೀಕರಿಸಲ್ಪಟ್ಟಿತು.

2018–19ರ ಅವಧಿಯಲ್ಲಿ ನ್ಯಾನೋ ತಂತ್ರಜ್ಞಾನದ ಕೇಂದ್ರದಲ್ಲಿ ನಡೆಸಿದ ಚಟುವಟಿಕೆಗಳ ವಿವರಗಳು ಈ ಕೆಳಗಿನಂತಿವೆ.

- ಜೈವಿಕ ಸಂಶ್ಲೇಷಣೆ ಕ್ರಿಯೆಯಲ್ಲಿ ಬೇವಿನ ಎಲೆಗಳನ್ನು ಉಪಯೋಗಿಸಿಕೊಂಡು ಉತ್ತಮ ಮತ್ತು ಸ್ಥಿರವಾದ ಬೆಳ್ಳಿ ನ್ಯಾನೋ ಕಣಗಳನ್ನು ಉತ್ಪಾದಿಸಲು 1.5 mM ಸಿಲ್ವರ್ ನೈಟ್ರೇಟ್ 9pH ಮತ್ತು 45 ^{o}C ಉಷ್ಣಾಂಶವು ಅಗತ್ಯವಾಗಿದೆ.
- ಜೈವಿಕ ಸಂಶ್ಲೇಷಣೆಯಿಂದ ಉತ್ಪಾದಿಸಲ್ಪಟ್ಟ ಬೆಳ್ಳಿ ನ್ಯಾನೋ ಕಣಗಳು 25 nm ಗಾತ್ರವಿದ್ದು, 413 nn ತರಂಗಾಂತರವನ್ನು ಹೊಂದಿದ್ದು, ಗೋಲಾಕಾರ ಮತ್ತು ಮುಖದ ಕೇಂದ್ರಿತ ಘನ ಸ್ವರೂಪವನ್ನು ಹೊಂದಿರುವ ಗುಣಲಕ್ಷಣಗಳನ್ನು ಹೊಂದಿವೆ.
- ಜೈವಿಕ ಸಂಶ್ಲೇಷಿತ ಬೆಳ್ಳಿ ನ್ಯಾನೋಕಣಗಳನ್ನು ವಿಭಿನ್ನ ಪ್ರಮಾಣಗಳಲ್ಲಿ ವಿಭಿನ್ನ ನಿಯಾಂತಕಗಳಿಗೆ ಪರೀಕ್ಷಿಸಲಾಯಿತು. ಪ್ರಯೋಗಿಸಿದ ವಿಭಿನ್ನ ಪ್ರಮಾಣಗಳಲ್ಲಿ 150 ppm ಬೆಳ್ಳಿ ನ್ಯಾನೋಕಣಗಳು ಶೇಂಗಾ ಬೀಜದ ಗುಣಮಟ್ಟವನ್ನು ಹೆಚ್ಚಿಸುವುದರಲ್ಲಿ ಉತ್ತಮವಾಗಿ ಕಂಡುಬಂದಿವೆ. ಅಂದರೆ ನ್ಯಾನೋಕಣಗಳ ಪರಿಣಾಮದಿಂದ 90.81% ಮೊಳಕೆಯೊಡೆಯುವಿಕೆ ಮತ್ತು 26.37 ರಷ್ಟು ಮೊಳಕೆಯೊಡುವಿಕೆಯ ವೇಗವನ್ನು ಹೆಚ್ಚಿಸಬಹುದಾಗಿದೆ.
- 150 ppm ಬೆಳ್ಳಿ ನ್ಯಾನೋಕಣಗಳನ್ನು ಕೀಟನಾಶಕ ಚಟುವಟಿಕೆಗೆ ಔಡಲ ಎಲೆಗಳಲ್ಲಿ ಸ್ಪೊಡೊಪ್ಟೆರಾ ಕೀಟಕ್ಕೆ ಪರೀಕ್ಷಿಸಲಾಯಿತು. ನ್ಯಾನೋಕಣಗಳ ಉಪಯೋಗದಿಂದ 12ನೇ ದಿನದಂದು ಸ್ಪೊಡೊಪ್ಟೆರಾ ಮರಣ ಪ್ರಮಾಣವು 76.67% ಇದ್ದು, ಪ್ಯೂಪಷನ್ 23.33% ಮತ್ತು ಪ್ಯೂಪಾಲ್ ವೆಯಿಟ್ (0.273±0.14) ಕಡಿಮೆ ಮಾಡುವುದರಲ್ಲಿ ಉತ್ತಮ ಪರಿಣಾಮಕಾರಿಯಾಗಿದೆ.
- ಬೆಳ್ಳಿ ನ್ಯಾನೋಕಣಗಳನ್ನು ರೆಟ್ ಫ್ಲೋರ್ ಬೀಟಲ್ ಕೀಟವಿರುವ ಶೇಂಗಕ್ಕೆ ಉಪಯೋಗಿಸಿದಾಗ 28.86% ರಷ್ಟು ಕಡಿಮೆ ಬೀಜ ಹಾನಿ ಹಾಗೂ 0.96% ರಷ್ಟು ಕಡಿಮೆ ನಷ್ಟದ ಬೀಜ ತೂಕ ಕಂಡುಬಂದಿದೆ.
- ಅಸ್ಪೆರ್ಜಿಲಸ್ ಫ್ಲೇವಸ್ (90.24%) ಮತ್ತು ಫುಸರಯಂ ಸ್ಪೀಸಿಸ್ (53%) ವಿರುದ್ಧ ಅಂಟಿಫಂಗಲ್ ಚಟುವಟಿಕೆಯು 150 ppm ನಲ್ಲಿ ಗರಿಷ್ಠ ಶೇಕಡಾ ಪ್ರತಿರೋಧವನ್ನು ಉಂಟುಮಾಡಿದೆ.
- ಗ್ಲಿಸೆರಾಲ್‌ಅನ್ನು ಪ್ಲಾಸ್ಟಿಸೈಜರ್ ಆಗಿ ಬಳಸಿ ಚಿಟೋಸನ್ ಆಧಾರಿತ ಬೆಳ್ಳಿ ನ್ಯಾನೋ ಕಂಪೋಸಿಟ್ ಫಿಲ್ಮ್‌ಗಳನ್ನು ತಯಾರಿಸಲಾಯಿತು. 15% (150 ppm) ಬೆಳ್ಳಿ ನ್ಯಾನೋಕಣಗಳನ್ನು ಉಪಯೋಗಿಸಿ ತಯಾರಿಸಲ್ಪಟ್ಟ ಫಿಲ್ಮಗಳ ಗರಿಷ್ಠ ಪಾರದರ್ಶಕತೆಯ ಮೌಲ್ಯ 1.52, ಕರ್ಷಕ ಶಕ್ತಿಯ 23 MPa ಮತ್ತು ಗರಿಷ್ಠ ನೀರಿನ ಆವಿ ಪ್ರಸರಣ ದರ 3.13 $g/m^2/day$ ಅನ್ನು ದಾಖಲಿಸಿದೆ.
- ಬೆಳ್ಳಿ ನ್ಯಾನೋಕಣಗಳಿಂದ ತಯಾರಿಸಲ್ಪಟ್ಟ ಪ್ಯಾಕೇಜಿಂಗ್ ಫಿಲ್ಮ್‌ಗಳನ್ನು ಅಂಜೂರ ಹಣ್ಣಿನ ಶೇಖರಣೆಗೆ ಪರೀಕ್ಷಿಸಲಾಯಿತು. ಇದು 2 ದಿನಗಳವರೆಗೆ ಜೀವಿತಾವಧಿಯನ್ನು ವಿಸ್ತರಿಸುವಲ್ಲಿ ಸಹಕರಿಸುತ್ತದೆ ಮತ್ತು ಕನಿಷ್ಠ ಸೂಕ್ಷ್ಮ ಜೀವಿಯ ಹೊರೆ (25.55×10^3 CFU/mL) ಅನ್ನು ಗಮನಿಸಲಾಯಿತು.

